ಶನಿವಾರ, ಜುಲೈ 4, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಾಯಿ ಶತಕ

ಭಾರತ ಎ ತಂಡದ ಬ್ಯಾಟರ್ ಸಾಯಿ ಸುದರ್ಶನ್ (ಬ್ಯಾಟಿಂಗ್ 104) ಅವರು ಗಾಲ್‌ನಲ್ಲಿ ನಡೆಯುತ್ತಿರುವ ಶ್ರೀಲಂಕಾ ಎ ತಂಡದ ಎದುರು ಅಜೇಯ ಶತಕ ಗಳಿಸಿದರು

ರೈತರ ಪ್ರತಿಭಟನೆ

ರಾಜ್ಯವನ್ನು ಬರಪೀಡಿತ ಎಂದು ಘೋಷಿಸುವಂತೆ ಆಗ್ರಹಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಸದಸ್ಯರು ಮೈಸೂರಿನಲ್ಲಿ ಪ್ರತಿಭಟನೆ ನಡೆಸಿದರು

G SQUARE 13 YEARS OF BUILDING Trust SINCE 2012

G SQUARE GROUP
YOUR HOME. YOUR DREAM. YOUR CHOICE.
PLOTS | VILLAS | APTS.
ಜಿ ಸ್ಕ್ವೇರ್ ಅಲ್ಕೆಮಿ

ಹೊಸ ಹಂತದ ಉದ್ಘಾಟನೆ

ರಾಜರಾಜೇಶ್ವರಿ ನಗರ, ಮೈಸೂರು

ಈಗಲೇ ಬುಕ್ ಮಾಡಿ & ತಕ್ಷಣ ನೋಂದಾಯಿಸಿ

LAUNCHING 124TH PROJECT

MUDA APPROVED RERA

PRM/KA/RERA/1268/378/PR/020125/007342

ಹಂತ 1 & ಹಂತ 2 - ಮಾರಾಟವಾಗಿದೆ | 350+ ಸಂತೋಷದ ಕುಟುಂಬಗಳು

ಪ್ರೀಮಿಯಂ ವಿಲ್ಲಾ ಪ್ಲಾಟ್‌ಗಳು ರಾಜರಾಜೇಶ್ವರಿ ನಗರದಲ್ಲಿ

LAUNCHING NEW PHASE
G SQUARE Alchemy

MARKET PRICE ₹ ~~7500~~ PER SQ. FT.

LAUNCH PRICE ₹5999 PER SQ. FT. ONWARDS (FIRST 25 BOOKINGS ONLY)

ಮೈಸೂರಿನ ಏಕೈಕ ಹೆಗ್ಗುರುತು ಪ್ಲಾಟೆಡ್ ಕಮ್ಯುನಿಟಿ ₹74 ಲಕ್ಷದಿಂದ ₹20 ಕೋಟಿಯವರೆಗೆ

ಪ್ರೈಮ್ ವಾಣಿಜ್ಯ ಭೂಮಿ

ದೊಡ್ಡದಾಗಿ ಖರೀದಿಸಿ. ದೊಡ್ಡದಾಗಿ ಉಳಿಸಿ.

ಆಫರ್ ಕೇವಲ 7 ದಿನಗಳವರೆಗೆ ಮಾತ್ರ ಮಾನ್ಯ

MARKET PRICE ₹ ~~9000~~ PER SQ. FT.
G SQUARE PRICE ₹ ~~7499~~ PER SQ. FT.
LAUNCH PRICE ₹7199 PER SQ. FT. ONWARDS

80 ಅಡಿ ನ್ಯೂ ಕಾಂತರಾಜ್ ಅರಸ್ ರಸ್ತೆಯ ಮೇಲೆ

3000–9000 ಚ.ಅಡಿ ವರೆಗಿನ ವ್ಯಾಪ್ತಿ

PLOT SIZE	PRICE
1200 SQ. FT.	₹74 L
2400 SQ. FT.	₹1.60 CR
3000 SQ. FT.	₹2.24 CR
4000 SQ. FT.	₹2.90 CR
6000 SQ. FT.	₹4.49 CR
9000 SQ. FT.	₹6.74 CR
25,000 + SQ. FT.	

Up To 80% Bank Loan Available
Canara Bank | ICICI Bank | HDFC BANK | AXIS BANK | punjab national bank | LIC HFL

ZERO BROKERAGE. DISPUTES. MAINTENANCE.

MEMBER CREDAI

CASH NOT ACCEPTED

97430 34000
www.gsquarehousing.com

G SQUARE 13 YEARS OF BUILDING Trust SINCE 2013

G SQUARE GROUP
YOUR HOME. YOUR DREAM. YOUR CHOICE.
PLOTS | VILLAS | APTS.

ಜಿ ಸ್ಕ್ವೇರ್ ಅಲ್ಕೆಮಿ

SHOT AT THE PROJECT LOCATION

35+ ವಿಶ್ವ ದರ್ಜೆಯ ಸೌಲಭ್ಯಗಳು

ಪ್ಲಾಟ್ + ವಿಲ್ಲಾ ಖರೀದಿಸಿ ಮತ್ತು ₹25 ಲಕ್ಷದವರೆಗೆ ಉಳಿಸಿ

BUILD YOUR VILLA AND GET DISCOUNT UP TO ₹5 LAKHS*

OFFICIAL VILLA CONSTRUCTION PARTNER
Brick & Bolt
HOME & COMMERCIAL CONSTRUCTION

EXPERIENCE VILLA LIVING, SPECIALLY CRAFTED FOR YOU

PLOT + 2 BHK VILLA
BUILT UP AREA: 1162 SQ.FT
ಮಾರುಕಟ್ಟೆ ಬೆಲೆ
~~₹1 CR~~
ಜಿ ಸ್ಕ್ವೇರ್ ಬೆಲೆ
₹75L

PLOT + 3 BHK VILLA
BUILT UP AREA: 2522 SQ.FT
ಮಾರುಕಟ್ಟೆ ಬೆಲೆ
~~₹1.95 CR~~
ಜಿ ಸ್ಕ್ವೇರ್ ಬೆಲೆ
₹1.63CR

PLOT + 4 BHK VILLA
BUILT UP AREA: 3487 SQ.FT
ಮಾರುಕಟ್ಟೆ ಬೆಲೆ
~~₹2.51 CR~~
ಜಿ ಸ್ಕ್ವೇರ್ ಬೆಲೆ
₹2.26 CR

ಎರಡು ಯಶಸ್ವಿ ಹಂತಗಳು ಮಾರಾಟವಾಗಿವೆ.

ಈಗ ಪ್ರಾರಂಭವಾಗುತ್ತದೆ ಮುಂದಿನ ಹೆಗ್ಗುರುತು.

LAND WANTED IN AND AROUND BENGALURU & MYSURU

5 TO 100 ACRES | JOINT VENTURE FOR CONVERTED PLOTTED DEVELOPMENT | APPROVED OR UNDER APPROVAL LAYOUTS
FOR ENQUIRY: 99629 83004

Up To 80% Bank Loan Available
Canara Bank | ICICI Bank | HDFC BANK | AXIS BANK | punjab national bank | LIC HFL

G SQUARE BUILD ASSIST
A POST-PURCHASE GUIDANCE PROGRAM

MEMBER CREDAI

CASH NOT ACCEPTED

97430 34000
www.gsquarehousing.com

f prajavani.net prajavani | ಶನಿವಾರ, ಜುಲೈ 4, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 184 | ಪುಟ 22 | www.prajavani.net

ರೊನಾಲ್ಡೊ ರಂಗು...
ಪೋರ್ಚುಗಲ್ ತಂಡದ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಫಿಫಾ ವಿಶ್ವಕಪ್ ಟೂರ್ನಿಯ 32ರ ಘಟ್ಟದ ಪಂದ್ಯದಲ್ಲಿ ಕ್ರೊವೇಷ್ಯಾದ ಎದುರು ಗೋಲು ಗಳಿಸಿ ಸಂಭ್ರಮಿಸಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 77,763 | ನಿಫ್ಟಿ 24,270 | $/₹ 95.18 | ಚಿನ್ನ (Std. 10g) ₹1,51,400 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,49,260 (ಬೆಂಗಳೂರು)

ಬಿಎಲ್‌ಒ ಮನೆ ಭೇಟಿ ಕಡ್ಡಾಯ

ಮನೆಗೆ ಹೋಗಿಯೇ ಗಣತಿ ನಮೂನೆ ವಿತರಿಸಿ • ವಿ.ಅನ್ಬುಕುಮಾರ್ ಕಟ್ಟಪ್ಪಣೆ

ಎಸ್‌ಐಆರ್ ಪ್ರಗತಿ			
2.01 ಕೋಟಿ ಈವರೆಗೆ ವಿತರಿಸಲಾದ ನಮೂನೆ	12.07 ಲಕ್ಷ ಮತದಾರರಿಂದ ಸಂಗ್ರಹಿಸಿ, ಡಿಜಿಟಲೀಕರಿಸಿದ ನಮೂನೆ	54,823 ಆನ್‌ಲೈನ್ ಮೂಲಕ ಸಲ್ಲಿಸಿರುವ ನಮೂನೆ	17,688 ಸ್ಥಳದಲ್ಲಿ ಇಲ್ಲದ, ವಿಳಾಸ ಬದಲಾದ, ಮೃತಪಟ್ಟ ಮತ್ತು ಒಂದಕ್ಕಿಂತ ಹೆಚ್ಚು ಮತದಾರರ ಚೀಟಿ ಹೊಂದಿದ ಪ್ರಕರಣಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯದಲ್ಲಿ ನಿಯಮ ಉಲ್ಲಂಘನೆ ಮತ್ತು ಮತದಾರರ ಗುಂಪು ಸೇರಿಸಿ ಗಣತಿ ನಮೂನೆಗಳನ್ನು ಸಾಮೂಹಿಕವಾಗಿ ವಿತರಿಸುತ್ತಿರುವ ಪ್ರಕರಣಗಳು ವರದಿಯಾದ ಬೆನ್ನಲ್ಲೇ, ಮತಗಟ್ಟೆ ಅಧಿಕಾರಿಗಳು (ಬಿಎಲ್‌ಒ) ಕಡ್ಡಾಯವಾಗಿ ಮನೆಗಳಿಗೆ ತೆರಳಿ ಗಣತಿ ನಮೂನೆ ವಿತರಿಸಬೇಕು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಯು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಬೆಂಗಳೂರು ನಗರ, ಗ್ರಾಮಾಂತರ ಜಿಲ್ಲೆಗಳಲ್ಲದೇ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಬಿಎಲ್‌ಒಗಳು ಮನೆ ಮನೆಗಳಿಗೆ ಹೋಗದೆ ಮಸೀದಿ, ದೇವಸ್ಥಾನ, ಛತ್ರ, ಸಮುದಾಯ ಭವನಗಳಲ್ಲಿ ಮತದಾರರಿಗೆ ಗಣತಿ ನಮೂನೆಗಳನ್ನು ವಿತರಿಸಿ, ಭರ್ತಿ ಮಾಡಿಸುತ್ತಿರುವ ಬಗ್ಗೆ ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಜೆಡಿಎಸ್ ದೂರು ನೀಡಿತ್ತು.

ಇದನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಅವರು, 'ಬಿಎಲ್‌ಒಗಳು ಕಡ್ಡಾಯವಾಗಿ ಮತದಾರರ ಮನೆಗಳಿಗೆ ಹೋಗಿಯೇ ಗಣತಿ ನಮೂನೆಗಳನ್ನು ವಿತರಿಸಬೇಕು' ಎಂದು ಸೂಚಿಸಿದ್ದಾರೆ.

'ಬಿಎಲ್‌ಒಗಳು ಮನೆ-ಮನೆಗೆ ಹೋಗಿ ಗಣತಿ ನಮೂನೆಗಳನ್ನು ವಿತರಿಸದೇ ಇರುವ ಬಗ್ಗೆ ಹಲವು ದೂರುಗಳು ಬಂದಿವೆ. ಬಿಎಲ್‌ಒಗಳು ಮತದಾರರ ಮನೆಗೆ ಭೇಟಿ ನೀಡದೆ, ತಮ್ಮ ಕಚೇರಿಗಳಲ್ಲಿ ಕುಳಿತು ಗಣತಿ ನಮೂನೆಗಳನ್ನು ವಿತರಿಸುತ್ತಿರುವುದೂ ಗಮನಕ್ಕೆ ಬಂದಿದೆ' ಎಂದು ಅವರು ಹೇಳಿದ್ದಾರೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ವಿಧಾನಸಭಾ ಕ್ಷೇತ್ರದ ಟಿಪ್ಪುನಗರ ವಾರ್ಡ್‌ನ ಸಮುದಾಯ ಭವನದಲ್ಲಿ ಬಿಎಲ್‌ಒಗಳು ಗಣತಿ ನಮೂನೆಗಳನ್ನು ವಿತರಣೆ ಮಾಡುತ್ತಿರುವ ಬಗ್ಗೆ ಜೆಡಿಎಸ್ ಕಾನೂನು ಘಟಕವು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಗೆ ಗುರುವಾರ ದೂರು ನೀಡಿತ್ತು.

ಭಾರತೀಯ ಚುನಾವಣಾ ಆಯೋಗವು ನೀಡಿರುವ ಎಸ್‌ಐಆರ್ ಮಾರ್ಗಸೂಚಿಯ ಅನ್ವಯವೇ ಎಲ್ಲರೂ ಕಾರ್ಯನಿರ್ವಹಿಸಬೇಕು. ಮನೆ- ಮನೆಗೆ ಹೋಗಿಯೇ ಗಣತಿ ನಮೂನೆಗಳನ್ನು ವಿತರಿಸಬೇಕು ಮತ್ತು ಎಸ್‌ಐಆರ್‌ನ ಎಲ್ಲ ಪ್ರಕ್ರಿಯೆಗಳನ್ನು ಕಡ್ಡಾಯವಾಗಿ ಭಾರತೀಯ ಚುನಾವಣಾ ಆಯೋಗದ ಮಾರ್ಗಸೂಚಿಯಂತೆಯೇ ನಡೆಸಬೇಕು ಎಂದು ಬಿಎಲ್‌ಒಗಳಿಗೆ ಸೂಚನೆ ನೀಡಿ ಎಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದಾರೆ.

ಗಣತಿ ನಮೂನೆಗಳನ್ನು ಭರ್ತಿ ಮಾಡುವಲ್ಲಿ ತೊಂದರೆ ಅಥವಾ ಗೊಂದಲ ಎದುರಾದರೆ ಮತದಾರರು, 'ಮತದಾರರ ಸಹಾಯ ಕೇಂದ್ರ'ಕ್ಕೆ ಭೇಟಿ ನೀಡಬೇಕು ಎಂದು ಹೇಳಿದ್ದಾರೆ.

▶ 8

ಎಸ್‌ಐಆರ್ ಕುರಿತು ಮತದಾರರಲ್ಲಿ ಜಾಗೃತಿ ಮೂಡಿಸಲು ಕಾಂಗ್ರೆಸ್ ಪಕ್ಷವು ಬೆಂಗಳೂರಿನ ಬಡಾವಣೆಯೊಂದರಲ್ಲಿ ಸಹಾಯ ಕೇಂದ್ರ ತೆರೆದಿತ್ತು

ದೂರು, ಆರೋಪ

ಬಿಎಲ್‌ಒಗಳು ಮತದಾರರ ಮನೆಗೆ ಭೇಟಿ ನೀಡದೆಯೇ ಮಸೀದಿ, ದೇವಾಲಯ, ಶಾಲೆ, ಸಮುದಾಯ ಭವನಗಳಲ್ಲಿ ಕೂತು ಗಣತಿ ನಮೂನೆಗಳನ್ನು ವಿತರಿಸುತ್ತಿದ್ದಾರೆ. ಅಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ದೂರು ಸಲ್ಲಿಸಿದ್ದಾರೆ.

ಬೆಂಗಳೂರಿನ ಚಾಮರಾಜಪೇಟೆ, ಯಶವಂತಪುರ, ಬೆಂಗಳೂರಿನ ದಕ್ಷಿಣ ಜಿಲ್ಲೆಯ ರಾಮನಗರ ವಿಧಾನಸಭಾ ಕ್ಷೇತ್ರಗಳಲ್ಲಿ ಈ ರೀತಿ ಆಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು, ಎಸ್‌ಐಆರ್ ಪ್ರಕ್ರಿಯೆ ಮೇಲೆ ರಾಜ್ಯ ಸರ್ಕಾರವು ಪ್ರಭಾವ ಬೀರುತ್ತಿದೆ. ಎಸ್‌ಐಆರ್‌ನಲ್ಲಿ ಭಾಗಿಯಾಗಿರುವ ಎಲ್ಲ ಅಧಿಕಾರಿಗಳನ್ನು ಬದಲಿಸಿ, ಬೇರೆ ರಾಜ್ಯದ ಅಧಿಕಾರಿಗಳನ್ನು ನೇಮಿಸಬೇಕು ಎಂದು ಒತ್ತಾಯಿಸಿದ್ದಾರೆ.

ನಟ ದರ್ಶನ್ ಅರ್ಜಿ ತಿರಸ್ಕರಿಸಿದ ಸುಪ್ರೀಂ

ನವದೆಹಲಿ: ರೇಣುಕ ಸ್ವಾಮಿ ಕೊಲೆ ಪ್ರಕರಣದಲ್ಲಿ ಒಂದು ವರ್ಷದವರೆಗೆ ದರ್ಶನ್ ಜಾಮೀನು ಪಡೆಯಲು ಅರ್ಹರಲ್ಲ ಎಂದು ನೀಡಿದ್ದ ಆದೇಶದ ಬಗ್ಗೆ ಸ್ಪಷ್ಟೀಕರಣಕ್ಕಾಗಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ.

ವಿವರ ▶ 8

ಚಿನಕುರುಳಿ — ಪ್ರಕಾಶ್ ಶೆಟ್ಟಿ



'ಕೆಪಿಎಸ್‌ಸಿ ಅಧ್ಯಕ್ಷ ರಾಜೀನಾಮೆ ನೀಡಲಿ'

• ರಾಜೇಶ್ ರೈ ಚಟ್ಲ

ಬೆಂಗಳೂರು: 'ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು, ಪುತ್ರಿಗೆ ಸರ್ಕಾರಿ ಹುದ್ದೆ ಗಿಟ್ಟಿಸಿಕೊಳ್ಳಲು ಸಲ್ಲಿಸಿರುವ ಕುಟುಂಬದ ವಾರ್ಷಿಕ ಆದಾಯ ಪ್ರಮಾಣಪತ್ರದಲ್ಲಿ ಸುಳ್ಳು ಆದಾಯ ನಮೂದಿಸಲು ಸಹಕರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಹೀಗಾಗಿ, ನೈತಿಕ ಹೊಣೆ ಹೊತ್ತು ತತ್‌ಕ್ಷಣವೇ ಅವರು ಅಧ್ಯಕ್ಷ ಹುದ್ದೆಗೆ ರಾಜೀನಾಮೆ ನೀಡಬೇಕು' ಎಂದು ಆಯೋಗದ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ.

'ಆಯೋಗದ ಘನತೆ ಕಾಪಾಡುವ ಉದ್ದೇಶದಿಂದ ಮತ್ತು ನಿಷ್ಪಕ್ಷಪಾತ ತನಿಖೆ ಆಗಬೇಕಾಗಿರುವುದರಿಂದ ಅಧ್ಯಕ್ಷರು ರಾಜೀನಾಮೆ ನೀಡಲೇಬೇಕು. ಆಯೋಗದ ಕಾರ್ಯಗಳು ಸುಗಮವಾಗಿ ಸಾಗಲು ಮೊದಲನೇ ಹಿರಿಯ ಸದಸ್ಯರ ನೇತೃತ್ವದಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ನಡೆಸಬೇಕು' ಎಂದು ನಿರ್ಣಯಿಸಲಾಗಿದೆ.

▶ 8

ಸಂಪುಟ ವಿಸ್ತರಣೆ ಕಸರತ್ತು ದೆಹಲಿಗೆ ಸಿ.ಎಂ ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಸ್ಥಾನದ ಆಕಾಂಕ್ಷಿ ಶಾಸಕರ ಒತ್ತಡ ತೀವ್ರವಾಗುತ್ತಿದ್ದು, ಸಂಪುಟ ವಿಸ್ತರಣೆಯ ಕಸರತ್ತನ್ನು ಅಂತ್ಯಗೊಳಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೆಹಲಿಯತ್ತ ಪಯಣ ಬೆಳೆಸಲು ಸಿದ್ಧತೆ ನಡೆಸಿದ್ದಾರೆ.

ಪಕ್ಷದ ಹೈಕಮಾಂಡ್ ನಾಯಕರ ಭೇಟಿಗೆ ಸಮ್ಮತಿಯ ನಿರೀಕ್ಷೆಯಲ್ಲಿದ್ದು, ಎರಡು ದಿನಗಳಲ್ಲಿ ದೆಹಲಿಗೆ ತೆರಳಿ, ನೂತನ ಸಚಿವರ ಪಟ್ಟಿ ಅಂತಿಮಗೊಳಿಸಲಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ಹೇಳಿವೆ.

ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿ ಒಂದು ತಿಂಗಳು ಕಳೆದರೂ ಸಂಪುಟ ವಿಸ್ತರಣೆ ಪೂರ್ಣಗೊಳಿಸಲು ಶಿವಕುಮಾರ್ ಅವರಿಗೆ ಸಾಧ್ಯವಾಗಿಲ್ಲ. ಹಿರಿಯ, ಕಿರಿಯ ಶಾಸಕರು, ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿ ಕೆಲಸ ಮಾಡಿ, ಈಗ ಅವಕಾಶ ಸಿಗದವರು ನಿರಂತರ ಒತ್ತಡ ಹಾಕುತ್ತಿದ್ದು, ಕೆಲವರು ದೆಹಲಿಗೆ ತೆರಳಿ ಹೈಕಮಾಂಡ್ ಮೂಲಕ ಶಿಫಾರಸು ಮಾಡಿಸುತ್ತಿರುವುದು ಮುಖ್ಯಮಂತ್ರಿಯನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

▶ 9

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆ ಇದೆ.

ಮಲ್ಲೇಶ್ವರದ ಈಸ್ಟ್ ಪಾರ್ಕ್ ರಸ್ತೆಯ ಮಾತ್ರ ನಿಲಯದಲ್ಲಿ ಚರಕ ಸಂಸ್ಥೆಯ 'ದೇಸಿ' ಮಳಿಗೆಯನ್ನು ಉದ್ಘಾಟಿಸಿದ ಬಳಿಕ ಸಿ.ಎನ್‌. ಅಶ್ವತ್ಥ ನಾರಾಯಣ ಅವರು ವಸ್ತ್ರವನ್ನು ವೀಕ್ಷಿಸಿದರು. ಟೆರೆನ್ಸ್ ಪೀಟರ್ ಇದ್ದರು — ಪ್ರಜಾವಾಣಿ ಚಿತ್ರ

'ದೇಸಿ' ಮಳಿಗೆ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾದಿ ಮತ್ತು ಗ್ರಾಮೋದ್ಯಮವನ್ನು ಮತ್ತಷ್ಟು ಬಲಪಡಿಸುವ ಮೂಲಕ ಗ್ರಾಮೀಣ ಉದ್ಯೋಗ, ಆರೋಗ್ಯಕರ ಬದುಕು ಹಾಗೂ ಪರಿಸರ ಸಂರಕ್ಷಣೆ ಸಾಧಿಸಬಹುದು ಎಂದು ಶಾಸಕ ಸಿ.ಎನ್‌.ಅಶ್ವತ್ಥನಾರಾಯಣ ಹೇಳಿದರು.

ಮಲ್ಲೇಶ್ವರದ 15ನೇ ಅಡ್ಡರಸ್ತೆಯ ಈಸ್ಟ್ ಪಾರ್ಕ್ ರಸ್ತೆಯ ಮಾತ್ರ ನಿಲಯದಲ್ಲಿ ಹೆಗ್ಗೋಡಿನ ಚರಕ ಸಂಸ್ಥೆಯ 'ದೇಸಿ' ಹೊಸ ಮಳಿಗೆಯನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಭಾರತದ ಸ್ವಾತಂತ್ರ್ಯದ ಹೋರಾಟವನ್ನು ನಮ್ಮ ಉಡುಪಿನ ಮೂಲಕ ಜಗತ್ತಿಗೆ ಪರಿಚಯಿಸಿದ ಸಂಕೇತವೇ ಖಾದಿ. ನೈಸರ್ಗಿಕ ಬಣ್ಣಗಳು ಹಾಗೂ ನೈಸರ್ಗಿಕ ನೂಲುಗಳಿಂದ ತಯಾರಾಗುವ ಉಡುಪುಗಳು ಆರೋಗ್ಯಕ್ಕೂ ಪರಿಸರಕ್ಕೂ ಅನುಕೂಲಕರವಾಗಿವೆ. ಕೃತಕ ವಸ್ತುಗಳಿಂದ ತಯಾರಾಗುವ ಬಟ್ಟೆಗಳ ಬದಲಾಗಿ ಮತ್ತೆ ನೈಸರ್ಗಿಕ ಉತ್ಪನ್ನಗಳತ್ತ ಜನರು ಮರಳುತ್ತಿರುವುದು ಉತ್ತಮ ಬೆಳವಣಿಗೆಯಾಗಿದ್ದು, ಇವುಗಳಿಗೆ ದೇಶ-ವಿದೇಶಗಳಲ್ಲಿ ಹೆಚ್ಚಿನ ಬೇಡಿಕೆ ಇದೆ' ಎಂದರು.

ಚರಕ ಸಂಸ್ಥೆ ಅಧ್ಯಕ್ಷೆ ಮಹಾಲಕ್ಷ್ಮಿ ಅಧ್ಯಕ್ಷತೆ ವಹಿಸಿದ್ದರು. ಚರಕ ಸಿಇಒ ಟೆರೆನ್ಸ್ ಪೀಟರ್, ವಿವಿಧ ವಿಭಾಗಗಳ ವ್ಯವಸ್ಥಾಪಕರಾದ ಸ್ವರ್ಣಲತಾ, ಕಲಾವತಿ, ಕೃಷ್ಣ, ವೀಣಾ ಹೆಗಡೆ, ತಾಂತ್ರಿಕ ಸಲಹೆಗಾರ ರಾಮಚಂದ್ರಪ್ಪ, ಸಾಮಾಜಿಕ ಕಾರ್ಯಕರ್ತೆ ವಿದ್ಯಾ, ಮುಖ್ಯ ವಾಸ್ತುಶಿಲ್ಪಿಗಳಾದ ಅರುಣಾಚಲ ಹೊಂಬಳಿ, ಸರೋಜಿನಿ ಹೊಂಬಳಿ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಮಿಕರ ಜೀವಕ್ಕೆ ಕುತ್ತಾದ ಕ್ವಾರಿ

ಕೂಲಿಗಾಗಿ ಬಂದು ಕೊನೆಯುಸಿರೆಳೆದ ಕಾರ್ಮಿಕರು; ಸುರಕ್ಷತೆ ನಿರ್ಲಕ್ಷ್ಯ

ಪ್ರಜಾವಾಣಿ ವಾರ್ತೆ

ರಾಮನಗರ: ಬಂಡೆಗಳಿಗೆ ಮೆತ್ತಿಕೊಂಡಿದ್ದ ರಕ್ತ, ಸಂದಿಯಲ್ಲಿ ಸಿಲುಕಿ ಕಿತ್ತು ಹೋಗಿದ್ದ ಚಪ್ಪಲಿ, ಚಪ್ಪಟೆಯಾಗಿದ್ದ ಊಟದ ತಟ್ಟೆಗಳು, ಅಲ್ಲಲ್ಲಿ ಚೆಲ್ಲಿದ್ದ ಅನ್ನ, ನಜ್ಜುಗುಜ್ಜಾಗಿದ್ದ ಟ್ರ್ಯಾಕ್ಟರ್, ಅಲ್ಲಲ್ಲಿ ಅನಾಥವಾಗಿ ಬಿದ್ದಿದ್ದ ಡ್ರಿಲ್ಲಿಂಗ್ ಮಷಿನ್‌ಗಳು, ಕಲ್ಲುಗಳ ಮಧ್ಯೆಯೇ ಸಿಲುಕಿದ್ದ ಹಿಟಾಚಿಗಳು...

ಎರಡು ದಿನದ ಹಿಂದೆ 7 ಕಾರ್ಮಿಕರನ್ನು ಬಲಿ ಪಡೆದ ಬೆಂಗಳೂರು ದಕ್ಷಿಣ ಜಿಲ್ಲೆಯ ತಾವರೆಕೆರೆ ಹೋಬಳಿಯ ಮಾದಾಪಟ್ಟಣದ ಕಲ್ಲು ಕ್ವಾರಿಯಲ್ಲಿ ಕಂಡುಬಂದ ಸ್ಮಶಾನ ಸದೃಶ ಚಿತ್ರಣವಿದು.

ಭುವನೇಶ್ವರ್

ಧರ್ಮೇಶ್

ರಾಜೇಶ್

ರಾಮವತಾರ್

ಸತ್ಯ

ಮೇಲಕ್ಕೆ ಕಣ್ಣು ಹಾಯಿಸಿದಷ್ಟೂ ಕಲ್ಲು ಗಣಿಗಾರಿಕೆಯಿಂದಾಗಿ ಕೆತ್ತಿದಂತಿರುವ ಗುಡ್ಡಗಳು ಕಂಡರೆ, ಕೆಳಕ್ಕೆ ಕಣ್ಣು ಹಾಯಿಸಿದರೆ ಪ್ರಪಾತವಾಗಿರುವ ಗುಂಡಿಗಳು ಕಾಣುತ್ತವೆ.

ಹೊರಗಿನವರೇ ಹೆಚ್ಚು: ಕ್ವಾರಿಗಳಲ್ಲಿ ಇರುವ ಬಹುತೇಕ ಕಾರ್ಮಿಕರು ಹೊರ ರಾಜ್ಯದವರೇ. ಛತ್ತೀಸಗಢ, ಮಧ್ಯ ಪ್ರದೇಶ, ಬಿಹಾರ, ಉತ್ತರಪ್ರದೇಶ, ತಮಿಳುನಾಡು, ಈಶಾನ್ಯ ರಾಜ್ಯಗಳ ಮಂದಿಯೇ ಇಲ್ಲಿನ ಕಾರ್ಮಿಕರು. ಮೇಸ್ತ್ರಿ, ವ್ಯವಸ್ಥಾಪಕ ಸೇರಿದಂತೆ ಕೆಲವರಷ್ಟೇ ಸ್ಥಳೀಯರು. ಕಾರ್ಮಿಕರಿಗಾಗಿ ಕ್ವಾರಿಯಿಂದ ಅನತಿ ದೂರದಲ್ಲಿ ಶೆಡ್‌ಗಳನ್ನು ನಿರ್ಮಿಸಲಾಗಿದೆ. ಅಲ್ಲಿಯೇ ಕಾರ್ಮಿಕರ ವಾಸ, ಅಡುಗೆ, ಸ್ನಾನ ಎಲ್ಲವೂ. ಕ್ವಾರಿಯಲ್ಲಿ ಮೈ ಬಗ್ಗಿಸಿ ದುಡಿಯುವ ಕೆಲ ಪುರುಷರ ಜೊತೆ ಅವರ ಕುಟುಂಬವೂ ವಾಸವಾಗಿದೆ.

ಅವಘಡ ಸಾಮಾನ್ಯ

'ಈ ಭಾಗದಲ್ಲಿ ನಾಲ್ಕೈದು ದಶಕದಿಂದ ಕಲ್ಲು ಗಣಿಗಾರಿಕೆ ನಡೆಯುತ್ತಲೇ ಇದೆ. ಕಲ್ಲು ಸಿಡಿದು ಗಾಯಗೊಂಡವರಿಗೆ, ಜೀವ ಕಳೆದುಕೊಂಡವರಿಗೆ ಲೆಕ್ಕವಿಲ್ಲ. ಕೆಲವು ಬೆಳಕಿಗೆ ಬರುತ್ತವೆ. ಉಳಿದವು ಈ ಕ್ವಾರಿಯೊಳಗೆ ಮಣ್ಣಾಗುತ್ತವೆ' ಎಂದು ಮಾದಾಪಟ್ಟಣದ ಸ್ಥಳೀಯರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಯಾರಾದರೂ ಇಲ್ಲಿ ನಡೆಯುವ ಅವಘಡಗಳ ಕುರಿತು ದನಿ ಎತ್ತಿದರೆ, ರೌಡಿಗಳನ್ನು ಬಿಟ್ಟು ಅವರ ಬಾಯಿ ಮುಚ್ಚಿಸುತ್ತಾರೆ, ತೊಂದರೆ ತಪ್ಪಿದ್ದಲ್ಲ ಎಂದರು.

ಸುದ್ದಿ 2 ನಿಮಿಷ

'ನನ್ನ ಇ-ಖಾತಾ ಅಭಿಯಾನ' ರದ್ದು

ಬೆಂಗಳೂರು: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಯುತ್ತಿರುವುದರಿಂದ ಜುಲೈ 4ರ ಶನಿವಾರದಂದು ನಡೆಯಬೇಕಿದ್ದ 'ನನ್ನ ಇ-ಖಾತಾ ನನ್ನ ಹಕ್ಕು ಅಭಿಯಾನ'ವನ್ನು ರದ್ದು-ಪಡಿಸಲಾಗಿದೆ. ಕಂದಾಯ ವಿಭಾಗದ ಬಹುತೇಕ ಸಿಬ್ಬಂದಿ ಎಸ್‌ಐಆರ್ ಕಾರ್ಯದಲ್ಲಿ ನಿರತರಾಗಿರುವುದರಿಂದ ಖಾತಾ ಅಭಿಯಾನವನ್ನು ರದ್ದು ಪಡಿಸಲಾಗಿದೆ. ಅಭಿಯಾನ ಆರಂಭವಾಗುವ ದಿನವನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದ್ದಾರೆ. ಜೂನ್ 27ರಂದು ನಡೆಯಬೇಕಿದ್ದ 'ನನ್ನ ಇ-ಖಾತಾ ನನ್ನ ಹಕ್ಕು ಅಭಿಯಾನ'ವನ್ನೂ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆಯ ಕಾರಣದಿಂದ ರದ್ದುಪಡಿಸಲಾಗಿತ್ತು.

ಎಸ್‌ಟಿಆರ್‌ಆರ್‌ಗೆ ಸಂಪುಟ ಅನುಮೋದನೆ: ಮನವಿ

ನವದೆಹಲಿ: 'ಬೆಂಗಳೂರು ಸ್ಯಾಟಲೈಟ್ ಟೌನ್ ರಿಂಗ್ ರೋಡ್ ಯೋಜನೆಗೆ (ಎಸ್‌ಟಿಆರ್‌ಆರ್) ಕೇಂದ್ರ ಸಚಿವ ಸಂಪುಟದ ಶೀಘ್ರ ಅನುಮೋದನೆ ನೀಡಬೇಕು. ಭೂಸ್ವಾಧೀನ ಆಗಿರುವ ಜಮೀನುಗಳ ಮಾಲೀಕರಿಗೆ ಬಾಕಿ ಪರಿಹಾರ ಮೊತ್ತವನ್ನು ತಕ್ಷಣ ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿ ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಮನವಿ ಸಲ್ಲಿಸಿದರು.

ನವದೆಹಲಿಯ ಕರ್ತವ್ಯ ಭವನದಲ್ಲಿ ಶುಕ್ರವಾರ ಸಚಿವರನ್ನು ಭೇಟಿ ಮಾಡಿದ ಅವರು, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಾವಿರಾರು ರೈತರು ಮತ್ತು ಭೂಮಾಲೀಕರ ನ್ಯಾಯಯುತ ಬೇಡಿಕೆಗೆ ಸ್ಪಂದಿಸಬೇಕು ಎಂದು ಕೋರಿದರು.

2020–2021ರಲ್ಲೇ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದರೂ, ಅನೇಕ ರೈತರು ಮತ್ತು ಭೂಮಾಲೀಕರು ಇನ್ನೂ ಪರಿಹಾರಕ್ಕಾಗಿ ಕಾಯುತ್ತಿದ್ದಾರೆ. ಇದರಿಂದ ಅನೇಕ ಕುಟುಂಬಗಳು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದು, ಸರ್ಕಾರದಿಂದ ಶೀಘ್ರ ಪರಿಹಾರದ ನಿರೀಕ್ಷೆಯಲ್ಲಿವೆ ಎಂದು ಸಚಿವರ ಗಮನಕ್ಕೆ ತಂದರು. ಬಾಕಿ ಇರುವ ಅನುಮೋದನೆ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸಬೇಕು ಎಂದು ಕೋರಿದರು.

ಕನಕದಾಸ ಅಧ್ಯಯನ ಕೇಂದ್ರದಿಂದ 'ಮಾಸದ ಮಾತು'

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಪ್ರತಿ ತಿಂಗಳ ಒಂದನೇ ಶನಿವಾರ 'ಮಾಸದ ಮಾತು' ಕಾರ್ಯಕ್ರಮ ನಡೆಸಲು ಮುಂದಾಗಿದ್ದು, ಗಾಯನ–ಮಾತು–ಸಂವಾದವನ್ನು ಈ ಕಾರ್ಯಕ್ರಮವು ಒಳಗೊಂಡಿರಲಿದೆ.

ಮಲ್ಲತ್ತಹಳ್ಳಿಯಲ್ಲಿರುವ ಕೇಂದ್ರದಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದು ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ ತಿಳಿಸಿದ್ದಾರೆ. ಇದೇ 4ರಂದು ಸಂಜೆ 4.30ಕ್ಕೆ ಕೇಂದ್ರದ ಆವರಣದಲ್ಲಿ ಕನಕದಾಸರ 'ರಾಮಧಾನ್ಯ ಚರಿತೆ' ಕಾವ್ಯವನ್ನು ಯಕ್ಷಗಾನ ತಾಳಮದ್ದಳೆ ಮಾಧ್ಯಮದಲ್ಲಿ ಪ್ರಸ್ತುತಪಡಿಸಲಾಗುತ್ತಿದೆ. ಈ ತಾಳಮದ್ದಳೆಯನ್ನು ಪುರುಷೋತ್ತಮ ಬಿಳಿಮಲೆ, ನಾಗರಾಜ ಶೇರಿಗಾರ್, ಸುಧನ್ವ ದೇರಾಜೆ, ಶಶಾಂಕ ಅರ್ನಾಡಿ, ವಿಜಯ ಕುಂಬ್ಳೆ ಮತ್ತು ಅಕ್ಷಯ ರಾವ್ ವಿಟ್ಲ ನಡೆಸಿಕೊಡಲಿದ್ದಾರೆ. ಆಯ್ದ ನೂರು ಪ್ರಾತಿನಿಧಿಕ ತತ್ವಪದಗಳನ್ನು ಒಳಗೊಂಡ 'ಬಯಲು ಬಣ್ಣವನುಟ್ಟು' ಎಂಬ ಆವೃತ್ತಿಯನ್ನು ಸಾಹಿತಿ ಕೆ.ಮರುಳಸಿದ್ದಪ್ಪ ಬಿಡುಗಡೆ ಮಾಡುವರು.

ಜಿಆರ್‌ಟಿ ಜ್ಯುವೆಲ್ಲರ್ಸ್‌ನಿಂದ 'ಸ್ವರ್ಣ ಆಷಾಢ' ಕೊಡುಗೆ

ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣದಲ್ಲಿ ಆಷಾಢ ಹಿನ್ನೆಲೆ ವಿಶೇಷ ಕೊಡುಗೆ ಘೋಷಿಸಿದ ಜಿಆರ್‌ಟಿ, ಚಿನ್ನ, ವಜ್ರ, ಬೆಳ್ಳಿ ಆಭರಣಗಳ ಮೇಲೆ ವಿಶೇಷ ರಿಯಾಯಿತಿ!

ಬೆಂಗಳೂರು: ಭಾರತದ ಅತ್ಯಂತ ವಿಶ್ವಾಸಾರ್ಹ ಮತ್ತು ಜನಪ್ರಿಯ ಆಭರಣ ಬ್ರ್ಯಾಂಡ್‌ಗಳಲ್ಲಿ ಒಂದಾದ ಜಿಆರ್‌ಟಿ ಜ್ಯುವೆಲ್ಲರ್ಸ್, ಆಷಾಢ ಮಾಸದ ಅಂಗವಾಗಿ ಗ್ರಾಹಕರಿಗಾಗಿ ವಿಶೇಷ 'ಆಷಾಢ ಅಭಿಯಾನ'ವನ್ನು ಘೋಷಿಸಿದೆ. ದಕ್ಷಿಣ ಭಾರತದಾದ್ಯಂತ 67 ಮತ್ತು ಸಿಂಗಾಪುರದಲ್ಲಿ ಒಂದು ಸೇರಿದಂತೆ ಒಟ್ಟು 68 ಶೋರೂಮ್‌ಗಳ ಬೃಹತ್ ಜಾಲವನ್ನು ಹೊಂದಿರುವ ಜಿಆರ್‌ಟಿ, ಆಷಾಢ ಸೀಸನ್‌ನಲ್ಲಿ ಗ್ರಾಹಕರಿಗೆ ಅತ್ಯಾಕರ್ಷಕ ಕೊಡುಗೆಗಳನ್ನು ಹೊತ್ತು ತಂದಿದೆ.

ಕರ್ನಾಟಕದ ಗ್ರಾಹಕರಿಗಾಗಿ 'ಸ್ವರ್ಣ ಆಷಾಢ', ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ 'ಸ್ವರ್ಣ ಆಷಾಢಂ' ಹೆಸರಿನಲ್ಲಿ ಈ ವಿಶೇಷ ಸೀಮಿತ ಅವಧಿಯ ಅಭಿಯಾನವನ್ನು ಪರಿಚಯಿಸಲಾಗಿದೆ. ಪ್ರತಿ ಗ್ರಾಂ ಖರೀದಿಯ ಮೇಲೆ 200 ರೂಪಾಯಿ ರಿಯಾಯಿತಿ, ಹಳೆಯ ಚಿನ್ನ ನೀಡಿ ಹೊಸ ಆಭರಣ ಪಡೆಯುವಾಗ ಪ್ರತಿ ಗ್ರಾಂಗೆ ಹೆಚ್ಚುವರಿಯಾಗಿ 150 ರೂಪಾಯಿ ರಿಯಾಯಿತಿ, ಡೈಮಂಡ್ ಮತ್ತು ಅನ್ ಕಟ್ ಡೈಮಂಡ್‌ಗಳ ಮೌಲ್ಯದ ಮೇಲೆ ಶೇ.12.5 ರಷ್ಟು ಭಾರಿ ರಿಯಾಯಿತಿ, ಬೆಳ್ಳಿ ಸಾಮಗ್ರಿಗಳ ತಯಾರಿಕಾ ವೇಸ್ಟೇಜ್ (ವಿಎ) ಮೇಲೆ ಶೇ.25ರಷ್ಟು ವಿನಾಯಿತಿ, ಬೆಳ್ಳಿ ಆಭರಣಗಳ ಎಂಆರ್‌ಪಿ ಬೆಲೆಯ ಮೇಲೆ ಶೇ.10ರಷ್ಟು ನೇರ ರಿಯಾಯಿತಿಯನ್ನು ಘೋಷಿಸಲಾಗಿದೆ. ಈ ವಿಶೇಷ ಕೊಡುಗೆಗಳು ಸೀಮಿತ ಅವಧಿಗೆ ಮಾತ್ರ ಲಭ್ಯವಿದ್ದು, ಷರತ್ತುಗಳು ಅನ್ವಯಿಸುತ್ತವೆ ಎಂದು ಸಂಸ್ಥೆ ತಿಳಿಸಿದೆ.

ಜಿಆರ್‌ಟಿ ಜ್ಯುವೆಲ್ಲರ್ಸ್ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ಆನಂದ್ ಅನಂತಪದ್ಮನಾಭನ್ ಮಾತನಾಡಿ, 'ಆಷಾಢವು ಯಾವಾಗಲೂ ಒಂದು ಪ್ರಮುಖ ಶಾಪಿಂಗ್ ಸೀಸನ್ ಆಗಿದೆ. ಪ್ರತಿ ವರ್ಷದಂತೆ ಈ ಬಾರಿಯೂ ನಮ್ಮ ಗ್ರಾಹಕರ ಖರೀದಿಯನ್ನು ಮತ್ತಷ್ಟು ಲಾಭದಾಯಕವಾಗಿಸಲು ಗುಣಮಟ್ಟ, ಕರಕುಶಲತೆ ಮತ್ತು ವಿಶ್ವಾಸದೊಂದಿಗೆ 'ಸ್ವರ್ಣ ಆಷಾಢ'ವನ್ನು ಪ್ರಸ್ತುತಪಡಿಸಲು ನಾವು ಸಂತೋಷಪಡುತ್ತೇವೆ' ಎಂದರು.

ಜಿಆರ್‌ಟಿ ಜ್ಯುವೆಲ್ಲರ್ಸ್ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್.ರಾಧಾಕೃಷ್ಣನ್ ಮಾತನಾಡಿ, 'ನಮ್ಮ ಗ್ರಾಹಕರ ಪ್ರೀತಿ ಮತ್ತು ವಿಶ್ವಾಸವೇ ನಾವು 68 ಶೋರೂಮ್‌ಗಳಾಗಿ ಬೆಳೆಯಲು ಶಕ್ತಿ ನೀಡಿದೆ. ಈ ವಿಶೇಷ ಆಷಾಢ ಕೊಡುಗೆಗಳು ಅವರ ನಿರಂತರ ಬೆಂಬಲಕ್ಕೆ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುವ ಮಾರ್ಗವಾಗಿದೆ. ಗ್ರಾಹಕರು ನಮ್ಮ ಜಾಗತಿಕ ಗುಣಮಟ್ಟದ ಸಾಂಪ್ರದಾಯಿಕ ಹಾಗೂ ಆಧುನಿಕ ವಿನ್ಯಾಸಗಳ ವ್ಯಾಪಕ ಸಂಗ್ರಹವನ್ನು ವೀಕ್ಷಿಸಿ, ಈ ಸೀಮಿತ ಅವಧಿಯ ಲಾಭವನ್ನು ಪಡೆದುಕೊಳ್ಳಬೇಕು' ಎಂದರು. ಅತ್ಯಾಕರ್ಷಕ ಕರಕುಶಲತೆ, ವೈವಿಧ್ಯಮಯ ವಿನ್ಯಾಸಗಳು ಹಾಗೂ ಸಮುದಾಯದ ಏಳ್ಗೆಗೆ ಪೂರಕವಾಗಿ ಕೊಡುಗೆ ನೀಡುವ ನಿಟ್ಟಿನಲ್ಲಿ ತನ್ನದೇ ಆದ ಪ್ರತ್ಯೇಕ ಛಾಪು ಮೂಡಿಸಿದ ಜಿಆರ್‌ಟಿ ಜ್ಯುವೆಲ್ಲರ್ಸ್‌ನಲ್ಲಿ ಈ ಆಷಾಢ ಮಾಸವನ್ನು ಸಂಭ್ರಮದಿಂದ ಆಚರಿಸಲು ಗ್ರಾಹಕರಿಗೆ ಇದು ಸುವರ್ಣಾವಕಾಶವಾಗಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

'ಸಾರಿಗೆ ನಿಗಮಗಳ ನೌಕರರಿಗೆ ಅನ್ಯಾಯ'

ಬೆಂಗಳೂರು: 2024ರ ಜನವರಿ 1ರಿಂದ ವೇತನ ಪರಿಷ್ಕರಣೆ ಮಾಡುವ ಬದಲು 2025ರ ಏಪ್ರಿಲ್‌ನಿಂದ ಪರಿಷ್ಕರಿಸುವ ಮೂಲಕ ಸಾರಿಗೆ ನಿಗಮಗಳ ನೌಕರರಿಗೆ ಅನ್ಯಾಯ ಮಾಡಲಾಗಿದೆ. ರಾಜಿ ಸಂಧಾನ ಸಭೆಯಲ್ಲಿ ನೀಡಿದ ಭರವಸೆ ಈಡೇರಿಸದೇ ಪರಿಷ್ಕೃತ ವೇತನ ಜಾರಿ ಮಾಡಿರುವುದನ್ನು ವಿರೋಧಿಸಿ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ತಿಳಿಸಿದೆ.

ಹೈಕೋರ್ಟ್ ನೀಡಿದ ಆದೇಶದ ಅನ್ವಯ ಮೇ 25ರಂದು ಕಾರ್ಮಿಕ ಆಯುಕ್ತರು ಸಂಧಾನ ಸಭೆ ಕರೆದಿದ್ದರು. ಅದರಲ್ಲಿ ಜಂಟಿ ಕ್ರಿಯಾ ಸಮಿತಿ ಪರಿಷ್ಕೃತ ಬೇಡಿಕೆಗಳನ್ನು ಸಲ್ಲಿಸಿತ್ತು. ಪಟ್ಟಿಯನ್ನು ಆಡಳಿತ ಮಂಡಳಿಯ ಮುಂದಿಟ್ಟು ಮುಂದಿನ ರಾಜಿ ಸಂಧಾನ ಸಭೆಯಲ್ಲಿ ಈ ಬಗ್ಗೆ ಚರ್ಚಿಸುವುದಾಗಿ ಸಭೆಯಲ್ಲಿ ತಿಳಿಸಲಾಗಿತ್ತು. ಜೂನ್ 10ಕ್ಕೆ ನಡೆದ ರಾಜಿ ಸಂಧಾನ ಸಭೆಯನ್ನು ಜೂನ್ 30ಕ್ಕೆ ಮುಂದೂಡಲಾಗಿತ್ತು. ಬೇಡಿಕೆಗಳ ಬಗ್ಗೆ ಚರ್ಚೆ ನಡೆಸಲು ಸಭೆಯೊಂದನ್ನು ಆಯೋಜಿಸಲಾಗುವುದು. ಹೈಕೋರ್ಟ್ ಆದೇಶವನ್ನು ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ಆಯುಕ್ತರು ಸಭೆಯಲ್ಲಿ ಭರವಸೆ ನೀಡಿದ್ದರು.

ಆದರೆ, ಸಭೆ ನಡೆಸದೇ, ಪರಿಷ್ಕೃತ ಬೇಡಿಕೆಗಳನ್ನು ಈಡೇರಿಸದೇ, ಆಡಳಿತ ಮಂಡಳಿಯ ಸಭೆಯಲ್ಲಿ ಒಪ್ಪಿಗೆಯನ್ನೂ ಪಡೆಯದೇ ವೇತನ ಪರಿಷ್ಕರಣೆಯ ಸುತ್ತೋಲೆ ಹೊರಡಿಸಲಾಗಿದೆ. ಇದು ಕಾರ್ಮಿಕ ವಿರೋಧಿ ಬೆಳವಣಿಗೆ. ಮುಂದೆ ಹೋರಾಟದ ದಾರಿ ಹಿಡಿಯಲಾಗುವುದು ಎಂದು ಜಂಟಿ ಕ್ರಿಯಾ ಸಮಿತಿಯ ಸಂಚಾಲಕ ಬಿ. ಜಯದೇವರಾಜೇ ಅರಸು ತಿಳಿಸಿದ್ದಾರೆ.

ಆರೋಗ್ಯ ತಪಾಸಣಾ ಶಿಬಿರ

ಬೆಂಗಳೂರು: ಸರ್ಕಾರಿ ನಿವೃತ್ತ ನೌಕರರ ಸಂಘ ಹಾಗೂ ವೈಯಾ ವಿಕಾಸ್ ಸಂಸ್ಥೆಯ ಸಹಯೋಗದೊಂದಿಗೆ ಜುಲೈ 17ರಂದು ಕಬ್ಬನ್ ಉದ್ಯಾನದ ಸರ್ಕಾರಿ ನೌಕರರ ಭವನ ಸಭಾಂಗಣ–2ರಲ್ಲಿ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

nandhana PARTY HALL

ನಂದನ® ಪಾರ್ಟಿ ಹಾಲ್

ನಿಮ್ಮ ಸಮಾರಂಭವನ್ನು ವಿಶೇಷಗೊಳಿಸಿ



• ಹುಟ್ಟುಹಬ್ಬ • ನಿಶ್ಚಿತಾರ್ಥಗಳು • ನಾಮಕರಣ
• ಸಂತೋಷಕೂಟ • ಬೀಗರ ಔತಣ • ಆರತಕ್ಷತೆ

ಮೀಸಲಾತಿಗಾಗಿ ಕೂಡಲೇ ಕರೆ ಮಾಡಿ:
+91 99019 85642, 080 4613 1111

ನಮ್ಮ ಶಾಖೆಗಳು: ರಾಜಾಜಿನಗರ | ಕೋರಮಂಗಲ | ಕಮ್ಮನಹಳ್ಳಿ | ನ್ಯೂ ಬೆಲ್ ರೋಡ್ | ರಾಜರಾಜೇಶ್ವರಿ ನಗರ | ಸಹಕಾರ ನಗರ | ಕನಕಪುರ ರಸ್ತೆ | ಬೊಮ್ಮಸಂದ್ರ | ನಾಗರಭಾವಿ

www.nandhanarestaurants.com | banquets@nandhanahotels.com

AIR FORCE SCHOOL ASTE
GV Camp, Murugeshpalya, Bengaluru-560 017
(Ph:080-25276920/ 25272332)
INVITES APPLICATIONS FOR THE POSTS OF

Ser No	Post	No. of Vacancies	Nature of Appointment
1	PGT – (Physical Education)	01	Regular
2	Computer Lab Attendant	01	Regular/ Contractual Panel
3	Helpers – Male/ Female	01	Contractual and Panel

Details of qualifications and documents required to be checked on **www.afsaste.edu.in.** Hard copies of resume/CV, along with copies of education and experience testimonials, Aadhaar card, PAN card, one passport size photograph and covering letter stating the post applied for with complete contact details (i.e. present address, mobile nos, email id) should be submitted/ posted to **Air Force School ASTE, GV Camp, Murugeshpalya, Bengaluru-560017.**

Last date of receipt is 18 July 2026 upto 1200 hrs.

School Management Committee (SMC) reserves the right of cancelling the selection process at any stage even after the advertisement without any notice or assigning any reason. Shortlisted candidates will be notified about the dates of the selection process through **e-mail only.**

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: ECN-02-2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ – ಬೈಯಪ್ಪನಹಳ್ಳಿ, ಬೆಂಗಳೂರು (ಎಸ್‌ಎಂವಿಬಿ) ನಲ್ಲಿ ವಿಶ್ವಾಸಾರ್ಹ ವಿದ್ಯುತ್ ಸರಬರಾಜನ್ನು ಸುಗಮಗೊಳಿಸಲು ಬೆಸ್ಕಾಂ ನಿರ್ದೇಶನಗಳ ಪ್ರಕಾರ ಮೀಸಲಾದ 11 ಕೆವಿ ಹೆಚ್ ಟಿ ಫೀಡರ್ ವಿಸ್ತರಣೆಗೆ ಸಂಬಂಧಿಸಿದಂತೆ ವಿದ್ಯುತ್ ವ್ಯವಸ್ಥೆಗಳು.	ರೂ. 1,28,26,370/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22.07.2026, 11:00 ಗಂಟೆಯವರೆಗೆ

For details log on: www.ireps.gov.in

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ ಟಿಆರ್‌ಡಿ–II/ನಿರ್ಮಾಣ/ ಬೆಂಗಳೂರು ದಂಡು

PUB/253/AAMO/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

FURNITURE WAREHOUSE
DIVISION OF SME TRADING

JULY MONSOON SALE UPTO 70% OFF

SCAN FOR LOCATION

121/3 - 121/8, Near Alanoville Villa, Kannur Village & Post Bengaluru East Bengaluru - 560077.

LIVING ROOM * BEDROOM * DINING ROOM * OFFICE * OUTDOOR * MATTRESSES * HOME DECOR & MORE

FREE DELIVERY | FREE INSTALLATION | PAY IN EASY INSTALLMENTS AT NO EXTRA COST | HDFC BANK We understand your world | BAJAJ FINSERV EMI FINANCE | +91 8073835074 / 9739101312

SMART BAZAAR

ತಿಂಗಳಿನ ರೇಷನ್‌ನಲ್ಲಿ ಉಳಿತಾಯ ಮಾಡಲು ಇದೀಗ ಬೇರೆಡೆಗೆ ಮತ್ತೇಕೆ ಹೋಗಬೇಕು ?

ರಾಯಲ್ ಬುಲೆಟ್ ಕೋಲಂ ಅಕ್ಕಿ 26 kg
₹53.80 /kg
ಸ್ಮಾರ್ಟ್ ಬೆಲೆ ₹1399
ಉಳಿಸಿರಿ ₹501
ಎಮ್‌ಆರ್‌ಪಿ ₹1900

ಬಿಸ್ಕಿಟ್ಸ್ ದೊಡ್ಡ ಪ್ಯಾಕ್ 200 g ರಿಂದ (ಆಯ್ದ ಪ್ರಕಾರಗಳು)
BUY ANY 1 GET ANY 1 FREE
ಎಮ್‌ಆರ್‌ಪಿ ₹150 ರಿಂದ

ಸನ್‌ಫೀಸ್ಟ್ ಯಿಪ್ಪೀ! ಮ್ಯಾಜಿಕ್ ಮಸಾಲಾ ನೂಡಲ್ಸ್ 700 g
ಉಳಿಸಿರಿ ₹81
ಎಮ್‌ಆರ್‌ಪಿ ₹180 ರಿಂದ | ಸ್ಮಾರ್ಟ್ ಬೆಲೆ ₹99 ರಿಂದ

ಟಾಟಾ ಚಹಾ ಗೋಲ್ಡ್ 500 g
ಉಳಿಸಿರಿ ₹60
ಎಮ್‌ಆರ್‌ಪಿ ₹275 ರಿಂದ
ಸ್ಮಾರ್ಟ್ ಬೆಲೆ ₹215 ರಿಂದ

ಬೂಸ್ಟ್ / ಹಾರ್ಲಿಕ್ಸ್ 1 kg
ಉಳಿಸಿರಿ ₹135
ಎಮ್‌ಆರ್‌ಪಿ ₹555 ರಿಂದ
ಸ್ಮಾರ್ಟ್ ಬೆಲೆ ₹420 ರಿಂದ

ಪ್ರಿಂಗಲ್ಸ್ / ಲೇಸ್ / ಬಿಂಗೊ! ಚಿಪ್ಸ್ 87.5 g ರಿಂದ (ಆಯ್ದ ಪ್ರಕಾರಗಳು)
BUY ANY 2 GET ANY 1 FREE
ಎಮ್‌ಆರ್‌ಪಿ ₹50 ರಿಂದ /ಯೂನಿಟ್

ಸಣ್ಣ ಸಕ್ಕರೆ ಲೂಸ್ 1 kg
₹44.50
ಮಾರುಕಟ್ಟೆ ಬೆಲೆ ₹50

ತೊಳೆದ ಲೂಸ್ ಉದ್ದಿನ ಬೇಳೆ 1 kg
₹111
ಮಾರುಕಟ್ಟೆ ಬೆಲೆ ₹116

ಫಿಯೋನಾ ರಿಫೈನ್ಡ್ ಸೂರ್ಯಕಾಂತಿ ಎಣ್ಣೆ 1 L
₹162
ಎಮ್‌ಆರ್‌ಪಿ ₹195 ಉಳಿಸಿರಿ ₹33

ಆಶೀರ್ವಾದ ಸುಪೀರಿಯರ್ ಎಂಪಿ ಅಟ್ಟಾ 10 kg
₹549
ಎಮ್‌ಆರ್‌ಪಿ ₹644 | ಉಳಿಸಿರಿ ₹95

ಗುಡ್ ಲೈಫ್ ಜೀರಾ 500 g
₹149
ಎಮ್‌ಆರ್‌ಪಿ ₹300 | ಉಳಿಸಿರಿ ₹151

ಕ್ಲಾಸಿಕ್ ಸೋನಾ ಮಸೂರಿ ರೆಗ್ಯುಲರ್ ಅಕ್ಕಿ 26 kg
₹49.96 /kg
₹1299
ಎಮ್‌ಆರ್‌ಪಿ ₹1800 | ಉಳಿಸಿರಿ ₹501

ಗುಡ್ ಲೈಫ್ ಬಾದಾಮ್ 500 g
₹469
ಎಮ್‌ಆರ್‌ಪಿ ₹800 | ಉಳಿಸಿರಿ ₹331

ಮೆಕೇನ್ ಫ್ರೋಜನ್ ತಿಂಡಿಗಳು 750 g ರಿಂದ (ಆಯ್ದ ಪ್ರಕಾರಗಳು)
ಫ್ಲಾಟ್ 50% ಕಡಿತ
ಎಮ್‌ಆರ್‌ಪಿ ₹318 ರಿಂದ
ಸ್ಮಾರ್ಟ್ ಬೆಲೆ ₹159 ರಿಂದ

ಕೋಲ್ಗೇಟ್ / ಡಾಬರ್ ರೆಡ್ ಟೂತ್ ಪೇಸ್ಟ್ 500 g (ಆಯ್ದ ಪ್ರಕಾರಗಳು)
ಉಳಿಸಿರಿ ₹100 ರಿಂದ
ಎಮ್‌ಆರ್‌ಪಿ ₹310 ರಿಂದ | ಸ್ಮಾರ್ಟ್ ಬೆಲೆ ₹210 ರಿಂದ

ಲಕ್ಸ್ ಸೋಪ್ 150 g x 4 + 1 (ಆಯ್ದ ಪ್ರಕಾರಗಳು)
ಉಳಿಸಿರಿ ₹120
ಎಮ್‌ಆರ್‌ಪಿ ₹345 ರಿಂದ
ಸ್ಮಾರ್ಟ್ ಬೆಲೆ ₹225 ರಿಂದ

ಸ್ಟೇಫ್ರೀ / ವಿಸ್ಪರ್ ಸ್ಯಾನಿಟರಿ ಪ್ಯಾಡ್ಸ್ 40 ಪೀಸಸ್ (ಆಯ್ದ ಪ್ರಕಾರಗಳು)
BUY 1 GET 1 FREE
ಎಮ್‌ಆರ್‌ಪಿ ₹320 ರಿಂದ

ಡಿಯೊ 150 ml ರಿಂದ / ಪರ್ಫ್ಯೂಮ್ 75 ml ರಿಂದ (ಆಯ್ದ ಪ್ರಕಾರಗಳು)
BUY1GET1 FREE
ಎಮ್‌ಆರ್‌ಪಿ ₹299 ರಿಂದ

ಏರಿಯಲ್ ಮ್ಯಾಟಿಕ್ ಲಿಕ್ವಿಡ್ 2 L (ಫ್ರಂಟ್ ಲೋಡ್/ ಟಾಪ್ ಲೋಡ್) (ಆಯ್ದ ಪ್ರಕಾರಗಳು)
ಉಳಿಸಿರಿ ₹65
ಎಮ್‌ಆರ್‌ಪಿ ₹345 ರಿಂದ | ಸ್ಮಾರ್ಟ್ ಬೆಲೆ ₹280 ರಿಂದ

quick work ನೋಟ್‌ಬುಕ್
BUY 1 GET 1 FREE
ಎಮ್‌ಆರ್‌ಪಿ ₹70 ರಿಂದ

ಛತ್ರಿ / ರೈನ್ ವೇರ್ ಶ್ರೇಣಿ
₹149 ರಿಂದ
ಎಮ್‌ಆರ್‌ಪಿ ₹299 ರಿಂದ

ಕನಿಷ್ಠ 5% ಕಡಿಮೆ ಎಂಆರ್‌ಪಿ# ಪ್ರತಿದಿನ

ಸಕ್ಕರೆ 1 kg ₹9* ಪ್ರತಿದಿನ
*₹2499 ಮತ್ತು ಅದಕ್ಕಿಂತ ಹೆಚ್ಚಿನ ಶಾಪಿಂಗ್‌ನಲ್ಲಿ

ಈಗ ತೆರೆದಿದೆ ಬಾಗಲಗುಂಟೆ: ಬೋನ್ ಮಿಲ್ ಬಸ್ ಸ್ಟಾಪ್, ಹೆಸರಘಟ್ಟ ಮುಖ್ಯ ರಸ್ತೆ.

ಬೆಂಗಳೂರು : ಶೆಲ್ ಪೆಟ್ರೋಲ್ ಪಂಪ್ ಪಕ್ಕದಲ್ಲಿ, ಇಸ್ಕಾನ್ ದೇವಸ್ಥಾನದ ಹತ್ತಿರ, ರಾಜಾಜಿನಗರ • ಬೆಂಗಳೂರು ಸೆಂಟ್ರಲ್ ಮಾಲ್ ಎದುರು, ರಾಗಿಗುಡ್ಡ, ಜಯನಗರ 9 ನೇ ಬ್ಲಾಕ್ • ರಾಯಲ್ ಮೀನಾಕ್ಷಿ ಮಾಲ್, ಬನ್ನೇರುಘಟ್ಟ ರಸ್ತೆ • ಸಂಗೀತ ಅಪಾರ್ಟ್‌ಮೆಂಟ್ ಹತ್ತಿರ, ಹಳೆಯ ಗೀತಾಂಜಲಿ ಥಿಯೇಟರ್, ಮಲ್ಲೇಶ್ವರಂ • ಬ್ರಿಗೇಡ್ ಮಿಲೇನಿಯಮ್ ಹತ್ತಿರ, RBI ಲೇಔಟ್, 7 ನೇ ಹಂತ, J.P. ನಗರ • ಸೋಲ್ ಸ್ಪೇಸ್ ಸ್ಪಿರಿಟ್, ಬೆಳ್ಳಂದೂರ್. • ವಿಜಯಾ ಬ್ಯಾಂಕ್ ಕಾಲೋನಿ, ಔಟರ್ ರಿಂಗ್ ರೋಡ್, ಬಾಣಸವಾಡಿ. • ಮಾರುತಿ ಆರ್ಕೇಡ್, ಭದ್ರಪ್ಪಾ ಲೇಔಟ್, ಔಟರ್ ರಿಂಗ್ ರೋಡ್ ಹೆಬ್ಬಾಳ. • ರಿಲಯನ್ಸ್ ಡಿಜಿಟಲ್ ಪಕ್ಕದಲ್ಲಿ, ಹೆಣ್ಣೂರು-ಬಾಗಲೂರು ಮುಖ್ಯ ರಸ್ತೆ, ಕೊತ್ತನೂರು. • ಟ್ರೆಂಡ್ಸ್ ಪಕ್ಕ, ಕತ್ರಿಗುಪ್ಪೆ ರಸ್ತೆ, ಬನಶಂಕರಿ 3 ನೇ ಹಂತ. • ಅಕ್ಷಯ ನಗರ : ಡಿಎಲ್ ಎಫ್ ನ್ಯೂ ಟೌನ್ ಹತ್ತಿರ, ಬೆಗೂರ್ - ಹುಳಿಮಾವು ರಸ್ತೆ • ಚಂದಾಪುರ : ಗುಲ್ಲಿ ರೆಡ್ಡಿ ಲೇಔಟ್, ಚಂದಾಪುರ ಅತ್ತಿಬೆಲೆ ಹೋಬಳಿ, ಆನೇಕಲ್ ಮುಖ್ಯ ರಸ್ತೆ • ಮೋನಾರ್ಚ್ ಸೆರೆನಿಟಿ : ಥಣಿಸಂದ್ರ ಮುಖ್ಯ ರಸ್ತೆ. ಥಣಿಸಂದ್ರ. • ಮಾಳಗಾಲ ರೋಡ್ : ಮಾಳಗಾಲ ಮುಖ್ಯ ರಸ್ತೆ, ನಾಗರಭಾವಿ 2 ನೇ ಹಂತ, ಗಂಗಮ್ಮ ಗಾರ್ಡನ್ಸ್. • ವಿದ್ಯಾರಣ್ಯಪುರ : ಮಾರ್ಸ್ ಎನ್‌ಕ್ಲೇವ, ದೊಡ್ಡಮ್ಮಸಂದ್ರ ಮುಖ್ಯ ರಸ್ತೆ. • ವಿಜ್ಞಾನನಗರ್ : ಶೆಲ್ ಪೆಟ್ರೋಲ್ ಬಂಕ್ ಹತ್ತಿರ, ವಿಭೂತಿಪುರ • ವಿಜಯನಗರ ಟಿ ಟಿ ಎಮ್ ಸಿ : ಮಾರುತಿ ಮಂದಿರ ಹತ್ತಿರ • ಕೆ ಆರ್ ಪುರಂ : ಬೆತ್ತಲ್ ನಗರ, ಬಸವನಪುರ್ ಮುಖ್ಯ ರಸ್ತೆ, • ಭಾರತೀಯ ಮಾಲ್ ಆಫ್ ಬೆಂಗಳೂರು : ಭಾರತೀಯ ಸಿಟಿ, ಆರ್ ಕೆ ಹೆಗ್ಡೆ ನಗರ, ಥಣಿಸಂದ್ರ ಮುಖ್ಯ ರಸ್ತೆ. • ಎಲೆಕ್ಟ್ರಾನಿಕ್ ಸಿಟಿ, ಶ್ರೀಧರ್ ರೆಡ್ಡಿ ಪ್ರಾಪರ್ಟಿ, ರುಚಿ ಸಾಗರ ಹೋಟೆಲ್ ಹತ್ತಿರ ಹಂತ 2 • ಹರಳೂರು ರೋಡ್ : ಪಿಎನ್‌ಆರ್ ಫೇಲಿಸಿಟಿ, ಡಿಎಸ್‌ಆರ್ ಅಲ್ಟಿಮ ಅಪಾರ್ಟ್‌ಮೆಂಟ್ ಹತ್ತಿರ. • ಎನ್‌ಆರ್‌ಐ ಲೇಔಟ್ : ಮುಖ್ಯ ರಸ್ತೆ, ಎಚ್‌ಡಿಎಫ್‌ಸಿ ಬ್ಯಾಂಕ್ ಹತ್ತಿರ, ಕಲ್ಕೆರೆ ಗ್ರಾಮ. • ಟಿಟಿಎಂಸಿ, ಶಾಂತಿನಗರ ಬಸ್ ಸ್ಟ್ಯಾಂಡ್. ಕನಕಪುರ: ಕೋಡಿಹಳ್ಳಿ ರೋಡ್, ಎಚ್‌ಡಿಎಫ್‌ಸಿ ಮತ್ತು ಏಕ್ಸಿಸ್ ಬ್ಯಾಂಕ್‌ನ ನಡುವೆ. ತುಮಕೂರು: ಎಮ್‌ಜಿ ಸ್ಟೇಡಿಯಮ್‌ನ ಪಕ್ಕದಲ್ಲಿ, ಕುವೆಂಪು ನಗರ. ಬಂಗಾರಪೇಟೆ: ಕೆ ಜಿ ಎಫ್ ಮುಖ್ಯ ರಸ್ತೆ, ಟೋಟಲ್ ಗ್ಯಾಸ್‌ನ ಎದುರು.

ನಿಮ್ಮ ಹತ್ತಿರದ ಸ್ಟೋರ್ ನ್ನು ಪತ್ತೆಹಚ್ಚಲು ಸ್ಕ್ಯಾನ್ ಮಾಡಿ

ಸ್ಮಾರ್ಟ್ ಬಜಾರ್

ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. # ಖಾದ್ಯ ತೈಲ, ಲೂಸ್ ಸ್ಟೇಪಲ್ಸ್, ತಾಜಾ ಹಾಲು, ಬೇಬಿ ಫುಡ್, ಪತಂಜಲಿ ಉತ್ಪನ್ನಗಳು, ಸಾಮಾನ್ಯ ಸರಕುಗಳು, ಎಲೆಕ್ಟ್ರಾನಿಕ್ಸ್, ಉಡುಪು ಮತ್ತು ಪಾದರಕ್ಷೆಗಳನ್ನು ಹೊರತುಪಡಿಸಿ, ಆಯ್ದ ಉತ್ಪನ್ನಗಳ ಎಂಆರ್ ಪಿ ಗಳಲ್ಲಿ ಮಾತ್ರ. ಸ್ಟಾಕ್‌ಗಳು ಇರುವವರೆಗೂ ಆಫರ್‌ಗಳು ಮಾನ್ಯವಾಗಿರುತ್ತವೆ. ಎಲ್ಲಾ ಕೊಡುಗೆಗಳು ಸೂಚನೆಯಿಲ್ಲದೆ ಬದಲಾವಣೆಗೆ ಒಳಪಟ್ಟಿರುತ್ತವೆ. ತೋರಿಸಲಾದ ಉತ್ಪನ್ನಗಳ ಚಿತ್ರಗಳು/ ಛಾಯಾಚಿತ್ರಗಳು ಪ್ರಾತಿನಿಧ್ಯ ಉದ್ದೇಶಕ್ಕಾಗಿ ಮಾತ್ರ. ಹೋಮ್‌ವೇರ್ ಆಫರ್‌ಗಳು ಆಯ್ದ ಸ್ಮಾರ್ಟ್ ಬಜಾರ್ ಗಳಲ್ಲಿ ಮಾತ್ರ ಊರ್ಜಿತವಿದೆ. ಎಲ್ಲಾ ಉತ್ಪನ್ನಗಳ ಎಂಆರ್ ಪಿ ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ರಿಯಾಯಿತಿ ಶೇಕಡಾವಾರು ಆಫರ್ ಬೆಲೆಯ ಹತ್ತಿರದ ಶೇಕಡಾವಾರು ಮೊತ್ತಕ್ಕೆ ಪೂರ್ಣಗೊಳ್ಳುತ್ತದೆ. ಎಲ್ಲಾ ಆಫರ್ ಗಳು 5 ಜುಲೈ 2026. ರವರೆಗೆ ಮಾನ್ಯವಾಗಿರುತ್ತವೆ. ಎಲ್ಲಾ ವಿವಾದಗಳು ಮುಂಬೈನಲ್ಲಿರುವ ನ್ಯಾಯಾಲಯಗಳ ವಿಶೇಷ ನ್ಯಾಯವ್ಯಾಪ್ತಿಗೆ ಒಳಪಟ್ಟಿರುತ್ತವೆ.

ಆಹಾ ಅಣಬೆ... ಮಾಡಿ ತಿನ್ನೋಣ ಬಗೆ ಬಗೆ

• ಅರ್ಪಿತಾ ರಾಣಿ

ಮಳೆಗಾಲದ ಒಂದಿನ ಶಾಲೆಯಿಂದ ಬರುವಾಗ, ಶುಂಠಿಗದ್ದೆ ಏರಿಮೇಲೆ ಇಬ್ಬರು ಅಪರೂಪದ ಅತಿಥಿಗಳು ಕಂಡಿದ್ರು. ‘ಅರೆ, ಇಲ್ಲಿದ್ದು ಏನ್ ಮಾಡ್ತೀರ? ಬನ್ನಿ ನನ್ ಜೊತೆ’ ಅಂತ ಇಬ್ಬರನ್ನೂ ಕರ್ಕೊಂಡ್ ಬಂದು ನಮ್ಮ ಅಜ್ಜಿ ಕೈಗೆ ಒಪ್ಪಿಸಿದ್ದೆ. ‘ಅರೇ ಅಣಬೆ... ಇವು ಎಲ್ಲಿ ಸಿಕ್ಕಿದ್ವು?’ ಅಂದೋಳೆ, ಸೀದಾ ಅವಕ್ಕೆ ಸ್ನಾನ ಮಾಡ್ಸಿ, ಈಳಿಗೆ ಮಣೆಗೆ ಬಲಿ ಕೊಟ್ಟು, ಎಣ್ಣೆ, ಈರುಳ್ಳಿ, ಮೆಣಸಿನಕಾಯಿ, ಉಪ್ಪು, ಖಾರದಪುಡಿ ಹಾಕಿ ಒಗ್ಗರಣೆ ಕೊಟ್ಟು, ಬೆಳಿಗ್ಗೆ ಮಾಡಿಟ್ಟಿದ್ದ ರೊಟ್ಟಿನ ಬಿಸಿ ಮಾಡಿ, ಫಟ್ ಅಂತ ಮಾಡಿದ ಅಣಬೆ ಪಲ್ಯದ ಜೊತೆ ಹಾಕಿ ತಿನ್ನೋದಕ್ಕೆ ಕೊಟ್ಟಿದ್ಲು. ಆ ದಿನ ಒಲೆಯ ಮೂಲೆಯಲ್ಲಿ ಕೂತು ಚಳಿ ಕಾಯಿಸ್ತಾ ಅಜ್ಜಿ ಜೊತೆ ತಿಂದಿದ್ದ ಅಣಬೆ ಪಲ್ಯದ ರುಚಿ ಇಂದಿಗೂ ಕಾಡ್ತಾನೆ ಇರುತ್ತೆ.

ಹೌದು, ಸ್ವರ್ಗಕ್ಕೂ ಸ್ಪರ್ಧೆ ನೀಡೋ ಮಲೆನಾಡಲ್ಲಿ ಪ್ರಕೃತಿ ತನ್ನ ಮಕ್ಕಳಿಗಾಗಿ ಆಗಾಗ ವಿಶೇಷವಾದ ಉಡುಗೊರೆಯನ್ನ ಕೊಡ್ತಾನೆ ಇರ್ತಾಳೆ. ಆಕೆನೂ ನಮ್ಮ ಅಜ್ಜಿಯ ಹಾಗೇ. ಆಕೆ ಕೊಡುವ ಪ್ರೀತಿ ಮತ್ತು ಅಕ್ಕರೆಯ ತುತ್ತಿನ ರುಚಿ ಎಂದಿಗೂ ಕಡಿಮೆ ಆಗಲ್ಲ.

ಮಲೆನಾಡಲ್ಲಿ ಮಳೆಗಾಲ ಶುರುವಾಯ್ತು ಅಂದ್ರೆ ಆಹಾರ ಮೇಳ ಶುರುವಾಯ್ತು ಅಂತಾನೆ ಅರ್ಥ. ಘಮ್ಮೆನ್ನುವ ಹಲಸಿನ ಕಡುಬು, ಬಾಯಲ್ಲಿ ನೀರು ತರೋ ಪತ್ರೊಡೆ, ಅಪ್ಪೆಮಿಡಿ, ಕಳಲೆ ಪಲ್ಯ, ಹತ್ಮೀನು ಸಾರಿನ ಜೊತೆಗೆ ಗುಡುಗು–ಸಿಡಿಲಿನೊಂದಿಗೆ ‘ನಾನೂ ಇದ್ದೀನಪ್ಪ’ ಅಂತಾ ಹಾಜರಿ ಹಾಕೋ ಅಣಬೆಗಳು ಮಲೆನಾಡಿಗರಿಗೆ ತುತ್ತು ಅನ್ನ ಹೆಚ್ಚಿಗೆ ಸೇರುವಂತೆ ಮಾಡುತ್ತವೆ. ಮಳೆಗಾಲದಲ್ಲಷ್ಟೇ ಸಿಗುವ ಈ ಅಪರೂಪದ ಅತಿಥಿ ಮಹೋದಯರಿಗೆ ಅಡುಗೆ ಮನೆಯಲ್ಲಿ ಆತಿಥ್ಯ ಕೊಂಚ ಜಾಸ್ತಿಯೇ.

ಹಾಗಿನ ಅಣಬೆ

ಹಾಗಿನ ಮರದ ದರಗೆಲೆಗಳ ಕೆಳಗಿನ ದುಂಡು ಮಲ್ಲಿಗೆಯಂತೆ ಏಳುವ ಹಾಗಿನಣಬೆ, ಮರದ ತೊಗಟೆಯ ಮೇಲೆ ಗುಂಪುಗುಂಪಾಗಿ ಕಂಗೊಳಿಸುವ ನುಚ್ಚಣಬೆ, ಮಸಿಕೆಂಡದಂತೆ ಕಾಣೋ ಹೂಗಾಲಣಬೆ, ಕಲ್ಲಣಬೆ... ಹೀಗೆ ಹಲವು ವಿಧಗಳಿವೆ. ಅದರಲ್ಲೂ ಗುಡುಗು ಬಡಿಯುತ್ತಿದ್ದಂತೆಯೇ ಭೂಮಿಯನ್ನು ಸೀಳಿಕೊಂಡು ಮೊಗ್ಗು ಮೊಗ್ಗಾಗಿ ಬರುವ ಹೆಗ್ಗಾಲು ಅಣಬೆಯ ರುಚಿಯನ್ನಂತೂ ಬಲ್ಲವರೇ ಬಲ್ಲರು.

ಕಾಡಿನಲ್ಲಿ ನೂರಾರು ಬಗೆಯ ಅಣಬೆಗಳು ಬೆಳೆದರೂ, ಯಾವುದು ತಿನ್ನಲು ಯೋಗ್ಯ, ಯಾವುದು ವಿಷಕಾರಿ ಎಂದು ಗುರುತಿಸುವ ಅಲಿಖಿತ ಜ್ಞಾನವು ತಲೆಮಾರಿನಿಂದ ತಲೆಮಾರಿಗೆ ಹಿರಿಯರ ಅನುಭವದ ಮೂಲಕವೇ ಹರಿದುಬಂದಿದೆ. ಹಾಗಾದರೆ ಈ ಅಣಬೆಗಳಿಂದ ಏನೆಲ್ಲಾ ಅಡುಗೆ ಮಾಡಬಹುದು?

ಇಲ್ಲಿವೆ ನೋಡಿ ಮಲೆನಾಡಿನ ವಿಶೇಷ ರೆಸಿಪಿಗಳು

ಕೂಗಲು ಅಣಬೆ ಸುಕ್ಕ

ಇದು ಮಳೆಕಾಡುಗಳಲ್ಲಿ ನೈಸರ್ಗಿಕವಾಗಿ ಸಿಗುವ ಅತ್ಯಂತ ಅಪರೂಪದ ಅಣಬೆ. ತಿಳಿಹಳದಿ ಮತ್ತು ತಿಳಿಹಸಿರು ಬಣ್ಣದ ಈ ಅಣಬೆಯನ್ನು ಕೃತಕವಾಗಿ ಬೆಳೆಯುವುದು ಕಷ್ಟ. ಇದು ಪ್ರೋಟೀನ್, ನಾರಿನಾಂಶ ಮತ್ತು ಅಗತ್ಯ ಖನಿಜಾಂಶಗಳ ಉತ್ತಮ ಮೂಲವಾಗಿದೆ. ಮಣ್ಣಿನ ಪರಿಮಳವನ್ನು ಹೊಂದಿರುವ ಇದು, ತಿಂದಾಗ ಅಪ್ಪಟ ಮಾಂಸಾಹಾರದ ರುಚಿಯನ್ನೇ ನೀಡುತ್ತದೆ.

ಮಾಡುವ ವಿಧಾನ: ಇದು ಸಾಮಾನ್ಯವಾಗಿ ಬೇರೆ ಅಣಬೆಗಳ ರೀತಿ ಕೊಡೆಯ ಆಕಾರದಲ್ಲಿ ಅರಳದೆ ಗೆಡ್ಡೆಯ ರೂಪದಲ್ಲಿರುತ್ತದೆ. ಈ ಗೆಡ್ಡೆಯ ಮೇಲ್ಭಾಗ ಹಳದಿ ಬಣ್ಣದಲ್ಲಿದ್ದು, ಅದನ್ನು ಕೆತ್ತಿ ತೆಗೆದಾಗ ಅದರೊಳಗೆ ಕಪ್ಪನೆಯ ಗೆಡ್ಡೆ ಸಿಗುತ್ತದೆ. ಅದನ್ನ ಮಾಂಸದ ತುಂಡುಗಳಂತೆ ಕತ್ತರಿಸಿ ಇಟ್ಟುಕೊಂಡು ಬಿಸಿನೀರಿನಲ್ಲಿ ಉಪ್ಪು, ಅರಸಿನ ಹಾಕಿ 5 ನಿಮಿಷ ನೆನೆಸಿಟ್ಟು ತೊಳೆಯಬೇಕು. ನಂತರ ಪಾತ್ರೆಯಲ್ಲಿ ಈ ಅಣಬೆ, ಸ್ವಲ್ಪ ಉಪ್ಪು, ಅರಸಿನ, ಎರಡು ಒಣಮೆಣಸಿನಕಾಯಿ ಹಾಕಿ ಹಬೆಯಲ್ಲಿ ಬೇಯಿಸಿಕೊಳ್ಳಬೇಕು.

ಮತ್ತೊಂದೆಡೆ, ಬಾಣಲೆಯಲ್ಲಿ ಒಣಮೆಣಸಿನಕಾಯಿ, ಕೊತ್ತಂಬರಿ ಬೀಜ, ಜೀರಿಗೆ, ಕಾಳುಮೆಣಸನ್ನು ಎಣ್ಣೆಯಲ್ಲಿ ಹುರಿದು ತಣ್ಣಗಾದ ಮೇಲೆ ಮಿಕ್ಸಿಗೆ ಹಾಕಿ. ಜೊತೆಗೆ ತುರಿದ ತೆಂಗಿನಕಾಯಿ, ಬೆಳ್ಳುಳ್ಳಿ, ಹುಣಸೆಹಣ್ಣು ಸೇರಿಸಿ ತರಿತರಿಯಾಗಿ ರುಬ್ಬಿಕೊಳ್ಳಬೇಕು. ನಂತರ ದಪ್ಪ ತಳದ ಬಾಣಲೆಯಲ್ಲಿ ಎಣ್ಣೆ ಬಿಸಿ ಮಾಡಿ, ಸಾಸಿವೆ, ಕರಿಬೇವು, ಸಣ್ಣದಾಗಿ ಹೆಚ್ಚಿದ ಈರುಳ್ಳಿ, ಶುಂಠಿ, ಟೊಮೆಟೊ ಹಾಕಿ ಹಸಿ ವಾಸನೆ ಹೋಗುವವರೆಗೆ ಬಾಡಿಸಿಕೊಳ್ಳಿ. ಬೇಯಿಸಿಟ್ಟುಕೊಂಡ ಅಣಬೆಯನ್ನು ಸೇರಿಸಿ ಅದಕ್ಕೆ ರುಬ್ಬಿದ ಮಸಾಲೆ ಹಾಗೂ ಉಪ್ಪು ಸೇರಿಸಿ. ಕೊನೆಗೆ ಕಾಳುಮೆಣಸಿನ ಪುಡಿ, ಕೊಂಚ ಚಿಕನ್ ಮಸಾಲೆ ಬೆರೆಸಿ 15–20 ನಿಮಿಷ ಸುಕ್ಕದ ಹದಕ್ಕೆ ಬರುವವರೆಗೆ ಬೇಯಿಸಿ. ಮೇಲೆ ಕೊತ್ತಂಬರಿ ಸೊಪ್ಪು ಉದುರಿಸಿದರೆ ಘಮಘಮಿಸುವ ಕೂಗಲು ಅಣಬೆ ಸುಕ್ಕ ರೆಡಿ. ಇದನ್ನು ರೊಟ್ಟಿ, ಚಪಾತಿ, ಪರೋಟ ಜೊತೆ ಸವಿಯಬಹುದು.

ಕತ್ತರಿಸಿರುವ ಕೂಗಲು ಅಣಬೆ

ಅಣಬೆ ಕಡುಬು

ಇದಂತೂ ಥಟ್ ಅಂತ ರೆಸಿಪಿ ಕೇಳಿ, ಫಟ್ ಅಂತ ಮಾಡಿ ತಿನ್ನಬಹುದಾದ ಖಾದ್ಯ. ಇದನ್ನು ಯಾವ ಅಣಬೆಗಳಿಂದ ಬೇಕಾದರೂ ಮಾಡಬಹುದು. ಅತ್ಯಂತ ಸುಲಭ ಮತ್ತು ರುಚಿಕರ.

ಮಾಡುವ ವಿಧಾನ: ಒಂದು ಬಾಣಲೆಗೆ ಕೊಬ್ಬರಿಎಣ್ಣೆ ಹಾಕಿ ಸಣ್ಣದಾಗಿ ಹೆಚ್ಚಿದ ಈರುಳ್ಳಿ, ಬೆಳ್ಳುಳ್ಳಿ, ಹಸಿಮೆಣಸಿನಕಾಯಿ ಹಾಕಿ ಹುರಿಯಿರಿ. ಚೆನ್ನಾಗಿ ತೊಳೆದು ಹಿಂಡಿದ ಯಾವುದೇ ಅಣಬೆಯನ್ನಾದರೂ ಇದಕ್ಕೆ ಸೇರಿಸಿ ಉಪ್ಪು ಹಾಕಿ. ಅದು ನೀರು ಬಿಡಲು ಪ್ರಾರಂಭಿಸಿದಾಗ ಒಂದು ಚಮಚ ಖಾರದಪುಡಿ ಮತ್ತು ರೊಟ್ಟಿಹಿಟ್ಟಿನ ಹದದಲ್ಲಿರುವ ಅಕ್ಕಿಹಿಟ್ಟನ್ನು ಹಾಕಿ ಚೆನ್ನಾಗಿ ತಿರುಗಿಸಿ ಇಳಿಸಿಕೊಳ್ಳಿ.

ಬಳಿಕ ಎರಡು ಬಾಳೆಎಲೆಗಳನ್ನು ಬಾಡಿಸಿಕೊಂಡು ಅದಕ್ಕೆ ಚೆನ್ನಾಗಿ ಕೊಬ್ಬರಿ ಎಣ್ಣೆ ಸವರಿ, ಅದರ ಮೇಲೆ ಈ ಒಗ್ಗರಣೆ ಹಿಟ್ಟನ್ನು ಹಾಕಿ, ಕೊಂಚ ನೀರು ಬೆರೆಸಿ ಕಲಸಿ ತಟ್ಟಿ. ಬಾಳೆಎಲೆಯನ್ನು ಮಡಚಿ ಎಲೆಯ ದಂಟಿನ ದಾರದಿಂದಲೇ ಗಂಟು ಹಾಕಿ, ಕೆಂಡದ ಮೇಲೆ ಅಥವಾ ದೋಸೆಹೆಂಚಿನ ಮೇಲೆ ಇಟ್ಟು 10ರಿಂದ 15 ನಿಮಿಷ ಬೇಯಿಸಿದರೆ ಘಮಘಮಿಸುವ ಅಣಬೆ ಕಡುಬು ಸವಿಯಲು ಸಿದ್ಧ.

ಅಣಬೆ ಕಬಾಬ್

ಮಳೆಗಾಲದ ಸಂಜೆ ಸುರಿಯೋ ಮಳೆಯನ್ನು ನೋಡುತ್ತ ಬಿಸಿ ಚಹಾದ ಜೊತೆ ಗರಿಗರಿಯಾಗಿ ತಿನ್ನಲು ಮಲೆನಾಡಿನ ಶೈಲಿಯ ‘ಅಣಬೆ ಕಬಾಬ್’ ಬೆಸ್ಟ್. ಮಾಂಸದ ಕಬಾಬ್‌ಗಳೂ ಇದರ ಮುಂದೆ ಸಪ್ಪೆ ಅನ್ನೋದು ಗ್ಯಾರಂಟಿ.

ಮಾಡುವ ವಿಧಾನ: ಬಿಸಿಬಿಸಿ ಕಬಾಬ್‌ಗೆ ಹಾಗಿನ ಅಣಬೆಯ ಮೊಗ್ಗು, ಹೆಗ್ಗಾಲು ಅಣಬೆ ಸಿಕ್ಕರೆ ಉತ್ತಮ. ಮೊದಲಿಗೆ ಈ ಅಣಬೆಗಳನ್ನು ಸಿಪ್ಪೆ ತೆಗೆದು ಉಗುರುಬೆಚ್ಚಗಿನ ಉಪ್ಪುನೀರಿನಲ್ಲಿ ತೊಳೆದು, ನೀರಿಲ್ಲದಂತೆ ಹಿಂಡಿಕೊಳ್ಳಬೇಕು. ನಂತರ ಒಂದು ಬಟ್ಟಲಿನಲ್ಲಿ 2 ಚಮಚ ಕಾರ್ನ್‌ಫ್ಲೋರ್, 2 ಚಮಚ ಅಕ್ಕಿಹಿಟ್ಟು, 1 ಚಮಚ ಖಾರದಪುಡಿ, ಅರ್ಧ ಚಮಚ ಗರಂ ಮಸಾಲೆ, 1 ಚಮಚ ಶುಂಠಿ–ಬೆಳ್ಳುಳ್ಳಿ ಪೇಸ್ಟ್, ರುಚಿಗೆ ತಕ್ಕಷ್ಟು ಉಪ್ಪು, ಸ್ವಲ್ಪ ನಿಂಬೆರಸ, ಬಿಳಿಎಳ್ಳು ಬೆರೆಸಿ. ಜೊತೆಗೆ ಮಲೆನಾಡಿನ ಘಮಕ್ಕಾಗಿ ಒಂದಿಷ್ಟು ಹಸಿ ಕರಿಬೇವನ್ನು ಸಣ್ಣಗೆ ಹೆಚ್ಚಿ ಹಾಕಿ. ಈ ಮಸಾಲೆಗೆ ಅಣಬೆಗಳನ್ನು ಹಾಕಿ ನಿಧಾನವಾಗಿ ಕೈಯಾಡಿಸಿ 10 ನಿಮಿಷ ಹಾಗೇ ಬಿಡಿ (ಅಣಬೆಯೇ ನೀರು ಬಿಡುವುದರಿಂದ ನೀರು ಬೇಡ).

ಬಾಣಲೆಯಲ್ಲಿ ಎಣ್ಣೆ ಕಾಯಿಸಿ, ಮಸಾಲೆ ಹತ್ತಿದ ಅಣಬೆಗಳನ್ನು ಬಿಡಿಬಿಡಿಯಾಗಿ ಹಾಕಿ. ಮಧ್ಯಮ ಉರಿಯಲ್ಲಿ ಹೊಂಬಣ್ಣ ಬರುವವರೆಗೆ ಕರಿದು ತೆಗೆಯಿರಿ ಅಷ್ಟೇ... ಬಿಸಿ ಬಿಸಿ, ಗರಿಗರಿಯಾದ ಅಣಬೆ ಕಬಾಬ್ ಸಿದ್ಧ. ಇದರ ಮೇಲೊಂದಿಷ್ಟು ಹಸಿ ಈರುಳ್ಳಿ ಹಾಕಿ, ಮಳೆಯ ಸದ್ದಿಗೆ ಕಿವಿಗೊಡುತ್ತಾ ತಿಂದರೆ... ಆಹಾ ಆ ಗಮ್ಮತ್ತನ್ನು ಅನುಭವಿಸಿಯೇ ತೀರಬೇಕು.

ಯಶಸ್ವಿ ತಾಯ್ತನ ಇಲ್ಲಿದೆ ಕಿವಿಮಾತು

• ಡಾ. ಜಯಲಕ್ಷ್ಮಿ ನಾಯಿಕ್

ತಾಯ್ತನ ಎಂಬುದು ಮಹಿಳೆಯ ಜೀವನದ ಅತ್ಯಂತ ಅಮೂಲ್ಯ ಮತ್ತು ಜವಾಬ್ದಾರಿಯುತ ಹಂತ. ಗರ್ಭಾವಸ್ಥೆ ಎಂದರೆ ಕೇವಲ ಮಗುವನ್ನು ಹೆರುವುದಲ್ಲ. ಹಾಗೆಯೇ ತಾಯ್ತನವೆಂದರೆ ತಾಯಿಯು ತನ್ನ ದೈಹಿಕ, ಮಾನಸಿಕ, ಸಾಮಾಜಿಕ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಜೊತೆಗೆ ಮಗುವಿನ ಲಾಲನೆ, ಪಾಲನೆ ಕುರಿತು ಹೊಸ ವಿಷಯಗಳನ್ನು ತಿಳಿದು ಕೊಳ್ಳುವುದು. ಇದು, ತಾಯಿಯಾಗುವ ಸಿದ್ಧತೆಯಲ್ಲಿನ ಮೊದಲ ಹೆಜ್ಜೆ. ಬನ್ನಿ, ಈ ಸಿದ್ಧತೆಯ ಬಗೆಯನ್ನು ಒಂದೊಂದಾಗಿ ತಿಳಿದುಕೊಳ್ಳೋಣ.

ಗರ್ಭಿಣಿಯ ಆರೋಗ್ಯವೇ ಮಗುವಿನ ಆರೋಗ್ಯದ ಮೂಲ ಬೇರು. ತಾಯಿಯಾಗುವವಳು ಆರೋಗ್ಯಕ್ಕೆ ಸಂಬಂಧಿಸಿದ ಈ ಕೆಳಗಿನ ಅಂಶಗಳ ಬಗ್ಗೆ ಬಹಳಷ್ಟು ಕಾಳಜಿ ವಹಿಸಬೇಕು.

ದೈಹಿಕ ಆರೋಗ್ಯ ಕಾಯ್ದುಕೊಳ್ಳಿ

- ಪೌಷ್ಟಿಕ ಆಹಾರ ಸೇವನೆ (ಪ್ರೋಟೀನ್, ಕಬ್ಬಿಣ, ಕ್ಯಾಲ್ಸಿಯಂ, ವಿಟಮಿನ್‌ಗಳು) ಕುರಿತು ಗರ್ಭಿಣಿಯು ವೈದ್ಯರಿಂದ ಅಥವಾ ಸೂಕ್ತ ಮೂಲಗಳಿಂದ ಅಗತ್ಯ ಮಾಹಿತಿಯನ್ನು ಪಡೆದುಕೊಳ್ಳಬೇಕು.
- ನಿಯಮಿತ ವೈದ್ಯಕೀಯ ತಪಾಸಣೆ ಮಾಡಿಸುವುದರಿಂದ ತಾಯಿ–ಮಗು ಇಬ್ಬರ ಆರೋಗ್ಯದ ಬಗ್ಗೆಯೂ ವೈದ್ಯರಿಂದ ಸೂಕ್ತ ಸಲಹೆ ಸಿಗುತ್ತದೆ.
- ನಡಿಗೆ, ಪ್ರೆಗ್ನೆನ್ಸಿ ಯೋಗದಂತಹ ಹಗುರವಾದ ವ್ಯಾಯಾಮವು ಹೆರಿಗೆಗೆ ಹಾಗೂ ಪ್ರಸವದ ನಂತರ ತಾಯಿಯ ಶೀಘ್ರ ಚೇತರಿಕೆಗೆ ನೆರವಾಗುತ್ತದೆ.
- ಗರ್ಭಿಣಿಯು ಒಳ್ಳೆಯ ನಿದ್ರೆ ಹಾಗೂ ಸಾಕಷ್ಟು ವಿಶ್ರಾಂತಿ ಪಡೆಯುವುದರಿಂದ ಒತ್ತಡ ಕಡಿಮೆಯಾಗಿ ಮಗುವಿನ ಆರೋಗ್ಯಕರ ಬೆಳವಣಿಗೆಗೆ ಸಹಾಯವಾಗುತ್ತದೆ.
- ಸ್ವಸ್ಥ ದೇಹವು ಸುಗಮ ಗರ್ಭಧಾರಣೆ ಮತ್ತು ಆರೋಗ್ಯಕರ ಮಗುವನ್ನು ಪಡೆಯುವುದರಲ್ಲಿ ಸಹಾಯ ಮಾಡುತ್ತದೆ.

ಮಾನಸಿಕ ಆರೋಗ್ಯ ಬಲುಮುಖ್ಯ

ಗರ್ಭಾವಸ್ಥೆಯಲ್ಲಿ ಕೆಲವು ವಿಷಯಗಳ ಬಗ್ಗೆ ಆತಂಕ, ಭಾವನಾತ್ಮಕ ಬದಲಾವಣೆಗಳು ಸಹಜ. ಅದಕ್ಕಾಗಿ ಹೀಗೆ ಮಾಡಬೇಕು:

- ಪ್ರಸವದ ಕುರಿತು, ಗರ್ಭದಲ್ಲಿನ ತನ್ನ ಮಗುವಿನ ಕುರಿತು ಸಕಾರಾತ್ಮಕ ಯೋಚನೆಗಳನ್ನು ಬೆಳೆಸಿಕೊಳ್ಳಬೇಕು.
- ಧ್ಯಾನ, ಪ್ರಾಣಾಯಾಮ, ಪ್ರಾರ್ಥನೆಯು ಮಗುವಿನ ಮಾನಸಿಕ ಬೆಳವಣಿಗೆಗೆ ಸಹಾಯ ಮಾಡುತ್ತವೆ.
- ನಕಾರಾತ್ಮಕ ಮಾತುಗಳಿಂದ, ಯೋಚನೆಗಳಿಂದ, ಮಾಹಿತಿಯಿಂದ ದೂರವಿರಬೇಕು.
- ಯಾವುದೇ ರೀತಿಯ ಭಯ ಮತ್ತು ಆತಂಕವಿದ್ದರೆ ಹಿಂಜರಿಯದೆ ಸೂಕ್ತ ಸಲಹೆ ಪಡೆದು ಅವನ್ನು ಬಗೆಹರಿಸಿಕೊಳ್ಳಬೇಕು.
- ಶಾಂತ ಮನಸ್ಸು ತಾಯಿ–ಮಗುವಿನ ನಡುವಿನ ಸಂಬಂಧವನ್ನು ಬಲಪಡಿಸುತ್ತದೆ.

ಸಹಾಯ ಕೇಳಲು ಹಿಂಜರಿಯದಿರಿ

ಎಲ್ಲವನ್ನೂ ತಾವೇ ಮಾಡಬೇಕೆಂಬ ಒತ್ತಡ ದಂಪತಿಗಳಿಗೆ ಬೇಡ.

- ಅವಶ್ಯಕತೆ ಬಂದರೆ ತವರಿನವರ ಜೊತೆಗೆ ಪತಿಯ ಕುಟುಂಬದವರು, ಹತ್ತಿರದ ಸಂಬಂಧಿಕರು ಅಥವಾ ಇನ್ನಿತರ ಸಹಾಯಕರ ಸಹಕಾರ ಪಡೆಯಲು ಹಿಂಜರಿಯಬಾರದು.
- ಸ್ತ್ರೀರೋಗ ತಜ್ಞರಿಗೆ ಗರ್ಭಿಣಿಯ ಆತಂಕಗಳನ್ನು ನಿವಾರಿಸಲು ಹಾಗೂ ಸಮಾಲೋಚನೆ ನಡೆಸಲು ಸಾಕಷ್ಟು ಸಮಯಾವಕಾಶ ಇರುವುದಿಲ್ಲ. ಅದಕ್ಕಾಗಿಯೇ ಗರ್ಭವತಿ ಆದಾಗಿನಿಂದ ಹೆರಿಗೆ ಆಗುವವರೆಗೆ ಅವಳ ಆತಂಕಗಳನ್ನು ದೂರ ಮಾಡಲು ಹಾಗೂ ಮಾನಸಿಕವಾಗಿ ಸ್ಥೈರ್ಯ ನೀಡಲು ಈಗ ಬರ್ತ್ ಎಜುಕೇಟರ್‌ಗಳು ಆನ್‌ಲೈನ್ ಸಂಪರ್ಕಕ್ಕೆ ಲಭ್ಯವಿರುತ್ತಾರೆ. ನೀವು ಬಯಸಿದರೆ ಹೆರಿಗೆ ಸಮಯದಲ್ಲೂ ಮಾನಸಿಕ ಬಲ ನೀಡಲು ಜೊತೆಗಿರುತ್ತಾರೆ. ಈ ಸೌಲಭ್ಯವನ್ನು ಬೇಕಾದ ಗರ್ಭಿಣಿಯರು ಪಡೆದುಕೊಳ್ಳಬಹುದು.

ಬಂಧ- ಅನುಬಂಧ

ಮಗುವಿನೊಂದಿಗಿನ ತಾಯಿಯ ಬಂಧವು ಗರ್ಭಾವಸ್ಥೆಯಲ್ಲೇ ಆರಂಭವಾಗುತ್ತದೆ.

- 7-8 ತಿಂಗಳಿನ ಗರ್ಭಾವಸ್ಥೆಯಲ್ಲಿಯೇ ಮಗು ಧ್ವನಿಗಳನ್ನು ಆಲಿಸಿ ಗುರುತಿಸಲು ಪ್ರಾರಂಭಿಸುತ್ತದೆ. ಮಗುವಿನೊಂದಿಗೆ ಮಾತನಾಡುವುದು, ಹಾಡುವುದು ಅಥವಾ ಒಳ್ಳೆಯದನ್ನು ಓದಿ ಹೇಳುವುದು ತಾಯಿ–ಮಗುವಿನ ಬಾಂಧವ್ಯವನ್ನು ಬಲಪಡಿಸುತ್ತದೆ. ಈ ಸುಪ್ತ ಮನದ ಸ್ಮರಣೆಯಿಂದಾಗಿ ಶಿಶುಗಳು ಜನನದ ನಂತರ ತಾಯಿಯ ಧ್ವನಿಯನ್ನು ಗುರುತಿಸುತ್ತವೆ.
- ಗರ್ಭಿಣಿಯು ಮಗುವಿನ ಸಂತೋಷಕರ ಭವಿಷ್ಯವನ್ನು ಕಲ್ಪಿಸಿಕೊಳ್ಳುವುದು ಮಗುವಿನ ಉತ್ತಮ ಬೆಳವಣಿಗೆಗೆ ಸಹಕಾರಿಯಾಗುತ್ತದೆ.

ಕೊನೆಯ ಮಾತು: ಯಶಸ್ವಿ ತಾಯಿ ಎಂದರೆ ಎಲ್ಲವನ್ನೂ ತಿಳಿದವಳು ಎಂದಲ್ಲ; ಪ್ರೇಮದಿಂದ, ಸಹನೆಯಿಂದ, ಅರಿವಿನಿಂದ ತನ್ನ ಮಗುವಿನ ಭವಿಷ್ಯಕ್ಕಾಗಿ ದೃಢ ನಿರ್ಧಾರ ತೆಗೆದುಕೊಂಡು ದಿಟ್ಟ ಹೆಜ್ಜೆ ಇಡುತ್ತಾ ಸಾಗುವವಳು.

ಎದೆಹಾಲಿನ ಮಹತ್ವ ಗೊತ್ತೇ?

ತಾಯಿಹಾಲು ಮಗುವಿಗೆ ಅತ್ಯುತ್ತಮ ಆಹಾರ

- ಮಗುವಿಗೆ ನಿಗದಿತ ಸಮಯದವರೆಗೆ ಎದೆಹಾಲನ್ನು ಮಾತ್ರ ಕೊಡುವುದಾಗಿ ತಾಯಿಯಾಗುವವಳು ಗರ್ಭಿಣಿ ಆಗಿರುವಾಗಲೇ ದೃಢ ನಿರ್ಧಾರ ತೆಗೆದು ಕೊಳ್ಳಬೇಕು. ಅದಕ್ಕೆ ಬೇಕಾದ ಎಲ್ಲ ಸಿದ್ಧತೆ, ಅರಿವನ್ನು ಮೊದಲೇ ಪಡೆದಿರಬೇಕು.
- ಮಗುವಿಗೆ ಎದೆಹಾಲನ್ನು ಕೊಡಲು ತನ್ನ ಎದೆಯ ತೊಟ್ಟು ಸರಿಯಾಗಿದೆಯೇ ಎಂದು ಗರ್ಭಿಣಿಯು ನೋಡಿಕೊಳ್ಳಬೇಕು. ತೊಂದರೆ ಇದ್ದಲ್ಲಿ ವೈದ್ಯರಿಂದ ಸಲಹೆ ಪಡೆದು ಸರಿಪಡಿಸಿಕೊಳ್ಳಬೇಕು. ಎದೆಹಾಲು ಉಣಿಸುವಾಗ ಮಗುವನ್ನು ಸರಿಯಾಗಿ ಹಿಡಿದುಕೊಳ್ಳುವುದು ಹೇಗೆ ಎಂದು ಕಲಿತುಕೊಳ್ಳಬೇಕು.
- ಎದೆಹಾಲಿನಿಂದ ಮಗುವಿಗೆ ಆಗುವ ಲಾಭಗಳ ಬಗ್ಗೆ ವಿವರವಾಗಿ ತಿಳಿದುಕೊಳ್ಳಬೇಕು.
- ಮೊದಲ ಕೆಲ ದಿನಗಳಲ್ಲಿ ಅಂದುಕೊಂಡಷ್ಟು ಹಾಲು ಬರದಿದ್ದರೂ ಸಹನೆ ಹಾಗೂ ದೃಢ ನಿರ್ಧಾರವು ಮಗುವಿನ ಉಜ್ವಲ ಭವಿಷ್ಯಕ್ಕೆ ಕಾರಣವಾಗುತ್ತದೆ.
- ಎದೆಹಾಲಿನ ಬಗ್ಗೆ ಆತಂಕಗಳಿದ್ದರೆ, ಎದೆ ಹಾಲುಣಿಸುವ ಕುರಿತು ಸಂಪೂರ್ಣ ಸಹಾಯ ಮಾಡುವ ಲ್ಯಾಕ್ಟೇಷನ್ ಕನ್‌ಸಲ್ಟೆಂಟ್‌ನ ಸಹಾಯ ಪಡೆಯಬಹುದು.

ಅರಿವಿನಿಂದ ಆತ್ಮವಿಶ್ವಾಸ

ಗರ್ಭ, ಹೆರಿಗೆ ಹಾಗೂ ಮಗುವಿನ ಪಾಲನೆಯ ಬಗೆಗಿನ ತಿಳಿವಳಿಕೆಯು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ.

- ಗರ್ಭಿಣಿಯು ಹೆರಿಗೆ ಮತ್ತು ಶಿಶುವನ್ನು ಪೋಷಿಸುವ ಕುರಿತು ವೈದ್ಯರಿಂದ, ದಾದಿಯರಿಂದ, ಪುಸ್ತಕಗಳಿಂದ, ಯೂಟ್ಯೂಬ್‌ನಂತಹ ಅಂತರ್ಜಾಲ ಮೂಲಗಳಿಂದ ತಿಳಿದುಕೊಳ್ಳಬೇಕು.
- ಗರ್ಭಿಣಿಯು ತಾಯಿಹಾಲಿನ ಮಹತ್ವದ ಬಗ್ಗೆ, ಬೇರೆ ಹಾಲಿನಿಂದ ಮಗುವಿನ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ತಿಳಿದುಕೊಳ್ಳಬೇಕು.
- ಆ್ಯಂಟಿನೇಟಲ್ ಕ್ಲಾಸ್‌ಗಳು ಈಗ ಆನ್‌ಲೈನ್‌ನಲ್ಲಿ ಲಭ್ಯವಿರುವುದರಿಂದ ಗರ್ಭಿಣಿಯು ಅದರ ಬಗ್ಗೆ ತಿಳಿದುಕೊಳ್ಳುವುದು ತುಂಬಾ ಲಾಭದಾಯಕ ಆಗುತ್ತದೆ.

ಮೆನೊಪಾಸ್: ಧೈರ್ಯವಾಗಿ ಎದುರಿಸಿ

ಸ್ಪಂದನ
ಡಾ. ವೀಣಾ ಎಸ್. ಭಟ್

• ನನ್ನ ವಯಸ್ಸು 47. ಹದಿನೈದು ದಿನಗಳಿಗೊಮ್ಮೆ ಮುಟ್ಟಾಗುತ್ತದೆ. ತೂಕ ಹೆಚ್ಚಾಗುತ್ತಿದೆ. ಕೆಲವೊಮ್ಮೆ ವಿಪರೀತ ಸೆಕೆ ಆಗುತ್ತದೆ. ಮೈಯೆಲ್ಲ ಬಿಸಿಯಾದಂತೆ ಭಾಸವಾಗುತ್ತದೆ. ರಾತ್ರಿ ಸರಿಯಾಗಿ ನಿದ್ರೆ ಬಾರದು. ಏನೋ ಒಂದು ರೀತಿಯಲ್ಲಿ ಸುಸ್ತು. ಯಾಕೆ ಹೀಗೆಲ್ಲ ಆಗುತ್ತದೆ?

ಶಕುಂತಲಾ, ಪಣ್‌ಬೆಟ್ಟು

ಮೆನೊಪಾಸ್ (ಮುಟ್ಟು ನಿಲ್ಲುವಿಕೆ) ಸಮಯ ಹತ್ತಿರ ಆಗುತ್ತಿರಬಹುದು. ಅದಕ್ಕಾಗಿಯೇ 15 ದಿನಕ್ಕೊಮ್ಮೆ ಮುಟ್ಟಾಗಿ ಹಾಗೆಯೇ ಅದು ನಿಂತು ಹೋಗುವ ಸಾಧ್ಯತೆ ಇರುತ್ತದೆ. ಇನ್ನು ಶೇ 50ಕ್ಕಿಂತ ಹೆಚ್ಚಿನ ಮಹಿಳೆಯರಿಗೆ ಮುಟ್ಟು ನಿಲ್ಲುವ 6 ತಿಂಗಳ ಮೊದಲಾಗಿ ನಂತರದ 2 ವರ್ಷಗಳವರೆಗೂ ಈ ರೀತಿ ಹಠಾತ್ತಾಗಿ ಮುಖ ಬಿಸಿಯೇರಿ, ಕೆಂಪಾಗಿ, ಎದೆ, ಕತ್ತಿನ ಭಾಗವೆಲ್ಲಾ ಬೆವರು ಬಂದ ಹಾಗಾಗಿ, ತಕ್ಷಣವೇ ಚಳಿಯ ಅನುಭವವೂ ಆಗಬಹುದು. ಕೆಲವೊಮ್ಮೆ ಹೃದಯ ವೇಗವಾಗಿ ಬಡಿದುಕೊಳ್ಳುವ ಹಾಗಾಗಿ ಏದುಸಿರು ಬರುತ್ತದೆ. ಇವೆಲ್ಲಾ ಕೇವಲ ಒಂದೆರಡು ನಿಮಿಷವಿದ್ದು, ಇಂತಹದ್ದೇ ಅನುಭವ ದಿನದಲ್ಲಿ ಹಲವಾರು ಬಾರಿ ಆಗಬಹುದು. ರಾತ್ರಿ ಕೂಡ ಈ ರೀತಿಯಾಗಿ, ನಿದ್ರಾಭಂಗವನ್ನು ಉಂಟುಮಾಡಬಹುದು. ಇದಕ್ಕೆ ಕಾರಣ, ಅಂಡಾಶಯದಿಂದ ಉತ್ಪಾದನೆಯಾಗುವ ಈಸ್ಟ್ರೋಜನ್ ಹಾರ್ಮೋನುಗಳ ಮಟ್ಟವು ಮುಟ್ಟು ನಿಲ್ಲುವ ಸಮಯದಲ್ಲಿ ಕಡಿಮೆಯಾಗುವುದು. ಇದರಿಂದ, ಮೆದುಳಿನ ಹೈಪೊಥಲಾಮಸ್ ಮಟ್ಟದಲ್ಲಿ ನರವ್ಯೂಹ ಹಾಗೂ ಹಾರ್ಮೋನುಗಳ ವ್ಯವಸ್ಥೆಯಲ್ಲಿ ವ್ಯತ್ಯಾಸ ಉಂಟಾಗಿ, ಮುಖದ ಭಾಗದ ಸೂಕ್ಷ್ಮ ರಕ್ತನಾಳಗಳ ರಕ್ತಸಂಚಾರದಲ್ಲಿ ಬದಲಾವಣೆ ಕಾಣಿಸಿಕೊಂಡು, ಈ ರೀತಿ ಹಾಟ್‌ಫ್ಲಷ್ ಅಥವಾ ಉಷ್ಣ ಅಲೆ ಉಂಟಾಗುತ್ತದೆ. ಹಲವರಲ್ಲಿ ಭಾವನಾತ್ಮಕವಾಗಿಯೂ ಅಸ್ಥಿರತೆ, ಅಂದರೆ, ಸಿಡಿಮಿಡಿ, ಕೋಪ, ಸುಸ್ತು, ಮರೆಗುಳಿತನದಂತಹ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಮುಟ್ಟು ನಿಲ್ಲುವ ಸಮಯದಲ್ಲಿ ಶೇ 60ಕ್ಕೂ ಹೆಚ್ಚು ಮಹಿಳೆಯರಲ್ಲಿ ನಿದ್ರಾಹೀನತೆ ಕಂಡುಬರುವುದು ಸಹಜ.

ನೀವೇನೂ ಭಯಪಡಬೇಡಿ. ಜೀವನೋತ್ಸಾಹ ಕಳೆದುಕೊಳ್ಳದೆ, ನಿಮ್ಮ ಸಂತಾನೋತ್ಪತ್ತಿ ಚಟುವಟಿಕೆಗಳಿಂದ ಮುಕ್ತವಾಗಿ, ನಿಮ್ಮಲ್ಲಿರುವ ಉತ್ಪಾದಕತೆ, ಕ್ರಿಯಾಶೀಲತೆ, ಜವಾಬ್ದಾರಿತನದ ಉನ್ನತ ಹಂತ ತಲುಪಲು ಇದು ನಿಮಗೆ ಸಿಕ್ಕಿರುವ ಅವಕಾಶ ಎಂದು ತಿಳಿಯಿರಿ. ಜೀವನಶೈಲಿ ಉತ್ತಮಪಡಿಸಿಕೊಳ್ಳಿ. ಅಂದರೆ, ಆಹಾರದಲ್ಲಿ ಹೆಚ್ಚು ಐಸೋಫ್ಲೇವಿನ್ ಅಂಶಗಳಿರುವ ಸೋಯಾ ಮತ್ತು ಹೆಚ್ಚು ಫೈಟೋ ಈಸ್ಟ್ರೋಜನ್ ಅಂಶಗಳಿರುವ ಸುವರ್ಣಗಡ್ಡೆ, ಅಗಸೆಬೀಜ, ಮೆಂತ್ಯ, ಬೀನ್ಸ್, ದ್ವಿದಳ ಧಾನ್ಯಗಳು, ರಾಗಿ, ಜೋಳ, ಮೊಳಕೆಕಾಳು, ಕ್ಯಾರೆಟ್, ಕುಂಬಳಬೀಜ, ಬಟಾಣಿ, ಸೇಬು, ವೋಟ್ಸ್, ಶೇಂಗಾ, ಚೆರ್ರಿ ಹಣ್ಣು, ಒಣಹಣ್ಣುಗಳಾದ ಬಾದಾಮಿ, ವಾಲ್‌ನಟ್‌ನಂತಹ ಪದಾರ್ಥಗಳನ್ನು ಆಹಾರದಲ್ಲಿ ಅಳವಡಿಸಿಕೊಳ್ಳಿ. ದಿನನಿತ್ಯ ಮೂರರಿಂದ ಮೂರೂವರೆ ಲೀಟರ್ ನೀರು ಕುಡಿಯಿರಿ. ಕರಿದ, ಅತಿಯಾಗಿ ಸಂಸ್ಕರಿಸಿದ ಪದಾರ್ಥಗಳು, ಬೇಕರಿ ತಿನಿಸು, ಅತಿಯಾದ ಮಸಾಲೆಯುಕ್ತ ಆಹಾರ ಪದಾರ್ಥಗಳನ್ನು ಬಳಸಬೇಡಿ. ಕಾಫಿ, ತಂಪುಪಾನೀಯದ ಸೇವನೆ ಕಡಿಮೆ ಮಾಡಿ ಅಥವಾ ತ್ಯಜಿಸಿ. ಮದ್ಯಪಾನ, ಧೂಮಪಾನ ಬೇಡ. ವಿಟಮಿನ್ ಡಿ, ಅಯೋಡಿನ್ ಒದಗಿಸುವ ಸಮುದ್ರ ಉತ್ಪನ್ನಗಳನ್ನು ಬಳಸಿ. ಆಹಾರವನ್ನು ಮನಸ್ಸಿಟ್ಟು ಅಗಿದು ಸೇವಿಸಿ. ದೈಹಿಕ ಹಸಿವಿಗೂ ಭಾವನಾತ್ಮಕ ಹಸಿವಿಗೂ ವ್ಯತ್ಯಾಸ ತಿಳಿಯಲು ಪ್ರಯತ್ನಿಸಿ. ಜಾಗರೂಕತೆಯಿಂದ ಇರಿ. ದಿನನಿತ್ಯ 15–20 ನಿಮಿಷ ಬೆಳಿಗ್ಗೆ 11ರಿಂದ ಮಧ್ಯಾಹ್ನ 3 ಗಂಟೆಯ ಒಳಗಿನ ಬಿಸಿಲಿಗೆ ಬೆನ್ನು ಮತ್ತು ಕೈಕಾಲುಗಳ ಭಾಗಗಳನ್ನು ಒಡ್ಡಿಕೊಂಡರೆ ಸಾಕಷ್ಟು ವಿಟಮಿನ್ ಡಿ ಸಿಗುತ್ತದೆ.

ನಿತ್ಯ 40 ನಿಮಿಷ ವಾಕಿಂಗ್, ಜಾಗಿಂಗ್, ಸೈಕ್ಲಿಂಗ್, ಸ್ವಿಮಿಂಗ್, ಏರೋಬಿಕ್ಸ್, ನೃತ್ಯದಂತಹ ದೈಹಿಕ ಚಟುವಟಿಕೆ ಮತ್ತು ಸರ್ವಾಂಗಾಸನ, ಅಧೋಮುಖಶ್ವಾನಾಸನ, ಸುಪ್ತಬದ್ಧಾಸನ, ಸೇತುಬಂಧಾಸನ, ಪ್ರಸಾರಿತ ಪಾದೋತ್ತಾಸನದಂತಹ ಯೋಗಾಸನಗಳನ್ನು ನಿಯಮಿತವಾಗಿ ಮಾಡುವುದರಿಂದ ಉಷ್ಣ ಅಲೆಗಳ ತೀವ್ರತೆ ಕಡಿಮೆ ಆಗುತ್ತದೆ. ವ್ಯಾಯಾಮದಿಂದ ತೂಕ ನಿಯಂತ್ರಣ, ಮಾನಸಿಕ ಆರೋಗ್ಯ ಸುಧಾರಣೆ, ಸ್ನಾಯು ಸವೆತ, ನಿದ್ರಾಹೀನತೆಯಂತಹ ಸಮಸ್ಯೆಗಳು ಸುಧಾರಿಸುತ್ತವೆ. ನಾಡಿಶೋಧನ ಹಾಗೂ ಭ್ರಮರಿ ಪ್ರಾಣಾಯಾಮವನ್ನು ತಜ್ಞರಿಂದ ಕಲಿತು ನಿಯಮಿತವಾಗಿ ಮಾಡಿದಾಗ ಮಾನಸಿಕ, ಭಾವನಾತ್ಮಕ ಸ್ಥಿರತೆ ದೊರೆಯುತ್ತದೆ. ಅದರಿಂದ ನೀವು ಧೈರ್ಯವಾಗಿ ಮೆನೋಪಾಸ್ ಹಂತವನ್ನು ಎದುರಿಸಬಹುದು.

ಜಲರಾಣಿ ಸವಿತಾ

ಜಲಯೋಗದ ಕುರಿತು ಅತೀವ ಪ್ರೀತಿ ಇಟ್ಟುಕೊಂಡಿರುವ ಬೆಂಗಳೂರಿನ ಸವಿತಾ ರಾಣಿ, ಹಲವು ವರ್ಷಗಳಿಂದ ಇದರ ಅಭ್ಯಾಸದಲ್ಲಿ ತೊಡಗಿದ್ದಾರೆ. ಶಿಕ್ಷಣ ಸಂಸ್ಥೆಯೊಂದರಲ್ಲಿ ಕೆಲಸ ಮಾಡಿಕೊಂಡು, ಗುರುವಿಲ್ಲದೆಯೇ ಸ್ವತಃ ಜಲಯೋಗ ಕಲಿತ ಇವರ ಅನುಭವ, ಕಿರುಪರಿಚಯ ಇಲ್ಲಿದೆ.

• ಸುಕೃತ ಎಸ್.

‘**ಜಲಯೋಗ** – ಈ ಹೆಸರು ಕೇಳಿದವರೇ ಕಡಿಮೆ. ನನ್ನ ಅಮ್ಮನ ಬಾಯಲ್ಲಿ ನಾನು ಈ ಹೆಸರನ್ನು ಮೊದಲು ಕೇಳಿದ್ದು. ಅಲ್ಲಿಂದಲೇ ಇದನ್ನು ಕಲಿಯುವ ಸಾಹಸಕ್ಕೆ ಮುಂದಾದೆ...’ ಎಂದು ಮಾತು ಆರಂಭಿಸಿದರು ಸವಿತಾ ರಾಣಿ.

ಅಪ್ಪ ಈಜು ಕಲಿಯಲು ಪ್ರೇರೇಪಿಸಿದರು. ಯೋಗವನ್ನು ಅಮ್ಮ ಹೇಳಿಕೊಟ್ಟರು. ಆಕೆಯೇ ನನಗೆ ಗುರು. ಒಂದು ದಿನ ನಾನು ಈಜುತ್ತಿದ್ದಾಗ ನನ್ನನ್ನೇ ನೋಡುತ್ತಿದ್ದ ಅಮ್ಮ ‘ನೀನು ಚೆನ್ನಾಗಿ ಸಮತೋಲನದಿಂದ ಈಜುತ್ತೀಯ. ನೀನೇಕೆ ಜಲಯೋಗ ಮಾಡಬಾರದು’ ಎಂದರು. ಆಗ ನನಗೆ 15 ವರ್ಷ. ಅಲ್ಲಿಂದ ಮತ್ತೆ ನಾನು ಹಿಂದಿರುಗಿ ನೋಡಲೇ ಇಲ್ಲ’ ಎನ್ನುತ್ತಾ ತಮ್ಮ ಕಲಿಕಾ ದಿನಗಳನ್ನು ನೆನಪಿಸಿಕೊಂಡರು ಸವಿತಾ.

ಪದ್ಮಾಸನ, ಚಕ್ರಾಸನ, ವೃಕ್ಷಾಸನ... ಹೀಗೆ ಸುಮಾರು 40–50 ಯೋಗಾಸನಗಳನ್ನು 25 ವರ್ಷಗಳಿಂದ ಅವರು ನೀರಿನಲ್ಲಿ ಮಾಡುತ್ತಾ ಬಂದಿದ್ದಾರೆ. ‘ಯಾವುದೇ ಸಂದರ್ಭದಲ್ಲಿಯೂ ಈಜಿ ಹೊರಬರುತ್ತೇನೆ ಎನ್ನುವ ಧೈರ್ಯ ಮತ್ತು ಈಜುವುದರಲ್ಲಿ ಪರಿಣತಿ ಇದ್ದರಷ್ಟೇ ಜಲಯೋಗ ಮಾಡಬೇಕು. ನಾನು ಸ್ವತಃ ಕಲಿತೆ. ಆದರೆ ಗುರು ಇಲ್ಲದೆ, ಈಜು ಬರದೆ ಯಾರೂ ಇದನ್ನು ಮಾಡಬಾರದು’ ಎಂದು ಎಚ್ಚರಿಕೆ ನೀಡುವುದನ್ನು ಅವರು ಮರೆಯುವುದಿಲ್ಲ.

ಸವಿತಾ ರಾಣಿ

ಜಲಯೋಗ ಮಾಡುವ ಕೆಲವೇ ಮಂದಿಯಲ್ಲಿ ಒಬ್ಬರು ಎನ್ನುವ ಹೆಗ್ಗಳಿಕೆಗೆ ಸವಿತಾ ಪಾತ್ರರಾಗಿದ್ದಾರೆ. ‘ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್’ನಲ್ಲಿಯೂ ಇವರ ಹೆಸರು ದಾಖಲಾಗಿದೆ. ಇಲ್ಲಿಯವರೆಗೂ ಸುಮಾರು 200 ಪ್ರಶಸ್ತಿಗಳನ್ನು ಅವರು ಪಡೆದುಕೊಂಡಿದ್ದಾರೆ.

‘ನೀರಿನ ಬಗ್ಗೆ ಅತೀವ ಪ್ರೀತಿ ಇದ್ದರೆ ಮಾತ್ರವೇ ಜಲಯೋಗ ಮಾಡಬಹುದು. ಆದರೆ, ಇದನ್ನು ಕರಗತ ಮಾಡಿಕೊಳ್ಳಲು ಸಾಕಷ್ಟು ಏಕಾಗ್ರತೆ ಬೇಕು. ಪ್ರಾಣಾಯಾಮ, ಧ್ಯಾನವೂ ಬಹಳ ಮುಖ್ಯ. ಒಮ್ಮೆ ನೀರಿಗಿಳಿದರೆ, ನೀರು ಮತ್ತು ನೀವು ಮಾತ್ರವೇ ನಿಮ್ಮ ಗಮನದಲ್ಲಿರಬೇಕು. ನಿತ್ಯದ ಅಭ್ಯಾಸ ತಪ್ಪಿಸುವಂತಿಲ್ಲ’ ಎನ್ನುತ್ತಾರೆ.

‘ಕಳೆದ ವರ್ಷ ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆದ ಮಹಾಕುಂಭ ಮೇಳ ಪ್ರದೇಶದ ನೀರಿನಲ್ಲಿ ವೃಕ್ಷಾಸನ ಹಾಕಿದ್ದಾಗ ನಾಗಾ ಸಾಧುವೊಬ್ಬರು ನನ್ನನ್ನು ಕಂಡು, ‘ನೀನು ನೀರಿನ ರಾಣಿ’ ಎಂದರು. ಇಂತಹ ಪ್ರಶಂಸೆ ನನ್ನ ಪಾಲಿಗೆ ದೊಡ್ಡ ಪ್ರಶಸ್ತಿಯಂತೆಯೇ ಸರಿ’ ಎಂದು ಸಂತಸ ಹಂಚಿಕೊಂಡರು.

ಮಹಿಳೆ ಮತ್ತು ಜಲಯೋಗ

‘ಕಾರ್ಯಕ್ರಮಗಳಿಗೆ ಹೋದಾಗ ಮಹಿಳೆಯರು ನನ್ನನ್ನು ಸುತ್ತುವರಿದು, ‘ನಾವೂ ಜಲಯೋಗ ಕಲಿಯಬೇಕು’ ಎನ್ನುತ್ತಾರೆ. ಇದನ್ನು ಕಲಿಯುವುದು ಹೇಗೆ, ಅಭ್ಯಾಸ ಹೇಗೆ ಎಂದೆಲ್ಲಾ ಹೇಳಲು ಆರಂಭಿಸಿದರೆ, ‘ಅಯ್ಯೋ ಇದು ನಮ್ಮಿಂದ ಸಾಧ್ಯವಿಲ್ಲ ಬಿಡಿ’ ಎಂದುಬಿಡುತ್ತಾರೆ ಎನ್ನುತ್ತಾರೆ ಸವಿತಾ.

‘ಒಂದು, ನೀರಿನ ಭಯ. ಇನ್ನೊಂದು, ನಿರಂತರ ಅಭ್ಯಾಸಕ್ಕೆ ಇರುವ ಸಮಸ್ಯೆ. ಮಹಿಳೆಯರು ಜಲಯೋಗ ಅಭ್ಯಾಸ ಮಾಡಬೇಕು ಎಂದರೆ, ಎಲ್ಲಿ ಮಾಡಬೇಕು ಎನ್ನುವ ಪ್ರಶ್ನೆ ಏಳುತ್ತದೆ. ಬೆಳಿಗ್ಗೆ ಹೊತ್ತಿನಲ್ಲಿ ಮನೆ–ಮಕ್ಕಳ ಕೆಲಸ. ಈಜುಕೊಳವಂತೂ ಬೇಕೇ ಬೇಕು. ಮಹಿಳೆಯರು ಕೆರೆಗಳನ್ನು ಹುಡುಕಿಕೊಂಡು ಹೋಗುವುದು ಕಷ್ಟ. ಈ ಎಲ್ಲ ಸಮಸ್ಯೆಗಳಿಂದ, ಹೆಣ್ಣುಮಕ್ಕಳಿಗೆ ಜಲಯೋಗ ಮಾಡುವ ಆಸೆ ಇದ್ದರೂ ವಾಸ್ತವದಲ್ಲಿ ಸಮಸ್ಯೆಗಳು ಎದುರಾಗುತ್ತವೆ’ ಎಂದು ವಿವರಿಸಿದರು.

‘ನಾನು ಸಹ ಇಂಥ ಸಮಸ್ಯೆಗಳನ್ನು ಎದುರಿಸಿದ್ದೇನೆ. ಆದರೆ, ಮಾಡುವ ಛಲ ನನ್ನನ್ನು ಇಲ್ಲಿವರೆಗೆ ಕರೆತಂದಿದೆ. ಯೋಗ ಮಾಡುವುದಕ್ಕಿಂತ ತುಸು ಹೆಚ್ಚಿನ ಸಾಮರ್ಥ್ಯ ಜಲಯೋಗಕ್ಕೆ ಬೇಕಾಗುತ್ತದೆ’ ಎಂದು ಮಾಹಿತಿ ನೀಡಿದರು.

ಸತ್ಯಮೇವ ಜಯತೇ

ನಾಗರಿಕ ವಿಮಾನಯಾನ ಸಚಿವಾಲಯ
ಭಾರತ ಸರ್ಕಾರ

ಪ್ರಾದೇಶಿಕ ವಾಯು ಸಂಪರ್ಕದಲ್ಲಿ ಹೊಸ ದಶಕದ ಆರಂಭ

ಶ್ರೀ ನರೇಂದ್ರ ಮೋದಿ
ಮಾನ್ಯ ಪ್ರಧಾನಮಂತ್ರಿ

ಸುಮಾರು ರೂ. 29,000 ಕೋಟಿ ಮೌಲ್ಯದ

UDAN
(ಉಡೇ ದೇಶ್ ಕಾ ಆಮ್ ನಾಗರಿಕ್)

ಯೋಜನೆಯ ಮುಂದಿನ ಹಂತದ ಶುಭಾರಂಭ

ಉದ್ಘಾಟಕರು

ಶ್ರೀ ನರೇಂದ್ರ ಮೋದಿ

ಮಾನ್ಯ ಪ್ರಧಾನಮಂತ್ರಿ

ಯೋಜನೆಯ ವಿಶೇಷತೆಗಳು ಮತ್ತು ಪ್ರಯೋಜನಗಳು

- ರಿಮೋಟ್ ಹಾಗೂ ಪ್ರಾದೇಶಿಕ ವಾಯು ಸಂಪರ್ಕಗಳ ಸುಧಾರಣೆಗಾಗಿ ರೂ. 12,159 ಕೋಟಿ ವೆಚ್ಚದಲ್ಲಿ **100 ನೂತನ ಏರೋಡ್ರೋಮ್‌ಗಳ** ಅಭಿವೃದ್ಧಿ
- ಭಾರತದಾದ್ಯಂತ ಪರ್ವತ ಪ್ರದೇಶಗಳಲ್ಲಿ ಮತ್ತು ಆಕಾಂಕ್ಷಿ ಜಿಲ್ಲೆಗಳಲ್ಲಿ ರೂ. 3,661 ಕೋಟಿ ವೆಚ್ಚದ **200 ಹೆಲಿಪೋರ್ಟ್ಸ್** ನಿರ್ಮಾಣ
- ಪ್ರಾದೇಶಿಕ ಮಾರ್ಗಗಳಲ್ಲಿ ಸುಸ್ಥಿರ ವೈಮಾನಿಕ ಕಾರ್ಯಾಚರಣೆಗಳ ಉತ್ತೇಜನಕ್ಕಾಗಿ ಮತ್ತು ಮಿತವ್ಯಯಕರ ವಾಯುಸಂಚಾರ ಖಾತರಿಪಡಿಸುವುದಕ್ಕಾಗಿ ರೂ. 10,043 ಕೋಟಿ **ವಯೆಬಿಲಿಟಿ ಗ್ಯಾಪ್ ಫಂಡಿಂಗ್**
- ಸುರಕ್ಷತೆ, ದಕ್ಷತೆ ಮತ್ತು ನಿರಂತರ ಕಾರ್ಯಾಚರಣೆಗಳಿಗೆ ಪ್ರಚೋದನೆ ತುಂಬಲು ರೂ. 2,577 ಕೋಟಿ ವೆಚ್ಚದಲ್ಲಿ ಏರೋಡ್ರೋಮ್‌ಗಳಿಗೆ **ಒ&ಎಂ ಉತ್ತೇಜನ**
- ದೇಸಿ ಪ್ರಾದೇಶಿಕ ವೈಮಾನಿಕ ಸಾಮರ್ಥ್ಯಗಳ ಬಲವರ್ಧನೆಗಾಗಿ ಎಚ್‌ಎಎಲ್ ಧ್ರುವ್ ಮತ್ತು ಡಾರ್ನಿಯರ್ ಏರ್‌ಕ್ರಾಫ್ಟ್‌ಗಳ **ಆತ್ಮನಿರ್ಭರ ಏರ್‌ಕ್ರಾಫ್ಟ್ ಅಕ್ವಿಸಿಷನ್**
- ವ್ಯಾಪಾರ, ಪ್ರವಾಸೋದ್ಯಮ ಮತ್ತು ಪ್ರಾದೇಶಿಕ ಆರ್ಥಿಕತೆ, **ಹೊಸ ಏರ್‌ಲೈನ್‌ಗಳ** ಅಭಿವೃದ್ಧಿಗಾಗಿ ಮತ್ತು ವೈಮಾನಿಕ ಸ್ಟಾರ್ಟ್‌ಅಪ್‌ಗಳ ಅಭಿವೃದ್ಧಿಗೆ ಉತ್ತೇಜನ

ಗಣ್ಯ ಉಪಸ್ಥಿತರು

ಶ್ರೀ ಹರಿಭಾವು ಕಿಷನರಾವ್ ಬಾಗ್ಡೆ
ರಾಜ್ಯಪಾಲರು, ರಾಜಸ್ಥಾನ

ಶ್ರೀ ಭಜನ್ ಲಾಲ್ ಶರ್ಮಾ
ಮುಖ್ಯಮಂತ್ರಿ, ರಾಜಸ್ಥಾನ

ಶ್ರೀ ಕಿಂಜಾರಪು ರಾಮ್‌ಮೋಹನ್ ನಾಯ್ಡು
ಕೇಂದ್ರ ನಾಗರಿಕ ವಿಮಾನಯಾನ ಸಚಿವರು

ಶ್ರೀ ಗಜೇಂದ್ರ ಸಿಂಗ್ ಶೇಖಾವತ್
ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವರು

ಶ್ರೀ ಮುರಳಿಧರ್ ಮೊಹೋಲ್
ಕೇಂದ್ರ ನಾಗರಿಕ ವಿಮಾನಯಾನ ಮತ್ತು ಸಹಕಾರ ಖಾತೆ ರಾಜ್ಯ ಸಚಿವರು

ಶನಿವಾರ, 04ನೇ ಜುಲೈ, 2026 | 10:45 ಗಂಟೆ. | ಜೋಧಪುರ ಏರ್‌ಪೋರ್ಟ್, ರಾಜಸ್ಥಾನ

DD NEWS ಡಿಡಿ ನ್ಯೂಸ್ ವಾಹಿನಿಯಲ್ಲಿ ನೇರಪ್ರಸಾರ ವೀಕ್ಷಿಸಿ

CBC 03111/13/0003/2627

Follow us on:- @AAI_Official | @AirportsAuthorityOfIndiaOfficial | @aaiofficial | @AirportsAuthorityofIndia | @airportsauthorityofindia

ಸಮನ್ವಯದಿಂದ ಕೆಲಸ ಮಾಡಿ: ಕೃಷ್ಣ ಬೈರೇಗೌಡ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಚಿವರ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಿಕರಿಗೆ ಗುಣಮಟ್ಟದ ಸೇವೆ ಒದಗಿಸುವ ದೃಷ್ಟಿಯಿಂದ ಎಲ್ಲಾ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ ವ್ಯವಸ್ಥಿತ ಬದಲಾವಣೆ ತರಬೇಕು ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಕಾರ್ಯಕಾರಿ ಸಮಿತಿ ಅಧ್ಯಕ್ಷರೂ ಆದ ಕೃಷ್ಣಬೈರೇಗೌಡ ಅವರು ಎಲ್ಲ ಇಲಾಖೆಗಳ ಪ್ರತಿನಿಧಿಗಳೊಂದಿಗೆ ಶುಕ್ರವಾರ ಸಭೆ ನಡೆಸಿದರು.

‘ನಗರದ ನಾಗರಿಕರು ಹಾಗೂ ವಿವಿಧ ಸಂಘ-ಸಂಸ್ಥೆಗಳು ಹಲವು ವರ್ಷಗಳಿಂದ ಇಲಾಖೆಗಳ ನಡುವಿನ ಸಮನ್ವಯದ ಕೊರತೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಪಾಲಿಕೆ, ಜಲಮಂಡಳಿ, ಬಿಎಂಟಿಸಿ, ಮೆಟ್ರೊ, ಕೆಪಿಟಿಸಿಎಲ್, ಬೆಸ್ಕಾಂ, ಕೆ-ರೈಡ್ ಸೇರಿದಂತೆ ವಿವಿಧ ಇಲಾಖೆಗಳು ಸಮನ್ವಯವಿಲ್ಲದೆ ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿರುವುದು ನಗರದ ಅಭಿವೃದ್ಧಿಗೆ ಅಡ್ಡಿಯಾಗುತ್ತಿದೆ. ಒಂದೆಡೆ ರಸ್ತೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡ ಕೆಲವೇ ತಿಂಗಳಲ್ಲಿ ಮತ್ತೊಂದು ಇಲಾಖೆ ಅದೇ ರಸ್ತೆಯನ್ನು ಅಗೆಯುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುವುದಲ್ಲದೆ, ಹಣವೂ ವ್ಯರ್ಥವಾಗುತ್ತಿದೆ. ಇಂತಹ ಪರಿಸ್ಥಿತಿ ಮರುಕಳಿಸದಂತೆ ಎಲ್ಲಾ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದೇನೆ’ ಎಂದು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಈ ಕಾರ್ಯಕಾರಿ ಸಮಿತಿಯ ಮೂಲಕ ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ನಡೆಸಿ, ಇಲಾಖಾವಾರು ಸಮಸ್ಯೆಗಳು, ಪ್ರಗತಿಯಲ್ಲಿರುವ ಯೋಜನೆಗಳು ಹಾಗೂ ಪರಸ್ಪರ ಸಹಕಾರ ಅಗತ್ಯವಿರುವ ವಿಷಯಗಳ ಕುರಿತು ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುವುದು. ಮಾರ್ಚ್‌ನಲ್ಲಿ ಮೊದಲ ಸಭೆ ನಡೆದಿತ್ತು. ಅಗತ್ಯವಿದ್ದಲ್ಲಿ ಪ್ರತಿ ತಿಂಗಳೂ ಕಾರ್ಯಕಾರಿ ಸಮಿತಿಯ ಸಭೆ ನಡೆಸಲಾಗುವುದು ಎಂದು ಹೇಳಿದರು.

ವರ್ಷಗಳಿಂದ ಮುಂದುವರಿದಿರುವ ಇಲಾಖೆಗಳ ನಡುವಿನ ಸಮನ್ವಯದ ಕೊರತೆಯನ್ನು ನಿವಾರಿಸುವುದು ಸುಲಭದ ಕೆಲಸವಲ್ಲ. ಆದರೆ ಎಲ್ಲ ಇಲಾಖೆಗಳು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿದರೆ ನಗರದ ಅಭಿವೃದ್ಧಿಯಲ್ಲಿ ಗಮನಾರ್ಹ ಬದಲಾವಣೆ ತರಲು ಸಾಧ್ಯವಾಗುತ್ತದೆ ಎಂದು ಸಚಿವರು ಅಭಿಪ್ರಾಯಪಟ್ಟರು.

ಡ್ಯಾಶ್‌ಬೋರ್ಡ್: ನಗರದಲ್ಲಿನ ವಿವಿಧ ಇಲಾಖೆಗಳು ಕೈಗೆತ್ತಿಕೊಂಡಿರುವ ಕಾಮಗಾರಿಗಳು, ಅಭಿವೃದ್ಧಿ ಯೋಜನೆಗಳು, ರಸ್ತೆಗಳ ಮಾಹಿತಿ, ಬೀದಿ ದೀಪಗಳು, ಜಲಮಂಡಳಿ ಮೂಲಸೌಕರ್ಯ, ಪ್ರಗತಿಯಲ್ಲಿರುವ ಕಾಮಗಾರಿಗಳು ಸೇರಿದಂತೆ ಎಲ್ಲಾ ಮಾಹಿತಿ ಒಂದೇ ವೇದಿಕೆಯಲ್ಲಿ ಲಭ್ಯವಾಗುವಂತೆ ಜಿಐಎಸ್ ಆಧಾರಿತ ಡ್ಯಾಶ್‌ಬೋರ್ಡ್ ಅಭಿವೃದ್ಧಿಪಡಿಸಲು ಸೂಚಿಸಲಾಗಿದೆ. ಸಾರ್ವಜನಿಕರು ಹಾಗೂ ಅಧಿಕಾರಿಗಳು ಸಮಗ್ರ ಮಾಹಿತಿಯನ್ನು ಒಂದೇ ಸ್ಥಳದಲ್ಲಿ ಪಡೆಯಲು ಅನುಕೂಲವಾಗುವಂತೆ ಈ ವ್ಯವಸ್ಥೆಯನ್ನು ಶೀಘ್ರದಲ್ಲೇ ಕಾರ್ಯರೂಪಕ್ಕೆ ತರಲು ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲಾಗಿದೆ ಎಂದು ಹೇಳಿದರು.

ಸಭೆಯಲ್ಲಿ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್ ಹಾಗೂ ನಿತೀಶ್, ಬಿಡಿಎ ಆಯುಕ್ತ ಮಣಿವಣ್ಣನ್, ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ಜಲಮಂಡಳಿ ಅಧ್ಯಕ್ಷೆ ಎನ್. ಮಂಜುಳಾ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್. ಶಿವಶಂಕರ್, ನಗರ ಪಾಲಿಕೆ ಆಯುಕ್ತರಾದ ರಮೇಶ್ ಡಿ.ಎಸ್., ಪೊಮ್ಮಲ ಸುನೀಲ್ ಕುಮಾರ್, ಜಿ. ಜಗದೀಶ್, ರಮೇಶ್ ಕೆ.ಎನ್., ಡಾ. ಕೆ.ವಿ. ರಾಜೇಂದ್ರ, ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ್ ಸಿಂಗ್ ಉಪಸ್ಥಿತರಿದ್ದರು.

‘ಪಾದಚಾರಿಗಳ ಮರಣ ಸರಿಯೇ?’

‘ಬೆಂಗಳೂರಲ್ಲಿ ಪಾದಚಾರಿ ಮಾರ್ಗಗಳ ಒತ್ತುವರಿಯಿಂದ, ಅಪಘಾತಗಳಾಗಿ ವರ್ಷಕ್ಕೆ ಕನಿಷ್ಠ 300 ಜನ ಸಾವನ್ನಪ್ಪುತ್ತಿದ್ದಾರೆ. ಇದು ಸರಿನಾ? ಇವರ ಸಾವಿಗೆ ಯಾರು ಹೊಣೆ? ಮೃತರ ಕುಟುಂಬಗಳಿಗೆ ನೀವೇನು ಉತ್ತರ ನೀಡುತ್ತೀರಿ? ವಯೋವೃದ್ಧರು ರಸ್ತೆಯಲ್ಲಿ ನಡೆಯಲು ಪಡುವ ಪಡಿಪಾಟಲಿನ ಬಗ್ಗೆ ನಿಮಗೆ ತಿಳಿದಿಲ್ಲವೇ’ ಎಂದು ಸಚಿವ ಕೃಷ್ಣ ಬೈರೇಗೌಡ ಪ್ರಶ್ನಿಸಿದರು.

‘ಈ ವಿಚಾರವನ್ನು ಎಷ್ಟು ಸಾರಿ ಹೇಳಿದರೂ ಹಲವರು ಅಧಿಕಾರಿಗಳು ಉದಾಸೀನದಿಂದ ಪ್ರತಿಕ್ರಿಯಿಸುತ್ತಿದ್ದಾರೆ. ಅಷ್ಟೇಕೆ ನಗರದ ಶೇ 20ರಷ್ಟು ರಸ್ತೆಗಳಲ್ಲಿ ಮಾತ್ರ ನಾವು ಒತ್ತುವರಿ ತೆರವು ಮಾಡುತ್ತಿದ್ದೇವೆ, ಉಳಿದ ರಸ್ತೆಗಳಲ್ಲಿ ರಸ್ತೆಬದಿ ವ್ಯಾಪಾರಿಗಳು ಬದುಕು ಕಟ್ಟಿಕೊಳ್ಳಲು ಸ್ವತಂತ್ರರು’ ಎಂದು ತಿಳಿಸಿದರು.

ಮೂರು ತಿಂಗಳ ಹಿಂದೆಯೇ ನೋಟಿಸ್

‘ಪಾದಚಾರಿಗಳ ಸುಗಮ ಸಂಚಾರವನ್ನು ಖಚಿತಪಡಿಸಲು, ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳಲ್ಲಿನ ಎಲ್ಲಾ ಒತ್ತುವರಿಗಳನ್ನು ತೆರವುಗೊಳಿಸಲಾಗುವುದು ಎಂದು ಉಪಮುಖ್ಯಮಂತ್ರಿಯಾಗಿದ್ದಾಗ ಡಿ.ಕೆ. ಶಿವಕುಮಾರ್ ಅವರು ಮಾರ್ಚ್ 20ರಂದು ಘೋಷಿಸಿದ್ದರು. ಈ ನಿಟ್ಟಿನಲ್ಲಿ ಸರ್ಕಾರವು ಮೂರು ತಿಂಗಳ ಮೊದಲೇ ನೋಟಿಸ್ ನೀಡಿದೆ’ ಎಂದು ಸಚಿವ ಕೃಷ್ಣ ಬೈರೇಗೌಡ ಸ್ಪಷ್ಟಪಡಿಸಿದರು.

‘ಸರ್ವಪಕ್ಷ ಸಭೆಯಲ್ಲಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿತ್ತು. ಹಲವು ಶಾಸಕರು ಈ ಸಲಹೆಯನ್ನು ನೀಡಿದ್ದರು. ಈ ವಿಷಯದ ಬಗ್ಗೆ ಸುದೀರ್ಘ ಚರ್ಚೆ ನಡೆಸಿ, ಎಲ್ಲಾ ಪಕ್ಷಗಳ ಎಲ್ಲಾ ಶಾಸಕರು ಮತ್ತು ಸಂಸದರು ಇದಕ್ಕೆ ಸರ್ವಾನುಮತದ ಬೆಂಬಲ ಸೂಚಿಸಿದ್ದರು. ಸಭೆಯಲ್ಲಿದ್ದವರೆಲ್ಲರೂ ಒಕ್ಕೊರಲಿನಿಂದ ಈ ನಿರ್ಣಯಕ್ಕೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದ್ದರು’ ಎಂದರು.

ಕೃಷ್ಣ ಬೈರೇಗೌಡರ ಮಾತು

- ವಹಿಸಿಕೊಂಡ ಜವಾಬ್ದಾರಿಗೆ ನ್ಯಾಯ ಒದಗಿಸದೆ, ಹತ್ತಿದ ಕುದುರೆಯನ್ನು ಇಳಿಯುವ ಜಾಯಮಾನ ನನ್ನದಲ್ಲ
- ನಗರದ ವ್ಯವಸ್ಥೆಯನ್ನು ಸುಧಾರಿಸಲು ಸಂಚಾರ ಪೊಲೀಸ್ ಸೇರಿದಂತೆ ನಗರದ ಎಲ್ಲಾ ಸಂಸ್ಥೆಗಳೂ ಒಟ್ಟಾಗಿ ಕೆಲಸ ನಿರ್ವಹಿಸಬೇಕಿದೆ
- ಜನರ ಭಾವನೆ ಅರ್ಥ ಮಾಡಿಕೊಂಡು ಎಲ್ಲಾ ಅಧಿಕಾರಿಗಳು ಒಟ್ಟಾಗಿ ಕೆಲಸ ನಿರ್ವಹಿಸಬೇಕಿದೆ. ನಾವೆಲ್ಲರೂ ಒಟ್ಟಾಗಿ ಕೆಲಸ ನಿರ್ವಹಿಸದಿದ್ದರೆ, ಬೆಂಗಳೂರಿನ ಸಮಸ್ಯೆ ಬಗೆಹರಿಸಲು ಸಾಧ್ಯವಿಲ್ಲ
- ಬೆಂಗಳೂರಲ್ಲಿ ಒಂದು ಏಜೆನ್ಸಿ ಜೊತೆಗೆ ಮತ್ತೊಂದು ಏಜೆನ್ಸಿಗೆ ಸಮನ್ವಯ ಇಲ್ಲ ಎಂಬ ಟೀಕೆಯನ್ನು ನಾನು ರಾಮಕೃಷ್ಣ ಹೆಗಡೆ ಅವರ ಕಾಲದಿಂದಲೂ ಕೇಳುತ್ತಿದ್ದೇನೆ
- ಆ ಕಾಲದಿಂದಲೂ ಈ ಸಮಸ್ಯೆ ವರ್ಷದಿಂದ ವರ್ಷಕ್ಕೆ ಉಲ್ಬಣವಾಗುತ್ತಿದೆಯೇ ವಿನಃ ಬಗೆಹರಿದಿಲ್ಲ

ಕೃಷ್ಣ ಬೈರೇಗೌಡ

ನಾಯಂಡಹಳ್ಳಿಯಲ್ಲಿ ಪಾದಚಾರಿ ಮಾರ್ಗದ ಒತ್ತುವರಿಯನ್ನು ಪಶ್ಚಿಮ ನಗರ ಪಾಲಿಕೆ ಸಿಬ್ಬಂದಿ ತೆರವುಗೊಳಿಸಿದರು

3 ದಿನದಲ್ಲಿ 145 ಕಿ.ಮೀ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಮೂರು ದಿನಗಳಲ್ಲಿ 145 ಕಿ.ಮೀ. ಪಾದಚಾರಿ ಮಾರ್ಗದಲ್ಲಿನ ಒತ್ತುವರಿಯನ್ನು ತೆರವು ಮಾಡಲಾಗಿದೆ.

‘ಪಾದಚಾರಿಗಳ ಸುಗಮ ಸಂಚಾರ ಹಾಗೂ ಸುರಕ್ಷತೆಗಾಗಿ ಒತ್ತುವರಿ ತೆರವು ಕಾರ್ಯಾಚರಣೆ’ ಜುಲೈ 1ರಿಂದ ಆರಂಭವಾಗಿದ್ದು, ಶುಕ್ರವಾರವೂ ಹಲವು ಪ್ರದೇಶಗಳಲ್ಲಿ ತೆರವು ಕಾರ್ಯ ನಡೆಯಿತು.

ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ವಿವಿಧ ಮುಖ್ಯ- ಉಪ ಮುಖ್ಯ ರಸ್ತೆಗಳಲ್ಲಿನ ಪಾದಚಾರಿ ಮಾರ್ಗಗಳಲ್ಲಿನ ಅನಧಿಕೃತ ಒತ್ತುವರಿಗಳನ್ನು ಸಂಚಾರ ಹಾಗೂ ಕಾನೂನು ಸುವ್ಯವಸ್ಥೆಯ ಪೊಲೀಸ್ ವಿಭಾಗದ ಅಧಿಕಾರಿ ಸೇರಿದಂತೆ ಇತರೆ ಇಲಾಖೆಗಳ ಸಹಯೋಗದೊಂದಿಗೆ ತೆರವುಗೊಳಿಸಲಾಯಿತು ಎಂದು ಆಯುಕ್ತ ಡಾ. ರಾಜೇಂದ್ರ ಕೆ.ವಿ. ತಿಳಿಸಿದರು.

ಸುಮಾರು 40 ಪೆಟ್ಟಿಗೆ ಅಂಗಡಿಗಳು, ಸುಮಾರು 70 ತಳ್ಳುವ ಗಾಡಿಗಳು, ಸುಮಾರು 80ಕ್ಕೂ ಹೆಚ್ಚು ಜಾಹಿರಾತು/ನಾಮಫಲಕ ಹಾಗೂ ಸುಮಾರು 30 ಟನ್‌ನಷ್ಟು ಕಟ್ಟಡ ತ್ಯಾಜ್ಯ ತೆರವುಗೊಳಿಸಲಾಗಿದೆ. ಅಭಿಯಾನದ ಮೊದಲ ದಿನ (ಜುಲೈ 1) 23 ಕಿ.ಮೀ., ಎರಡನೇ ದಿನ 24.1 ಕಿ.ಮೀ. ಹಾಗೂ ಶುಕ್ರವಾರ 16.5 ಕಿ.ಮೀ.ಗಳಷ್ಟು ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮತ್ತೆ ಒತ್ತುವರಿ

ನಗರ ಪಾಲಿಕೆಗಳ ಸಿಬ್ಬಂದಿ ಬುಧವಾರ, ಗುರುವಾರ ಪಾದಚಾರಿ ಮಾರ್ಗಗಳಲ್ಲಿನ ಒತ್ತುವರಿ ತೆರವು ಕಾರ್ಯ ನಡೆಸಿದ್ದರೂ, ಶುಕ್ರವಾರ ಹಲವು ಪಾದಚಾರಿ ಮಾರ್ಗಗಳಲ್ಲಿ ಮತ್ತೆ ಬೀದಿ ಬದಿ ವ್ಯಾಪಾರಿಗಳು ಒತ್ತುವರಿ ಮಾಡಿಕೊಂಡಿದ್ದಾರೆ.

ಜಯನಗರ, ಬಸವನಗುಡಿ, ಪುಲಕೇಶಿನಗರ, ದಾಸರಹಳ್ಳಿ, ಹೆಬ್ಬಾಳ, ಸರ್ವಜ್ಞನಗರ, ವಿದ್ಯಾರಣ್ಯಪುರ, ಬೊಮ್ಮನಹಳ್ಳಿ ಸೇರಿದಂತೆ ಹಲವು ಪ್ರದೇಶಗಳಲ್ಲಿ ಒತ್ತುವರಿ ತೆರವಾದ ಪಾದಚಾರಿ ಮಾರ್ಗದಲ್ಲೇ ಮತ್ತೆ ಅತಿಕ್ರಮಣವಾಗಿದೆ. ಈ ಬಗ್ಗೆ ಹಲವು ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲೂ ಹರಿದಾಡುತ್ತಿವೆ.

ಜಯನಗರ 9ನೇ ಮುಖ್ಯ ರಸ್ತೆಯ ಮಾರೇನಹಳ್ಳಿ ಮುಖ್ಯ ರಸ್ತೆಯಿಂದ 33ನೇ ಕ್ರಾಸ್ ರಸ್ತೆ, ಜಯನಗರ 24ನೇ ಮುಖ್ಯ ರಸ್ತೆಯ ರಾಘವೇಂದ್ರ ಸ್ವಾಮಿ ಮಠದಿಂದ ಪುಟ್ಟೇನಹಳ್ಳಿ ಅಂಡರ್‌ಪಾಸ್‌ವರೆಗೆ, ಕೊತ್ತನೂರು ಮುಖ್ಯ ರಸ್ತೆಯ ಬ್ರಿಗೇಡ್ ಮಿಲೇನಿಯಂನಿಂದ ಶನಿ ಮಹಾತ್ಮದೇವಸ್ಥಾನದವರೆಗೆ ಸೇರಿದಂತೆ ಹಲವು ಮುಖ್ಯ ರಸ್ತೆಗಳಲ್ಲಿ ಒಟ್ಟು 11.35 ಕಿ.ಮೀ. ಪಾದಚಾರಿ ಮಾರ್ಗದಲ್ಲಿನ ಒತ್ತುವರಿಯನ್ನು ಶುಕ್ರವಾರ ತೆರವುಗೊಳಿಸಲಾಗಿದೆ ಎಂದು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ತಿಳಿಸಿದರು.

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ 12 ರಸ್ತೆಗಳಲ್ಲಿ ಒಟ್ಟು 10.95 ಕಿ.ಮೀ ಉದ್ದದ ಪಾದಚಾರಿ ಮಾರ್ಗದಲ್ಲಿ ಒತ್ತುವರಿ ತೆರವು ಮಾಡಲಾಗಿದೆ. 85 ಕಾರ್ಮಿಕರು, 7 ಜೆಸಿಬಿಗಳು, 20 ಟ್ರ್ಯಾಕ್ಟರ್ ಗಳು ಹಾಗೂ ಮೂರು ಟಿಪ್ಪರ್‌ಗಳನ್ನು ಬಳಸಿಕೊಂಡು, 64 ಪೆಟ್ಟಿಗೆ ಅಂಗಡಿಗಳು, 107 ತಳ್ಳುವ ಗಾಡಿಗಳು, 18 ಶೀಟ್/ಚಾವಣಿ, 11 ಶೆಡ್‌ಗಳು, 8 ರ‍್ಯಾಂಪ್ಸ್/ ಮೆಟ್ಟಿಲುಗಳು, 10 ಆಸನಗಳು, 10 ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳು, 6 ಕೆನೋಪಿ ಹಾಗೂ 42.5 ಟನ್ ಕಟ್ಟಡ ತ್ಯಾಜ್ಯ ಹಾಗೂ ಇತರೆ ತ್ಯಾಜ್ಯಗಳನ್ನು ತೆರವುಗೊಳಿಸಲಾಗಿದೆ ಎಂದು ಆಯುಕ್ತ ಜಿ. ಜಗದೀಶ್ ಮಾಹಿತಿ ನೀಡಿದರು.

ಪಾದಚಾರಿಗಳ ಸುರಕ್ಷತೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಶುಕ್ರವಾರ ಕಾರ್ಯಾಚರಣೆ ನಡೆಸಿ, ಒಟ್ಟು 14.10 ಕಿ.ಮೀ. ಉದ್ದದ ಪಾದಚಾರಿ ಮಾರ್ಗವನ್ನು ಅತಿಕ್ರಮಣ ಮುಕ್ತಗೊಳಿಸಲಾಗಿದೆ. 7 ಜೆಸಿಬಿ, 35 ಟ್ರ್ಯಾಕ್ಟರ್, ಮೂರು ಯಂತ್ರ, 168 ಕಾರ್ಮಿಕರನ್ನು ಬಳಸಿಕೊಂಡು, 33 ಅಂಗಡಿಗಳು/ಬೀದಿ ವ್ಯಾಪಾರಿಗಳು, 52 ತಳ್ಳುವ ಗಾಡಿಗಳು, 121 ಶೀಟ್/ ಚಾವಣಿ, 109 ಮೆಟ್ಟಿಲು, 141 ಜಾಹೀರಾತು ನಾಮಫಲಕಗಳು, ಎರಡು ತಾತ್ಕಾಲಿಕ ಶೆಡ್‌ಗಳು ಹಾಗೂ 46.50 ಟನ್ ತ್ಯಾಜ್ಯ ತೆರವುಗೊಳಿಸಲಾಗಿದೆ ಎಂದು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್‌ಕುಮಾರ್ ತಿಳಿಸಿದರು.

ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಏಳು ರಸ್ತೆಗಳಲ್ಲಿ ಒಟ್ಟು 8.55 ಕಿ.ಮೀ ಉದ್ದದ ಪಾದಚಾರಿ ಮಾರ್ಗದ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಾರ್ಯಕ್ರಮದಲ್ಲಿ ಎಂ.ಬಿ. ಪಾಟೀಲ ಅವರು ಫ.ಗು.ಹಳಕಟ್ಟಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಗೊ.ರು.ಚನ್ನಬಸಪ್ಪ, ಸಿ. ಸೋಮಶೇಖರ್, ಸಿ.ಆರ್.ಜನಾರ್ದನ ಉಪಸ್ಥಿತರಿದ್ದರು

‘ವಚನ ಸಾಹಿತ್ಯ ಬೆಳಕಿಗೆ ತಂದ ಹಳಕಟ್ಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಜ್ಞಾತವಾಗಿ ಎಲ್ಲೆಲ್ಲೋ ಚೆಲ್ಲಾಪಿಲ್ಲಿಯಾಗಿದ್ದ ವಚನ ಸಾಹಿತ್ಯವನ್ನು ಸಂಗ್ರಹಿಸಿ, ಅವನ್ನು ಬೆಳಕಿಗೆ ತಂದ ಕೀರ್ತಿ ಫ.ಗು.ಹಳಕಟ್ಟಿ ಅವರಿಗೆ ಸಲ್ಲುತ್ತದೆ. ಅವರಿಲ್ಲದೆ ಹೋಗಿದ್ದರೆ ಶರಣ ಸಂಸ್ಕೃತಿ, ಲಿಂಗಾಯತ ಧರ್ಮದ ಜತೆಗೆ ಬಸವಾದಿ ಶರಣರು ಕಳೆದು ಹೋಗುತ್ತಿದ್ದರು’ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಮುದ್ರಣಕಾರರ ಸಂಘ ಮತ್ತು ವಿಜಯಪುರದ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ ಜಂಟಿಯಾಗಿ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಫ.ಗು.ಹಳಕಟ್ಟಿ ಜನ್ಮದಿನ ಮತ್ತು ವಚನ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

‘ಧಾರವಾಡ ಸೀಮೆಯ ಹಳಕಟ್ಟಿ ಅವರು ವಿಜಯಪುರವನ್ನು ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡು, ಅಗಾಧ ಕೆಲಸ ಮಾಡಿದರು. ಅವರಿಂದಾಗಿ ನೂರಾರು ವಚನಕಾರರು ನಾಡಿಗೆ ಗೊತ್ತಾದರು. ಅದಲ್ಲದೆ ಅವರು ಮುದ್ರಣಾಲಯ ಸ್ಥಾಪಿಸಿದ ಸಾಹಸಿಗಳೂ ಆಗಿದ್ದರು’ ಎಂದು ಬಣ್ಣಿಸಿದರು.

‘ರಾಜ್ಯ ಸರ್ಕಾರವು ಬಸವಕಲ್ಯಾಣದಲ್ಲಿ ನೂತನ ಅನುಭವ ಮಂಟಪವನ್ನು ನಿರ್ಮಿಸುತ್ತಿದೆ. ಇಲ್ಲಿ ಏನೆಲ್ಲ ಆಗಬೇಕೆಂಬ ಬಗ್ಗೆ ಶರಣ ಸಾಹಿತ್ಯ ಪರಿಷತ್ತು ಸಲಹೆ ನೀಡಿದೆ. ಅವುಗಳನ್ನು ಸರ್ಕಾರದ ಮಟ್ಟದಲ್ಲಿ ಚರ್ಚಿಸಿ, ಜಾರಿಗೆ ತರಲಾಗುವುದು’ ಎಂದು ಭರವಸೆ ನೀಡಿದರು.

ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ, ‘ಹಳಕಟ್ಟಿ ಅವರಿಂದಾಗಿ ವಿಶ್ವಗುರು ಬಸವಣ್ಣ ಮೊದಲಾದವರು ಗೊತ್ತಾದರು. ವಚನ ಸಂಸ್ಕೃತಿ ಇಂದು ಹೆಮ್ಮರವಾಗಿ ಬೆಳೆಯಲು ಅವರೇ ಮೂಲ ಕಾರಣ. ವಚನ ಸಾಹಿತ್ಯವನ್ನು ಸಂಗ್ರಹಿಸುವ ಕೆಲಸವನ್ನು ಹಳಕಟ್ಟಿ ಮಾಡಿದರೆ, ಅದನ್ನು ಲೋಕಕ್ಕೆ ಪಸರಿಸುವ ಕೆಲಸವನ್ನು ಬಿಎಲ್‌ಡಿಇ ಸಂಸ್ಥೆ ಮಾಡುತ್ತಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ್, ಅಖಿಲ ಭಾರತ ಮುದ್ರಣಕಾರರ ಸಂಘದ ಅಧ್ಯಕ್ಷ ಸಿ.ಆರ್.ಜನಾರ್ದನ ಅವರು ಮಾತನಾಡಿದರು.

ಮಾಜಿ ಉಪ ಮೇಯರ್ ಪುಟ್ಟರಾಜು, ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ, ಮುದ್ರಣಕಾರರ ಸಂಘದ ಪದಾಧಿಕಾರಿಗಳಾದ ಅಶೋಕ್ ಕುಮಾರ್, ಸ್ವಾನ್ ಕೃಷ್ಣಮೂರ್ತಿ, ಮರಳವಾಡಿ ಶಿವಶಂಕರ್, ಮಲ್ಲಿಕಾರ್ಜುನ, ಪಾಲನೇತ್ರ, ರಾಜಶೇಖರ ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರ
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು
ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029
ದೂ.ಸಂ:080–29753350, ಇ–ಮೇಲ್-karbuildworkerswelfare@gmail.com
ಸಂ: KBOCWWB/E-Auction/FD2&FD(a)/CR-06/2026-27 ದಿನಾಂಕ:03.07.2026

ಇ– ಆಕ್ಷನ್ ಪ್ರಕಟಣೆ

ವಿಷಯ: ಮಂಡಳಿಯ ಹೆಚ್ಚುವರಿ ಸುಂಕದ ಮೊತ್ತವನ್ನು 1 ವರ್ಷದ ಅವಧಿಗೆ ನಿಶ್ಚಿತ ಠೇವಣಿ/ Non-Callable ಮತ್ತು Callable ನಲ್ಲಿ ತೊಡಗಿಸಲು ಇ–ಟೆಂಡರ್ ಮೂಲಕ ಬಡ್ಡಿ ದರಗಳನ್ನು ಆಹ್ವಾನಿಸುವ ಬಗ್ಗೆ.

ಮಂಡಳಿಯ ಉಳಿತಾಯ ಖಾತೆಯಲ್ಲಿ ಉಳಿದಿರುವ **ಮೊತ್ತ ರೂ.700.00 ಕೋಟಿ Non-Callable FD** ಮತ್ತು **ರೂ.101.00 ಕೋಟಿ Callable FD** ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿನಲ್ಲಿ ತೊಡಗಿಸಲು ಇ–ಆಕ್ಷನ್ ಬಿಡ್ಡಿಂಗ್ ವ್ಯವಸ್ಥೆ ಮಾದರಿಯಲ್ಲಿ **KPPP** ಪೋರ್ಟಲ್, ಕರ್ನಾಟಕ ಸರ್ಕಾರ ಇದರಲ್ಲಿ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳ ಪ್ರಾದೇಶಿಕ / ವಲಯ / ಮುಖ್ಯ ಕಛೇರಿಗಳಿಂದ ಸ್ಪರ್ಧಾತ್ಮಕ ಬಡ್ಡಿದರವನ್ನು ಆಹ್ವಾನಿಸಲಾಗಿದೆ.
ಸದರಿ ಇ–ಆಕ್ಷನ್ ಅನ್ನು ವಿದ್ಯುನ್ಮಾನ ಮೂಲಕವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **(https://kppp.karnataka.gov.in/)** ಸಲ್ಲಿಸುವುದು. ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 06.07.2026 ಸಂಜೆ 4.00 ರೊಳಗಾಗಿ** ಹೆಚ್ಚಿನ ವಿವರಗಳಿಗಾಗಿ ಮಂಡಳಿಯ ಉಪ ನಿಯಂತ್ರಕರು, ಫೋನ್: 080–29753350/54/56, ಫೋನ್ :9739441766 ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಜಂಟಿ ಕಾರ್ಯದರ್ಶಿ
ಕ.ಕ&ಇ.ನಿ.ಕಾ.ಕ.ಮಂಡಳಿ
ವಾಸಾಸಂಇ/ವಾಪ್ರ/ಶಿರಡಿ ಸಾಯಿ/1476/2026–27

ಭಾರತ ಸರಕಾರ
ವಿತ್ತ ಸಚಿವಾಲಯ, ಹಣಕಾಸು ಸೇವೆಗಳ ವಿಭಾಗ
ಸಾಲ ವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು -(ಡಿಆರ್‌ಟಿ-2)
4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು 560 001.

ಫಾರಂ ನಂ. 14 (ನೋಡಿ ರೆಗ್ಯುಲೇಶನ್ 33(2))
ಡಿಮ್ಯಾಂಡ್ ನೋಟೀಸು
ಸಾಲ ವಸೂಲಾತಿ ಮತ್ತು ದಿವಾಳಿತನ ಕಾಯಿದೆ 1993ರ ಸೆಕ್ಷನ್ 25ರಿಂದ 28ನ್ನು ಮತ್ತು ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲಿನ ನಿಯಮ 2ರ ಅನ್ವಯ ನೋಟೀಸ್
ಆರ್‌ಸಿ ನಂ. 548/2025 ಒ. ನಂ. 1367/2022
ಕರ್ನಾಟಕ ಬ್ಯಾಂಕ್ ಲಿಮಿಟೆಡ್ V/s ಶ್ರೀ ಗವಿನ್ ಅಡ್ರಿನ್ ಬ್ರೌನ್ ಮತ್ತು ಇನ್ನೊಬ್ಬರು

ಇವರಿಗೆ: (ಸಿಹೆಚ್‌ಬಿ) **ಕರ್ನಾಟಕ ಬ್ಯಾಂಕ್ ಲಿಮಿಟೆಡ್,** ಮಿನರ್ವ ಸರ್ಕಲ್ ಶಾಖೆ, ರಸ್ತೆ, ನಂ. 163, ರಾಜೇಶ್ವರಿ ಕಾಂಪ್ಲೆಕ್ಸ್, ಆರ್. ವಿ. ರಸ್ತೆ, ವಿವಿ ಪುರಂ, ಬೆಂಗಳೂರು, ಕರ್ನಾಟಕ .....ಸರ್ಟಿಫಿಕೇಟ್ ಹೋಲ್ಡರ್

Vs

(ಸಿಡಿ 1) **ಶ್ರೀ ಗವಿನ್ ಅಡ್ರಿನ್ ಬ್ರೌನ್,** ಬಿನ್ ಶ್ರೀ ಗೋರ್ಡನ್ ಬ್ರೌನ್ ,ವಾಸ : ಇ–403, MIMS ರೆಸಿಡೆನ್ಸಿ, ನೆಲ ಮಹಡಿ, ಜಕ್ಕೂರು ಲೇಔಟ್, ಜಕ್ಕೂರು ರೈಲ್ವೆ ಟ್ರಾಕ್ ಹತ್ತಿರ, ಬೆಂಗಳೂರು, ಕರ್ನಾಟಕ – 5460 064.
(ಸಿಡಿ 2) **ಶ್ರೀಮತಿ ಶ್ವೇತಾ ರಾಮ W/o.** ಬಿನ್ ಶ್ರೀ ಗೋರ್ಡನ್ ಬ್ರೌನ್ ,ವಾಸ : ಇ–403, MIMS ರೆಸಿಡೆನ್ಸಿ, ನೆಲ ಮಹಡಿ, ಜಕ್ಕೂರು ಲೇಔಟ್, ಜಕ್ಕೂರು ರೈಲ್ವೆ ಟ್ರಾಕ್ ಹತ್ತಿರ, ಬೆಂಗಳೂರು, ಕರ್ನಾಟಕ – 5460 064. .....ಸರ್ಟಿಫಿಕೇಟ್ ಡೆಟರ್ಸ್

ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ನ್ಯಾಯಾಧಿಕರಣ ಬೆಂಗಳೂರು (ಡಿಆರ್‌ಟಿ–2) ಇವರು, ಒ.ಎ. ನಂ./1367/2022 ಸರ್ಟಿಫಿಕೇಟ್‌ನಂತೆ **ರೂ.66,87,374.76** (ರೂಪಾಯಿ ಅರವತ್ತಾರು ಲಕ್ಷ ಎಂಬತ್ತೇಳು ಸಾವಿರದ ಮುನ್ನೂರ ಎಪ್ಪತ್ತ ನಾಲ್ಕು ಮತ್ತು ಪೈಸೆ ಎಪ್ಪತ್ತಾರು ಮಾತ್ರ) ಜೊತೆಗೆ ದಿನಾಂಕ 13.02.2022 ರಿಂದ ಪೂರ್ತಿ ಪಾವತಿಯ ದಿನಾಂಕದ ವರೆಗೆ ವಾರ್ಷಿಕ ಬಡ್ಡಿ ಶೇ. 10 % , ಮಾಸಿಕ ಸರಳ ಬಡ್ಡಿಯನ್ನು ಮತ್ತು ವೆಚ್ಚ **ರೂ.69,000/–** (ರೂಪಾಯಿ ಅರವತ್ತೊಂಬತ್ತು ಸಾವಿರ ಮಾತ್ರ) ಸರ್ಟಿಫಿಕೇಟ್ ಡೆಟರ್ಸ್ ರವರಿಂದ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ/ಪೂರ್ತಿಯಾಗಿ ಬಾಕಿ ಇರುತ್ತದೆ. (2) ನೀವು ಸದರಿ ಮೊತ್ತವನ್ನು ಈ ನೋಟಿಸನ್ನು ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ರಿಕವರಿ ಆಫ್ ಡೆಟ್ಸ್ ಡ್ಯೂ ಬ್ಯಾಂಕ್ಸ್ ಅಂಡ್ ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್ ಆಕ್ಟ್ 1993ರ ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು. 3. ಮುಂದಿನ ವಿಚಾರಣೆಯ ದಿನಾಂಕ ಅಥವಾ ಮೊದಲು ನಿಮ್ಮ ಸ್ವತ್ತುಗಳ ವಿವರಗಳನ್ನು ಅಫಿಡವಿಟ್‌ನಲ್ಲಿ ಘೋಷಿಸಲು ನಿಮಗೆ ಈ ಮೂಲಕ ಆದೇಶಿಸಲಾಗಿದೆ. 4. ನಿಮಗೆ ಈ ಮೂಲಕ ಆದೇಶಿಸುವುದೇನೆಂದರೆ ದಿನಾಂಕ 18.11.2026ರ ಬೆಳಿಗ್ಗೆ 10.30 ಗಂಟೆಗೆ ಮುಂದಿನ ಪ್ರಕ್ರಿಯೆಗಳಿಗಾಗಿ ಕೆಳಸಹಿದಾರರ ಮುಂದೆ ಹಾಜರಾಗಬೇಕು. 5. ಮೇಲೆ ಹೇಳಿದ ಮೊತ್ತಕ್ಕೆ ಹೆಚ್ಚುವರಿಯಾಗಿ ನೀವು ಪಾವತಿಸಬೇಕಾಗುತ್ತದೆ. (ಎ)ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನು ಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ (ಬಿ) ಈ ನೋಟೀಸನ್ನು ಜಾರಿ ಮಾಡಲು ಮತ್ತು ವಾರಂಟ್‌ಗಳಿಗೆ ಮತ್ತು ಇತರ ಪ್ರಕ್ರಿಯೆಗಳಿಗೆ ಮತ್ತು ಇತರ ಎಲ್ಲಾ ನಡಾವಳಿಗಳಿಗೆ ಸಾಲ ವಸೂಲಾತಿ ಮಾಡುವಲ್ಲಿ ತಗಲುವ ಎಲ್ಲಾ ಖರ್ಚು ಮತ್ತು ವೆಚ್ಚಗಳು.
ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ 05.03.2026ರಂದು ಕೊಡಲ್ಪಟ್ಟಿದೆ.

ಸಹಿ/–ವಸೂಲಾತಿ ಅಧಿಕಾರಿ
ಸಾಲ ವಸೂಲಾತಿ ನ್ಯಾಯಾಧಿಕರಣ (ಡಿಆರ್‌ಟಿ–2)

ಗಮನಿಸಿ : ಆರ್ಥಿಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಬಾಕಿ ಇರುವ ಸಾಲಗಳ ವಸೂಲಾತಿ ಕಾಯ್ದೆ 1993ರ ಜೊತೆಯಲ್ಲಿ ಓದಿಕೊಂಡಂತೆ ಆದಾಯ ತೆರಿಗೆ ಕಾಯ್ದೆ 1961ರ ಎರಡನೇ ಷೆಡ್ಯೂಲಿನ ನಿಯಮ 16ರತ್ತ ಗಮನ ಸೆಳೆಯಲಾಗಿದ್ದು, ಅದು ಈ ಕೆಳಗಿನಂತಿದೆ : 16 (1)ನಿಯಮ 2 ರ ಅಡಿಯಲ್ಲಿ ಸುಸ್ತಿದಾರರೊಬ್ಬರಿಗೆ ನೋಟೀಸನ್ನು ನೀಡಿರುವಾಗ, ಸುಸ್ತಿದಾರರೇ ಆಗಲಿ ಅವರ ಆಸಕ್ತ ಪ್ರತಿನಿಧಿಯೇ ಆಗಲಿ, ಸಾಲ ವಸೂಲಾತಿ ಅಧಿಕಾರಿಯ ಅನುಮತಿ ಪಡೆದುಕೊಂಡ ಹೊರತು, ತಮಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತೆ ಇಡುವುದು/ಮಾರುವುದು/ಬಾಡಿಗೆಗೆ ಕೊಡುವುದು ಅಥವಾ ಇನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲ ; ಹಾಗೆಯೇ, ಅಂಥ ಆಸ್ತಿಯ ಸಂಬಂಧವಾಗಿ ಹಣವನ್ನು ಸಂದಾಯ ಮಾಡುವುದಕ್ಕೆ ವಿರುದ್ಧವಾಗಿ ಯಾವುದೇ ಸಿವಿಲ್ ಕೋರ್ಟು ಯಾವುದೇ ಕ್ರಮವನ್ನು ಆದೇಶಿಸುವಂತಿಲ್ಲ. 2) ಈ ಷೆಡ್ಯೂಲಿನ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವಾಗ, ಮುಟ್ಟುಗೋಲು ಹಾಕಲ್ಪಟ್ಟ ಆಸ್ತಿಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಭಾಗದ ಖಾಸಗಿ ವರ್ಗಾವಣೆ ಅಥವಾ ನೀಡಿಕೆಯಾಗಲಿ, ಸದರಿ ಮುಟ್ಟುಗೋಲು ಹಾಕುವಿಕೆಗೆ ವಿರುದ್ಧವಾಗಿ ಸುಸ್ತಿದಾರರಿಗೆ ಯಾವುದೇ ಸಾಲದ ಲಾಭಾಂಶ ಅಥವಾ ಇತರ ಹಣಗಳ ಪಾವತಿಯಾಗಲಿ, ಮುಟ್ಟುಗೋಲಿನ ಅಡಿಯಲ್ಲಿ ಒತ್ತಾಯಿಸಬಹುದಾದ ಎಲ್ಲ ಕ್ಲೇಮುಗಳ ವಿರುದ್ಧವಾಗಿ ಅಸಿಂಧೂವಾಗುತ್ತವೆ. 3) ನೀವು ಕಳೆದ 5 ವರ್ಷಗಳ ಆದಾಯ ತೆರಿಗೆ ಪಾವತಿಯ ದಾಖಲೆಗಳೊಂದಿಗೆ ನಿಮ್ಮ ಸ್ಥಿರ ಮತ್ತು ಚರಾಸ್ತಿಗಳ ವಿವರಗಳನ್ನು ಈ ನ್ಯಾಯಾಧಿಕರಣಕ್ಕೆ ಸಲ್ಲಿಸಬೇಕಾಗಿದೆ.

CITATION
IN THE COURT OF THE PRL JUNIOUR CIVIL JUDGE AT KALABURAGI
OS. NO. 181/2019

MALEESHAPPA S/O NINGAPPA HARNAL Age: 66 Years. Occ: Business R/o H. No. 6-761, Kiranan Bazar, Kalaburagi now at Kokatpalli Hyderabad. **...PLAINTIFF**

V/s

Darshan Kumar S/o Bhagawandas Nayyer Age: 76 Yrs. Occ: Real Estate Business. R/o A RS Villa, Sr Larout, Vimanpur, North Bangalore Banglore-560017. **...DEFENDANT**

To,
D -1 (a.) Rakesh S/o Darshan Kumar. Age: Major
D-1 (b.) Mukesh S/o Darshan Kumar. Age: Major

Both are the R/o Sri Sai Siddinilay Plot No. 181 Vinayak Nagar Old Air-port Road Murgesh Palya Bengluru 560017.Where the above named Plaintiff instituted the above suit against the defendant.

Notice is given to you to appear in court either in person or through counsel duly instructed or through some one authorized by law, to act for you in the above suit at 11:00 Am in the 6-8-2026 forenoon in case you intend to contest the suit. If you fail to appear the same will be dealt with heard and decided in your absence.
Issued under my hand and the seal of this court on 24-06-2026

// By the order of the court //

Sd/- Chief Ministerial Office
Prl. Civil Judge & JMFC Court, Kalaburagi

ಭಾರತ ಸರ್ಕಾರ
ಸಾಲ ವಸೂಲಾತಿ ನ್ಯಾಯಾಧಿಕರಣ–1, ಬೆಂಗಳೂರು
4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು – 560 001.

ಡಿಆರ್‌ಸಿ ನಂ. 14160
ಫಾರಂ ನಂ. 14 (ರೆಗ್ಯುಲೇಷನ್ 33(2))

ಕರ್ನಾಟಕ ಬ್ಯಾಂಕ್ ಲಿ., ಬಾಣಸವಾಡಿ ಶಾಖೆ, ನಂ. 963, 5ಎ–ಸಿ, ಬಾಣಸವಾಡಿ, ಹೊರ ವರ್ತುಲ ರಸ್ತೆ, ಹೆಚ್‌ಆರ್‌ಬಿಆರ್ ಲೇಔಟ್, ಬ್ಲಾಕ್ –1, ಕಲ್ಯಾಣನಗರ, ಬೆಂಗಳೂರು – 560 043.
... ಸರ್ಟಿಫಿಕೇಟ್ ಹೋಲ್ಡರ್

ವಿರುದ್ಧ
ಶ್ರೀ ರಯಾನ್ ಜೆ. ಸಿ. ಮತ್ತು ಇತರರು ... ಪ್ರತಿವಾದಿಗಳು/ಸರ್ಟಿಫಿಕೇಟ್ ಡೆಟರ್ಸ್

ಇವರಿಗೆ : **ಡಿಮ್ಯಾಂಡ್ ನೋಟೀಸು**

1. **ಶ್ರೀ ರಯಾನ್ ಜೆ. ಸಿ ,** ಬಿನ್ ಶ್ರೀನೆಡ್ ಜೊಸೆಫ್ ಕೋಕ್ರಾನ್, ನಂ. 27, ಪುಲಿಯಾರ್ ಕೊಯಿಲ್ ಸ್ಟ್ರೀಟ್, ಆಫ್ ಕ್ಯಾಸಲ್ ಸ್ಟ್ರೀಟ್, ಅಶೋಕ್ ನಗರ, ಎಂಪಾಯರ್ ಹೊಟೆಲ್ ಹತ್ತಿರ, ಬೆಂಗಳೂರು – 560 043.
ಶ್ರೀ ನೆಡ್ ಜೊಸೆಫ್‌ಕೊಕ್ರಾನ್ ಬಿನ್ ಎ. ಜೆ. ಕೊಕ್ರಾನ್, ನಂ. 27, ಪುಲಿಯಾರ್ ಕೊಯಿಲ್ ಸ್ಟ್ರೀಟ್, ಆಫ್ ಕ್ಯಾಸಲ್ ಸ್ಟ್ರೀಟ್, ಅಶೋಕ್ ನಗರ, ಎಂಪಾಯರ್ ಹೊಟೆಲ್ ಹತ್ತಿರ, ಬೆಂಗಳೂರು – 560 043.
ಶ್ರೀ ಮಧುಸೂದನ್ ಬಿನ್ ಚಕ್ರಪಾಣಿ, ನಂ. 1 ಮತ್ತು 2 ,ಎಸ್‌ಎಲ್‌ವಿ ರೆಸಿಡೆನ್ಸಿ, ಮನೆ ನಂ. 4, ಸಪ್ತಗಿರಿ ಲೇಔಟ್, ಮುನ್ನೆಕೊಳಲ, ಮಟ್ಟಹಳ್ಳಿ, ಬೆಂಗಳೂರು – 560 043. .. ಪ್ರತಿವಾದಿಗಳು

ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ಪ್ರಾಧಿಕಾರ, ಬೆಂಗಳೂರು ಇವರು **ಒ.ಎ. ನಂ. 564/2017**ರಲ್ಲಿ ಜಾರಿ ಮಾಡಿದ ರಿಕವರಿ ಸರ್ಟಿಫಿಕೇಟ್‌ನಂತೆ **ರೂ.45,48,156/-** (ರೂಪಾಯಿ ನಲವತ್ತೈದು ಲಕ್ಷದ ನಲವತ್ತೆಂಟು ಸಾವಿರದ ಒಂದು ನೂರ ಐವತ್ತಾರು ಮಾತ್ರ) ಜೊತೆಗೆ ಒ.ಎ ಜಾರಿ ಮಾಡಿದ ದಿನಾಂಕದಿಂದ ಪೂರ್ತಿಪಾವತಿಯ ದಿನಾಂಕದವರೆಗಿನ ರಿಕವರಿ ಸರ್ಟಿಫಿಕೇಟ್‌ನಲ್ಲಿನ ಮೊತ್ತ, ಬಡ್ಡಿ ಮತ್ತು ಇತರ ವೆಚ್ಚ ನಿಮ್ಮಿಂದ ಬಾಕಿ ಇರುತ್ತದೆ.
ನೀವು ಸದರಿ ಮೊತ್ತವನ್ನು ಈ ಪ್ರಕಟಣೆ ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು.
ಮೇಲೆ ಹೇಳಲ್ಪಟ್ಟ ಮೊತ್ತವಲ್ಲದೆ ನೀವು ಹೆಚ್ಚುವರಿಯಾಗಿ ಮುಂದಿನದಕ್ಕೂ ಬಾಧ್ಯರಾಗುತ್ತೀರಿ :
ಎ. ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನುಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ, ಬಿ. ಈ ನೋಟೀಸನ್ನು ಜಾರಿ ಮಾಡಲು ಮತ್ತು ಇತರ ಪ್ರಕ್ರಿಯೆ ಹಾಗೂ ಸಾಲವನ್ನು ವಸೂಲಿ ಮಾಡುವಲ್ಲಿ ತಗಲುವ ಎಲ್ಲ ಖರ್ಚು ಮತ್ತು ವೆಚ್ಚಗಳು.
ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ **05.10.2018** ರಂದು ಕೊಡಲ್ಪಟ್ಟಿದೆ.

ಸಹಿ/- ವಸೂಲಾತಿ ಅಧಿಕಾರಿ–1,
ಸಾಲ ವಸೂಲಾತಿ ನ್ಯಾಯಾಧಿಕರಣ –1, ಬೆಂಗಳೂರು

ಗಮನಿಸಿ : ಆರ್ಥಿಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಬಾಕಿ ಇರುವ ಸಾಲಗಳ ವಸೂಲಾತಿ ಕಾಯ್ದೆ 1993ರ ಜೊತೆಯಲ್ಲಿ ಓದಿಕೊಂಡಂತೆ ಆದಾಯ ತೆರಿಗೆ ಕಾಯ್ದೆ 1961ರ ಎರಡನೇ ಷೆಡ್ಯೂಲಿನ ನಿಯಮ 16ರತ್ತ ಗಮನ ಸೆಳೆಯಲಾಗಿದ್ದು, ಅದು ಈ ಕೆಳಗಿನಂತಿದೆ: 16 (1)ನಿಯಮ 2 ರ ಅಡಿಯಲ್ಲಿ ಸುಸ್ತಿದಾರರೊಬ್ಬರಿಗೆ ನೋಟೀಸನ್ನು ನೀಡಿರುವಾಗ, ಸುಸ್ತಿದಾರರೇ ಆಗಲಿ ಅವರ ಆಸಕ್ತ ಪ್ರತಿನಿಧಿಯೇ ಆಗಲಿ, ಸಾಲ ವಸೂಲಾತಿ ಅಧಿಕಾರಿಯ ಅನುಮತಿ ಪಡೆದುಕೊಂಡ ಹೊರತು, ತಮಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತೆ ಇಡುವುದು/ಮಾರುವುದು/ಬಾಡಿಗೆಗೆ ಕೊಡುವುದು ಅಥವಾ ಇನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲ ; ಹಾಗೆಯೇ, ಅಂಥ ಆಸ್ತಿಯ ಸಂಬಂಧವಾಗಿ ಹಣವನ್ನು ಸಂದಾಯ ಮಾಡುವುದಕ್ಕೆ ವಿರುದ್ಧವಾಗಿ ಯಾವುದೇ ಸಿವಿಲ್ ಕೋರ್ಟು ಯಾವುದೇ ಕ್ರಮವನ್ನು ಆದೇಶಿಸುವಂತಿಲ್ಲ. 2) ಈ ಷೆಡ್ಯೂಲಿನ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವಾಗ, ಮುಟ್ಟುಗೋಲು ಹಾಕಲ್ಪಟ್ಟ ಆಸ್ತಿಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಭಾಗದ ಖಾಸಗಿ ವರ್ಗಾವಣೆ ಅಥವಾ ನೀಡಿಕೆಯಾಗಲಿ, ಸದರಿ ಮುಟ್ಟುಗೋಲು ಹಾಕುವಿಕೆಗೆ ವಿರುದ್ಧವಾಗಿ ಸುಸ್ತಿದಾರರಿಗೆ ಯಾವುದೇ ಸಾಲದ ಲಾಭಾಂಶ ಅಥವಾ ಇತರ ಹಣಗಳ ಪಾವತಿಯಾಗಲಿ, ಮುಟ್ಟುಗೋಲಿನ ಅಡಿಯಲ್ಲಿ ಒತ್ತಾಯಿಸಬಹುದಾದ ಎಲ್ಲ ಕ್ಲೇಮುಗಳ ವಿರುದ್ಧವಾಗಿ ಅಸಿಂಧೂವಾಗುತ್ತವೆ.

ಇಲ್ಲಿದೆ ನೋಡಿ ಕಸ...

DH DECCAN HERALD
ಪ್ರಜಾವಾಣಿ
ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ
96060 38256
dhpvcitizenconnect@printersmysore.co.in

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಸಂಪರ್ಕ
- ಕರೀಗೌಡ-ಸಿಇಒ- 77605 04651
- ರಮಾಮಣಿ-ಸಿಒಒ- 94481 97256
- ರಾಜೇಶ್-ಸಿಜಿಎಂ- 94806 84046
- ರಾಘವೇಂದ್ರ ಪ್ರಸಾದ್ -ಸಿಜಿಎಂ-91102 89696

ನಗರದಲ್ಲಿ ದಿನವೂ ಕಸ ವಿಲೇವಾರಿ ಆಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಹೇಳುತ್ತಿದ್ದರೂ, ಮುಖ್ಯರಸ್ತೆ, ವಾರ್ಡ್ ರಸ್ತೆಗಳಲ್ಲಿ ಕಸದ ರಾಶಿ ನಿತ್ಯವೂ ಬಿದ್ದಿರುತ್ತದೆ. ನಿಮ್ಮ ಪ್ರದೇಶಗಳಲ್ಲಿ ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ವಿವರಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಹಾಗೂ ಪ್ರಜಾವಾಣಿಗೆ ಕಳುಹಿಸಿಕೊಡಿ. ಅಲ್ಲದೆ ಕಸ ತೆರವು ಮಾಡಿದ ಮೇಲೆ ಅದರ ಚಿತ್ರ ಮಾಹಿತಿಯನ್ನು 96060 38256 ವಾಟ್ಸ್‌ಆ್ಯಪ್ ನಂಬರ್‌ಗೆ ಕಳುಹಿಸಿ. ಅದನ್ನೂ ಪ್ರಕಟಿಸಲಾಗುತ್ತದೆ.

ಮಹಾಲಕ್ಷ್ಮಿ ಬಡಾವಣೆ 4ನೇ ಮುಖ್ಯರಸ್ತೆಯಲ್ಲಿ ಹಲವು ದಿನಗಳಿಂದ ಮರದ ಕೊಂಬೆ ಹಾಗೂ ಕಟ್ಟಡ ತ್ಯಾಜ್ಯ ಬಿದ್ದಿದೆ – ಸದಾಶಿವ


ಜೆ.ಪಿ. ನಗರ 2ನೇ ಘಟ್ಟ 17ನೇ ಮುಖ್ಯರಸ್ತೆಯಲ್ಲಿರುವ ತ್ಯಾಜ್ಯ – ರವೀಂದ್ರ ಡಿ

ಟಿನ್ ಫ್ಯಾಕ್ಟರಿ ಹಿಂದೆ ಉದಯನಗರದ ವಿನಾಯಕ ದೇವಸ್ಥಾನ ಅಡ್ಡರಸ್ತೆಯಲ್ಲಿರುವ ತ್ಯಾಜ್ಯ


ಹಲಸೂರಿನ ಜೋಗುಪಾಳ್ಯದ ಜೆ. ನಂದನವನಂ ಸ್ಟ್ರೀಟ್‌ನ 4ನೇ ನಂಬರ್ ನಿವೇಶನದಲ್ಲಿರುವ ಕಸ


ಸುಲ್ತಾನ್‌ಪಾಳ್ಯ ಬಳಿಯ ಆತ್ಮಾನಂದ ಪಾಳ್ಯದ ಜೆ.ಎಂ. ಇನ್‌ಫೈನೈಟ್ ಸಿಲ್ವರ್ ಕಾರ್ನರ್ ಅಪಾರ್ಟ್‌ಮೆಂಟ್ ಬಳಿ ಇರುವ ಕಸ – ಬಾಲಾ

ಆಲೂರು ತಾಲ್ಲೂಕು ಕೆರೆಹಳ್ಳಿ ಗ್ರಾಮದ ನಿವಾಸದಲ್ಲಿದ್ದ ಪುನೀತ್ ಕೆರೆಹಳ್ಳಿ ಅವರನ್ನು ಬೆಂಗಳೂರು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿ ಕರೆದೊಯ್ದರು

ಮೌಲ್ವಿಗಳ ವಿರುದ್ಧ ನಿಂದನೆ: ಪುನೀತ್ ಕೆರೆಹಳ್ಳಿ ಬಂಧನ

ಪ್ರಜಾವಾಣಿ ವಾರ್ತೆ

ಆಲೂರು (ಹಾಸನ): ಮುಸ್ಲಿಂ ಧರ್ಮ ಗುರುಗಳಿಗೆ ಅವಮಾನ ಮಾಡಿದ್ದಾರೆ ಎಂಬ ದೂರಿನ ಮೇಲೆ ರಾಷ್ಟ್ರ ರಕ್ಷಣಾ ಪಡೆಯ ಪುನೀತ್ ಕೆರೆಹಳ್ಳಿ ಅವರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಸ್ವಗ್ರಾಮ ಕೆರೆಹಳ್ಳಿಯಲ್ಲಿದ್ದ ಅವರನ್ನು ಬೆಂಗಳೂರಿನ ಕುಮಾರಸ್ವಾಮಿ ಲೇಔಟ್ ಪೊಲೀಸರು ಶುಕ್ರವಾರ ಬಂಧಿಸಿ, ಕರೆದೊಯ್ದರು. ಮೌಲ್ವಿಗಳ ವಿರುದ್ಧ ನಿಂದನಾರ್ಹ ಹೇಳಿಕೆ ನೀಡಿದ್ದಾರೆ ಎಂದು ಅಬ್ದುಲ್ ರಜಾಕ್ ಎಂಬುವವರು ಕೆರೆಹಳ್ಳಿ ವಿರುದ್ಧ ದೂರು ನೀಡಿದ್ದರು. ದೂರಿನ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ. ಪ್ರಕರಣದ ತನಿಖೆಯನ್ನು ಮುಂದುವರಿಸಿದ್ದು ದೂರಿನಲ್ಲಿ ಉಲ್ಲೇಖಿಸಿರುವ ಆರೋಪಗಳ ಕುರಿತು ಕಾನೂನು ಪ್ರಕ್ರಿಯೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಪುನೀತ್, 'ನನಗೆ ಜೀವ ಬೆದರಿಕೆ ವಿಚಾರವಾಗಿ ನಾನು ಅಬ್ದುಲ್ ರಜಾಕ್ ವಿರುದ್ಧ ದೂರು ನೀಡಿದ್ದೇನೆ. ಅವರನ್ನು ಬಂಧಿಸದೆ ದೂರುದಾರನಾದ ನನ್ನನ್ನೇ ಬಂಧಿಸಲಾಗಿದೆ. ಇದು ಕಾಂಗ್ರೆಸ್ ಸರ್ಕಾರದ ಅಧಿಕಾರ ದುರ್ಬಳಕೆ. ನನ್ನ ವಿರುದ್ಧ ಪೂರ್ವನಿಯೋಜಿತ ಷಡ್ಯಂತ್ರ ನಡೆಸಲಾಗಿದೆ' ಎಂದು ಆರೋಪಿಸಿದರು. ಪುನೀತ್ ಅವರನ್ನು ಪೊಲೀಸರು ಬಂಧಿಸಿ ಕರೆದೊಯ್ಯುವ ವೇಳೆ ಅವರ ತಾಯಿ ಕಣ್ಣೀರಿಟ್ಟರು.

ಅಕ್ರಮದ ಸೂತ್ರಧಾರಿ ಸಿ.ಎಂ: ಎಚ್‌ಡಿಕೆ

ಯಶವಂತಪುರ, ನಾಯಂಡಹಳ್ಳಿ, ಗುಟ್ಟಹಳ್ಳಿಯಲ್ಲಿ ಸಾಮೂಹಿಕ ಎಸ್ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯ ಅಕ್ರಮದ ಸೂತ್ರಧಾರಿಯೇ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, 'ಬೆಂಗಳೂರು ನಗರ, ರಾಮನಗರ ಜಿಲ್ಲಾಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಯಶವಂತಪುರ ವಿಧಾನಸಭೆ ಕ್ಷೇತ್ರದಲ್ಲಿ ನೇರವಾಗಿ ಕ್ಷೇತ್ರದ ಶಾಸಕರ ಸೂಚನೆಯ ಮೇರೆಗೆ ಅಕ್ರಮವಾಗಿ ಎಸ್‌ಐಆರ್ ಪ್ರಕ್ರಿಯೆ ನಡೆಯುತ್ತಿದೆ. ಕಾಂಗ್ರೆಸ್ ಕಾರ್ಯಕರ್ತರು ಮತ್ತು ಪರಿಷ್ಕರಣೆ ಸಿಬ್ಬಂದಿ ಪರಸ್ಪರ ಶಾಮೀಲಾಗಿ ಪರಿಷ್ಕರಣೆಯನ್ನು ಸಂಪೂರ್ಣವಾಗಿ ತಿರುಚುತ್ತಿದ್ದಾರೆ ಎಂದು ತಿಳಿಸಿದರು.

ಅಧಿಕಾರಿಗಳನ್ನು ಈ ಸರ್ಕಾರವು ಗುಲಾಮರಂತೆ ನಡೆಸಿಕೊಳ್ಳುತ್ತಿದೆ. ಅವರನ್ನು ಹೆದರಿಸಿ, ಬೆದರಿಸಿ ತನಗೆ ಬೇಕಾದ ಹಾಗೆ ಎಸ್‌ಐಆರ್ ಮಾಡಿಸಿ ಕೊಳ್ಳುತ್ತಿದೆ. ರಾಜ್ಯದ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಕೇಂದ್ರ ಚುನಾವಣಾ ಆಯೋಗ ಕೂಡಲೇ ಮಧ್ಯಪ್ರವೇಶಿಸಬೇಕು. ಈವರೆಗೆ ಆಗಿರುವ ಪರಿಷ್ಕರಣೆಯನ್ನು ಕೈಬಿಡಬೇಕು ಎಂದು ಆಗ್ರಹಿಸಿದರು.

'ಯಶವಂತಪುರ ಕ್ಷೇತ್ರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯನ್ನು ನಿಯಮಗಳಿಗೆ ವಿರುದ್ಧವಾಗಿ ನಡೆಸುತ್ತಿದ್ದ ಅಧಿಕಾರಿಯನ್ನು ನಮ್ಮ ಕಾರ್ಯಕರ್ತರು 'ರೆಡ್ ಹ್ಯಾಂಡ್' ಆಗಿ ಹಿಡಿದಿದ್ದಾರೆ. ಗುರುವಾರ ರಾಮನಗರದಲ್ಲಿ ಅಕ್ರಮವಾಗಿತ್ತು' ಎಂದು ಹೇಳಿದರು.

'ಮತದಾರರ ಹುಂಡಿ ಕಳವು': 'ಮುಖ್ಯಮಂತ್ರಿ ಅವರು ಮಹಾನ್ ಎನ್ನುವಂತೆ ಭಾಷಣ ಬಿಗಿಯುತ್ತಾರೆ. ಪಾಕಿಸ್ತಾನದ ಬಗ್ಗೆ ಮಾತನಾಡುತ್ತಾರೆ. ಹುಂಡಿ ಕಳವಿನ ಬಗ್ಗೆ ಮಾತಾಡುತ್ತಾರೆ. ಆದರೆ ಇವರೇ ಮಾಡುತ್ತಿರುವ ಮತದಾರರ ಪಟ್ಟಿಯ ಕಳವಿನ ಬಗ್ಗೆ ಜಾಣಮೌನ ವಹಿಸುತ್ತಾರೆ. ನೇರವಾಗಿ ಮತದಾರರ ಹುಂಡಿಯನ್ನೇ ಕಳವು ಮಾಡಲು ಹೊರಟಿದ್ದಾರೆ' ಎಂದು ಕಳವಳ ವ್ಯಕ್ತಪಡಿಸಿದರು.

ಜಿಬಿಎ: ಹೆಚ್ಚುವರಿ ಚುನಾವಣಾಧಿಕಾರಿ ವ್ಯಾಪ್ತಿ		
ವ್ಯಾಪ್ತಿ	ವಿತರಿಸಲಾದ ನಮೂನೆ	ಶೇಕಡ
ಕೇಂದ್ರ	3,22,820	17.08
ಉತ್ತರ	3,23,235	13.86
ದಕ್ಷಿಣ	3,06,060	14.27
ಬೆಂ.ನಗರ	6,16,630	15.34
ಒಟ್ಟು	15,68,765	15.10

ಗುಂಪು ಗುಂಪಾಗಿ ಬರದಿರಿ: ಮನವಿ

ಬಿಎಲ್‌ಒಗಳು ಎಸ್‌ಐಆರ್ ಪ್ರಕ್ರಿಯೆ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ ನಾಗರಿಕರು ಗುಂಪು ಗುಂಪಾಗಿ ಗಣತಿ ನಮೂನೆ ಅರ್ಜಿಗಳನ್ನು ಪಡೆಯಲು ಬರುತ್ತಿರುವುದರಿಂದ ಗೊಂದಲ ಮತ್ತು ತೊಂದರೆ ಉಂಟಾಗುತ್ತಿದೆ. ಸಾರ್ವಜನಿಕರು ಯಾರೂ ಬಿಎಲ್‌ಒಗಳ ಹಿಂದೆ ಹೋಗಿ ಅರ್ಜಿಗಳನ್ನು ಪಡೆಯದೇ, ಅವರು ಮನೆಗೆ ಬಂದಾಗ ಗಣತಿ ನಮೂನೆಗಳನ್ನು ಪಡೆದುಕೊಳ್ಳಬೇಕು. ಅಗತ್ಯ ಮಾಹಿತಿಯನ್ನು ಭರ್ತಿ ಮಾಡಿ ಭಾವಚಿತ್ರ ಅಂಟಿಸಿ ಸಹಿ ಮಾಡಿ ಅದನ್ನು ಮರಳಿ ಬಿಎಲ್‌ಒಗಳಿಗೆ ನೀಡಬೇಕು ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಆಯುಕ್ತ ಜಗದೀಶ್ ಜಿ. ಮನವಿ ಮಾಡಿದ್ದಾರೆ.

ಗುಟ್ಟಹಳ್ಳಿ ಮಸೀದಿ ಬಳಿ ನಡೆದ ಎಸ್‌ಐಆರ್ ಪ್ರಕ್ರಿಯೆ

ಚುನಾವಣಾ ಆಯೋಗ ಮಧ್ಯಪ್ರವೇಶ ಮಾಡಲಿ: ಶೋಭಾ

ಕೇಂದ್ರ ಚುನಾವಣಾ ಆಯೋಗ ರಾಜ್ಯದಾದ್ಯಂತ ಎಸ್‌ಐಆರ್ ನಡೆಸುತ್ತಿದೆ. ಇದರ ನಡುವೆ ಜಿಬಿಎ ವಾರ್ಡ್‌ಗಳಲ್ಲಿ ರಾಜ್ಯ ಚುನಾವಣಾ ಆಯೋಗ ಮತ್ತೊಂದು ಎಸ್‌ಐಆರ್ ನಡೆಸುತ್ತಿದೆ. ಇದು ಮತದಾರರನ್ನು ಗೊಂದಲಕ್ಕೀಡು ಮಾಡಿದೆ. ಕೇಂದ್ರ ಚುನಾವಣಾ ಆಯೋಗ ತಕ್ಷಣ ಮಧ್ಯಪ್ರವೇಶ ಮಾಡಬೇಕು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆಗ್ರಹಿಸಿದರು.

ಜಿಬಿಎ ವ್ಯಾಪ್ತಿಯಲ್ಲಿನ 27 ವಾರ್ಡ್‌ಗಳಲ್ಲಿ ಕರ್ನಾಟಕ ರಾಜ್ಯ ಚುನಾವಣಾ ಆಯೋಗ ನಡೆಸುತ್ತಿರುವ ಸಮಾನಾಂತರ ಎಸ್‌ಐಆರ್ ಪ್ರಕ್ರಿಯೆಯನ್ನು ತಕ್ಷಣ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ರಾಹುಲ್ ಗಾಂಧಿ ಅವರನ್ನು ತೃಪ್ತಿಪಡಿಸಲು ರಾಜ್ಯದ ಕಾಂಗ್ರೆಸ್ ಸರ್ಕಾರ ಇಂತಹ ಕೆಲಸ ಮಾಡುತ್ತಿದೆ. ಕರ್ನಾಟಕದಲ್ಲಿ ಅಕ್ರಮ ಮತದಾರರ ಪಟ್ಟಿಯನ್ನು ತಯಾರು ಮಾಡಲು ಸರ್ಕಾರ ಹೊರಟಿದೆ. ಮುಖ್ಯಮಂತ್ರಿಯ ಮೂಗಿನ ನೇರದಲ್ಲಿ ಅಧಿಕಾರಿಗಳು ಅಕ್ರಮವಾಗಿ ಮತದಾರರ ಹೆಸರು ಸೇರಿಸುತ್ತಿದ್ದಾರೆ. ಹಲವಾರು ವರ್ಷಗಳಿಂದ ಅಲ್ಪಸಂಖ್ಯಾತ ನಾಯಕರು ಅಕ್ರಮವಾಗಿ ಬಾಂಗ್ಲಾದೇಶಿಯರನ್ನು ರಾಜ್ಯಕ್ಕೆ ಕರೆತಂದಿದ್ದಾರೆ. ಬಾಂಗ್ಲಾದೇಶಿಯರನ್ನು ಕರ್ನಾಟಕದ ವಾಸಿಗಳಾಗಿ ಮಾಡಲು ಮತ್ತು ಮತದಾರರನ್ನಾಗಿ ಮಾಡಲು ಷಡ್ಯಂತ್ರ ರೂಪಿಸಿದ್ದಾರೆ ಎಂದು ಆರೋಪಿಸಿದರು.

ಯಶವಂತಪುರದಲ್ಲಿ ಆರೋಪವೇನು?: 'ಯಶವಂತಪುರ ವಿಧಾನಸಭಾ ಕ್ಷೇತ್ರದ ತಾವರೆಕೆರೆಯಲ್ಲಿ ಬಿಎಲ್‌ಒ ಮನೆ ಮನೆಗೆ ಭೇಟಿ ನೀಡದೇ ಒಂದು ಜಾಗದಲ್ಲಿ ಕುಳಿತು ನಮೂನೆ ವಿತರಣೆ ಮಾಡುತ್ತಿದ್ದಾರೆ. ಆ ಮೇಲೆ ಅಲ್ಲಿಯೇ ಸಮೀಕ್ಷೆ ಸಂಪೂರ್ಣ ಆಗಿದೆ ಎಂದು ಸ್ಟಿಕ್ಕರ್ ನೀಡುತ್ತಿದ್ದಾರೆ. ಮತದಾರರ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಯಶವಂತಪುರ ಕ್ಷೇತ್ರದ ಶಾಸಕರ ಫೋಟೊ ಇರುವ ಪುಸ್ತಕ ಬಳಸುತ್ತಿದ್ದಾರೆ' ಎಂದು ಜೆಡಿಎಸ್ ಕಾರ್ಯಕರ್ತರು ಆರೋಪಿಸಿದರು.

'ಇದು ಸರಿಯಾದ ಪ್ರಕ್ರಿಯೆ ಅಲ್ಲ. ಯಶವಂತಪುರದ ಜನರು, ಕಾರ್ಯಕರ್ತರು ಎಚ್ಚರದಿಂದ ಇರಬೇಕು. ಈ ರೀತಿ ಎಸ್‌ಐಆರ್ ಮಾಡಿದರೆ ಅಕ್ರಮ ಮತದಾರರನ್ನು ತಡೆಗಟ್ಟಲು ಆಗುವುದಿಲ್ಲ. ದಯಮಾಡಿ ಪಕ್ಷದ ಅಧ್ಯಕ್ಷರು ಹಾಗೂ ಹೋಬಳಿಯ ಮುಖಂಡರು, ಹೋಬಳಿ ಮಟ್ಟದ ಅಧ್ಯಕ್ಷರು, ಕಾರ್ಯಕರ್ತರು ಇದರ ಬಗ್ಗೆ ನಿಗಾವಹಿಸಬೇಕು ಹಾಗೂ ಎಚ್ಚರದಿಂದಿರಬೇಕು. ಇಂಥವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಸ್ಥಳೀಯ ಜೆಡಿಎಸ್ ಮುಖಂಡರು ಹೇಳಿದರು.

ಸಾಮೂಹಿಕ ಎಸ್‌ಐಆರ್: ಮಹದೇವಪುರ, ಬ್ಯಾಟರಾಯನಪುರ, ಗೋವಿಂದರಾಜನಗರ, ನಾಯಂಡಹಳ್ಳಿ, ನಾಗರಬಾವಿ, ಗುಟ್ಟಹಳ್ಳಿ ಮಸೀದಿಗಳ ಬಳಿ ಸಾಮೂಹಿಕವಾಗಿ ಎಸ್‌ಐಆರ್ ಪ್ರಕ್ರಿಯೆ ನಡೆದಿದ್ದು, ಇದು ಅಕ್ರಮ ಎಂದು ಬಿಜೆಪಿ ದೂರಿದೆ.

7, 8ಕ್ಕೆ ಶರಣ ಸಾಹಿತ್ಯ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಇದೇ 7 ಮತ್ತು 8ರಂದು ಇಲ್ಲಿನ ವಿಜಯನಗರದ ಬಸವೇಶ್ವರ ಸುಜ್ಞಾನ ಮಂಟಪದಲ್ಲಿ 14ನೇ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ, 'ಸಮ್ಮೇಳನಾಧ್ಯಕ್ಷರಾಗಿ ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಅವರನ್ನು ಆಯ್ಕೆ ಮಾಡಲಾಗಿದೆ. ಬೆಂಗಳೂರಿನಲ್ಲಿ ಎರಡನೇ ಬಾರಿ ಸಮ್ಮೇಳನ ಆಯೋಜಿಸಲಾಗಿದೆ. ಹೊರ ರಾಜ್ಯದಿಂದಲೂ ಪ್ರತಿನಿಧಿಗಳು ಭಾಗವಹಿಸಲಿದ್ದು, 2000ಕ್ಕೂ ಅಧಿಕ ಜನ ಪಾಲ್ಗೊಳ್ಳುವ ನಿರೀಕ್ಷೆಯಿದೆ' ಎಂದರು.

'7ರಂದು ಬೆಳಿಗ್ಗೆ 9 ಗಂಟೆಗೆ ಬಿ.ಜಿ.ಎಸ್. ಆಟದ ಮೈದಾನದಿಂದ ಸಮ್ಮೇಳನಾಧ್ಯಕ್ಷರ ಮೆರವಣಿಗೆ ನಡೆಯಲಿದೆ. 10.30ಕ್ಕೆ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದ್ದು, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರಿನ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉದ್ಘಾಟಿಸುವರು. ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಸಿದ್ಧರಾಮ ಬೆಲ್ದಾಳ ಶರಣರು ಉಪಸ್ಥಿತರಿರಲಿದ್ದು, ಕೇಂದ್ರ ಸಚಿವ ವಿ. ಸೋಮಣ್ಣ ಅವರು 'ಕಲ್ಯಾಣ ಸಂಗಮ' ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು. ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರೂ ಆದ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಅವರು 'ಮಹಾಮನೆ' ವಿಶೇಷ ಸಂಚಿಕೆ ಜನಾರ್ಪಣೆ ಮಾಡುತ್ತಾರೆ' ಎಂದರು.

ಸೋಮಶೇಖರ

'ಸಾಂಸ್ಕೃತಿಕ ನಾಯಕ ಬಸವಣ್ಣ', 'ಶರಣ ಸಾಹಿತ್ಯದಲ್ಲಿ ಮಹಿಳಾ ಸಂವೇದನೆ', 'ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಸ್ಮರಣೆ' ಹಾಗೂ 'ಯುವಜನರತ್ತ ಶರಣ ಸಾಹಿತ್ಯ' ಗೋಷ್ಠಿಗಳು ನಡೆಯಲಿವೆ. ಸಾಧಕರಿಗೆ ಸನ್ಮಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯಲಿವೆ' ಎಂದು ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಘಟಕದ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಸಮ್ಮೇಳನದ ಸ್ವಾಗತ ಸಮಿತಿ ಉಪಾಧ್ಯಕ್ಷ ಮಲ್ಲಿಕಾರ್ಜುನ, ಕೋಶಾಧ್ಯಕ್ಷ ಬಿ.ಎಸ್. ಪುಟ್ಟರಾಜು, ಪರಿಷತ್ತಿನ ಕೋಶಾಧ್ಯಕ್ಷ ಹಂಪಯ್ಯ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಪ್ರಮೀಳಾ ಗರಡಿ ಇದ್ದರು.

'ವಿದ್ಯುತ್ ಉತ್ಪಾದನೆಗೆ ಗಮನ ಹರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಳೆ ಕೊರತೆಯಿಂದಾಗಿ ರಾಜ್ಯದಲ್ಲಿ ಈ ವರ್ಷ ಜಲವಿದ್ಯುತ್ ಉತ್ಪಾದನೆ ಕುಸಿಯುವ ಸಾಧ್ಯತೆ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು ವಿಶೇಷ ತುರ್ತು ಕಾರ್ಯಯೋಜನೆ ರೂಪಿಸಿ ಮತ್ತು ಇತರೆ ಮೂಲಗಳಿಂದ ವಿದ್ಯುತ್ ಉತ್ಪಾದನೆಗೆ ತುರ್ತು ಗಮನ ಹರಿಸಿ' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇಂಧನ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶಿವಕುಮಾರ್ ಅವರು ಶುಕ್ರವಾರ ಇಂಧನ ಇಲಾಖೆಯ ಅಧಿಕಾರಿಗಳ ಜತೆಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

'ಬರದ ಪರಿಸ್ಥಿತಿ ಎದುರಿಸಲು ಇಲಾಖೆ ಏನೇನು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ ಎನ್ನುವ ಬಗ್ಗೆ ವಿವರಗಳನ್ನು ಪಡೆದು ಸಾರ್ವಜನಿಕ ಬಳಕೆಗೆ ತೊಂದರೆ ಆಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಇಂಧನ ಭದ್ರತೆಗಾಗಿ ಸರ್ಕಾರಕ್ಕೆ ಮೀಸಲಾದ ಕಲ್ಲಿದ್ದಲು ಗಣಿಗಳನ್ನು ಕಾರ್ಯಾರಂಭಗೊಳಿಸಿ, ಸಾಕಷ್ಟು ಕಲ್ಲಿದ್ದಲು ಸಂಗ್ರಹವನ್ನು ನಿರಂತರವಾಗಿ ಕಾಯ್ದುಕೊಳ್ಳಬೇಕು' ಎಂದರು.

ಬಾಕಿ ಬಿಡುಗಡೆಗೆ ಮನವಿ: 'ಗೃಹಜ್ಯೋತಿ ಯೋಜನೆಯಿಂದಾಗಿ ಯಾವುದೇ ಹೊರೆ ಆಗಿಲ್ಲ. ಆದರೆ, ಸರ್ಕಾರಿ ಇಲಾಖೆಗಳು ಎಸ್ಕಾಂಗಳಿಗೆ ಪಾವತಿಸಬೇಕಿರುವ ₹12,631 ಕೋಟಿ ಬಾಕಿಯನ್ನು ತ್ವರಿತವಾಗಿ ಪಾವತಿಸುವುದು ಅಥವಾ ಹಣಕಾಸು ಭದ್ರತೆ ಒದಗಿಸಲು ಕ್ರಮ ಕೈಗೊಳ್ಳಬೇಕು' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಮುಖ್ಯಮಂತ್ರಿಯವರಿಗೆ ಮನವಿ ಮಾಡಿದರು.

ಸಾಕ್ಷಿದಾರನಿಗೆ ಬೆದರಿಕೆ: ಎಫ್‌ಎಸ್‌ಎಲ್‌ಗೆ ಮೊಬೈಲ್

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಸಾಕ್ಷ್ಯ ಹೇಳದಂತೆ 49ನೇ ಸಾಕ್ಷಿದಾರ ಸಂದೀಪ್‌ಗೆ ಬೆದರಿಕೆಯೊಡ್ಡಿದ್ದ ಆರೋಪದಲ್ಲಿ ಬಂಧಿಸಿರುವ ಮೂವರನ್ನು ಕಸ್ಟಡಿಗೆ ಪಡೆದಿರುವ ಕಾಮಾಕ್ಷಿಪಾಳ್ಯ ಠಾಣೆಯ ಪೊಲೀಸರು, ವಿಚಾರಣೆ ತೀವ್ರಗೊಳಿಸಿದ್ದಾರೆ.

'ಪೊಲೀಸ್ ಕಸ್ಟಡಿಯಲ್ಲಿರುವ ಪುನೀತ್, ವೇಣು, ಸುಹಾಸ್ ವಿಚಾರಣೆ ನಡೆಸಿ ಹೇಳಿಕೆ ದಾಖಲು ಮಾಡಿಕೊಳ್ಳಲಾಗುತ್ತಿದೆ. ಮೂವರ ಮೊಬೈಲ್ ವಶಕ್ಕೆ ಪಡೆದುಕೊಂಡು ಪರಿಶೀಲನೆ ನಡೆಸಲಾಯಿತು. ವಾಟ್ಸ್‌ಆ್ಯಪ್ ಚಾಟ್‌ಗಳೂ ಸೇರಿದಂತೆ ಮೊಬೈಲ್‌ನಲ್ಲಿದ್ದ ದತ್ತಾಂಶವನ್ನು ಆರೋಪಿಗಳು ಅಳಿಸಿ ಹಾಕಿದ್ದಾರೆ. ಫೋಟೊ, ಚಾಟ್‌ಗಳ ಮರು ಸಂಗ್ರಹಕ್ಕೆಂದು ಆರೋಪಿಗಳ ಮೊಬೈಲ್ ಫೋನ್‌ಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಪುನೀತ್ ಅವರು 'ಡಿ–ಕಂಪನಿ' ಹೆಸರಿನ ಫ್ಯಾನ್‌ಪೇಜ್ ನಿರ್ವಹಿಸುತ್ತಿದ್ದರು. ಸುಹಾಸ್ ಮತ್ತು ವೇಣು ತುಮಕೂರಿನ ದರ್ಶನ್ ಅಭಿಮಾನಿ ಸಂಘದ ಸದಸ್ಯರಾಗಿದ್ದರು ಎಂಬುದು ಗೊತ್ತಾಗಿದೆ. ನಿರ್ಮಾಪಕರೊಬ್ಬರು ಆರೋಪಿಗಳ ಸಂಪರ್ಕದಲ್ಲಿದ್ದರು ಎಂದು ಹೇಳಲಾಗಿದೆ. ಆರೋಪಿಗಳ ದೂರವಾಣಿ ಕರೆಗಳ ಮಾಹಿತಿ (ಸಿಡಿಆರ್) ಬಂದ ಮೇಲೆ ಅವರು ಯಾರೊಂದಿಗೆ ಹೆಚ್ಚು ಮಾತನಾಡಿದ್ದರು ಎಂಬುದೂ ಸೇರಿದಂತೆ ಹಲವು ಸಂಗತಿಗಳು ಬಯಲಾಗಲಿವೆ' ಎಂದು ಮೂಲಗಳು ಹೇಳಿವೆ.

'ಆರೋಪಿಗಳೊಂದಿಗೆ ಇನ್ನೂ ನಾಲ್ವರು ಅಪರಿಚಿತರು, ವಾಟ್ಸ್‌ಆ್ಯಪ್ ಕಾನ್ಫರೆನ್ಸ್ ಕರೆಯಲ್ಲಿ ಮಾತನಾಡಿದ್ದಾರೆ. ಅವರು ಯಾರು ಎಂಬುದನ್ನು ಪತ್ತೆ ಹಚ್ಚಲು ತನಿಖೆ ಮುಂದುವರಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ನ್ಯಾಯಾಧೀಶರ ಎದುರು ಸಂದೀಪ್ ಅವರು ಹೇಳಿಕೆ ದಾಖಲಿಸುತ್ತಿದ್ದಂತೆಯೇ ಆರೋಪಿಗಳು ವಾಟ್ಸ್‌ಆ್ಯಪ್, ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಸೇರಿದಂತೆ ಸಾಮಾಜಿಕ ಜಾಲತಾಣಗಳ ದತ್ತಾಂಶ ಅಳಿಸಿರುವುದು ಪ್ರಾಥಮಿಕ ತನಿಖೆಯಿಂದ ಪತ್ತೆಯಾಗಿದೆ. ಮರುಸಂಗ್ರಹಕ್ಕೆ ಸಂಬಂಧಿಸಿದ ವರದಿಯು ಶೀಘ್ರದಲ್ಲೇ ಎಫ್‌ಎಸ್‌ಎಲ್‌ನಿಂದ ಬರಲಿದೆ. ಆರೋಪಿಗಳೊಂದಿಗೆ ಸಂಪರ್ಕದಲ್ಲಿ ಇರುವ ವ್ಯಕ್ತಿಗಳಿಗೂ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಲಾಗುವುದು' ಎಂದು ತನಿಖಾಧಿಕಾರಿಯೊಬ್ಬರು ಹೇಳಿದರು.

ಎಫ್‌ಐಆರ್ ರದ್ದತಿಗೆ ಕೋರಿಕೆ: ಈಶ್ವರಪ್ಪ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ



ಕೆ.ಎಸ್. ಈಶ್ವರಪ್ಪ

ಅಕ್ರಮ ಆಸ್ತಿ ಗಳಿಕೆ ಆರೋಪ

ಬೆಂಗಳೂರು: ಅಕ್ರಮ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಮತ್ತು ಅವರ ಕುಟುಂಬದ ಸದಸ್ಯರು, ತಮ್ಮ ವಿರುದ್ಧ ಶಿವಮೊಗ್ಗ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದು-ಪಡಿಸುವಂತೆ ಕೋರಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಕೆ.ಎಸ್. ಈಶ್ವರಪ್ಪ, ಪುತ್ರ ಕೆ.ಇ.ಕಾಂತೇಶ್ ಮತ್ತು ಸೊಸೆ ಶಾಲಿನಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಈ ಕುರಿತಂತೆ ಆದೇಶಿಸಿತು.

'ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ದಾಖಲಾಗಿ 12 ವರ್ಷಗಳು ಕಳೆಯುತ್ತಿದೆ. ದೂರು ದಾಖಲಾದ ಸಂದರ್ಭದಲ್ಲಿ ಬಿಎನ್‌ಎಸ್‌ಎಸ್ ಜಾರಿಯಲ್ಲಿರಲಿಲ್ಲ. ಹೀಗಾಗಿ, ಅಪರಾಧ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಅಡಿಯಲ್ಲಿ ತನಿಖೆ ನಡೆಸಲು ನಿರ್ದೇಶನ ನೀಡಿರುವುದರಲ್ಲಿ ಯಾವುದೇ ಕಾನೂನು ಪ್ರಕ್ರಿಯೆ ಉಲ್ಲಂಘನೆ ಆಗಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಇದೇ ವೇಳೆ, 'ತನಿಖೆಗೆ ಸಹಕರಿಸಿದರೆ ಬಂಧಿಸುವುದಿಲ್ಲ' ಎಂಬ ಲೋಕಾಯುಕ್ತ ಪರ ವಕೀಲರ ವಾಗ್ದಾನವನ್ನು ಪರಿಗಣಿಸಿದ ನ್ಯಾಯಪೀಠ, 'ಅರ್ಜಿದಾರರು ತನಿಖೆಗೆ ಸಹಕರಿಸಿದರೆ ಬಂಧಿಸಬಾರದು' ಎಂದು ನಿರ್ದೇಶಿಸಿತು.

'ಎಫ್‌ಐಆರ್ ಮತ್ತು ಪ್ರಕರಣಕ್ಕೆ ಸಂಬಂಧಿಸಿದಂತೆ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯದಲ್ಲಿನ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಬಲವಂತದ ಕ್ರಮ ಬೇಡ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಿಗ್ ಕಾರ್ಮಿಕರು ಹಗಲು ರಾತ್ರಿಯೆನ್ನದೆ, ಬಿಸಿಲು, ಮಳೆ, ಚಳಿ ಲೆಕ್ಕಿಸದೇ ಸವಾಲಿನ ವೇಗದಲ್ಲಿ ಡೆಲಿವರಿ ಮಾಡಿ ಸೇವೆ ಸಲ್ಲಿಸುತ್ತಾರೆ. ಇವರ ಸೇವೆಗೆ ಪ್ರತಿಯಾಗಿ ಕಂಪನಿಗಳು ಊಟ, ತಿಂಡಿ ಡೆಲಿವರಿಗೆ ಶೇ 40ಕ್ಕೂ ಅಧಿಕ ಶುಲ್ಕ ಪಡೆಯುತ್ತಾರೆ. ಆದರೆ, ಗಿಗ್ ಕಾರ್ಮಿಕರಿಗೆ ಅದರಲ್ಲಿ 50 ಪೈಸೆ ನೀಡಲು ಹಿಂದೇಟು ಏಕೆ' ಎಂದು ಹೈಕೋರ್ಟ್ ತೀವ್ರವಾಗಿ ಪ್ರಶ್ನಿಸಿದೆ.

ಗಿಗ್ ಕಾರ್ಮಿಕರಿಗೆ ರೂಪಿಸಲಾಗಿರುವ ನಿಯಮಗಳ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ, ಇ-ಕಾಮರ್ಸ್ ಮತ್ತು ಗ್ರಾಹಕ ತಂತ್ರಜ್ಞಾನ ಸಂಸ್ಥೆಗಳಾದ ಸ್ವಿಗ್ಗಿ, ಝೊಮ್ಯಾಟೊ, ಝೆಪ್ಟೊ, ಅರ್ಬನ್ ಕಂಪನಿಗಳು ಜಂಟಿಯಾಗಿ ಸಲ್ಲಿಸಿರುವ ಅರ್ಜಿಗಳನ್ನು ನ್ಯಾ.ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಕೇಂದ್ರ ಸರ್ಕಾರವು ಇಡೀ ದೇಶಕ್ಕೇ ಅನ್ವಯವಾಗುವಂತೆ; ಗಿಗ್ ಮತ್ತು ಪ್ಲ್ಯಾಟ್‌ಫಾರ್ಮ್ ಕಾರ್ಮಿಕರನ್ನು ಒಳಗೊಂಡಂತೆ ಇಡೀ ಅಸಂಘಟಿತ ವಲಯದ ಕಾರ್ಮಿಕರಿಗಾಗಿ ಸಾಮಾಜಿಕ ಭದ್ರತಾ ಸಂಹಿತೆ-2020 ಎಂಬ ಸಮಗ್ರ ಹಾಗೂ ಏಕರೂಪದ ಕಾನೂನು ಜಾರಿಗೊಳಿಸಿದೆ. ಈ ಕಾನೂನು ಜಾರಿಯಲ್ಲಿರುವಾಗ ರಾಜ್ಯ ಸರ್ಕಾರ ಅದೇ ವಿಷಯದ ಮೇಲೆ ಪ್ರತ್ಯೇಕ ಮತ್ತು ಸಮಾನಾಂತರ ಕಾನೂನನ್ನು ರೂಪಿಸಿರುವುದು ಅಸಾಂವಿಧಾನಿಕ' ಎಂದರು.

'ಕೇಂದ್ರ ಕಾಯ್ದೆಯ ಅನುಸಾರ ಕಂಪನಿಗಳು ಈಗಾಗಲೇ ವಾರ್ಷಿಕ ವಹಿವಾಟಿನ ಆಧಾರದ ಮೇಲೆ ಸಾಮಾಜಿಕ ಭದ್ರತಾ ನಿಧಿಗೆ ದೇಣಿಗೆ ಪಾವತಿಸಬೇಕಿದೆ. ಆದರೆ, ರಾಜ್ಯ ಸರ್ಕಾರದ ಆದೇಶದಂತೆ ಅಗ್ರಿಗೇಟರ್‌ಗಳಿಗೆ ಪ್ರತಿ ಡೆಲಿವರಿ ಬೈಕ್‌ಗೆ 50 ಪೈಸೆ ಮತ್ತು ತ್ರಿಚಕ್ರ ವಾಹನಕ್ಕೆ 75 ಪೈಸೆ ಹಾಗೂ ನಾಲ್ಕು ಚಕ್ರಗಳ ವಾಹನಕ್ಕೆ ಒಂದು ರೂಪಾಯಿ ಶುಲ್ಕ ವಿಧಿಸಿದೆ. ಆದರೆ, ಈ ಹಣವನ್ನು ಬಳಸಲು ಯೋಜನೆಯನ್ನೇ ರೂಪಿಸಿಲ್ಲ' ಎಂದು ಆಕ್ಷೇಪಿಸಿದರು.

ಈ ವಾದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, 'ಗಿಗ್ ಕಾರ್ಮಿಕರಿಗಾಗಿ ಹಣ ಬಳಕೆ ಮಾಡುವ ನಿಟ್ಟಿನಲ್ಲಿ ಮಂಡಳಿಯೊಂದನ್ನು ರಚಿಸಲಾಗಿದೆ. ಆ ಶುಲ್ಕವನ್ನು ಗಿಗ್ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ ಬಳಸಲಾಗುವುದು' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಅಗ್ರಿಗೇಟರ್ ಕಂಪನಿಗಳು ಹೈಕೋರ್ಟ್ ಖಾತೆಯಲ್ಲಿ ಗಿಗ್ ಶುಲ್ಕವನ್ನು ಮೂರು ವಾರಗಳಲ್ಲಿ ಠೇವಣಿ ಇರಿಸಬೇಕು' ಎಂದು ಸೂಚಿಸಿ ವಿಚಾರಣೆಯನ್ನು ಆಗಸ್ಟ್ 14ಕ್ಕೆ ಮುಂದೂಡಿತು. ಅಂತೆಯೇ, 'ಅಲ್ಲಿಯವರೆಗೂ ಕಂಪನಿಗಳ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು' ಎಂದು ಸರ್ಕಾರಕ್ಕೆ ನಿರ್ದೇಶಿಸಿತು.

ರಾಜ್ಯ ಸರ್ಕಾರ ಜಾರಿಗೊಳಿಸಿರುವ; ಕರ್ನಾಟಕ ಪ್ಲ್ಯಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಕಾಯ್ದೆ-2025 ಮತ್ತು ಅದರಡಿ ರೂಪಿಸಲಾಗಿರುವ ನಿಯಮಗಳ ಸಿಂಧುತ್ವವನ್ನು ಅರ್ಜಿದಾರರು ಪ್ರಶ್ನಿಸಿದ್ದಾರೆ.

ಇಸ್ರೊ ಕಚೇರಿಗೆ ಬಾಂಬ್ ಬೆದರಿಕೆ: ಯುವಕನ ಬಂಧನ

ಬೆಂಗಳೂರು: ನ್ಯೂ ಬಿಇಎಲ್ ರಸ್ತೆಯಲ್ಲಿರುವ ಇಸ್ರೊ ಕೇಂದ್ರ ಕಚೇರಿಗೆ ಇ–ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿದ್ದ ಆರೋಪಿಯನ್ನು ಸಂಜಯನಗರ ಠಾಣೆಯ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಗಾಜಿಯಾಬಾದ್‌ನ ನಿಶಾಂತ್ ತ್ಯಾಗಿ (36) ಬಂಧಿತ.

'ವಿಶೇಷ ತಂಡ ರಚಿಸಲಾಗಿತ್ತು. ಈ ತಂಡವು ತಾಂತ್ರಿಕ ಸಹಾಯದಿಂದ ಮಾಹಿತಿ ಸಂಗ್ರಹಿಸಿ, ಉತ್ತರಪ್ರದೇಶದ ಗಾಜಿಯಾಬಾದ್‌ಗೆ ತೆರಳಿತ್ತು. ಅಲ್ಲಿ ಆರೋಪಿಯನ್ನು ಬಂಧಿಸಿದೆ' ಎಂದು ಮೂಲಗಳು ಹೇಳಿವೆ.

ವಿಚಾರಣೆ ನಡೆಸಿದ್ದು, ಮಾನಸಿಕ ಅಸ್ವಸ್ಥನೆಂದು ತಿಳಿದು ಬಂದಿದೆ ಎಂದು ಮೂಲಗಳು ಹೇಳಿವೆ.

ಗುರುವಾರ ನಸುಕಿಗೆ ಸಂಸ್ಥೆಯ ಅಧಿಕೃತ ಇ-ಮೇಲ್ ವಿಳಾಸಕ್ಕೆ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಮಧ್ಯಾಹ್ನ 1 ಗಂಟೆ ಸುಮಾರಿಗೆ ಸಿಬ್ಬಂದಿ ಇ-ಮೇಲ್ ಪರಿಶೀಲಿಸಿದ್ದರು. ಆಗ ಅಪರಿಚಿತ ಇ–ಮೇಲ್ ವಿಳಾಸದಿಂದ ಬಾಂಬ್ ಬೆದರಿಕೆ ಸಂದೇಶ ಬಂದಿರುವುದು ಗೊತ್ತಾಗಿತ್ತು.

ಪೊಲೀಸರು ಸಂಸ್ಥೆಯಲ್ಲಿ ಪರಿಶೀಲನೆ ನಡೆಸಿದ ಬಳಿಕ ಅದು ಹುಸಿ ಎಂದು ಗೊತ್ತಾಗಿದೆ.

ಕೇರಳಂ ಸರ್ಕಾರಿ ಬಸ್‌ನಲ್ಲಿ ಬೆಂಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನ ಭಾರತಿಯ 'ನಮ್ಮ ಮೆಟ್ರೊ' ನಿಲ್ದಾಣದ ಬಳಿ ಚಲಿಸುತ್ತಿದ್ದ ಕೇರಳಂ ಸರ್ಕಾರಿ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಚಾಲಕ, ನಿರ್ವಾಹಕ ಹಾಗೂ ಪ್ರಯಾಣಿಕರು ಬಸ್‌ನಿಂದ ಕೆಳಕ್ಕೆ ಇಳಿದು ಪಾರಾಗಿದ್ದಾರೆ.

ಮೈಸೂರು ರಸ್ತೆಯಲ್ಲಿ ಬಸ್ ಸಾಗುತ್ತಿರುವಾಗ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಅದನ್ನು ಗಮನಿಸಿದ್ದ ಪ್ರಯಾಣಿಕರು ಮತ್ತು ಬಸ್‌ನ ಸಿಬ್ಬಂದಿ ಕೆಳಕ್ಕೆ ಇಳಿದು ಪಾರಾದರು. ಬೆಂಕಿಯಿಂದ ಬಸ್‌ನ ಮುಂಭಾಗ ಹಾಗೂ ಒಳಭಾಗಕ್ಕೆ ಹಾನಿಯಾಗಿದೆ. ಅವಘಡದಿಂದ ದಟ್ಟ ಹೊಗೆ ಆವರಿಸಿ, ಕೆಲಕಾಲ ಸಾರ್ವಜನಿಕರು ಆತಂಕಕ್ಕೆ ಒಳಗಾಗಿದ್ದರು. ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ.

'ಕಾರಣ ಪತ್ತೆಯಾಗಿಲ್ಲ. ತನಿಖೆ ನಡೆದಿದೆ' ಎಂದು ಪೊಲೀಸರು ಹೇಳಿದರು.

ನಿಧನ ವಾರ್ತೆ

ಸಿ.ಮಂಜುನಾಥ್

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ನಿವಾಸಿ ಸಿ.ಮಂಜುನಾಥ್ (64) ಅವರು ಶುಕ್ರವಾರ ಬೆಳಿಗ್ಗೆ ನಿಧನರಾದರು. ಅವರಿಗೆ ಪತ್ನಿ ಮತ್ತು ಮೂವರು ಪುತ್ರಿಯರು ಇದ್ದಾರೆ. ಬನಶಂಕರಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಪುಟ್ಟ ಮಕ್ಕಳಿಗೆ ಹಿಂಸೆ: 'ಕೇರ್ ಟೇಕರ್' ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡೇ ಕೇರ್'ನಲ್ಲಿ ಗಲಾಟೆ ಮಾಡುವ ಪುಟ್ಟ ಮಕ್ಕಳನ್ನು 'ಫ್ರಂಟ್ ಲೋಡ್ ವಾಷಿಂಗ್ ಮಷಿನ್'ನಲ್ಲಿ ಹಾಕಿ, ಹಿಂಸೆ ನೀಡಿದ್ದ ಘಟನೆಯ ಸಂಬಂಧ ಪ್ರಮುಖ ಆರೋಪಿಯನ್ನು ಎಚ್.ಎ.ಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೋಲಾರದ ವಿಜಯಲಕ್ಷ್ಮಿ ಬಂಧಿತೆ.

ಎಚ್.ಎ.ಎಲ್ ಆವರಣದ 'ಕ್ಯಾಪ್ ಜೆಮಿನಿ' ಕಂಪನಿ ಆವರಣದಲ್ಲಿ ಇರುವ ಸೊಸೈಟಿ ಜನರಲ್ ಬೇಬಿ ಕೇರ್ ಸೆಂಟರ್‌ನಲ್ಲಿ ವಿಜಯಲಕ್ಷ್ಮಿ ಕೇರ್ ಟೇಕರ್ ಆಗಿ ಕೆಲಸ ಮಾಡುತ್ತಿದ್ದರು. ವಿಜಯಲಕ್ಷ್ಮಿ ಅವರನ್ನು ನ್ಯಾಯಾಲಯಕ್ಕೆ ಶುಕ್ರವಾರ ಹಾಜರು ಪಡಿಸಲಾಯಿತು. ನ್ಯಾಯಾಧೀಶರು, ಆರೋಪಿಯನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ. ಎರಡನೇ ಆರೋಪಿ ಮಂಜುಳಾ ತಲೆಮರೆಸಿಕೊಂಡಿದ್ದು, ಅವರ ಪತ್ತೆಗೆ ಶೋಧ ನಡೆಸಲಾಗುತ್ತಿದೆ. ವಿಚಾರಣೆಯ ವೇಳೆ ಆರೋಪಿಗಳಾದ ಭವಾನಿ, ಬಿಂದು, ಸಿಂಧು ಅವರ ಪಾತ್ರ ಅಷ್ಟಾಗಿ ಕಂಡುಬಂದಿಲ್ಲ. ಅವರ ಹೇಳಿಕೆ ದಾಖಲಿಸಿಕೊಂಡು ವಾಪಸ್ ಕಳುಹಿಸಲಾಗಿದೆ. ಕರೆದಾಗ ಮತ್ತೆ ವಿಚಾರಣೆಗೆ ಬರುವಂತೆಯೂ ಸೂಚಿಸಲಾಗಿದೆ ಎಂದು ಪೊಲೀಸರು ಹೇಳಿದರು.

ವಿಡಿಯೊ ಮಾಡಿದ್ದ ಮಾಜಿ ಉದ್ಯೋಗಿ: ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊವನ್ನು ಡೇ ಕೇರ್‌ನ ಮಾಜಿ ಉದ್ಯೋಗಿ ಸುಜಾತಾ ತಮ್ಮ ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದರು ಎಂಬುದು ಗೊತ್ತಾಗಿದೆ. ಅವರನ್ನು ಕೆಲಸದಿಂದ ತೆಗೆದು ಹಾಕಿದ ಬಳಿಕ ಆ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದರು ಎಂದು ಮೂಲಗಳು ಹೇಳಿವೆ.

ಗಲಾಟೆ ಮಾಡುವ ಹಾಗೂ ಅಳುವ ಮಕ್ಕಳನ್ನು ಕೇರ್ ಟೇಕರ್‌ಗಳು ವಾಷಿಂಗ್ ಮಷಿನ್‌ಗೆ ಹಾಕಿ ಬೆದರಿಸುವುದು ಹಾಗೂ ಕಮೋಡ್ ಒಳಗೆ ಮಕ್ಕಳನ್ನು ಕೂರಿಸಿ, ಬಾಯಿಗೆ ನೀರಿನ ಪೈಪ್ ತುರುಕಿ ನೀರು ಬಿಡುವುದು, ಮಕ್ಕಳನ್ನು ಕೂಡಿ ಹಾಕುವುದು, ಅಲ್ಲದೇ ದೈಹಿಕ ಹಿಂಸೆ ನೀಡುವುದನ್ನು ಮಾಡುತ್ತಿದ್ದರು.

'ಸಾಮಾಜಿಕ ಜಾಲತಾಣದಲ್ಲಿ ವಿಡಿಯೊವೊಂದು ಹರಿದಾಡಿತ್ತು. ಆ ವಿಡಿಯೊವನ್ನು ಗಮನಿಸಿದ್ದ ಪೋಷಕರು, ಮಕ್ಕಳ ಸಹಾಯವಾಣಿ ಮೂಲಕ ಎಚ್‌ಎಎಲ್ ಠಾಣೆಯ ಪೊಲೀಸರಿಗೆ ದೂರು ನೀಡಿದ್ದರು. ದೂರು ಆಧರಿಸಿ ಐವರು ಮಹಿಳಾ ಸಿಬ್ಬಂದಿ ವಿರುದ್ಧ ಬಾಲನ್ಯಾಯ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಶಿಶು ವಿಹಾರ: ರಾಜ್ಯಕ್ಕೆ ನೋಟಿಸ್

ನವದೆಹಲಿ: ಬೆಂಗಳೂರಿನ ಐಟಿ ಕಂಪನಿಯೊಂದರ ಆವರಣದಲ್ಲಿರುವ ಶಿಶುವಿಹಾರದಲ್ಲಿ ಕೆಲವು ಪುಟ್ಟ ಮಕ್ಕಳನ್ನು ಕೇರ್ ಟೇಕರ್‌ಗಳು ಅಮಾನವೀಯವಾಗಿ ನಡೆಸಿಕೊಂಡಿದ್ದಾರೆ ಎಂಬ ಮಾಧ್ಯಮ ವರದಿ ಆಧಾರದಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಸ್ವಯಂಪ್ರೇರಿತ ವಾಗಿ ದೂರು ದಾಖಲಿಸಿಕೊಂಡಿದೆ.

'ಈ ವರದಿಯ ವಿಷಯ ನಿಜವಾಗಿದ್ದರೆ, ಮಾನವ ಹಕ್ಕುಗಳ ಉಲ್ಲಂಘನೆಯ ಗಂಭೀರ ಸಮಸ್ಯೆಗಳನ್ನು ಹುಟ್ಟು ಹಾಕುತ್ತದೆ' ಎಂದು ಗಮನಿಸಿರುವ ಆಯೋಗವು ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕ ರಿಗೆ ನೋಟಿಸ್ ಜಾರಿ ಮಾಡಿ, ಎರಡು ವಾರಗಳಲ್ಲಿ ವಿವರವಾದ ವರದಿ ನೀಡುವಂತೆ ಸೂಚಿಸಿದೆ.

ನಿರ್ವಹಣೆ: ಹಲವೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವುದರಿಂದ ನಗರದ ಹಲವೆಡೆ ಶನಿವಾರ ಬೆಳಿಗ್ಗೆ 11 ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಶೋಭಾ ಸಿಟಿ, ಚೊಕ್ಕನಹಳ್ಳಿ, ಡೊಮಿನೋಸ್ ಪಿಜ್ಜಾ (ಡಿವ್ ಇನ್ ಪ್ಯಾರಡೈಸ್), ನೂರ್ ನಗರ, ಮಾಜಿ ಸೈನಿಕರ ಲೇಔಟ್, ಪೊಲೀಸ್ ಕಾಲೊನಿ, ಆರ್.ಕೆ.ಹೆಗಡೆ ನಗರ, ಶಬರಿ ನಗರ, ನ್ಯೂ ಶಾಂತಿ ನಗರ, ಕೆಂಪೇಗೌಡ ಲೇಔಟ್, ನಾಗೇನಹಳ್ಳಿ ಗ್ರಾಮ, ರೀಜೆನ್ಸಿ ಪಾರ್ಕ್, ಈಸ್ಟರ್ ಹಾರ್ಮೋನಿ ಲೇಔಟ್, ಬಾಲಾಜಿ ಲೇಔಟ್, ನಾಗೇನಹಳ್ಳಿ ಜಿಮ್, ಸ್ಲಂ ಬೋರ್ಡ್, ಬೆಂಚ್ ರಾಯಲ್ ಲೇಔಟ್, ತಿರುಮೇನಹಳ್ಳಿ ಗ್ರಾಮ, ಮಿಟ್ಟಗಾನಹಳ್ಳಿ, ಕೋಗಿಲು ಗ್ರಾಮ, ಬೆಳ್ಳಹಳ್ಳಿ, ವಿಧಾನಸೌಧ ಲೇಔಟ್, ಕರ್ನಾಟಕ ಕಾಲೇಜು ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ನಗರದಲ್ಲಿ ಇಂದು

ಅಂತರ್ ಕ್ಲಬ್ ಫುಟ್ಬಾಲ್ ಪಂದ್ಯಾವಳಿ: ಉದ್ಘಾಟನೆ: ಎನ್.ಎ. ಹ್ಯಾರಿಸ್, ಉಪಸ್ಥಿತಿ: ಕೆ.ಸಿ. ರಾಮಮೂರ್ತಿ, ಸಬಿತಾ ರಾಮಮೂರ್ತಿ, ಜಯದೀಪ್ ಕೆ.ಆರ್. ರೆಡ್ಡಿ, ತ್ರಿಸ್ತಾ ರಾಮಮೂರ್ತಿ, ಆಯೋಜನೆ ಹಾಗೂ ಸ್ಥಳ: ಲೇಕ್‌ಸೈಡ್ ಕ್ಯಾಂಪಸ್, ಸಿಎಂಆರ್ ವಿಶ್ವವಿದ್ಯಾಲಯ, ಬೆಳಿಗ್ಗೆ 9

ವೈದ್ಯರ ದಿನ ಆಚರಣೆ: ಉದ್ಘಾಟನೆ: ಡಾ.ಶರಣಪ್ರಕಾಶ ಪಾಟೀಲ, ಅತಿಥಿಗಳು: ಡಾ.ಯತೀಂದ್ರ ಸಿದ್ದರಾಮಯ್ಯ, ಡಾ.ವೈ.ಎಲ್.ರಾಜಶೇಖರ್, ಡಾ.ಟಿ.ಎ. ವೀರಭದ್ರಯ್ಯ, ಅಧ್ಯಕ್ಷತೆ: ಡಾ. ಭರತ್ ರಾಜು ಜಿ., ಆಯೋಜನೆ: ಭಾರತೀಯ ವೈದ್ಯಕೀಯ ಸಂಘದ ಬೆಂಗಳೂರು ಶಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಳಿಗ್ಗೆ 10

ವಾರ್ಷಿಕೋತ್ಸವ: ದೀಪಾ ಶ್ರೀಧರ್, ಅತಿಥಿ: ಜಿ. ಗುರುಪ್ರಸನ್ನ, ಸಂಜೆ 5.30ಕ್ಕೆ ಹಿರಿಯ ಕಲಾವಿದರಿಗೆ ಗೌರವಾಭಿನಂದನೆ: ಅತಿಥಿ: ಎಸ್. ಜಿ.ರಾಘವನ್, ಆನೂರು ಅನಂತಕೃಷ್ಣ ಶರ್ಮ, ಗೌರವಿಸಲ್ಪಡುವ ಕಲಾವಿದರು: ಬಿ.ಕೆ. ಶಂಕರ್, ವೀಣಾ ವಾರುಣಿ, ಎ.ಆರ್. ಗಿರಿಧರ್, ಬಿ.ಆರ್. ಹೇಮಂತ್ ಕುಮಾರ್, ಆಯೋಜನೆ: ಬಾಬು ಸ್ಕೂಲ್ ಆಫ್ ರಿದಮ್ಸ್, ಸ್ಥಳ: ಮೀನಾಕ್ಷಿ ರಂಗಮಂಚ ಸಭಾಂಗಣ, ಕನಕಪುರ ಮುಖ್ಯರಸ್ತೆ, ದೊಡ್ಡಕಲ್ಲಸಂದ್ರ. ಬೆಳಿಗ್ಗೆ 10ಕ್ಕೆ ಉದ್ಘಾಟನೆ

ಪ್ರಥಮ ವರ್ಷದ ಬಿ.ಕಾಂ, ಬಿಬಿಎ ಮತ್ತು ಬಿಸಿಎ ತರಗತಿ ಉದ್ಘಾಟನಾ ಸಮಾರಂಭ: ಅತಿಥಿ: ಸುಧಾ , ಅಧ್ಯಕ್ಷತೆ: ಕೆ.ಎಂ. ನಾಗರಾಜ್, ಉಪಸ್ಥಿತಿ: ಚಿಕ್ಕಯ್ಯ, ಆಯೋಜನೆ ಹಾಗೂ ಸ್ಥಳ: ಕಮ್ಯುನಿಟಿ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್ಮೆಂಟ್ ಸ್ಟಡೀಸ್, ಜಯನಗರ, ಬೆಳಿಗ್ಗೆ 10.30



ಶುಭಾಂಶು ಶುಕ್ಲಾ

ಶುಭಾಂಶು ಶುಕ್ಲಾ ಅವರ 'ದಿ ಸೆಕೆಂಡ್ ಆರ್ಬಿಟ್' ಪುಸ್ತಕ ಬಿಡುಗಡೆ ಹಾಗೂ ವಿದ್ಯಾರ್ಥಿಗಳ ಜತೆಗೆ ಸಂವಾದ: ಆಯೋಜನೆ ಹಾಗೂ ಸ್ಥಳ: ಜವಾಹರ್‌ಲಾಲ್ ನೆಹರೂ ತಾರಾಲಯ, ಸ್ಯಾಂಕಿ ರಸ್ತೆ, ಬೆಳಿಗ್ಗೆ 10

ಪ್ರಶಾಂತ್ ಇಗ್ನೇಷಿಯಸ್ ಅವರ 'ಕಾಮನಬಿಲ್ಲು ಕನ್ನಡದೊಳ್ ಭಾವಿಸಿದ ಜಗತ್ತು' ಪುಸ್ತಕ ಬಿಡುಗಡೆ: ಅತಿಥಿಗಳು: ನವೀನ್ ಜೋಸೆಫ್, ರವಿಕುಮಾರ್ ಬಾಗಿ, ಫಾದರ್ ಮೋಹನ್ ಎಸ್.ಜೆ., ಸಿಸ್ಟರ್ ಜೆಸ್ಸಿ ಮರ್ಲಿನ್, ಸಿ.ಜಿ. ಲಕ್ಷ್ಮೀಪತಿ, ಆಯೋಜನೆ: ಸಂಚಲನ, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4.30

ಭರತನಾಟ್ಯ ರಂಗಪ್ರವೇಶ: ಸಾನ್ವಿ ಲಾಲ್ವಾಣಿ, ಅತಿಥಿಗಳು: ಎಸ್. ಸಡಗೋಪನ್, ಎಂ.ಆರ್.ವಿ. ಪ್ರಸಾದ್, ಜ್ಯೋತ್ಸ್ನಾ ನಾಯರ್, ವಿಮಲ್ ಕುಮಾರ್, ಆಯೋಜನೆ: ನಟನಂ ಇನ್‌ಸ್ಟಿಟ್ಯೂಟ್ ಆಫ್ ಡಾನ್ಸ್, ಸ್ಥಳ: ಬೆಂಗಳೂರು ಗಾಯನ ಸಮಾಜ, ಬಸವನಗುಡಿ, ಸಂಜೆ 5

26ನೇ ವರ್ಷದ ಪ್ರವಚನ ವಾಹಿನಿ: ಭರತನಾಟ್ಯ: ಸಂಪದ ರಾಜೇಶ್, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

'ಶಿವ ಕಾವ್ಯದ ಕಣ್ಣೋ' ಶೀರ್ಷಿಕೆಯಡಿ ಕುವೆಂಪು ಗಾನ ಯಾನ: ಗಾಯನ: ಪ್ರವೀಣ್ ಬಿ.ವಿ., ಪ್ರದೀಪ್ ಬಿ.ವಿ., ವಿಶ್ಲೇಷಣೆ: ಕೆ.ಈ. ರಾಧಾಕೃಷ್ಣ, ಸಂಗೀತ ಸಹಕಾರ: ನಗರ ಕೃಷ್ಣ ಉಡುಪ, ರಮೇಶ್ ಕುಮಾರ್ ಬಿ.ಎಲ್., ಅಮಿತ್ ರಾಜ್, ಯಶೋಧರ್, ಸಮರ್ಥ ದೇಸಾಯಿ, ಸುಮನ್ ರವಿಶಂಕರ್, ಆಯೋಜನೆ: ಸಮುದ್ಯತಾ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 5



ಕೆ.ಈ.ರಾಧಾಕೃಷ್ಣ

'ಕರ್ನಾಟಕ ಸರ್ಕಾರ: ಶೈಕ್ಷಣಿಕ ನಿರೀಕ್ಷೆ' ವಿಚಾರಗೋಷ್ಠಿ: ಶಾಲಾ ಶಿಕ್ಷಣದ ಬಗ್ಗೆ ವಿಚಾರ ಮಂಡನೆ: ಅಭಯ ದಿವಾಕರ್, ಉನ್ನತ ಶಿಕ್ಷಣದ ಬಗ್ಗೆ ವಿಚಾರ ಮಂಡನೆ: ಸಿ.ಜಿ. ಲಕ್ಷ್ಮೀಪತಿ, ಅಧ್ಯಕ್ಷತೆ: ರಾಮಚಂದ್ರಪ್ಪ, ಉಪಸ್ಥಿತಿ: ಎಚ್. ಎಲ್. ಪುಷ್ಪ, ಭಕ್ತರಹಳ್ಳಿ ಕಾಮರಾಜ್, ಸುಕನ್ಯಾ ಮಾರುತಿ, ಎಲ್. ಹನುಮಂತಯ್ಯ, ಆರ್.ಜಿ.ಹಳ್ಳಿ ನಾಗರಾಜ್, ರಾಜಪ್ಪ ದಳವಾಯಿ, ಕೆ.ಷರೀಫಾ, ಬಸವರಾಜ ಸಬರದ, ಸಿ.ವೈ.ಗುರುಶಾಂತ್, ಕೆ.ಪ್ರಕಾಶ್, ಸಿದ್ದನಗೌಡ ಪಾಟೀಲ, ಟಿ.ಆರ್. ಚಂದ್ರಶೇಖರ್, ಆಯೋಜನೆ: ಬಂಡಾಯ ಸಾಹಿತ್ಯ ಸಂಘಟನೆ ಬೆಂಗಳೂರು ಜಿಲ್ಲಾ ಘಟಕ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್.ಕಾಲೊನಿ, ಸಂಜೆ 5



ರಾಮಚಂದ್ರಪ್ಪ

'ಜೀಕೆ ಮಾಸ್ತರರ ಪ್ರಣಯ ಪ್ರಸಂಗ' ನಾಟಕ ಪ್ರದರ್ಶನ: ನಿರ್ದೇಶನ: ಅಶೋಕ್ ಬಿ., ತಂಡ: ವಿಶ್ವಪಥ ಕಲಾ ಸಂಗಮ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7



'ಜೀಕೆ ಮಾಸ್ತರರ ಪ್ರಣಯ ಪ್ರಸಂಗ' ನಾಟಕದ ದೃಶ್ಯ

'ಯಕ್ಷ ಕಾರ್ತಿಕ' ಮೂರು ಯಕ್ಷಗಾನ ಪ್ರಸಂಗ: 'ವಿಶ್ವಾಮಿತ್ರ ಮೇನಕೆ', 'ಕಾರ್ತವೀರ್ಯ' ಮತ್ತು 'ಗದಾಯುದ್ಧ' ಯಕ್ಷಗಾನ ಪ್ರಸಂಗ ಪ್ರದರ್ಶನ, ಹಿಮ್ಮೇಳ: ಜನ್ಸಾಲೆ ರಾಘವೇಂದ್ರ ಆಚಾರ್, ಶಂಕರ ಭಟ್ ಬ್ರಹ್ಮೂರು, ಪ್ರಸನ್ನ ಭಟ್ ಬಾಳ್ಕಲ್, ಹಿಲ್ಲೂರು ರಾಮಕೃಷ್ಣ ಹೆಗಡೆ, ಶಶಾಂಕ ಆಚಾರ್ಯ, ಅನಿರುದ್ಧ ಹೆಗಡೆ, ಪ್ರಜ್ವಲ್ ಮುಂಡಾಡಿ, ನಯನ್ ಕುಮಾರ್ ನಿಟ್ಟೂರು, ಆಯೋಜನೆ: ಪೆರ್ಡೂರು ಮೇಳ ಮತ್ತು ಅತಿಥಿ ಕಲಾವಿದರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ರಾತ್ರಿ 9.55

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಒಳಮೀಸಲಾತಿ: ನ್ಯಾಯಕ್ಕೆ ಭೋವಿ ಪೀಠದ ಶ್ರೀ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ, ಆರ್ಥಿಕ, ಸಾಮಾಜಿಕವಾಗಿ ಅವಕಾಶ ವಂಚಿತರಾಗಿರುವ ಭೋವಿ ಸಮುದಾಯಕ್ಕೆ ಒಳಮೀಸಲಾತಿಯಲ್ಲಿ ಸೂಕ್ತ ನ್ಯಾಯ ಒದಗಿಸಬೇಕು. ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎಂದು ಚಿತ್ರದುರ್ಗ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಹೇಳಿದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾದ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಭೋವಿ ಸಮುದಾಯದ ಬಹುತೇಕ ಜನರು ಬಡತನದಲ್ಲಿದ್ದಾರೆ. ಹೊಟ್ಟೆಪಾಡಿಗಾಗಿ ಕೂಲಿ ಮಾಡುತ್ತಾ ಅಲೆಮಾರಿಗಳಾಗಿದ್ದಾರೆ. ಅಂಥವರಿಗೆ ಒಳಮೀಸಲಾತಿಯಲ್ಲಿ ಸೂಕ್ತ ನ್ಯಾಯ ಸಿಗಬೇಕೆಂದು ಒತ್ತಾಯಿಸಿದ್ದೇವೆ' ಎಂದರು.

'ಕುಲಕಸುಬಿನ ಪ್ರಥಮ ಆದ್ಯತೆ ನೀಡಬೇಕು. ಕಲ್ಲು ಒಡೆದು ಜೀವನ ಸಾಗಿಸಲು ಬಲಿಷ್ಠರು, ಅಧಿಕಾರಿಗಳು ಬಿಡುತ್ತಿಲ್ಲ. ಕಾನೂನು ಅಡಿಯಲ್ಲಿ ಅನುಮತಿ ಪಡೆದು ವೃತ್ತಿ ಆರಂಭಿಸಿದರೆ ಕೆಲವೆಡೆ ದಬ್ಬಾಳಿಕೆಗಳು ನಡೆಯುತ್ತಿವೆ. ಅಧಿಕಾರಿಗಳು ಬಲಿಷ್ಠರ ಪರ ನಿಲ್ಲುತ್ತಿದ್ದಾರೆ. ಕಾನೂನು ರೀತಿಯಲ್ಲಿ ಕಲ್ಲು ಒಡೆಯಲು ಅವಕಾಶ ನೀಡಬೇಕು. ಜೆಡಿಎಸ್, ಬಿಜೆಪಿ ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ಪರಿಗಣಿಸಿದ್ದವು. ಕಾಂಗ್ರೆಸ್ ಇಲ್ಲಿಯವರೆಗೂ ವಿಧಾನಪರಿಷತ್, ನಿಗಮ ಮಂಡಲಿಯಲ್ಲಿ ಅವಕಾಶ ಮಾಡಿಕೊಟ್ಟಿಲ್ಲ. ಸಚಿವ ಸಂಪುಟ ವಿಸ್ತರಣೆ ವೇಳೆ ಸಮುದಾಯದ ಶಾಸಕರಿಗೆ ಅವಕಾಶ ನೀಡಬೇಕು. ವಿಧಾನಪರಿಷತ್ ಸದಸ್ಯ, ನಿಗಮ ಮಂಡಳಿಯಲ್ಲೂ ಅವಕಾಶ ಕಲ್ಪಿಸಬೇಕು' ಎಂದು ಹೇಳಿದರು.

'ಮನವಿ ಸ್ವೀಕರಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೇಡಿಕೆ ಈಡೇರಿಸುವ, ಜನಾಂಗದ ಏಳಿಗೆ, ರಕ್ಷಣೆಗೆ ಕಾಂಗ್ರೆಸ್ ಬದ್ಧವಾಗಿದೆ ಎಂಬ ಭರವಸೆ ನೀಡಿದ್ದಾರೆ' ಎಂದರು.

ಶಾಸಕರಾದ ಎ.ಸಿ.ಶ್ರೀನಿವಾಸ್, ಎಚ್.ವಿ.ವೆಂಕಟೇಶ್, ಶಿವರಾಜ ತಂಗಡಗಿ, ಮಾಜಿ ಸಚಿವ ಅರವಿಂದ ಲಿಂಭಾವಳಿ, ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ಮತ್ತಿತರರು ಉಪಸ್ಥಿತರಿದ್ದರು.

ರೈತರ ಧೈರ್ಯ ಕುಗ್ಗಿಸಿದ ಸಿ.ಎಂ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳೆ ಬೆಳೆಯದಿರಿ ಎಂದು ಮುಖ್ಯಮಂತ್ರಿ ನೀಡಿದ ಹೇಳಿಕೆಯು ರೈತರ ಆತ್ಮಸ್ಥೈರ್ಯ ಕುಗ್ಗಿಸುವ ಕೆಲಸ ಮಾಡಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಟೀಕಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದೇಶದಾದ್ಯಂತ ಮಳೆ ಕೊರತೆಯಾಗಿದೆ. ರಾಜ್ಯದಲ್ಲಿ ನೀರಿಲ್ಲ. ಮಳೆ ಬರುವವರೆಗೂ ಬಿತ್ತನೆ ಮಾಡಬೇಡಿ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಇದು ಅತ್ಯಂತ ನೋವಿನ ಮಾತು' ಎಂದು ಕಳವಳ ವ್ಯಕ್ತಪಡಿಸಿದರು.

'ಬರದ ಪರಿಸ್ಥಿತಿ ಎದುರಾದರೆ, ಪರಿಹಾರಕ್ಕೆ ಹಣವನ್ನು ಬಿಡುಗಡೆ ಮಾಡಬೇಕು. ಬಿತ್ತನೆ ನೆರವು ಒದಗಿಸಬೇಕು. ರೈತರಿಗೆ ಭರವಸೆ ನೀಡಿ, ಧೈರ್ಯ ತುಂಬುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕಿತ್ತು. ಆದರೆ, ಮುಖ್ಯಮಂತ್ರಿಯು ರೈತರ ಧೈರ್ಯಗೆಡಿಸುವ ಕೆಲಸ ಮಾಡಿದ್ದಾರೆ' ಎಂದರು.

'ಇನ್ನು 10–15 ದಿನಗಳಲ್ಲಿ ಮಳೆಯಾಗುವ ನಿರೀಕ್ಷೆ ಇದೆ. ಆ ಮಳೆಯಲ್ಲಿಯೇ ರೈತರು ಏನು ಮಾಡಬೇಕು ಎಂಬುದನ್ನು ತಿಳಿಸಬೇಕಿತ್ತು ಮತ್ತು ಬಿತ್ತನೆಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲು ಸೂಚಿಸಬೇಕಿತ್ತು. ಆದರೆ ಇದ್ಯಾವುದನ್ನೂ ಮಾತನಾಡದೆ, ಮುಖ್ಯಮಂತ್ರಿಯೇ ಕೈಚೆಲ್ಲಿ ಕುಳಿತರೆ ರೈತರು ಏನು ಮಾಡಬೇಕು. ಇಲ್ಲಿಯ ಮಳೆ ಕೊರತೆಯ ಮಧ್ಯೆಯೂ ತಮಿಳುನಾಡಿಗೆ ಕಾವೇರಿ ನೀರನ್ನು ಹರಿಸಲಾಗುತ್ತಿದೆ. ಈ ಸರ್ಕಾರದಿಂದ ರೈತರು ಇನ್ನೇನು ನಿರೀಕ್ಷಿಸಲು ಸಾಧ್ಯ' ಎಂದು ಪ್ರಶ್ನಿಸಿದರು.

ಬೆಳೆಹಾನಿ ಪರಿಹಾರ ಮತ್ತು ಜಾನುವಾರುಗಳಿಗೆ ಮೇವು ಒದಗಿಸಲು ರಾಜ್ಯ ಸರ್ಕಾರವು ತಕ್ಷಣವೇ ₹10,000 ಕೋಟಿಯನ್ನು ತೆಗೆದಿರಿಸಬೇಕು

ಆರ್.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಕರ್ನಾಟಕ ಸರ್ಕಾರ
ಆಯುಷ್ ಇಲಾಖೆ, ಜಿಲ್ಲಾ ಪಂಚಾಯತ್,
ಜಿಲ್ಲಾಆಯುಷ್ ಅಧಿಕಾರಿಗಳ ಕಾರ್ಯಾಲಯ, ಬಳ್ಳಾರಿ/ವಿಜಯನಗರ ವೀರನಗೌಡ ಕಾಲೋನಿ, ಅಶೋಕ ನಗರ, ಕುಮಾರಸ್ವಾಮಿ ದೇವಸ್ಥಾನದ ಎದುರುಗಡೆ, ಭಾಗ್ಯ ಆಸ್ಪತ್ರೆ ಹತ್ತಿರ, ಬಳ್ಳಾರಿ–583103
Email- dao.bellary09@gmail.com
ಸಂಖ್ಯೆ: ಜಿಆಕಬ/ಹೊ.ಗು/ಗ್ರೂಪ್–ಡಿ/ಸಿಬ್ಬಂದಿ(2)2025–26 ದಿನಾಂಕ:02.07.2026

ಇ–ಟೆಂಡರ್ ಪ್ರಕಟಣೆ

ಜಿಲ್ಲಾ ಆಯುಷ್ ಇಲಾಖೆ, ವಿಜಯನಗರ ಜಿಲ್ಲೆಯ ಅಧೀನ ಕಾರ್ಯನಿರ್ವಹಿಸುವ ಸರ್ಕಾರಿ ಆಯುಷ್ ಆಸ್ಪತ್ರೆಗಳು/ ಚಿಕಿತ್ಸಾಲಯಗಳಲ್ಲಿ ಖಾಲಿ ಇರುವ 31 ಗ್ರೂಪ್–ಡಿ ಹುದ್ದೆಗಳ ಎದುರು ಮಸಾಜಿಸ್ಟ್ ಹುದ್ದೆಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ 2026–27 ನೇ ಸಾಲಿಗೆ ಅಥವಾ ಕರಾರು ಒಪ್ಪಂದದ ದಿನಾಂಕದಿಂದ ಒಂದು ವರ್ಷದವರೆಗೆ ಕನಿಷ್ಠ ವೇತನದ ಆಧಾರದಲ್ಲಿ ಸೇವೆಯನ್ನು ಒದಗಿಸಲು ಇ–ಟೆಂಡರ್ ಕರೆಯಲಾಗಿದೆ. ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ **www.kppp.karnataka.gov.in** ನಲ್ಲಿ ವೀಕ್ಷಣೆ, ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಮಾಡಲು ಕೊನೆಯ ದಿನಾಂಕ: 18.07.2026 ಸಾಯಂಕಾಲ 05.00 ಗಂಟೆಯವರೆಗೂ ನಿಗಧಿಪಡಿಸಲಾಗಿದೆ. ಇ–ಟೆಂಡರ್ ಅಂದಾಜು ಮೌಲ್ಯ ಒಟ್ಟು ರೂ. 76.34 ಲಕ್ಷಗಳು ಇರುತ್ತದೆ. ಆಸಕ್ತಿವುಳ್ಳವರು ನಿಗದಿತ ಸಮಯದಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಸಹಿ/– ಜಿಲ್ಲಾ ಆಯುಷ್ ಅಧಿಕಾರಿಗಳು ಜಿಲ್ಲಾ ಆಯುಷ್ ಕಛೇರಿ, ಬಳ್ಳಾರಿ.
ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್ಎಂಸಿಎ/ಆರ್.ಓ.ಸಂಖ್ಯೆ/299

ಮೈಸೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಸೌಧ ಕ್ರಾಫರ್ಡ್ ಭವನ, ಮೈಸೂರು–570 005
e-mail: registrar@uni-mysore.ac.in, www.uni-mysore.ac.in
Ph No. 2419677/361, Fax: 0821-2419363/2419301
ನಂ.GL5/168/2025-26. ದಿನಾಂಕ: 01.07.2026

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (3ನೇ ಕರೆ) (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಕಚೇರಿ/ವಿಭಾಗಗಳಲ್ಲಿನ ವಿವಿಧ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಜರುಗುವ ಸಭೆ ಸಮಾರಂಭಗಳಿಗೆ ಟೀ, ಕಾಫೀ, ಲಘು ಉಪಹಾರ, ಭೋಜನ ಇತ್ಯಾದಿ ಆಹಾರ ಸರಬರಾಜು ಮಾಡುವ ಸಂಬಂಧ ಒಂದು ವರ್ಷದ ಅವಧಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧ್ಯಾದೇಶ 2000, ಅಧ್ಯಾಯ–2ರ ಅಧಿನಿಯಮ 3(1)ರ ಪ್ರಕಾರ ಕರ್ನಾಟಕ ಸರ್ಕಾರದ ಕೆ.ಟಿ.ಪಿ.ಪಿ ಪೋರ್ಟಲ್‌ನ ಮೂಲಕ ಅರ್ಹ ನೋಂದಾಯಿತ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದೆ. ಅಲ್ಪಾವಧಿ ಮರು ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 10.07.2026 ರ ಸಂಜೆ 4:00 ಗಂಟೆಯವರೆಗೆ.**

ಪೂರ್ಣ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂಮೆಂಟ್ ಪೋರ್ಟಲ್ ವೆಬ್‌ಸೈಟ್ (http://kppp.karnataka.gov.in) ನಿಂದ ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0821–2419361/222ನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು.
ವಾಸಾಸಂಇ/ಮೈಸೂರು/ಶಿರಡಿ ಸಾಯಿ/405/2026–27

INSTITUTE OF WOOD SCIENCE & TECHNOLOGY
(INDIAN COUNCIL OF FORESTRY RESEARCH AND EDUCATION)
(An Autonomous Body of Ministry of Environment, Forest and Climate Change, Govt. of India)
18th Cross, Malleswaram, Bengaluru - 560 003.
No.1-5/2026-27/IWST/Estt./1007 Date: 03.07.2026

RECRUITMENT NOTIFICATION FOR VARIOUS POSTS

Applications are invited from eligible candidates for filling up 01(one) post of Technical Assistant(Paymatrix Level-5), 04(four) posts of Technician (Paymatrix Level-3) and 01(One) post of Junior Translation Officer (Paymatrix Level-6), at ICFRE-Institute of Wood Science and Technology, Bengaluru.
For details, please visit the ICFRE/IWST websites **https://iwst.icfre.gov.in** and **http://icfre.gov.in**

Sd/-
Director

ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
ಟ್ರೇಡ್ ಸೆಂಟರ್, ಓಲ್ಡ್ ನಂ. 29/4, ನ್ಯೂ ನಂ. 116/2, ಮೊದಲನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560 001
ದೂರವಾಣಿ: 080–22266540/541, e-mail:kstidcl.bgl@gmail.com
ಸಂಖ್ಯೆ:ಕೆಎಸ್‌ಟಿಐಡಿಸಿಎಲ್/ಆಡಳಿತ/ಹೊ.ಟೆ.ಪಾರ್ಕ್/2026–27 ದಿನಾಂಕ:04.07.2026

ದಿನಾಂಕ ಮುಂದುವರೆಸಿದ ಮರು ಇ–ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ) (3ನೇ ಕರೆ)

ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿ., ಬೆಳಗಾವಿ / ಬೆಂಗಳೂರು ಈ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಕಸಬಾ ಹೋಬಳಿಯ ಅರಳೇಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 28ರಲ್ಲಿರುವ 30 ಎಕರೆ ಭೂಮಿಯಲ್ಲಿ ಹೊಸದುರ್ಗ ಜವಳಿ ಪಾರ್ಕ್ (Textile Park) ಅಭಿವೃದ್ಧಿಪಡಿಸಲು "ವಹಿವಾಟು ಸಲಹಾ ಸೇವೆಗಳ" (Transaction Advisory Services) ಆಯ್ಕೆಗಾಗಿ ಟೆಂಡರ್ ಮೂಲಕ ಯೋಜನೆಯ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ 2026–27 ನೇ ಸಾಲಿಗೆ ಅರ್ಹ ಬಿಡ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಈಗಾಗಲೆ ಕರೆಯಲಾಗಿದ್ದು, ಮುಂದುವರೆಸಿದ ಇ–ಟೆಂಡರ್‌ನ ಪ್ರಕಟಣೆಯನ್ನು ಮರು ಮುಂದುವರೆಸಲಾಗಿದೆ. ಟೆಂಡರ್ ಅರ್ಜಿ ಹಾಕಲು ಅಂತಿಮ **ದಿನಾಂಕ: 22.07.2026 ಸಂಜೆ 5.30 ಘಂಟೆಯವರೆಗೆ** ಹಾಗೂ ಆರ್ಥಿಕ ಲಕೋಟೆ ತೆರೆಯುವ **ದಿನಾಂಕ:24.07.2026 ಬೆಳಗ್ಗೆ 11.00 ಘಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಅಥವಾ **https://kppp.karnataka.gov.in** ಗೆ ಸಂಪರ್ಕಿಸಿ. ಹೆಚ್ಚಿನ ಮಾಹಿತಿಗೆ ಕೆ.ಎಸ್.ಟಿ.ಐ.ಡಿ.ಸಿ.ಎಲ್. ನಿಗಮದ ಸ್ಥಿರ ದೂರವಾಣಿ ಸಂಖ್ಯೆ: 080–22266540 ಇದಕ್ಕೆ ಸಂಪರ್ಕಿಸಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಟಿ.ಐ.ಡಿ.ಸಿ.ಎಲ್.
ವಾಸಾಸಂಇ/ವಾಪ್ರ/ಜಿಎ/1463/2026–27

ಕರ್ನಾಟಕ ಸರಕಾರ
ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಳಿಯಾಳ ವಿಭಾಗ, ಹಳಿಯಾಳ
ಬಸವೇಶ್ವರ ವೃತ್ತ, ಧಾರವಾಡ ರಸ್ತೆ ಹಳಿಯಾಳ (ಉ.ಕ).
ದೂರವಾಣಿ: 08284–220128 ಇ–ಮೇಲ್: dcfhalyal@gmail.com
ಸಂ.ಬಿ5/ಹರಾಜು/ಸಿಆರ್–08/2026–27 ದಿನಾಂಕ: 30–06–2026.

ಅರಣ್ಯ ಉತ್ಪನ್ನಗಳ ಇ–ಹರಾಜಿಗೆ ಸಂಬಂಧಪಟ್ಟ ಟೆಂಡರ್ ಪ್ರಕಟಣೆ

ಹಳಿಯಾಳ ವಿಭಾಗದ ಕೆಳಕಂಡ ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿ ದಾಸ್ತಾನು ಇರುವ ಅರಣ್ಯ ಉತ್ಪನ್ನಗಳನ್ನು ಜುಲೈ–2026 ನೇ ಮಾಹೆಯಲ್ಲಿ ಇ–ಹರಾಜು ಮೂಲಕ ವಿಲೇವಾರಿ ಮಾಡಲು ಕೆಳಕಂಡಂತೆ ದಿನಾಂಕವನ್ನು ನಿಗದಿಪಡಿಸಲಾಗಿದೆ. ಸದರಿ ಹರಾಜಿನಲ್ಲಿ ಈ ಕಛೇರಿಯ ಸವಿಸ್ತಾರ ಹರಾಜು ಪ್ರಕಟಣೆ ಸಂಖ್ಯೆ ಸಂ.ಬಿ5/ಹರಾಜು/ಸಿಆರ್–08/2026–27 ದಿನಾಂಕ: 30–06–2026 ರಲ್ಲಿ ತಿಳಿಸಿರುವ ಎಲ್ಲಾ ಷರತ್ತಿಗೊಳಪಟ್ಟು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಇ–ಹರಾಜಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ. ಹಾಗೂ ಇ–ಹರಾಜಿನ ವಿವರಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ **www.mstcecommerce.com & www.etimber.in** ಮೂಲಕ ಪಡೆದುಕೊಳ್ಳಬಹುದಾಗಿದೆ.

ಸರ್ಕಾರಿ ನಾಟಾ ಸಂಗ್ರಹಾಲಯದ ಹೆಸರು: ದಾಂಡೇಲಿ: **13-07-2026 & 16-07-2026, (All Four Sessions) First Session: 10:00 hrs. to 10:45 hrs, Second Session: 12:00hrs.to 12:45 hrs, Third Session: 14:00 hrs. to 14:45 hrs, Fourth Session: 16:00 hrs to 16:45 hrs 17-07-2026 (Two Sessions): First Session: 10:00 hrs. to 10:45 hrs, Second Session 12:00hrs.to 12:45 hrs 20-07-2026 & 24-07-2026: Third Session 14:00 hrs.to 14:45 hrs, Fourth Session 16:00 hrs to 16:45 hrs.**

ಭಾಗವತಿ: **18-07-2026 (All Four Sessions): First Session 10:00 hrs. to 10:45 hrs, Second Session 12:00 hrs.to 12:45 hrs, Third Session 14:00 hrs.to 14:45 hrs, Fourth Session 16:00 hrs to 16:45 hrs 20-07-2026 (One Sessions): First Session 10:00 hrs. to 10:45 hrs**

ಕುಳಗಿ: **20-07-2026 (One Sessions): Second Session 12:00hrs.to 12:45 hrs 21-07-2026 (All Four Sessions) First Session 10:00 hrs. to 10:45 hrs, Second Session 12:00hrs.to 12:45 hrs, Third Session 14:00 hrs.to 14:45 hrs, Fourth Session 16:00 hrs to 16:45 hrs.**

ಜಗಲಬೇಟ: **22-07-2026 & 23-07-2026, (All Four Sessions): First Session 10:00 hrs. to 10:45 hrs Second Session 12:00hrs to 12:45 hrs, Third Session 14:00 hrs.to 14:45 hrs, Fourth Session 16:00 hrs to 16:45 hrs 24-07-2026 (Two Sessions): First Session 10:00 hrs. to 10:45 hrs, Second Session 12:00 hrs to 12:45 hrs**

ಇ–ಹರಾಜಿಗೆ ಸಂಬಂಧಿಸಿದಂತೆ ಹೆಚ್ಚಿ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕೆಳಕಂಡ ವಿಳಾಸವನ್ನು ಸಂಪರ್ಕಿಸಬಹುದಾಗಿದೆ.
(1) Deputy Conservator of Forests, Haliyal dcfhalyal@gmail.com 08284-220128
(2) Assistant Conservator of Forests, Govt. Timber Depot, Dandeli acfgtd.dandeli@gmail.com 8861724343
(3) Range Forest Officer, Virnoli (Kulgi Depot) virnolirfo96@gmail.com 9035751595
(4) Range Forest Officer, Bhagawati bgtirfo97@gmail.com 9035739684
Range Forest Office. Jagalbet rfojbt93@gmail.com 7829251189

ಸಹಿ/–ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹಳಿಯಾಳ ವಿಭಾಗ, ಹಳಿಯಾಳ
DIPR/KWR/KSMCA/243/26-27
dt. 03.07.2026

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಯಾದಗಿರ.
ಕಾರ್ಯಪಾಲಕ ಅಭಿಯಂತರರ ಕಛೇರಿ,
ಪಂಚಾಯತ ರಾಜ್ ಇಂಜಿನೀಯರಿಂಗ್, ವಿಭಾಗ,
ಎನ್.ವಿ.ಎಮ್. ಹೋಟೆಲ್ ಎದರುಗಡೆ, ಸ್ಟೇಷನ್ ರಸ್ತೆ, ಯಾದಗಿರಿ–585202.
ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಕಕಪ್ರಅಮಂ/ಅಅ/ತಾಶಾ–1/2026–27/583 ದಿನಾಂಕ: 01.07.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

1 ಅಕ್ಷರ ಆವಿಷ್ಕಾರ ಯೋಜನೆಯ ಪ್ಯಾಕೇಜ್‌ಗಳ ಇಂಡೆಂಟ್ ಸಂಖ್ಯೆ:SHAHAPUR TALUKA 08 PACKAGE1. PackageNoYDG-SHP-01(2Works)RDPR/2026-27/OW/WORK_INDENT26842 2.Package NoYDG-SHP-02 (5 Works) RDPR/2026-27/OW/WORK_INDENT26844 3.Package No YDG-SHP-03 (6 Works) RDPR/2026-27/OW/WORK_INDENT26845 4.Package No YDG-SHP-04 (08 Works) RDPR/2026-27/OW/WORK_INDENT26846 5.Package No YDG-SHP-05 (03 Works) RDPR/2026-27/OW/WORK_INDENT26847 6.Package No YDG-SHP-06 (4 Works) RDPR/2026-27/OW/WORK_INDENT27462 7.Package No YDG-SHP-07 (5 Works) RDPR/2026-27/OW/WORK_INDENT27478 8.Package No YDG-SHP-08 (6 Works) RDPR/2026-27/OW/WORK_INDENT27480 **2) ಲೆಕ್ಕ ಶೀರ್ಷಿಕೆ :** 2024–25ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಅಕ್ಷರ ಆವಿಷ್ಕಾರ) ಯೋಜನೆ **3) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ. 15.41 ಲಕ್ಷ ಮತ್ತು ಗರಿಷ್ಠ ರೂ. 57.29 ಲಕ್ಷ **4)ಗುತ್ತಿಗೆದಾರರ ದರ್ಜೆ:** 3ನೇ ದರ್ಜೆ ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:** 03.07.2026 ರಿಂದ 13.07.2026 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ :** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲಾ) **7)ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 13.07.2026 ಸಾಯಂಕಾಲ 4:00 ಗಂಟೆವರೆಗೆ **8)ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್ : 15.07.2026 ಬೆಳ್ಳಿಗೆ 11.00 ನಂತರ 9)ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್:** 22.07.2026 ಬೆಳ್ಳಿಗೆ 11.00 ನಂತರ **10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯಪಾಲಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಎನ್.ವಿ.ಎಮ್. ಹೋಟೆಲ್ ಎದರುಗಡೆ, ಸ್ಟೇಷನ್ ರಸ್ತೆ, ಯಾದಗಿರಿ–585202 **11) ಅಂತರಜಾಲ ತಾಣದ ವಿಳಾಸ: https://kppp.karnataka.gov.in.**

ಸೂಚನೆ :– ಟೆಂಡರರಿಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,
ಯಾದಗಿರ.
ವಾ.ಸಾ.ಸಂ.ಇ/ಯಾದಗಿರಿ/140/ಕೆ.ಎಸ್.ಎಂ.ಸಿ&ಎ/2026–27

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5, ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192–264669
ಇ–ಮೇಲ್: eebcddvg@yahoo.co.in
ಸಂ:ಕಾಇಂ/ಕನೀನಿನಿ/ಭನಾವಿ.5/ದಾ/ಪಿ.ಬಿ.3/4701ಭದ್ರಾ/2026–27/652
ದಿನಾಂಕ: 29.06.2026

ಟೆಂಡರ್ ಪ್ರಕಟಣೆ

ಉಲ್ಲೇಖ:– **No: EE/KNNL/ BCD-5/DVG/PB-3/4701–Kogaluru Tank/ 2026-27 / 651 Date:29.06.2026**

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ ರವರು, ಉಲ್ಲೇಖಿತ ಟೆಂಡರ್ ಪ್ರಕಟಣೆಯಲ್ಲಿ ಲೆಕ್ಕ ಶೀರ್ಷಿಕೆ 4701 ಭದ್ರಾ ಯೋಜನೆ ಅಡಿಯಲ್ಲಿನ ಕಾಮಗಾರಿಗೆ, **KW4** ರಲ್ಲಿ ದ್ವಿ ಲಕೋಟೆ ಪದ್ಧತಿಯಡಿ **ಟರ್ನ್ ಕೀ** ಆಧಾರದ ಮೇಲೆ ಕೆಪಿಪಿಪಿ–ಪೋರ್ಟ್‌ಲ್ ಮುಖಾಂತರ ಟೆಂಡರ್‌ಗಳನ್ನು ಅಹ್ವಾನಿಸಿದ್ದು, ಟೆಂಡರ್‌ಗೆಟ್ಟ ಮೊತ್ತ 400.83ಲಕ್ಷಗಳು ಇರುತ್ತದೆ. ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಕೆಪಿಪಿಪಿ–ಪೋರ್ಟ್‌ಲ್ ವೆಬ್‌ಸೈಟ್ (https://kppp.karnataka.gov.in) ಮುಖಾಂತರವೇ **ದಿ: 01.07.2026 ರಿಂದ** ಡೌನಲೋಡ್ ಮಾಡಿಕೊಂಡು ದಿ: **10.07.2026 ರ ಸಂಜೆ 5.00** ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಕುರಿತು ಸ್ಪಷ್ಟೀಕರಣಕ್ಕೆ ದಿನಾಂಕ: **06.07.2026 ರಂದು 4.00** ಘಂಟೆವರೆಗೆ, ಪ್ರಿ ಬಿಡ್ ಸಭೆ **ದಿ: 06.07.2026** ರಂದು ಬೆಳ್ಳಿಗ್ಗೆ **11.00 ಘಂಟೆಗೆ** ಈ ಕೆಳಗೆ ಸಹಿ ಮಾಡಿದ ಕಛೇರಿಯಲ್ಲಿ ನೆರವೇರಿಸಲಾಗುವುದು ಮತ್ತು ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 14.07.2026 ರಂದು ಸಂಜೆ 5.10** ಘಂಟೆಗೆ ತೆರೆಯಲಾಗುವುದು.

ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ–ಪೋರ್ಟ್‌ಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕನೀನಿನಿ ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ.
ವಾಸಾಇ/ಡಿವಿಜಿ/196/
ಕೆಎಸ್ಎಂಸಿಎ/2026–27

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ
ಆರೋಗ್ಯ ಸೌಧ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು– 560023.
ಸಂಖ್ಯೆ:ಡಿಡಿ/ಪಿ.ಸಿ&ಪಿ.ಎನ್.ಡಿ.ಟಿ/51/2023–24 ದಿನಾಂಕ: 02–07–2026

ಪಿ.ಸಿ&ಪಿ.ಎನ್.ಡಿ.ಟಿ ಕಾಯ್ದೆಯಡಿಯಲ್ಲಿ ಕಾರ್ಯಕ್ರಮ ಸಮಾಲೋಚಕರಾಗಿ ಹುದ್ದೆಗೆ (ಒಂದು ಹುದ್ದೆ) ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ದಿನಾಂಕ:– 14–07–2026 ರಂದು ವಾಕ್–ಇನ್–ಇಂಟರ್‌ವ್ಯೂ ಸಂದರ್ಶನಕ್ಕೆ ಕರೆಯಲಾಗಿದೆ.

ಕಾರ್ಯಕ್ರಮ ಸಮಾಲೋಚಕರು ಅರ್ಹತಾ ಮಾನದಂಡಗಳು:– 1) ವಿದ್ಯಾರ್ಹತೆ:– **MBBS/ BDS** 2) ತಾಂತ್ರಿಕ ಕೌಶಲ್ಯಗಳು:– ಕಂಪ್ಯೂಟರ್ ನಲ್ಲಿ ಉತ್ತಮ ಜ್ಞಾನ ಹೊಂದಿರಬೇಕು. 3) ಅನುಭವ :– ಆರೋಗ್ಯ ವಲಯದಲ್ಲಿ ಕನಿಷ್ಠ 02 ವರ್ಷಗಳ ಅನುಭವ, 4) ವಯಸ್ಸಿನ ಮಿತಿ:– 50 ವರ್ಷಗಳು. 5) ವೇತನ:–ತಿಂಗಳಿಗೆ 50,000/–, 6) ಹುದ್ದೆ ಆಯ್ಕೆ ಪ್ರಕ್ರಿಯೆ:– ನೇರ ಸಂದರ್ಶನದ ಮೂಲಕ. 7) ತಕ್ಷಣ ಸೇರುವವರಿಗೆ ಆದ್ಯತೆ ನೀಡಲಾಗುವುದು. 8) ಬಹು ಭಾಷೆಗಳಲ್ಲಿ ಉತ್ತಮ ಸಂವಹನ ಕೌಶಲ್ಯ ಇರಬೇಕು.

ಗಮನಿಸಿ:– ದಾಖಲಾತಿಗಳ ಪರಿಶೀಲನೆ ದಿನಾಂಕ:– 14–07–2026 ರ ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ವರೆಗೆ ಮತ್ತು ನೇರ ಸಂದರ್ಶನ ದಿನಾಂಕ:–14–07–2026 ರ ಮಧ್ಯಾಹ್ನ 2.00 ರಿಂದ 4 ಗಂಟೆಯ ವರೆಗೆ ಸ್ಥಳ:– ಯೋಜನಾ ನಿರ್ದೇಶಕರು, ಆರ್.ಸಿ.ಎಚ್ ರವರ ಕಛೇರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯಸೌಧ, 1ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–23. ಆಸಕ್ತ ಅಭ್ಯರ್ಥಿಗಳು ಸಂದರ್ಶನದ ವೇಳೆ ಮೂಲ ದಾಖಲಾತಿಗಳು ಹಾಗೂ ಅದರ ನಕಲು ಪ್ರತಿಯೊಂದಿಗೆ ಹಾಜರಿರತಕ್ಕದ್ದು.

ಸಹಿ/–
ಯೋಜನಾ ನಿರ್ದೇಶಕರು (ಆರ್. ಸಿ. ಹೆಚ್),
ರಾಷ್ಟ್ರೀಯ ಆರೋಗ್ಯ ಅಭಿಯಾನ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
DIPR/CP/1461/
Zen/2026-27

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029
ದೂರವಾಣಿ ಸಂಖ್ಯೆ: 080–29753354/56
ಇ–ಮೇಲ್– karbuildworkerswelfare@gmail.com
ಸಂಖ್ಯೆ: KBOCWWB/NOTIFICATIONS/2026-27 Dated: 30-06-2026

ಇ–ಟೆಂಡರ್ ಪ್ರಕಟಣೆ

ಈ ಅಧಿಸೂಚನೆ ಮತ್ತು ಟೆಂಡರ್ ದಾಖಲೆಗಳಲ್ಲಿ ವಿವರಿಸಿದ ನಿಯಮಗಳ ಪ್ರಕಾರ ಮೂರು ಬಿಡ್ ವ್ಯವಸ್ಥೆಯಲ್ಲಿ (ಪೂರ್ವ ಅರ್ಹತಾ, ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಮಂಡಳಿಯ ನೋಂದಾಯಿತ ಕಟ್ಟಡ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ ಬೆಂಗಳೂರು ಉಪವಿಭಾಗ–04, 06, 08 ಮತ್ತು ಬೆಂಗಳೂರು ಗ್ರಾಮಾಂತರ ವ್ಯಾಪ್ತಿಯಲ್ಲಿ ಪ್ರಿವೆಂಟೀವ್ ಹೆಲ್ತ್‌ಕೇರ್ ತಪಾಸಣಾ ಸೌಲಭ್ಯಗಳನ್ನು (3ನೇ ಹಂತ) ಒದಗಿಸಲು ಏಜೆನ್ಸಿಗಳ ಆಯ್ಕೆಗಾಗಿ ಟೆಂಡರ್‌ಗಳನ್ನು ಈ ಮೂಲಕ ಆಹ್ವಾನಿಸಲಾಗಿದೆ.
ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಏಜೆನ್ಸಿಯವರು ಕೆ.ಪಿ.ಪಿ. ಪೋರ್ಟಲ್ www.kppp.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ–ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30–07–2026 ಸಂಜೆ 5.00 ರವರೆಗೆ ಇರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ.ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ಜಂಟಿ ಕಾರ್ಯದರ್ಶಿ
ಕ.ಕ.ಇ.ನಿ.ಕಾ.ಕ. ಮಂಡಳಿ
ವಾ.ಸಾ.ಸಂ.ಇ/ವಾಪ್ರ/1468/ಆಕಾರ್/2026–27

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ,
ಲೋ.ಇ, ಉಡುಪಿ ವಿಭಾಗ – ಉಡುಪಿ – 576101.
ದೂರವಾಣಿ & ಫ್ಯಾಕ್ಸ್: (0820) 2531802
ನಂ:ಪಿಡಬ್ಲ್ಯೂಡಿ:ಯುಡಿಎನ್:ಎನ್‌ಐಟಿ:07:2026–27:ಎಇ–2 ದಿ: 03.07.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

2025–26ನೇ ಸಾಲಿನ ರೂ. 367.46 ಮತ್ತು 379.23 ಲಕ್ಷದ 5054–80–190–0–01–132 – ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಯೋಜನೆಯಡಿಯ 2 ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ 'ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್' "kppp.karnataka.gov.in" ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆ್ಯಕ್ಟ್ – 2023ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು, ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ "kppp.karnataka.gov.in" ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20.07.2026ರ ಸಂಜೆ 5.30ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ
ವಾಸಾಇ/ಸನಿಉ/ಕೆಎಸ್‌ಎಂಸಿಎ/203/
26–27 ದಿ: 03.07.2026

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:126, ನವನಗರ, ಬಾಗಲಕೋಟೆ
ದೂರವಾಣಿ: 08354-235042 ಇ–ಮೇಲ್: bgkeezpe@yahoo.com
ಫ್ಯಾಕ್ಸ್: 08354-235043
ಸಂ:ಕಾನಿಇಂ/ಪಂರಾಇಂಎ/ಬಿಜಿಕೆ/ಪಿಬಿ–2,3/ಟೆಂಡರ್/2026–27/1138 ದಿನಾಂಕ: 02–07–2026

ಇ–ಪ್ರೊಕ್ಯೂರ್‌ಮೆಂಟ್ ದ್ವಿ–ಲಕೋಟೆ ಟೆಂಡರ್ ಪ್ರಕಟಣೆ
ಕೆ.ಡಬ್ಲ್ಯೂ–3 & 4 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ **2025–26ನೇ** ಸಾಲಿನ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಬಾಗಲಕೋಟೆ ಜಿಲ್ಲೆಯ ಬೀಳಗಿ, ಜಮಖಂಡಿ, ಬಾಗಲಕೋಟೆ, ಬಾದಾಮಿ ಉಪವಿಭಾಗ ವ್ಯಾಪ್ತಿಯ ಈ ಕೆಳಗಿನ ಕಾಮಗಾರಿಗಳಿಗೆ Standard Tender Document KW-3 & 4 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ **1999–2000ರ** ಪ್ರಕಾರ ಆ್ಯಕ್ಟ್ **2000ರ** ನಿಯಮದಂತೆ ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆ ಕಾಮಗಾರಿಗಳ ಇಂಡೆಂಟ್ ನಂ: **27364, 27363, 27365, 22912/CALL-2, 24119/CALL-3, 22138/CALL-5, 22510/CALL-2, 24845/CALL-2** ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ **(ರೂ.60.00 ದಿಂದ 200.00 ಲಕ್ಷಗಳ ಮಿತಿಗೊಳಪಟ್ಟು)**, ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು **ಸಮಯ: 24.07.2026 ರ ಸಾಯಂಕಾಲ 5.30 ಗಂಟೆವರೆಗೆ.**

ಪ್ರಿ ಬಿಡ್ ಮೀಟಿಂಗ ತೆರೆಯುವ **ದಿನಾಂಕ: 21.07.2026 ಬೆಳಿಗ್ಗೆ 11.00 ಗಂಟೆಗೆ** ರಂದು ವೃತ್ತ ಕಚೇರಿಯಲ್ಲಿ ಜರುಗುವುದು.

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು **ಸಮಯ: 28.07.2026 ರಂದು ಮುಂಜಾನೆ 11.00 ಗಂಟೆಯ** ನಂತರ,

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕ ಬಿಡ್ ಅನುಮೋದನೆ ನಂತರ

ಸೂಚನೆ: ಹೆಚ್ಚಿನ ವಿವರಗಳಿಗಾಗಿ **https://kppp.karnataka.gov.in/** ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ)ವಿಭಾಗ, ಬಾಗಲಕೋಟೆ,
ವಾ.ಸಾ.ಸಂ.ಇ/ಬಾಗಲಕೋಟೆ/124/
ದೇಶಪಾಂಡೆಪಬ್ಲಿಸಿಟಿ/2026–27

ಜಿಲ್ಲಾ ಪಂಚಾಯತ್, ಕೋಲಾರ
ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಎಸ್.ಎನ್.ಆರ್. ಆಸ್ಪತ್ರೆ ಆವರಣ, ಕೋಲಾರ–563101.
E-Mail ID: dao.kolar09@gmail.com, Ph:08152-220025
ಸಂಖ್ಯೆ:ಆಯುಷ್/ಕೋ/25/2026–27 ದಿನಾಂಕ: 29.06.2026

ಟೆಂಡರ್ ಪ್ರಕಟಣೆ

ಕೋಲಾರ ಜಿಲ್ಲೆಯ ಆಯುಷ್ ಇಲಾಖೆಯಡಿಯಲ್ಲಿ ಬರುವ ಜಿಲ್ಲಾ ಆಯುಷ್ ಕಛೇರಿ, ಆಸ್ಪತ್ರೆ, ಚಿಕಿತ್ಸಾಲಯ ಹಾಗೂ ಘಟಕಗಳಿಗೆ **ಹೊರ ಗುತ್ತಿಗೆ** ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಗ್ರೂಪ್–ಡಿ (ಸ್ವಚ್ಛತಾ ಸಿಬ್ಬಂದಿ) ಸಿಬ್ಬಂದಿಗಳ ಸೇವೆಯನ್ನು ಮಾನವ ಸಂಪನ್ಮೂಲ ಸಂಸ್ಥೆಯಿಂದ ಸೇವೆಯನ್ನು ಒದಗಿಸಲು ಇ–ಟೆಂಡರ್‌ನ್ನು ದ್ವಿ–ಲಕೋಟೆಯಲ್ಲಿ ಆಹ್ವಾನಿಸಲಾಗಿದೆ. **ವಿವರ:** (1) ಇ–ಪೋರ್ಟ್‌ಲ್‌ನಲ್ಲಿ ಟೆಂಡರ್ ನಮೂನೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭವಾಗುವ **ದಿನಾಂಕ: 02.07.2026 ಪೂರ್ವಾಹ್ನ 11.00 ಗಂಟೆಗೆ.** (2) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ **ದಿನಾಂಕ: 18.07.2026 ಪೂರ್ವಾಹ್ನ 11.00 ಗಂಟೆವರೆಗೆ.** (3) ಟೆಂಡರ್ ತೆರೆಯುವುದು: ತಾಂತ್ರಿಕ ಬಿಡ್: **20.07.2026 ಪೂರ್ವಾಹ್ನ 12.00 ಘಂಟೆ** ಜಿಲ್ಲಾ ಆಯುಷ್ ಕಛೇರಿ, ಕೋಲಾರ. (4) ಟೆಂಡರ್ ತೆರೆಯುವುದು: ಆರ್ಥಿಕ ಬಿಡ್ (ಸ್ಥಳ ಮತ್ತು ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ): **24.07.2026 ಪೂರ್ವಾಹ್ನ 11.30 ಗಂಟೆ** ಜಿಲ್ಲಾ ಪಂಚಾಯತ್, ಕೋಲಾರ. (5) ಟೆಂಡರ್ ಅವಧಿ ಜಾರಿಗೆ ಬರುವುದು: ಕಾರ್ಯಾದೇಶ ನೀಡಿದ ದಿನಾಂಕದಿಂದ ಒಂದು ವರ್ಷದವರೆಗೆ. (6) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ, ವಿಳಾಸ ಹಾಗೂ ದೂರವಾಣಿ ಸಂಖ್ಯೆ: ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆಯುಷ್ ಕಛೇರಿ, ಎಸ್‌ಎನ್‌ಆರ್ ಆಸ್ಪತ್ರೆ ಆವರಣ, ಕೋಲಾರ–563101. **E-mail: dao.kolar09@gmail.com,** 08152–200025. ಟೆಂಡರ್ ನಮೂನೆಗಳಿಗಾಗಿ ಮತ್ತು ಷರತ್ತು/ನಿಬಂಧನೆಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು **https://kppp.karnataka.gov.in.**ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾ ಆಯುಷ್ ಅಧಿಕಾರಿಗಳು
ಜಿಲ್ಲಾ ಆಯುಷ್ ಕಛೇರಿ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:141/ಕೆಎಸ್ಎಂಸಿಎ/2026–27

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ
ಕಾರ್ಯಾಪಾಲಕ ಇಂಜಿನಿಯರ್‌ರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ.
ಇ–ಮೇಲ್:zped.cta@gmail.com ದೂರವಾಣಿ ಸಂ:08194–222372
ಸಂ: ಇಇ/ಪಂರಾಜ್‌ಇಂವಿ/ಚಿದು/ತ್ರಾಶಾ/ಟೆಂಡರ್/2026–27/846
ದಿನಾಂಕ: 03–07–2026.

Corrigendum

ದಿನಾಂಕ ಮುಂದೂಡಿಕೆ ಪ್ರಕಟಣೆ
e-procurement ಮೂಲಕ ಮಾತ್ರ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ.ಗಳ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಚಿತ್ರದುರ್ಗ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ವ್ಯಾಪ್ತಿಯ Construction of New Anganawadi building (31) and Upgreadation of Old anganawadi buildings (41) in Holalkere Taluk (Ind:25353) Call-2 ಕಾಮಗಾರಿಗೆ ಈಗಾಗಲೇ ಟೆಂಡರ್ ಕರೆಯಲಾಗಿತ್ತು. ತಾಂತ್ರಿಕ ಕಾರಣಗಳಿಂದ ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಮುಂದೂಡಲಾಗಿದ್ದು, ವಿವರ ಈ ಕೆಳಕಂಡಂತಿರುತ್ತವೆ. ಗುತ್ತಿಗೆದಾರರು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (https://eproc.karnataka.gov.in) or E-Proc Help desk Phone No: 080-25501216, 080-25501227 ಸಂಪರ್ಕಿಸಲು ಅಥವಾ ದೂರವಾಣಿ ಸಂಖ್ಯೆ: 08194–222372 ಕಾರ್ಯಪಾಲಕ ಅಭಿಯಂತರರು, ಪಂ.ರಾಜ್.ಇಂ.ವಿಭಾಗ, ಚಿತ್ರದುರ್ಗ ರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ. ವಿವರಗಳು ಈ ಕೆಳಕಂಡಂತಿವೆ:–

ಪ್ರಸ್ತುತ ದಿನಾಂಕ
ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿ: 07.07.2026ರ ಸಮಯ 16.00
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 08.07.2026ರ : ಸಮಯ 16.00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.07.2026ರ : ಸಮಯ 16.01
ಆರ್ಥಿಕ ಬಿಡ್ ತೆರೆಯುವ ದಿನಾಂಕ: 10.07.2026ರ : ಸಮಯ 16.02

ಮುಂದೂಡಿದ ದಿನಾಂಕ
ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿ: 13.07.2026ರ ಸಮಯ 16.00
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 15.07.2026ರ : ಸಮಯ 16.00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 16.07.2026ರ : ಸಮಯ 16.01
ಆರ್ಥಿಕ ಬಿಡ್ ತೆರೆಯುವ ದಿನಾಂಕ: 17.07.2026ರ : ಸಮಯ 16.02

RO.No.200:DIPR/CTA/KSMCA/2026-27
ಸಹಿ/– ಕಾರ್ಯಪಾಲಕ ಅಭಿಯಂತರರು
ಪಂ.ರಾಜ್ ಇಂ.ವಿಭಾಗ, ಚಿತ್ರದುರ್ಗ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 & 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು – 560009. ಫೋನ್ : 080–22265383
ವೆಬ್‌ಸೈಟ್: www.kiadb.in
ನಂ.ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–05/435/2026–27 ದಿನಾಂಕ: 03.07.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಕೆಪಿಡಬ್ಲ್ಯೂಡಿ ನೋಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಐಟಂ ದರ ಟೆಂಡರ್‌ಗಳನ್ನು ದ್ವಿ ಲಕೋಟೆ ಪದ್ದತಿಯಡಿಯಲ್ಲಿ ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: 1) ಗದಗ ಜಿಲ್ಲೆ, ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ನಾಗಸಮುದ್ರ ಗ್ರಾಮದ ಪಕ್ಕದಲ್ಲಿ ಕಾಂಪೌಂಡ್ ಗೋಡೆ ನಿರ್ಮಾಣ ಹಾಗೂ ಬೋರ್‌ವೇಲ್ ಮತ್ತು ಪೈಪ್‌ಲೈನ್ ದುರಸ್ತಿ ಮಾಡುವ ಕಾಮಗಾರಿ. 2) ಬೀದರ್ ಜಿಲ್ಲೆ, ಬಸವಕಲ್ಯಾಣ ಕೈಗಾರಿಕಾ ಪ್ರದೇಶದಲ್ಲಿ ರಸ್ತೆ, ಆರ್‌ಸಿಸಿ ಒಳಚರಂಡಿ ಹಾಗೂ ಆರ್‌ಸಿಸಿ ಬಾಕ್ಸ್ ಕಲ್ವರ್ಟ್‌ಗಳ ಪುನರ್ ನಿರ್ಮಾಣ ಮಾಡುವ ಕಾಮಗಾರಿ. 3) ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಎನ್‌ಹೆಚ್–50 ನಿಂದ ನೇರವಾಗಿ ವಿಮಾನ ನಿಲ್ದಾಣಕ್ಕೆ ಸಂಪರ್ಕಿಸುವ ಅನುಕೂಲಕರ ಪಾದಚಾರಿ ಮಾರ್ಗ ಮತ್ತು 24ಮೀ ಅಗಲದ ರಸ್ತೆ ರಚನೆ, ಫ್ಲೆಕ್ಸಿಬಲ್ ಪೇವ್‌ಮೆಂಟ್, ಆರ್.ಸಿ.ಸಿ ಸೈಡ್ ಡ್ರೈನ್ಸ್‌ಗಳ ನಿರ್ಮಾಣ ಮಾಡುವ ಕಾಮಗಾರಿ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ: **21.07.2026 ಸಂಜೆ 04.00 ಗಂಟೆವರೆಗೆ.**

ಸಹಿ/–
ಮುಖ್ಯ ಅಭಿಯಂತರರು–2
ಕೆ.ಐ.ಎ.ಡಿ.ಬಿ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/1477/ಆಕಾರ್/2026–27

ಚಿಟಿಕೆ ಸುದ್ದಿ

ಪದ್ಮಾಗೆ ಸಾಹಿತ್ಯ ಅಕಾಡೆಮಿ ದತ್ತಿ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ ನೀಡುವ 2025ನೇ ಸಾಲಿನ 'ಪದ್ಮ–ಶಾಸ್ತ್ರಿ ಗೌರವ ಅನುವಾದಕ ಪ್ರಶಸ್ತಿ'ಗೆ ಅನುವಾದಕಿ ಪದ್ಮಾ ರಾಮಚಂದ್ರ ಶರ್ಮ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ₹50 ಸಾವಿರ ನಗದು ಒಳಗೊಂಡಿದೆ. ವಿಮರ್ಶಕ ಪ್ರೊ. ಸಿ.ಎನ್.ರಾಮಚಂದ್ರನ್ ಅವರು ಈ ಪ್ರಶಸ್ತಿಗೆ ದತ್ತಿನಿಧಿ ಇರಿಸಿದ್ದಾರೆ. ಸಾಹಿತ್ಯ ಕೃತಿಗಳನ್ನು ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದಿಸಿದ ಸಾಹಿತಿಗಳ ಜೀವಮಾನ ಸಾಧನೆ ಗುರುತಿಸಿ ಈ ಪ್ರಶಸ್ತಿ ನೀಡಲಾಗುತ್ತದೆ.

1936ರಲ್ಲಿ ಮೈಸೂರಿನಲ್ಲಿ ಜನಿಸಿದ ಪದ್ಮಾ ಅವರು ಕನ್ನಡದ ಕಣ್ವ ಎಂದೇ ಪ್ರಖ್ಯಾತರಾದ ಬಿ.ಎಂ.ಶ್ರೀಕಂಠಯ್ಯ ಅವರ ತಂಗಿಯ ಮರಿಮಗಳು. ನವ್ಯ ಚಳವಳಿಯ ಪ್ರಮುಖ ಕವಿ ರಾಮಚಂದ್ರ ಶರ್ಮ ಅವರ ಪತ್ನಿ. ಅವರು ಹಲವು ಕೃತಿಗಳನ್ನು ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ ಎಂದು ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ತಿಳಿಸಿದ್ದಾರೆ.

ಕೈಗಾ: ಸ್ಥಳ ನಿರ್ದೇಶಕರಾಗಿ ಸುಪ್ರತ್ ನೇಮಕ

ಕಾರವಾರ: ತಾಲ್ಲೂಕಿನ ಕೈಗಾದಲ್ಲಿರುವ ಅಣು ವಿದ್ಯುತ್ ಕೇಂದ್ರದ ಸ್ಥಳ ನಿರ್ದೇಶಕರಾಗಿ ಸುಪ್ರತ್ ದಾಸ್ ನೇಮಕಗೊಂಡಿದ್ದಾರೆ. ಕೇಂದ್ರ ಸ್ಥಾಪನೆಯಾದಾಗಿನಿಂದ ಈ ಹುದ್ದೆ ಅಲಂಕರಿಸಿದವರಲ್ಲಿ ಅವರು 11ನೆಯವರು.

ಒಡಿಶಾ ರಾಜ್ಯದ ಪೂರಿ ಜಿಲ್ಲೆಯ ಸುಪ್ರತ್ ಅವರು 1989ರಲ್ಲಿ ಕೈಗಾ ಕೇಂದ್ರದಲ್ಲೇ ಎಂಜಿನಿಯರ್ ಆಗಿ ಉದ್ಯೋಗ ಆರಂಭಿಸಿದ್ದರು. ಪರಮಾಣು ವಿದ್ಯುತ್ ಕೇಂದ್ರದ ಕಮಿಷನಿಂಗ್ ಕ್ರಿಯೆಗಳನ್ನು ನಿಭಾಯಿಸುವಲ್ಲಿ ಉತ್ತಮ ಅನುಭವ ಹೊಂದಿದ್ದಾರೆ. ಈ ಹಿಂದಿನ ಸ್ಥಳ ನಿರ್ದೇಶಕರಾಗಿದ್ದ ಬಿ.ವಿನೋದ ಕುಮಾರ್ ಜೂನ್ 30ರಂದು ನಿವೃತ್ತರಾಗಿದ್ದಾರೆ.

ಸನ್ನಡತೆ: 24 ಕೈದಿಗಳ ಬಿಡುಗಡೆ

ಬೆಂಗಳೂರು: ರಾಜ್ಯದ ವಿವಿಧ ಕಾರಾಗೃಹಗಳಲ್ಲಿರುವ 24 ಕೈದಿಗಳನ್ನು ಸನ್ನಡತೆಯ ಆಧಾರದ ಮೇಲೆ ಅವಧಿ ಪೂರ್ವ ಬಿಡುಗಡೆಗೆ ರಾಜ್ಯಪಾಲರು ಆದೇಶಿಸಿದ್ದಾರೆ.

ಜೀವಾವಧಿ ಶಿಕ್ಷಾ ಬಂದಿಗಳ ಬಿಡುಗಡೆ ಕಾರ್ಯಕ್ರಮವು ಇದೇ 4ರ ಮಧ್ಯಾಹ್ನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಡೆಯಲಿದ್ದು, ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪಾಲ್ಗೊಳ್ಳಲಿದ್ದಾರೆ ಎಂದು ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆಯ ಪ್ರಕಟಣೆ ತಿಳಿಸಿದೆ.

ದಲಿತರು ಡಿಸಿಎಂ ಮಾತ್ರ ಆಗಬೇಕಾ?

ದಲಿತ ಜನಾಗ್ರಹ ಸಮಾವೇಶದಲ್ಲಿ ಮಾವಳ್ಳಿ ಶಂಕರ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2028ರ ವಿಧಾನಸಭೆ ಚುನಾವಣೆಯು ದಲಿತ ಮುಖ್ಯಮಂತ್ರಿಯ ಚುನಾವಣೆ ಆಗಿರುತ್ತದೆ. ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ ಅವರು ಇದರ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಬೇಕು ಎಂದು ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಹೇಳಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಶುಕ್ರವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಆಯೋಜಿಸಿದ್ದ ದಲಿತ ಜನಾಗ್ರಹ ಸಮಾವೇಶದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಸುಮಾರು 101 ಜಾತಿಗಳು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿವೆ. 51 ಜಾತಿಗಳು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿವೆ. ಎಲ್ಲ ಸೇರಿದರೆ 1.30 ಕೋಟಿ ಜನಸಂಖ್ಯೆ. ಆದರೆ, ಈಗಲೂ ಉಪಮುಖ್ಯಮಂತ್ರಿಯಾಗಿಯೇ ಇರಬೇಕಾ ಎನ್ನುವುದನ್ನು ಪ್ರಶ್ನಿಸಬೇಕು ಎಂದು ತಿಳಿಸಿದರು.

ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಕಾಂಗ್ರೆಸ್‌ನ ಕೇವಲ ಮತ ಬ್ಯಾಂಕ್‌ಗಳಾಗಿವೆ. ರಾಜ್ಯದಲ್ಲಿ ಲಿಂಗಾಯತ, ಒಕ್ಕಲಿಗ, ಬ್ರಾಹ್ಮಣ, ಹಿಂದುಳಿದ ಸಮುದಾಯದವರು ಮುಖ್ಯಮಂತ್ರಿಗಳಾಗಿದ್ದಾರೆ. ಆದರೆ, ದಲಿತ ಸಮುದಾಯದವರು ಇಂದಿಗೂ ಮುಖ್ಯಮಂತ್ರಿ ಆಗಲು ಸಾಧ್ಯವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಮಾವೇಶ ಉದ್ಘಾಟಿಸಿ ಮಾತನಾಡಿದ ಚಿಂತಕ ಮುಡ್ನಾಕೂಡು ಚಿನ್ನಸ್ವಾಮಿ, ದಲಿತರು, ಮುಸ್ಲಿಮರು ಹಾಗೂ ಇತರೆ ಹಿಂದುಳಿದ ವರ್ಗಗಳ ನೆರವಿನಿಂದ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಆದರೆ, ಶೋಷಿತ ಸಮುದಾಯಗಳಿಗೆ ನ್ಯಾಯ ಸಿಕ್ಕಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅನ್ಯಾಯಕ್ಕೆ ಒಳಗಾದವರು ನ್ಯಾಯಕ್ಕಾಗಿ ಹೋರಾಡಬೇಕಿದೆ. ಹಿಂದುಳಿದ ಸಮುದಾಯದ 19 ಬೇಡಿಕೆಗಳು ನ್ಯಾಯ ಸಮ್ಮತವಾಗಿವೆ. ಬೇಡಿಕೆ ಈಡೇರಿಸುವಂತೆ ಸರ್ಕಾರವನ್ನು ಮತ್ತೆ ಕೇಳುವ ಸ್ಥಿತಿ ಬಂದಿದೆ. ಸರ್ಕಾರ ಈಗಲಾದರೂ ಸ್ಪಂದಿಸಬೇಕು ಎಂದು ಮನವಿ ಮಾಡಿದರು.

ಸಿಪಿಎಂ ಮುಖಂಡ ಕೆ.ಪ್ರಕಾಶ್ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ತುಂಬಾ ಬದಲಾವಣೆ ಕಂಡಿಲ್ಲ. ದಲಿತರ ಬೇಡಿಕೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಸ್ಪಷ್ಟ ನಿಲುವು ಹಾಗೂ ಪರಿಹಾರದ ಮಾರ್ಗ ತೋರಿಸಬೇಕು ಎಂದು ಒತ್ತಾಯಿಸಿದರು.

ಎನ್‌ಸಿಆರ್‌ಬಿ ವರದಿ ಪ್ರಕಾರ ದೇಶದಲ್ಲಿ ನಿತ್ಯ 7 ಜನ ದಲಿತರ ಮೇಲೆ ದೌರ್ಜನ್ಯ ಆಗುತ್ತಿದೆ. ವರ್ಷದಿಂದ ವರ್ಷಕ್ಕೆ ಪ್ರಕರಣ ಹೆಚ್ಚಾಗುತ್ತಿದ್ದು, ಈ ವರ್ಷ 57 ಸಾವಿರ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ ಎಂದರು.

ಸಮಾವೇಶದಲ್ಲಿ ಹೋರಾಟಗಾರ್ತಿ ಇಂದಿರಾ ಕೃಷ್ಣಪ್ಪ, ಸಾಹಿತಿ ಸುಬ್ಬು ಹೊಲೆಯಾರ್, ಶಿಕ್ಷಣ ತಜ್ಞ ನಿರಂಜನಾರಾಧ್ಯ ವಿ.ಪಿ, ಸಿಪಿಐ ಮುಖಂಡ ಸಾತಿ ಸುಂದರೇಶ್, ರಂಗಕರ್ಮಿ ಜನಾರ್ಧನ್, ರೈತ ಹೋರಾಟಗಾರ ವೀರಸಂಗಯ್ಯ, ಶಾಸಕ ನಾರಾಯಣಸ್ವಾಮಿ, ಮುಖಂಡರಾದ ಅನಿಲ್ ಕುಮಾರ್, ರಮೇಶ್ ಪಾಲ್ಗೊಂಡಿದ್ದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಆಯೋಜಿಸಿದ್ದ ದಲಿತ ಜನಾಗ್ರಹ ಸಮಾವೇಶವನ್ನು ತಮಟೆ ಬಾರಿಸುವ ಮೂಲಕ ಮೂಡ್ನಾಕೂಡು ಚಿನ್ನಸ್ವಾಮಿ ಉದ್ಘಾಟಿಸಿದರು. ಜನಾರ್ಧನ್, ಸುಬ್ಬು ಹೊಲೆಯಾರ್, ಇಂದಿರಾ ಕೃಷ್ಣಪ್ಪ, ಮಾವಳ್ಳಿ ಶಂಕರ್, ಸಾತಿ ಸುಂದರೇಶ್, ಪ್ರಕಾಶ್, ವೀರಸಂಗಯ್ಯ ಉಪಸ್ಥಿತರಿದ್ದಾರೆ ಪ್ರಜಾವಾಣಿ ಚಿತ್ರ

ಮುಂದಿನ ವಾರ ಸಭೆ: ಪರಮೇಶ್ವರ

ಸಮಾವೇಶದಲ್ಲಿ ಸಲ್ಲಿಸಿದ 19 ಬೇಡಿಕೆಗಳ ಕುರಿತು ಮುಂದಿನ ವಾರ ವಿಧಾನಸೌಧದಲ್ಲಿ ಸಂಘಟನೆಯ ಪದಾಧಿಕಾರಿಗಳು, ಸಂಬಂಧಿಸಿದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳೊಂದಿಗೆ ಸಭೆ ನಡೆಸಲಾಗುವುದು. ಸಾಧ್ಯವಾದರೆ ಮುಖ್ಯಮಂತ್ರಿ ಅವರನ್ನೂ ಆಹ್ವಾನಿಸಲಾಗುವುದು ಎಂದು ಉಪಮುಖ್ಯಮಂತ್ರಿ ಜಿ.ಪರಮೇಶ್ವರ ಹೇಳಿದರು.

ಮನವಿ ಸ್ವೀಕರಿಸಿ ಮಾತನಾಡಿದ ಅವರು, ಭೂಮಿ, ವಸತಿ, ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ, ಉದ್ಯೋಗ ಮೀಸಲಾತಿ, ವಿಶೇಷ ಘಟಕ ಯೋಜನೆ ಹಾಗೂ ಏಕಗವಾಕ್ಷಿ ನೀತಿ ಜಾರಿಗೆ ಆಗ್ರಹಿಸಲಾಗಿದೆ. ದಲಿತ ಸಮುದಾಯದ ಭೂಮಿ, ಶಿಕ್ಷಣ, ವಸತಿ ಸೇರಿದಂತೆ ಹಲವು ಮೂಲಭೂತ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಅರಿವು ಇದೆ. ಅವುಗಳನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ ಎಂದು ಹೇಳಿದರು.

ಬೇಡಿಕೆಗಳ ಕುರಿತು ನಿರ್ದಿಷ್ಟ ಘೋಷಣೆ ಮಾಡುವುದಿಲ್ಲ. ಆದರೆ, ಹಕ್ಕೊತ್ತಾಯಗಳನ್ನು ಗಂಭೀರವಾಗಿ ಪರಿಗಣಿಸಿ, ಕಂದಾಯ ಇಲಾಖೆ ಸೇರಿದಂತೆ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು.

ಪಿ.ಟಿ.ಸಿ.ಎಲ್ ಕಾಯ್ದೆ ಜಾರಿಗೆ ತಂದರೂ ಅರ್ಜಿದಾರರಿಗೆ ಪರಿಣಾಮಕಾರಿಯಾಗಿ ಭೂಮಿ ಸಿಗುತ್ತಿಲ್ಲ. ಅಗತ್ಯವಿದ್ದರೆ ಕಾಯ್ದೆಗೆ ತಿದ್ದುಪಡಿ ತರುವಂತೆ ಜಿ. ಪರಮೇಶ್ವರ ಅವರಿಗೆ ಸಲಹೆ ನೀಡಲಾಗಿದೆ

ಎಚ್.ಸಿ.ಮಹದೇವಪ್ಪ, ಮಾಜಿ ಸಚಿವ

ಹಾವೇರಿ: 7ರಿಂದ ಮೋಡ ಬಿತ್ತನೆ

ಪ್ರಜಾವಾಣಿ ವಾರ್ತೆ

ಹಾವೇರಿ: ರಾಜ್ಯದಲ್ಲಿ ಮಳೆ ಕೊರತೆಯಾಗಿದ್ದು, ಮೋಡ ಬಿತ್ತನೆಗೆ ಡಿಜಿಸಿಎ (ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ) ಷರತ್ತುಬದ್ಧ ಅನುಮತಿ ನೀಡಿದೆ. ಹಾವೇರಿ ಜಿಲ್ಲೆಯಲ್ಲಿ ಜುಲೈ 7ರಿಂದ ಮೋಡ ಬಿತ್ತನೆ ನಡೆಯಲಿದೆ.

ರಾಣೆಬೆನ್ನೂರು ಶಾಸಕ ಪ್ರಕಾಶ ಕೋಳಿವಾಡ ಪಾಲುದಾರಿಕೆಯ 'ಖ್ಯಾತಿ ಕ್ಲೈಮೇಟ್ ಮಾಡಿಫಿಕೇಷನ್ ಕನ್ಸಲ್ಟೆಂಟ್ ಸಂಸ್ಥೆ'ಯು ಮೋಡ ಬಿತ್ತನೆಗೆ ಕೋರಿ ಡಿಜಿಸಿಎ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದರು.

'ದೇಶದ ಯಾವುದೇ ಭಾಗದಲ್ಲಾದರೂ ಮೋಡ ಬಿತ್ತನೆ ಮಾಡಬಹುದು ಎಂದು ಡಿಜಿಸಿಎ ಹೇಳಿದೆ. ರಾಜ್ಯದ ಎಲ್ಲ ಕಡೆ ಮೋಡ ಬಿತ್ತನೆ ಮಾಡಲು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದ್ದು, ಅನುಮತಿ ಪ್ರಕ್ರಿಯೆ ವಿಳಂಬವಾಗಬಹುದು. ಅದಕ್ಕೆ ಹಾವೇರಿ ಜಿಲ್ಲೆಯ ಎಂಟೂ ತಾಲ್ಲೂಕುಗಳಲ್ಲಿ ಮೂರು ದಿನ ಮೋಡ ಬಿತ್ತನೆ ಮಾಡುವ ಉದ್ದೇಶವಿದೆ' ಎಂದು ಪ್ರಕಾಶ ಕೋಳಿವಾಡ 'ಪ್ರಜಾವಾಣಿ'ಗೆ ತಿಳಿಸಿದರು.

'ಮೋಡ ಬಿತ್ತನೆ ಪ್ರಕ್ರಿಯೆಗೆ ಗಂಟೆಗೆ ₹15 ಲಕ್ಷ ಖರ್ಚು ಆಗಬಹುದು. ಇದಕ್ಕೆ ಸರ್ಕಾರದಿಂದ ಅನುದಾನವಿಲ್ಲ. ನಾನು ಹಾಗೂ ಜಿಲ್ಲೆಯ ಇತರೆ ಐವರು ಶಾಸಕರು ಸ್ವಂತ ಹಣದಲ್ಲಿ ಮೋಡ ಬಿತ್ತನೆ ಮಾಡಿಸುತ್ತೇವೆ. ರೈತರಿಗೆ ಒಳ್ಳೆಯದಾಗಬೇಕು ಎಂಬುದಷ್ಟೇ ನಮ್ಮ ಉದ್ದೇಶ' ಎಂದರು.

ಮೋಡ ಬಿತ್ತನೆಯ ವಿಮಾನ (ಸಂಗ್ರಹ ಚಿತ್ರ)

'ರಾಜ್ಯದಲ್ಲಿ ಬರಗಾಲ ಆವರಿಸಿರುವ ಕಾರಣ ವಿಜ್ಞಾನಿಗಳ ಸಲಹೆಯಂತೆ ಮೋಡ ಬಿತ್ತನೆಗೆ ತಿಂಗಳ ಹಿಂದೆಯೇ ಅರ್ಜಿ ಸಲ್ಲಿಸಲಾಗಿತ್ತು. ಮಳೆ ಇಲ್ಲವೆಂದು ಬೇಸರಗೊಂಡಿರುವ ರೈತರ ಮುಖದಲ್ಲಿ ಮಂದಹಾಸ ಮೂಡಿಸಲು ಮೋಡ ಬಿತ್ತನೆ ನೆರವಾಗಲಿದೆ' ಎಂದರು.

'ಹುಬ್ಬಳ್ಳಿಗೆ ವಿಮಾನ ಬರಲಿದ್ದು, ಎರಡು ದಿನ ಪೈಲೆಟ್‌ಗಳಿಗೆ ತರಬೇತಿ ಇರಲಿದೆ. ಎಲ್ಲೆಲ್ಲಿ ಮೋಡಗಳಿವೆ ಎಂಬುದನ್ನು ವಿಜ್ಞಾನಿಗಳು ಪರಿಶೀಲಿಸಿ, ತಿಳಿಸಿದ ಬಳಿಕ ಅವರ ಸಲಹೆಯಂತೆ ಮೋಡ ಬಿತ್ತನೆ ಮಾಡಲಾಗುವುದು' ಎಂದರು.

ರಾಜ್ಯದ ಎಲ್ಲ ಕಡೆ ಮೋಡ ಬಿತ್ತನೆ ಮಾಡಲು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ. ಮುಂದಿನ ಪ್ರಕ್ರಿಯೆಯ ನಿರೀಕ್ಷೆಯಲ್ಲಿ ಇದ್ದೇನೆ

ಪ್ರಕಾಶ ಕೋಳಿವಾಡ, ಶಾಸಕ

ಮುಂದಿನ ದಿನಗಳಲ್ಲಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲಿದೆ. ರಾಜ್ಯದ ಎಲ್ಲ ಕಡೆ ಮೋಡ ಬಿತ್ತನೆ ಮಾಡಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚಿಂತನೆ ನಡೆದಿದೆ

ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

16ನೇ ಹಣಕಾಸು ಆಯೋಗ ಶಿಫಾರಸು: ರಾಜ್ಯಕ್ಕೆ ಸಿಕ್ಕ ಅನುದಾನ

ಪಂಚಾಯಿತಿಗಳಿಗೆ ₹18,889 ಕೋಟಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಶೇ 80ರಷ್ಟು ತೆರಿಗೆ ಸಂಗ್ರಹ ಗುರಿ ಸಾಧನೆ
- ಬಾಕಿ ಬಿಡುಗಡೆಗೆ ಆಗ್ರಹ

ನವದೆಹಲಿ: 16ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ಕರ್ನಾಟಕದ ಗ್ರಾಮ ಪಂಚಾಯಿತಿಗಳಿಗೆ ₹18,889 ಕೋಟಿ ಸಿಗಲಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

16ನೇ ಹಣಕಾಸು ಆಯೋಗದ ಶಿಫಾರಸು, ಕಾರ್ಯಾಚರಣೆ ಮಾರ್ಗಸೂಚಿಗಳು, ಅನುದಾನ ಬಿಡುಗಡೆ ಪ್ರಕ್ರಿಯೆ, ಅನುಸರಣೆ ಷರತ್ತುಗಳು, ಪ್ರಮುಖ ಸವಾಲುಗಳು ಮತ್ತು ಅವುಗಳಿಗೆ ಪರಿಹಾರ ಕುರಿತಂತೆ ಕೇಂದ್ರ ಪಂಚಾಯತ್ ರಾಜ್ ಸಚಿವ ರಾಜೀವ್ ರಂಜನ್ ಸಿಂಗ್ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ಶುಕ್ರವಾರ ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ಅವರು ಮಾತನಾಡಿದರು.

ಈಶ್ವರ ಬಿ. ಖಂಡ್ರೆ

ಆಯೋಗದ ಶಿಫಾರಸಿನಂತೆ ಮುಂದಿನ ಐದು ವರ್ಷಗಳಿಗೆ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ₹15,111ಕೋಟಿ ಮೂಲ ಅನುದಾನ, ₹3,778 ಕೋಟಿ ಕಾರ್ಯ ಸಾಮರ್ಥ್ಯ ಅನುದಾನ ಸೇರಿ ₹18,889 ಕೋಟಿ ಹಂಚಿಕೆ ಆಗಿದೆ. ರಾಜ್ಯದ ಪಂಚಾಯಿತಿಗಳು ಗ್ರಾಮೀಣ ಆಸ್ತಿಗಳಿಂದ ಶೇ 80ರಷ್ಟು ತೆರಿಗೆ ಸಂಗ್ರಹ ಗುರಿ ಸಾಧಿಸಿವೆ ಎಂದೂ ಅವರು ತಿಳಿಸಿದರು.

₹2,186 ಕೋಟಿ ಬಿಡುಗಡೆಗೆ ಒತ್ತಾಯ: 15ನೇ ಹಣಕಾಸು ಆಯೋಗದ ಶಿಫಾರಸಿನಂತೆ 2025-26ನೇ ಸಾಲಿನಲ್ಲಿ ರಾಜ್ಯಕ್ಕೆ ಬಾಕಿ ಇರುವ ₹2,186 ಕೋಟಿಯನ್ನು ಕೂಡಲೇ ಬಿಡುಗಡೆ ಮಾಡುವಂತೆ ಅವರು ಒತ್ತಾಯಿಸಿದರು.

ಈ ವಿಷಯದಲ್ಲಿ ಕೇಂದ್ರ ಪಂಚಾಯತ್ ರಾಜ್ ಇಲಾಖೆ ಎತ್ತಿದ್ದ ಎಲ್ಲ ಪ್ರಶ್ನೆಗಳಿಗೆ ರಾಜ್ಯ ಪ್ರತಿಕ್ರಿಯಿಸಿದೆ ಮತ್ತು ಕೇಂದ್ರದ ನಿರ್ದೇಶನಗಳನ್ನು ನಿರಂತರವಾಗಿ ಪಾಲಿಸಿದೆ. ಆದಾಗ್ಯೂ, ಅನುದಾನವನ್ನು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿಲ್ಲ. ಇದರಿಂದ ಅಭಿವೃದ್ಧಿ ಚಟುವಟಿಕೆಗಳಿಗೆ ಹಿನ್ನಡೆಯಾಗಿದೆ ಎಂದರು.



15ನೇ ಹಣಕಾಸು ಆಯೋಗವು ಐದು ವರ್ಷಗಳಿಗೆ ₹13,392 ಕೋಟಿ ಹಂಚಿಕೆ ಮಾಡಿತ್ತು. 2021-22ರಿಂದ 2025-26ರ ₹11,068 ಕೋಟಿ ಮಾತ್ರ ರಾಜ್ಯಕ್ಕೆ ಬಂದಿದ್ದು, ಅದನ್ನು ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸಲಾಗಿದೆ. 2024-25ರ ಆರ್ಥಿಕ ವರ್ಷದ ಅನುದಾನ ವರ್ಗಾವಣೆ ಪ್ರಮಾಣಪತ್ರಗಳನ್ನು ರಾಜ್ಯ ಸರ್ಕಾರ 2025ರ ಜುಲೈ ಹಾಗೂ ಆಗಸ್ಟ್‌ನಲ್ಲಿ ಒದಗಿಸಿದೆ. ಅಲ್ಲದೆ, ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳು 2025ರ ಆಗಸ್ಟ್ ಒಳಗೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆಗಳನ್ನು (ಜಿಪಿಡಿಪಿ) ಅಪ್‌ಲೋಡ್ ಮಾಡಿವೆ ಎಂದು ಅವರು ಸಭೆಯ ಗಮನಕ್ಕೆ ತಂದರು.

ಈ ಬಾರಿ ಎಲ್‌ನಿನೊ ಪ್ರಭಾವದಿಂದ ರಾಜ್ಯದಲ್ಲಿ ಮಳೆಯ ಕೊರತೆ ಆಗಿದೆ. ಗ್ರಾಮೀಣ ಜನರಿಗೆ ನೀರು ಪೂರೈಕೆ ನಮ್ಮ ಆದ್ಯತೆಯಾಗಿದೆ. ಗ್ರಾಮ ಪಂಚಾಯಿತಿಗಳಿಗೆ ಸಕಾಲದಲ್ಲಿ ಹಣ ಬಿಡುಗಡೆ ಮಾಡದಿದ್ದರೆ ಕುಡಿಯುವ ನೀರು ಪೂರೈಕೆಗೂ ತೊಡಕಾಗುತ್ತದೆ. ಹೀಗಾಗಿ, ಕೇಂದ್ರ ಸರ್ಕಾರ ಕೂಡಲೇ ಅನುದಾನ ಬಿಡುಗಡೆ ಮಾಡಬೇಕು ಎಂದು ಅವರು ಆಗ್ರಹಿಸಿದರು.

ಚುನಾವಣೆಗೆ ಸಿದ್ಧತೆ: ರಾಜ್ಯದಲ್ಲಿ ಬಹುತೇಕ ಗ್ರಾಮ ಪಂಚಾಯಿತಿಗಳ ಅವಧಿ ಮಾರ್ಚ್‌ನಲ್ಲಿ ಮುಗಿದಿದ್ದು, ಪಂಚಾಯಿತಿಗಳ ಚುನಾವಣೆ ನಡೆಸಲು ಸರ್ಕಾರ ಕ್ರಮ ವಹಿಸುತ್ತಿದೆ. ಕ್ಷೇತ್ರ ಪುನರ್ ವಿಂಗಡಣೆ, ಕ್ಷೇತ್ರ ಮೀಸಲು ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಮುಂದಿನ ತಿಂಗಳು ಪೂರ್ಣಗೊಳ್ಳಲಿದೆ. ಎರಡು ತಿಂಗಳುಗಳಲ್ಲಿ ಪಂಚಾಯಿತಿಗಳ ಚುನಾವಣೆ ನಡೆಯಲಿದೆ ಎಂದರು.

'ಪೋಕ್ಸೊ' ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಅಫಜಲಪುರ (ಕಲಬುರಗಿ ಜಿಲ್ಲೆ): ಅಫಜಲಪುರ ಪೊಲೀಸ್ ಠಾಣೆಯಿಂದ ಪರಾರಿಯಾಗಿದ್ದ ಬಾಲಕಿ ಅಪಹರಣ ಹಾಗೂ ಪೋಕ್ಸೊ ಪ್ರಕರಣದ ಆರೋಪಿ ಮಂಜುನಾಥ ಇಂಗಳೆ (23)ಯನ್ನು ಜಿಲ್ಲಾ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಮಂಜುನಾಥ

ಅಫಜಲಪುರ ತಾಲ್ಲೂಕಿನ ತೆಲ್ಲೋಣಿಗಿ ಗ್ರಾಮ ಸಮೀಪದ ಜಮೀನೊಂದರಲ್ಲಿ ಸಂಚರಿಸುತ್ತಿದ್ದ ಆರೋಪಿ ಮಂಜುನಾಥನನ್ನು ಬಂಧಿಸಿದ ಪೊಲೀಸರು, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಅಫಜಲಪುರ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮವೊಂದರಲ್ಲಿ 16 ವರ್ಷದ ಬಾಲಕಿ ಕಾಣೆಯಾದ ಕುರಿತು ಪಾಲಕರು ದೂರು ನೀಡಿದ್ದರು. ತನಿಖೆ ನಡೆಸಿದಾಗ ಮಂಜುನಾಥ ಬಾಲಕಿಯನ್ನು ಅಪಹರಿಸಿ ಪುಣೆಗೆ ಕರೆದೊಯ್ದಿದ್ದು ಗೊತ್ತಾಗಿತ್ತು. ಆರೋಪಿ ಮಂಜುನಾಥನನ್ನು ಜುಲೈ 1ರಂದು ಪುಣೆಯಲ್ಲಿ ವಶಕ್ಕೆ ಪಡೆದ ಪೊಲೀಸರು, ಅಫಜಲಪುರಕ್ಕೆ ಕರೆತಂದು ಠಾಣೆಯಲ್ಲಿ ಇರಿಸಿದ್ದರು. ಜುಲೈ 2ರ ನಸುಕಿನ ಜಾವ 3 ಗಂಟೆ ಹೊತ್ತಿಗೆ ಆರೋಪಿ ಪೊಲೀಸರ ಕಣ್ಣು ತಪ್ಪಿಸಿ ಠಾಣೆಯಿಂದ ಪರಾರಿಯಾಗಿದ್ದ.

ಮೂವರು ಪೊಲೀಸರ ಅಮಾನತು

ಕರ್ತವ್ಯದಲ್ಲಿ ನಿರ್ಲಕ್ಷ್ಯ ವಹಿಸಿದ ಆರೋಪದಡಿ ಹೆಡ್ ಕಾನ್‌ಸ್ಟೆಬಲ್ ರವಿದಾಸ್ ಕಟ್ಟಿಮನಿ ಮತ್ತು ಕಾನ್‌ಸ್ಟೆಬಲ್‌ಗಳಾದ ಶಿವಣ್ಣ ಹಾಗೂ ಪ್ರಶಾಂತ್ ಅವರನ್ನು ಅಮಾನತುಗೊಳಿಸಲಾಗಿದೆ.

'ಅಫಜಲಪುರ ಸಿಪಿಐ ಲಖನ್ ಮಸಗುಪ್ಪಿ ಹಾಗೂ ಅಫಜಲಪುರ ಪಿಎಸ್‌ಐ ಸೋಮಲಿಂಗ ಒಡೆಯರ್ ಅವರಿಗೆ ಆರೋಪಿ ಪರಾರಿಯಾದ ಕುರಿತು ವಿವರಣೆ ಕೇಳಿ ನೋಟಿಸ್ ನೀಡಲಾಗಿದೆ. ಗೃಹ ರಕ್ಷಕ ಸಿಬ್ಬಂದಿಯಾದ ಶಾಂತಿ ಸಾಗರ ಹಾಗೂ ಶ್ರೀಶೈಲ ವಿರುದ್ಧವೂ ಕ್ರಮಕೈಗೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಡಿ.ಸಿ ವರ್ಗಾವಣೆ ಆದೇಶ ರದ್ದು

ಚಿತ್ರದುರ್ಗ: ಜಿಲ್ಲೆಗೆ ನೂತನ ಜಿಲ್ಲಾಧಿಕಾರಿಯನ್ನಾಗಿ ಎಸ್.ರಮ್ಯಾ ಅವರನ್ನು ನೇಮಿಸಿ ಶುಕ್ರವಾರ ಹೊರಡಿಸಿದ್ದ ಆದೇಶವನ್ನು ರಾಜ್ಯ ಸರ್ಕಾರ ಕೆಲವೇ ಗಂಟೆಗಳಲ್ಲಿ ರದ್ದುಪಡಿಸಿದೆ.

ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅವರ ಜಾಗಕ್ಕೆ ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಎಸ್.ರಮ್ಯಾ ಅವರನ್ನು ನೇಮಿಸಿ ಸರ್ಕಾರ ಆದೇಶ ಹೊರ ಡಿಸಿತ್ತು. ಆದರೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಜುಲೈ 3ರಂದು ಹೊರಡಿ ಸಿರುವ ಅಧಿಸೂಚನೆಯಲ್ಲಿ, ರಮ್ಯಾ ಅವರ ವರ್ಗಾವಣೆ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿದೆ. ಎಸ್‌ಐಆರ್ ನಡೆಯುತ್ತಿದ್ದು, ಚುನಾವಣಾ ಆಯೋಗ ಒಪ್ಪದ ಕಾರಣ ವರ್ಗಾವಣೆ ಆದೇಶ ರದ್ದುಪಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕ್ವಾರಿ ಮಾಲೀಕರಿಗೆ ಶೋಧ

ಮಾದಾಪಟ್ಟಣ ಕ್ವಾರಿ ದುರಂತ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿ ಮಾದಾಪಟ್ಟಣ ಬಳಿಯ ಕ್ವಾರಿಯಲ್ಲಿ ಗುರುವಾರ ಬಂಡೆ ಕುಸಿದು 7 ಕಾರ್ಮಿಕರು ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ, ತಾವರೆಕೆರೆ ಠಾಣೆ ಪೊಲೀಸರು ಈವರೆಗೆ ಮೂವರನ್ನು ಬಂಧಿಸಿದ್ದಾರೆ. ಪ್ರಮುಖ ಆರೋಪಿಗಳಾದ ಇಬ್ಬರು ಕ್ವಾರಿ ಮಾಲೀಕರು ತಲೆಮರೆಸಿಕೊಂಡಿದ್ದಾರೆ.

ಬಸವೇಶ್ವರ ಸ್ಟೋನ್ಸ್ ಕ್ವಾರಿಯನ್ನು ಗುತ್ತಿಗೆ ಪಡೆದು ನಡೆಸುತ್ತಿದ್ದ ಸಾಯಿರಾಮ್ ಕ್ರಷರ್ ಮಾಲೀಕ ಬೆಂಗಳೂರಿನ ಮಲ್ಲೇಶ್ವರದ ಪಾಂಡುರಂಗ, ಬಸವೇಶ್ವರ ಸ್ಟೋನ್ಸ್ ಕ್ವಾರಿಯ ವ್ಯವಸ್ಥಾಪಕ ತಾವರೆಕೆರೆ ಹೋಬಳಿಯ ಗಾಣಕಲ್ಲು ಗ್ರಾಮದ ಎನ್.ಲೋಕೇಶ್, ಉದಯಶಂಕರ್ ಸ್ಟೋನ್ ಕ್ರಷರ್ ವ್ಯವಸ್ಥಾಪಕ ಹಾಗೂ ಕಾವೇರಿ ಸ್ಟೋನ್ಸ್ ಕ್ರಷರ್ ಮೇಲ್ವಿಚಾರಕ ಅಂಕಯ್ಯನಪಾಳ್ಯದ ರಾಜು ಬಂಧಿತರು.

ಘಟನೆ ನಂತರ ಬಸವೇಶ್ವರ ಕ್ವಾರಿ ಮಾಲೀಕ ಆನಂದಸ್ವಾಮಿ ಮತ್ತು ಎಸ್.ಆರ್.ಉದಯಶಂಕರ್ ಸ್ಟೋನ್ ಕ್ವಾರಿ ಮಾಲೀಕ ಉದಯ್ ಶಂಕರ್ ತಲೆಮರೆಸಿಕೊಂಡಿದ್ದಾರೆ. ಇಬ್ಬರೂ ತಮ್ಮ ಮೊಬೈಲ್ ಫೋನ್‌ಗಳನ್ನು ಸ್ವಿಚ್ ಆಫ್ ಮಾಡಿಕೊಂಡಿದ್ದು, ಪತ್ತೆಗಾಗಿ 2 ತಂಡ ರಚಿಸಲಾಗಿದೆ.

ಶವ ರವಾನೆ: ದುರಂತದಲ್ಲಿ ಮೃತಪಟ್ಟ 7 ಕಾರ್ಮಿಕರ ಶವದ ಮರಣೋತ್ತರ ಪರೀಕ್ಷೆಯನ್ನು ಶುಕ್ರವಾರ ಕೆಂಗೇರಿಯ ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ನಡೆಸಿ ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ. ರಾಜ್ಯದ ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಚಾಮನಾಳದ ನಡಿಹಾಳ್ ದೇಸುನಾಯ್ಕ ತಾಂಡದ ಕಾರ್ಮಿಕ ರಾಮು ಚೌಹಾಣ್ ಶವವನ್ನು ಆಂಬುಲೆನ್ಸ್‌ನಲ್ಲಿ ಸ್ವಗ್ರಾಮಕ್ಕೆ ಕಳಿಸಿಕೊಡಲಾಗಿದೆ.

ಉಳಿದಂತೆ ಛತ್ತೀಸಗಢದ ಒಬ್ಬ ಮತ್ತು ಮಧ್ಯಪ್ರದೇಶದ ಐವರು ಕಾರ್ಮಿಕರ ಶವಗಳನ್ನು ಕಾರ್ಗೊ ವಿಮಾನದ ಮೂಲಕ ಶುಕ್ರವಾರ ಸಂಜೆ ರವಾನಿಸಲಾಗಿದೆ. ಅಲ್ಲಿಂದ ಆಂಬುಲೆನ್ಸ್ ಮೂಲಕ ಸ್ವಗ್ರಾಮಗಳಿಗೆ ಶವ ಕಳಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಘಟನೆಗೆ ಸಂಬಂಧಿಸಿದಂತೆ ಐವರ ವಿರುದ್ಧ ಪೊಲೀಸರು ಬಿಎನ್‌ಎಸ್ ಕಲಂ 105 (ಉದ್ದೇಶಪೂರ್ವಕವಲ್ಲದ ಹತ್ಯೆ), 125 (ಎ) (ಇತರರ ಜೀವಕ್ಕೆ ಅಥವಾ ವೈಯಕ್ತಿಕ ಸುರಕ್ಷತೆಗೆ ಅಪಾಯ ಉಂಟುಮಾಡುವ ದುಡುಕಿನ ಅಥವಾ ನಿರ್ಲಕ್ಷ್ಯದ ಕೃತ್ಯ), 324 (5) (ಕಿಡಿಗೇಡಿತನ/ದುಷ್ಕೃತ್ಯ), 3(5) (ಇಬ್ಬರು ಅಥವಾ ಅದಕ್ಕಿಂತ ಹೆಚ್ಚಿನವರಿಂದ ಸಮಾನ ಉದ್ದೇಶದ ಕೃತ್ಯ) ಕಲಂಗಳಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ತಲೆಮರೆಸಿಕೊಂಡಿರುವ ಇಬ್ಬರು ಕ್ವಾರಿ ಮಾಲೀಕರ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ. ಘಟನೆ ಕುರಿತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಮಧ್ಯಂತರ ವರದಿ ಕೇಳಿದ್ದು, ಬಂದ ಬಳಿಕ ತನಿಖೆ ತ್ವರಿತಗೊಳಿಸಲಾಗುವುದು

ಆರ್.ಶ್ರೀನಿವಾಸ್ ಗೌಡ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬೆಂಗಳೂರು ದಕ್ಷಿಣ ಜಿಲ್ಲೆ

'ಸಾಲ' ಇಳಿಸಿಕೊಳ್ಳಲು ಕೆಲಸಕ್ಕೆ ಬಂದಿದ್ದರು

• ಓದೇಶ ಸಕಲೇಶಪುರ

ರಾಮು ಚೌಹಾಣ್

ಊರಿನಲ್ಲಿ ಮಳೆ–ಬೆಳೆ ಇಲ್ಲದೆ ಬರಗಾಲ. ಕುಟುಂಬಕ್ಕಿರುವ ತುಂಡು ಭೂಮಿಯೂ ಕೃಷಿಗೆ ಯೋಗ್ಯವಾಗಿಲ್ಲ. ಮೂವರು ಪುತ್ರಿಯರು ಹಾಗೂ ಇಬ್ಬರು ಪುತ್ರರ ಮದುವೆ ಸೇರಿದಂತೆ ಕುಟುಂಬದ ವಿವಿಧ ಕಷ್ಟಗಳಿಗೆ ಮಾಡಿಕೊಂಡಿದ್ದ ಸಾಲದ ಬಡ್ಡಿ ಬೆಳೆದು ಸುಮಾರು ₹10 ಲಕ್ಷ ತಲುಪಿತ್ತು. ಸಾಲದ ಭಾರ ಇಳಿಸಿಕೊಳ್ಳಲು ಕ್ವಾರಿಗೆ ಕೆಲಸಕ್ಕೆ ಬಂದಿದ್ದ ಆ ಕಾರ್ಮಿಕ ಮರಳಿ ಊರಿಗೆ ಹೋಗಿದ್ದು ಶವವಾಗಿ!

ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಮಾದಾಪಟ್ಟಣದ ಕ್ವಾರಿಯಲ್ಲಿ ಸಂಭವಿಸಿದ ದುರಂತದಲ್ಲಿ ಜೀವ ಕಳೆದುಕೊಂಡ ಕಲ್ಯಾಣ ಕರ್ನಾಟಕದ ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಚಾಮನಾಳ ಗ್ರಾಮದ ನಡಿಹಾಳ್ ದೇಸುನಾಯ್ಕ ತಾಂಡದ ರಾಮು ಚೌಹಾಣ್ (48) ಅವರ ಕರುಣಾಜನಕ ಕಥೆ ಇದು.

ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳೊಂದಿಗೆ ಮಾದಾಪಟ್ಟಣಕ್ಕೆ ಬಂದಿದ್ದ ರಾಮು ಅವರು, ಎಸ್.ಆರ್. ಉದಯ ಶಂಕರ್ ಕ್ವಾರಿಯಲ್ಲಿ ಡ್ರಿಲ್ಲಿಂಗ್ ಕೆಲಸ ಮಾಡುತ್ತಿದ್ದರು. ಮಕ್ಕಳಿಗೆ ಕಂಪ್ರೆಸ್ಸರ್‌ನಲ್ಲಿ ಉಳಿ ಹೊಡೆಯುವ ಕೆಲಸ. ಮಹಿಳೆಯರು ಪಕ್ಕದ ಕ್ರಷರ್‌ನಲ್ಲಿ ಕೆಲಸ ಮಾಡುತ್ತಿದ್ದರು. ಕ್ವಾರಿಯಿಂದ ಅನತಿ ದೂರದಲ್ಲಿರುವ ಶೀಟ್‌ನ ಶೆಡ್‌ನಲ್ಲೇ ಇಡೀ ಕುಟುಂಬ ವಾಸವಾಗಿತ್ತು. 'ಕಷ್ಟಜೀವಿಯಾದ ರಾಮು ಅವರು ತನ್ನ ಐವರು ಮಕ್ಕಳ ಮದುವೆ ಮಾಡಿದ್ದರು. ಮದುವೆ ಸೇರಿದಂತೆ ಇತರ ಉದ್ದೇಶಗಳಿಗೆ ಸಾಲ ಮಾಡಿಕೊಂಡಿದ್ದರು. ಸ್ಥಳೀಯವಾಗಿ ಕೂಲಿ ಸಿಗದ ಕಾರಣ ನಾಲ್ಕೈದು ವರ್ಷದ ಹಿಂದೆಯೇ ಕುಟುಂಬ ಸಮೇತ ಬೆಂಗಳೂರಿಗೆ ಕೂಲಿಗಾಗಿ ಹೋಗಿದ್ದರು' ಎಂದು ರಾಮು ಸಂಬಂಧಿ ಗೋಪಾಲ್ ಚೌಹಾಣ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಮ್ಮ ಭಾಗದಲ್ಲಿ ಬರಗಾಲ. ಬದುಕಿಗಾಗಿ ಇಲ್ಲಿನ ಜನ ಬೆಂಗಳೂರಿಗೆ ಹೋಗಿ ಕಟ್ಟಡ ನಿರ್ಮಾಣ, ಕ್ವಾರಿ ಸೇರಿದಂತೆ ವಿವಿಧೆಡೆ ಕೆಲಸ ಮಾಡುತ್ತಾರೆ. ಅದೇ ರೀತಿ ರಾಮು ಸಹ ಕುಟುಂಬದೊಂದಿಗೆ ಬಂದಿದ್ದರು' ಎಂದು ತಿಳಿಸಿದರು.

ಪ್ರೆಸಿಡೆನ್ಸಿ ಯೂನಿವರ್ಸಿಟಿಯಿಂದ ಎನ್‌ವಿಡಿಯಾ ಚಾಲಿತ ಎಐ ವಿಭಾಗ ಲೋಕಾರ್ಪಣೆ

ಜಾಗತಿಕ ತಂತ್ರಜ್ಞಾನ ಕ್ರಾಂತಿಗೆ ಹೆಜ್ಜೆಯಿಟ್ಟ ಪ್ರೆಸಿಡೆನ್ಸಿ ಯೂನಿವರ್ಸಿಟಿ, ಸಮಾಜದ ಜ್ವಲಂತ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು 'ರಾಷ್ಟ್ರೀಯ ಹ್ಯಾಕಥಾನ್ ಘೋಷಣೆ

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಬೆಂಗಳೂರು: ತಂತ್ರಜ್ಞಾನ ಲೋಕದ ದೈತ್ಯ ಸಂಸ್ಥೆ ಎನ್‌ವಿಡಿಯಾ (NVIDIA) ಸಹಯೋಗದೊಂದಿಗೆ ಬೆಂಗಳೂರಿನ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯವು ಕೃತಕ ಬುದ್ಧಿಮತ್ತೆ (ಎಐ) ಮತ್ತು ಅಡ್ವಾನ್ಸ್ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಕ್ರಾಂತಿಕಾರಿ ಹೆಜ್ಜೆಯನ್ನಿಟ್ಟಿದೆ. ವಿಶ್ವವಿದ್ಯಾಲಯದ ಆವರಣದಲ್ಲಿ ನೂತನ 'ಎಐ ಮತ್ತು ಅಡ್ವಾನ್ಸ್ ಕಂಪ್ಯೂಟಿಂಗ್' ಹಾಗೂ ಅತ್ಯಾಧುನಿಕ 'ಎಐ ಸೆಂಟರ್ ಆಫ್ ಎಕ್ಸಲೆನ್ಸ್' ವಿಭಾಗವನ್ನು ಆರಂಭಿಸಲಾಗಿದೆ. ಈ ಮೂಲಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೃತಕ ಬುದ್ಧಿಮತ್ತೆ ಆಧಾರಿತ ಶಿಕ್ಷಣ, ಸಂಶೋಧನೆ ಮತ್ತು ನಾವೀನ್ಯತೆಯ ಪ್ರಮುಖ ಕೇಂದ್ರವಾಗಿ ಹೊರಹೊಮ್ಮುವ ದೃಢ ಸಂಕಲ್ಪವನ್ನು ವಿಶ್ವವಿದ್ಯಾಲಯವು ಪ್ರದರ್ಶಿಸಿದೆ. ಈ ಐತಿಹಾಸಿಕ ಉದ್ಘಾಟನಾ ಸಮಾರಂಭಕ್ಕೆ ಶೈಕ್ಷಣಿಕ ಕ್ಷೇತ್ರ, ಕೈಗಾರಿಕೆಗಳು ಮತ್ತು ವೈಜ್ಞಾನಿಕ ವಲಯದ ದಿಗ್ಗಜರು ಸಾಕ್ಷಿಯಾದರು.

ಜಾಗತಿಕ ಮತ್ತು ರಾಷ್ಟ್ರೀಯ ನಾಯಕರ ಅಪೂರ್ವ ಸಂಗಮ: ಈ ಪ್ರತಿಷ್ಠಿತ ಉದ್ಘಾಟನಾ ಸಮಾರಂಭದಲ್ಲಿ ಜಾಗತಿಕ ಮಟ್ಟದ ಪ್ರಮುಖ ತಂತ್ರಜ್ಞರು ಹಾಗೂ ವಿಜ್ಞಾನಿಗಳು ಭಾಗವಹಿಸಿದ್ದರು. ಉದ್ಘಾಟನೆಯ ಅಂಗವಾಗಿ ಆಯೋಜಿಸಲಾಗಿದ್ದ 'ಎಐ ಫಾರ್ ಲೀಡರ್ಸ್ ಎಕ್ಸಿಕ್ಯೂಟಿವ್ ಸ್ಟ್ರಾಟೆಜಿ ಮಾಸ್ಟರ್ ಕ್ಲಾಸಸ್' ಮತ್ತು ಉನ್ನತ ಮಟ್ಟದ ನಾಯಕತ್ವದ ದುಂಡುಮೇಜಿನ ಚರ್ಚೆಯು ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿತ್ತು. ಈ ಸಂವಾದದಲ್ಲಿ ಜಾಗತಿಕ ಎಐ ಮಾರುಕಟ್ಟೆಯಲ್ಲಿ ಭಾರತದ ಪಾತ್ರದ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು.

ಎನ್‌ವಿಡಿಯಾ ಜಿಪಿಯು ಮೂಲಸೌಕರ್ಯದ ಅಪ್ರತಿಮ ಶಕ್ತಿ: ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಈ ಹೊಸ ವಿಭಾಗವು ಸಂಪೂರ್ಣವಾಗಿ ತಂತ್ರಜ್ಞಾನ ದೃಷ್ಟಿಯಿಂದ ಜಗತ್ತಿನ ಅತ್ಯುನ್ನತ ಮಟ್ಟದ ಪ್ರೋಗ್ರಾಂಗಳನ್ನು ಒದಗಿಸಲು ಸಜ್ಜಾಗಿದೆ. ಈ ವಿಭಾಗದ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದ ಬೇಡಿಕೆ ಇರುವ ಅತ್ಯಾಧುನಿಕ ಕೋರ್ಸ್‌ಗಳನ್ನು ಬೋಧಿಸಲಾಗುತ್ತದೆ. ಆರ್ಟಿಫಿಷಿಯಲ್ ಇಂಟೆಲಿಜೆನ್ಸ್(ಎಐ), ಡೇಟಾ ಸೈನ್ಸ್, ಮಶೀನ್ ಲರ್ನಿಂಗ್, ರೋಬೋಟಿಕ್ಸ್, ಹೈ ಪರ್ಫಾರ್ಮೆನ್ಸ್ ಕಂಪ್ಯೂಟಿಂಗ್, ಉದಯೋನ್ಮುಖ ಡಿಜಿಟಲ್ ಟೆಕ್ನಾಲಜೀಸ್ ಕೋರ್ಸ್‌ಗಳನ್ನು ನೀಡಲಾಗುತ್ತಿದೆ.

ಚರ್ಚೆಯ ಪ್ರಮುಖ ಮುಖ್ಯಾಂಶಗಳು

- **ಸಾಂಸ್ಥಿಕ ಎಐ ಪರಿವರ್ತನೆ:** ಆಧುನಿಕ ಉದ್ಯಮಗಳಲ್ಲಿ ಕೃತಕ ಬುದ್ಧಿಮತ್ತೆಯನ್ನು ಅಳವಡಿಸಿಕೊಳ್ಳುವ ಸವಾಲುಗಳು ಮತ್ತು ಅದಕ್ಕಿರುವ ಪ್ರಾಯೋಗಿಕ ಪರಿಹಾರಗಳು.
- **ಸಂಶೋಧನೆಗಳ ವಾಣಿಜ್ಯೀಕರಣ:** ವಿಶ್ವವಿದ್ಯಾಲಯಗಳಲ್ಲಿ ನಡೆಯುವ ಎಐ ಸಂಶೋಧನೆಗಳನ್ನು ಕೇವಲ ಪ್ರಯೋಗಾಲಯಕ್ಕೆ ಸೀಮಿತಗೊಳಿಸದೆ, ಮಾರುಕಟ್ಟೆಗೆ ಯೋಗ್ಯವಾದ ಉತ್ಪನ್ನಗಳನ್ನಾಗಿ ಪರಿವರ್ತಿಸುವುದು.
- **ಜಾಗತಿಕ ವೇದಿಕೆಯಲ್ಲಿ ಭಾರತದ ಸ್ಥಾನ:** ಜಾಗತಿಕ ಎಐ ನಾಯಕತ್ವ ಮತ್ತು ತಂತ್ರಜ್ಞಾನ ಕ್ರಾಂತಿಯಲ್ಲಿ ಭಾರತವು ಹೇಗೆ ಮುಂಚೂಣಿಯಲ್ಲಿ ನಿಲ್ಲಬಹುದು ಎಂಬ ಕಾರ್ಯತಂತ್ರಗಳ ವಿಶ್ಲೇಷಣೆ.

ಪ್ರಾಯೋಗಿಕ ತರಬೇತಿ: ಈ ಕೇಂದ್ರದ ಪ್ರಮುಖ ಉದ್ದೇಶ ಕೇವಲ ಸೈದ್ಧಾಂತಿಕ ಶಿಕ್ಷಣ ನೀಡುವುದಲ್ಲ. ಬದಲಿಗೆ ವಿದ್ಯಾರ್ಥಿಗಳನ್ನು ಉದ್ಯಮಕ್ಕೆ ನೇರವಾಗಿ ಸಜ್ಜುಗೊಳಿಸುವುದಾಗಿದೆ. ಎನ್‌ವಿಡಿಯಾ ಬೆಂಬಲಿತ ಈ ಸೆಂಟರ್ ಆಫ್ ಎಕ್ಸಲೆನ್ಸ್ ವಿದ್ಯಾರ್ಥಿಗಳಿಗೆ ಮತ್ತು ಬೋಧಕ ಸಿಬ್ಬಂದಿಗೆ ಉದ್ಯಮ ಮಾನ್ಯತೆ ಪಡೆದ ಪ್ರಮಾಣಪತ್ರಗಳೊಂದಿಗೆ ತರಬೇತಿಯನ್ನು ಒದಗಿಸಲಿದೆ. ಈ ಕಾರ್ಯಕ್ರಮದ ರಚನೆಯು ಅತ್ಯಂತ ಬಲವಾದ ಸೈದ್ಧಾಂತಿಕ ಅಡಿಪಾಯವನ್ನು ಹೊಂದಿರುವುದರ ಜತೆಗೆ, ಸಂಪೂರ್ಣ ಪ್ರಾಯೋಗಿಕ ಪ್ರಾಜೆಕ್ಟ್‌ಗಳ ಅಭಿವೃದ್ಧಿಗೆ ಒತ್ತು ನೀಡುತ್ತದೆ. ಇಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ, ಮಶೀನ್ ಲರ್ನಿಂಗ್, ರೋಬೋಟಿಕ್ಸ್ ಮತ್ತು ಇಂಟೆಲಿಜೆಂಟ್ ಸಿಸ್ಟಮ್ಸ್ ವಿಭಾಗಗಳಲ್ಲಿ ತಮ್ಮದೇ ಆದ ನಾವೀನ್ಯತೆಯ ಸಾಫ್ಟ್‌ವೇರ್ ಹಾಗೂ ಅಪ್ಲಿಕೇಷನ್‌ಗಳನ್ನು ಅಭಿವೃದ್ಧಿಪಡಿಸಿ ಪ್ರದರ್ಶಿಸಲು ಮುಕ್ತ ಅವಕಾಶವಿರುತ್ತದೆ. ಇದು ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ತಾಂತ್ರಿಕ ಕೌಶಲ್ಯವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಲು ನೆರವಾಗುತ್ತದೆ.

ಕಾರ್ಯಕ್ರಮದಲ್ಲಿ ನ್ಯಾಷನಲ್ ಯೂನಿವರ್ಸಿಟಿ ಆಫ್ ಸಿಂಗಾಪೂರ್ (ಎನ್‌ಯುಎಸ್) ಎಐ ಇನ್‌ಸ್ಟಿಟ್ಯೂಟ್ ಮತ್ತು 'ಎಐ ಸಿಂಗಾಪೂರ್' ಸಂಸ್ಥೆಯ ಡೆಪ್ಯೂಟಿ ಎಕ್ಸಿಕ್ಯೂಟಿವ್ ಚೇರ್ಮನ್ ಆದ ಪ್ರೊಫೆಸರ್ ಮೋಹನ್ ಕಂಕನ್‌ಹಳ್ಳಿ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಮಾಜಿ ಮುಖ್ಯಸ್ಥ ಡಾ.ಕೆ.ಶಿವನ್, ಸಿಸಿಟಿಎಸ್ ಗ್ರೂಪ್ ಮುಖ್ಯಸ್ಥರು ಹಾಗೂ 'ಬೋರಾಯ್' ಸಂಸ್ಥೆಯ ಸ್ಥಾಪಕ ಮುಖ್ಯಸ್ಥರಾದ ಹ್ಯಾರಿ ರಾಧಾಕೃಷ್ಣನ್, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಕುಲಪತಿ ಡಾ.ನಿಸಾರ್ ಅಹ್ಮದ್ ಮತ್ತು ಉಪಕುಲಪತಿ ಡಾ.ತಿರುವೆಂಗಡಮ್ ಪಾಲ್ಗೊಂಡಿದ್ದರು.

ರಾಷ್ಟ್ರೀಯ ಹ್ಯಾಕಥಾನ್: ಈ ಸಮಾರಂಭದ ಮತ್ತೊಂದು ಐತಿಹಾಸಿಕ ಮೈಲಿಗಲ್ಲು ಎಂದರೆ, ಭಾರತ್ ಓಪನ್ ಇನೋವೇಷನ್ ಹಬ್ ಫಾರ್ ರೋಬೋಟಿಕ್ಸ್ ಅಂಡ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (BOHRAI)ಗೆ ಅಧಿಕೃತವಾಗಿ ಚಾಲನೆಗೊಳಿಸಲಾಯಿತು. ಇದು ವಿಶ್ವವಿದ್ಯಾನಿಲಯ ಆಧಾರಿತ ಮುಕ್ತ ಆವಿಷ್ಕಾರ ವೇದಿಕೆಯಾಗಿದ್ದು, ಇಡೀ ದೇಶದ ತಾಂತ್ರಿಕ ಪರಿಸರ ವ್ಯವಸ್ಥೆಯನ್ನು ಒಟ್ಟುಗೂಡಿಸುವ ಗುರಿ ಹೊಂದಿದೆ.

ರಾಷ್ಟ್ರೀಯ ಹ್ಯಾಕಥಾನ್ ಸರಣಿ: ಈ ಹಬ್‌ನ ಮೊದಲ ಅತ್ಯುನ್ನತ ಹಾಗೂ ಪ್ರಮುಖ ಯೋಜನೆಯಾಗಿ, ಪ್ರೆಸಿಡೆನ್ಸಿ ವಿಶ್ವವಿದ್ಯಾನಿಲಯ ಮತ್ತು ಸಿಂಗಾಪೂರ ಮೂಲದ ಪ್ರತಿಷ್ಠಿತ ಸಿಸಿಟಿಎಸ್ ಸಂಸ್ಥೆಯು ಜಂಟಿಯಾಗಿ ಬರೋಬ್ಬರಿ 1 ಕೋಟಿ ರೂಪಾಯಿ ಮೊತ್ತದ 'ರಾಷ್ಟ್ರೀಯ ಹ್ಯಾಕಥಾನ್ ಸರಣಿ'ಯನ್ನು ಘೋಷಿಸಿವೆ. ಈ ಬೃಹತ್ ಹ್ಯಾಕಥಾನ್ ದೇಶದಾದ್ಯಂತ ಇರುವ ಪ್ರತಿಭಾವಂತ ವಿದ್ಯಾರ್ಥಿಗಳು, ನಾವೀನ್ಯತೆ ಆವಿಷ್ಕಾರಕರು ಮತ್ತು ಸಂಶೋಧಕರಿಗೆ ಮುಕ್ತ ಆಹ್ವಾನ ನೀಡುತ್ತದೆ. ಸಮಾಜದ ವಿವಿಧ ಜ್ವಲಂತ ಸಮಸ್ಯೆಗಳಿಗೆ ಕೃತಕ ಬುದ್ಧಿಮತ್ತೆ (ಎಐ) ಮತ್ತು ರೋಬೋಟಿಕ್ಸ್ ತಂತ್ರಜ್ಞಾನದ ಮೂಲಕ ಅತ್ಯಂತ ಪ್ರಭಾವಶಾಲಿ ಹಾಗೂ ಪ್ರಾಯೋಗಿಕ ಪರಿಹಾರಗಳನ್ನು ಅಭಿವೃದ್ಧಿಪಡಿಸುವುದು ಈ ಹ್ಯಾಕಥಾನ್‌ನ ಮುಖ್ಯ ಆಶಯವಾಗಿದೆ.

‘ಅನರ್ಹರಿಗೆ ಹಕ್ಕು ಕೊಡಿಸಲು ಹುನ್ನಾರ’

ರಾಜ್ಯ ಸರ್ಕಾರದಿಂದ ಬಿಎಲ್‌ಒಗಳ ದುರ್ಬಳಕೆ

• ಬಿಜೆಪಿ ನಾಯಕರ ಆರೋಪ

ಪ್ರಜಾವಾಣಿ ವಾರ್ತೆ

ಅಶೋಕ

ಬೆಂಗಳೂರು: ‘ಕಾಂಗ್ರೆಸ್ ಸರ್ಕಾರದ ಕುಮ್ಮಕ್ಕಿನಿಂದಾಗಿ ಮತಗಟ್ಟೆ ಅಧಿಕಾರಿಗಳು, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಗಣತಿ ನಮೂನೆಗಳನ್ನು ಬೀದಿ ಗಳಲ್ಲಿ ಹಂಚುತ್ತಿದ್ದಾರೆ. ಈ ಮೂಲಕ ಬಾಂಗ್ಲಾ ದೇಶದ ಅಕ್ರಮ ನುಸುಳುಕೋರರನ್ನು ಮತದಾರರ ಪಟ್ಟಿಗೆ ಸೇರಿಸುವ ಷಡ್ಯಂತ್ರ ನಡೆಸಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ದೇಶದ ಭದ್ರತೆ ದೃಷ್ಟಿಯಿಂದ ಚುನಾವಣಾ ಆಯೋಗವು ಎಸ್‌ಐಆರ್ ನಡೆಸುತ್ತಿದೆ. ಕೇಂದ್ರ ಸರ್ಕಾರದ ಉದ್ದೇಶ ಸಹ ಇದೆ. ಆದರೆ, ಕಾಂಗ್ರೆಸ್ ಸರ್ಕಾರವು ಬಾಂಗ್ಲಾ ಅಕ್ರಮ ನುಸುಳುಕೋರರಿಗೆ ಸ್ವರ್ಗ ಒದಗಿಸುತ್ತಿದೆ. ಅವರಿಗೆ ಮನೆ ನಿರ್ಮಿಸಿಕೊಡುತ್ತದೆ, ಈಗ ಪೌರತ್ವ ಸಹ ಒದಗಿಸಿಕೊಡಲು ಮುಂದಾಗಿದೆ’ ಎಂದು ದೂರಿದರು.

‘ಬೆಂಗಳೂರು, ಕೊಡಗು, ಚಿಕ್ಕಮಗಳೂರು ಸೇರಿ ರಾಜ್ಯದಲ್ಲಿ 20 ಲಕ್ಷಕ್ಕೂ ಹೆಚ್ಚು ಬಾಂಗ್ಲಾ ಅಕ್ರಮವಾಸಿಗಳು ಇದ್ದಾರೆ. ಹಜ್ ಭವನ, ಮಸೀದಿಗಳಲ್ಲಿ ಅವರನ್ನು ಸೇರಿಸಿಕೊಂಡು ಗಣತಿ ನಮೂನೆಗಳನ್ನು ವಿತರಿಸಲಾಗುತ್ತಿದೆ. ಅವರಿಗೆ ಸುಳ್ಳು ದಾಖಲೆಗಳನ್ನು ನಿರ್ಮಿಸಿಕೊಡಲಾಗುತ್ತಿದೆ’ ಎಂದು ಆರೋಪಿಸಿದರು.

‘ಮಹದೇವಪುರ, ಬ್ಯಾಟರಾಯನ ಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಮಸೀದಿಗಳ ಮುಂದೆ ಗುಂಪುಗುಂಪಾಗಿ ಕುಳಿತು ಎಸ್‌ಐಆರ್ ಪ್ರಕ್ರಿಯೆ ನಡೆಸ ಲಾಗುತ್ತಿದೆ. ಈ ಕುರಿತು ಭಾರತೀಯ ಚುನಾವಣಾ ಆಯೋಗ ಮತ್ತು ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಪತ್ರ ಬರೆದು, ಅಕ್ರಮ ಮಾಡಲಾಗುತ್ತಿದೆ ಎಂದು ತಿಳಿಸುತ್ತೇನೆ. ಇದಕ್ಕೆ ಅವಕಾಶ ಮಾಡಿಕೊಟ್ಟ ಅಧಿಕಾರಿಗಳ ವಿರುದ್ಧ ಅಪರಾಧ ಪ್ರಕರಣ ದಾಖಲಿಸಿ ಬಂಧಿಸ ಬೇಕೆಂದು ಆಗ್ರಹಿಸುತ್ತೇನೆ’ ಎಂದರು.

ಅಕ್ರಮ ವಲಸಿಗರಿಗೆ ವಿಳಾಸ ಇಲ್ಲ. ಮನೆ ಸಂಖ್ಯೆ ಇಲ್ಲ. ಆದರೂ ಕಾನೂನು ಉಲ್ಲಂಘಿಸಿ ಅವರ ಹೆಸರನ್ನು ಸೇರಿಸಲಾಗುತ್ತಿದೆ. ನಿಯಮಗಳನ್ನು ಗಾಳಿಗೆ ತೂರಿ ಎಸ್‌ಐಆರ್ ನಡೆಸಲಾಗುತ್ತಿದೆ

ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ರಾಜ್ಯ ಸರ್ಕಾರದಿಂದ ಹಿಂದೂಗಳ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ. ಸಾಗರದಲ್ಲಿ ಬಿಎಲ್‌ಒಗಳನ್ನು ಕಾಂಗ್ರೆಸ್ ಪರ ಪ್ರಚಾರಕ್ಕೆ ಬಳಸಿಕೊಳ್ಳುತ್ತಿದ್ದಾರೆ

ಬಿ.ವೈ.ವಿಜಯೇಂದ್ರ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

‘ಎಸ್‌ಐಆರ್ ಪ್ರಕ್ರಿಯೆ ಕೂಡಲೇ ಸ್ಥಗಿತಗೊಳಿಸಿ’

ವೇಣುಗೋಪಾಲ್

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಆಡಳಿತದಲ್ಲಿ ಚುನಾವಣಾ ಪ್ರಜಾಪ್ರಭುತ್ವವು ಅತ್ಯಂತ ಗಂಭೀರ ಬೆದರಿಕೆ ಎದುರಿಸುತ್ತಿದೆ. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಪ್ರಕ್ರಿಯೆಯನ್ನು ಕೂಡಲೇ ಸ್ಥಗಿತಗೊಳಿಸಿ, ಚುನಾವಣಾ ಪ್ರಕ್ರಿಯೆಗಳಲ್ಲಿ ಮತ ಪತ್ರವನ್ನು ಮತ್ತೆ ಜಾರಿಗೆ ತರಬೇಕು ಎಂದು ವಿರೋಧ ಪಕ್ಷಗಳ ಮುಖಂಡರು ಸುಪ್ರೀಂಕೋರ್ಟ್‌ಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

8 ಪುಟಗಳ ಪತ್ರಕ್ಕೆ ವಿರೋಧ ಪಕ್ಷಗಳ 24 ನಾಯಕರು ಸಹಿ ಹಾಕಿದ್ದು, ರಾಜ್ಯಸಭೆಯ ಪಕ್ಷೇತರ ಸಂಸದ ಕಪಿಲ್ ಸಿಬಲ್ ಮೂಲಕ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರಿಗೆ ಕಳುಹಿಸಿಕೊಡಲಾಗಿದೆ.

ಸರ್ಕಾರಿ ಸಂಸ್ಥೆಗಳು ದಬ್ಬಾಳಿಕೆಯ ಸಾಧನಗಳಾಗಿ ಮಾರ್ಪಟ್ಟಿದ್ದು, ಸರ್ಕಾರದ ಕಾರ್ಯಸೂಚಿಯನ್ನು ಮುಂದಕ್ಕೆ ಕೊಂಡೊಯ್ದರೆ ದೇಶದ ಪ್ರಜಾಪ್ರಭುತ್ವವು ಗಂಭೀರ ಸಮಸ್ಯೆಗಳನ್ನು ಎದುರಿಸಲಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಪತ್ರವನ್ನು ಬಿಡುಗಡೆ ಗೊಳಿಸಿ ಮಾತನಾಡಿದ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್, ‘ಮೋದಿ–ಶಾ ಆಡಳಿತದಲ್ಲಿ ಚುನಾವಣಾ ಪ್ರಜಾಪ್ರಭುತ್ವವು ಅತ್ಯಂತ ಗಂಭೀರ ಸ್ಥಿತಿಯಲ್ಲಿದೆ. ಚುನಾವಣಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ಕಾಪಾಡುವ ದೃಷ್ಟಿಯಿಂದ ಈ ಪತ್ರವನ್ನು ಬಿಡುಗಡೆ ಗೊಳಿಸಲಾಗಿದೆ. ಚುನಾವಣಾ ಪ್ರಕ್ರಿಯೆಯ ಸಮಗ್ರತೆ ಹಾಗೂ ಹೊಣೆಗಾರಿಕೆಯನ್ನು ಪುನರ್‌ಸ್ಥಾಪಿಸಲು ಸುಪ್ರೀಂಕೋರ್ಟ್ ಕೂಡಲೇ ಮಧ್ಯ ಪ್ರವೇಶಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಪ್ರಜಾಪ್ರಭುತ್ವ ಕಳಂಕಗೊಳಿಸಲು ಅಪಾಯಕಾರಿ ಪಿತೂರಿ

ನವದೆಹಲಿ (ಪಿಟಿಐ): ಎಸ್‌ಐಆರ್‌ಗೆ ಸಂಬಂಧಿಸಿದಂತೆ ಮುಖ್ಯ ನ್ಯಾಯಮೂರ್ತಿಗೆ ಪತ್ರ ಬರೆದಿರುವ ಕಾಂಗ್ರೆಸ್ ವಿರುದ್ಧ ಬಿಜೆಪಿ ವಾಗ್ದಾಳಿ ನಡೆಸಿದ್ದು, ದೇಶದ ಪ್ರಜಾಪ್ರಭುತ್ವವನ್ನು ಕಳಂಕಗೊಳಿಸಲು ಅಪಾಯಕಾರಿ ಪಿತೂರಿ ನಡೆಸಲಾಗುತ್ತಿದ್ದು, ದೇಶದಲ್ಲಿ ಅರಾಜಕತೆಯನ್ನು ವಿಸ್ತರಿಸುವ ಗುರಿ ಹೊಂದಿದೆ ಎಂದು ಆರೋಪಿಸಿದೆ.

‘ಈ ಮೂಲಕ ದೇಶದ ಪ್ರಜಾಪ್ರಭುತ್ವದ ಮೇಲೆ ದಾಳಿ ನಡೆಸಲು ಮತ್ತೊಂದು ವಿಫಲ ಯತ್ನ ನಡೆಸಲಾಗುತ್ತಿದೆ. ಬಿಜೆಪಿಯು ಇದನ್ನು ಬಲವಾಗಿ ಖಂಡಿಸುತ್ತದೆ’ ಎಂದು ಪಕ್ಷದ ವಕ್ತಾರ ರಾಜ್ಯಸಭಾ ಸದಸ್ಯ ಸುಧಾಂಶು ತ್ರಿವೇದಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಮಸೀದಿಗಳಲ್ಲಿ ಎಸ್‌ಐಆರ್ ಅರ್ಜಿ ಭರ್ತಿ: ಜೋಶಿ ಕಿಡಿ

ನವದೆಹಲಿ: ರಾಮನಗರ, ಶಿಗ್ಗಾವಿ–ಸವಣೂರು, ಹುಬ್ಬಳ್ಳಿ–ಧಾರವಾಡ ಸೇರಿದಂತೆ ರಾಜ್ಯದ ವಿವಿಧ ಕಡೆಗಳ ಮಸೀದಿಗಳಲ್ಲಿ ಎಸ್‌ಐಆರ್ ಅರ್ಜಿ ಭರ್ತಿ ಮಾಡಲಾಗುತ್ತಿದೆ. ರಾಜ್ಯದಾದ್ಯಂತ ಎಸ್‌ಐಆರ್‌ನಲ್ಲಿ ಅಕ್ರಮ ನಡೆಯುತ್ತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದ್ದಾರೆ.

ಎಸ್‌ಐಆರ್ ನಿಯಮದ ಪ್ರಕಾರ, ಮತಗಟ್ಟೆ ಅಧಿಕಾರಿಗಳು ಕಡ್ಡಾಯವಾಗಿ ಮನೆ-ಮನೆಗೆ ತೆರಳಿ ಕುಟುಂಬ ಸದಸ್ಯರನ್ನು ಖುದ್ದಾಗಿ ಗುರುತಿಸಬೇಕು. ಆದರೆ, ಮಸೀದಿಗಳಲ್ಲಿ ಪ್ರಕ್ರಿಯೆ ನಡೆಸುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಜೋಶಿ ಕಳವಳ ವ್ಯಕ್ತಪಡಿಸಿದ್ದಾರೆ.

ಕರ್ನಾಟಕದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಹೆಸರಲ್ಲಿ ಬೃಹತ್ ಹಗರಣವೇ ನಡೆಯುತ್ತಿದೆ. ಕೇಂದ್ರ ಚುನಾವಣಾ ಆಯೋಗದ ನಿಯಮಾವಳಿಗಳನ್ನು ಸಂಪೂರ್ಣ ಗಾಳಿಗೆ ತೂರಲಾಗಿದೆ. ರಾಜಕೀಯ ಲಾಭಕ್ಕಾಗಿ ಮತದಾರರ ಪಟ್ಟಿಯನ್ನು ತಮಗೆ ಬೇಕಾದಂತೆ ಸಿದ್ಧಪಡಿಸಿಕೊಳ್ಳಲು ರಾಜ್ಯ ಸರ್ಕಾರ ವ್ಯವಸ್ಥಿತ ಸಂಚು ರೂಪಿಸಿದೆ ಎಂದು ಆರೋಪಿಸಿದ್ದಾರೆ.

ಛತ್ರದಲ್ಲೇ ಎಸ್‌ಐಆರ್

ಬೇಲೂರು (ಹಾಸನ): ಇಲ್ಲಿನ ಪುರಸಭೆ ವ್ಯಾಪ್ತಿಯ ಐದನೇ ವಾರ್ಡ್‌ನ ಕನ್ನಿಕಾ ಪರಮೇಶ್ವರಿ ಛತ್ರದಲ್ಲಿ ಬಿಎಲ್‌ಒಗಳು ಸಾರ್ವಜನಿಕರನ್ನು ಒಂದೇ ಸ್ಥಳಕ್ಕೆ ಕರೆಸಿ ಮತದಾರರ ಪರಿಷ್ಕರಣೆ ಕಾರ್ಯ ನಡೆಸುತ್ತಿದ್ದಾರೆ.

ಮನೆ ಮನೆಗೆ ತೆರಳಿ ಮತದಾರರ ವಿವರ ಪರಿಶೀಲಿಸಿ ಅಗತ್ಯ ದಾಖಲಾತಿ ಸಂಗ್ರಹಿಸುವ ಬದಲು ಸಾರ್ವಜನಿಕರಿಗೆ ಕಲ್ಯಾಣ ಮಂಟಪಕ್ಕೆ ಬರುವಂತೆ ಸೂಚಿಸಲಾಗಿದೆ.

‘ಎಲ್ಲಾ ದಾಖಲೆಗಳು ಮತ್ತು ಫೈಲ್‌ಗಳನ್ನು ಮನೆ, ಮನೆಗೆ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ. ಸಾರ್ವಜನಿಕರು ಇಲ್ಲಿಗೇ ಬಂದು ಎಸ್‌ಐಆರ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಬಿಎಲ್‌ಒಗಳು ಹೇಳುತ್ತಿದ್ದಾರೆ’ ಎಂದು ಜನರು ದೂರಿದ್ದಾರೆ. ಇದರಿಂದ ವಯೋವೃದ್ಧರು, ಅಂಗವಿಕಲರು ಹಾಗೂ ಕೆಲಸದ ನಿಮಿತ್ತ ಹೊರಗಿರುವವರಿಗೆ ತೊಂದರೆಯಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ‘ಮಳೆ ಬರುತ್ತಿತ್ತು ಹಾಗಾಗಿ ಕಲ್ಯಾಣ ಮಂಟಪದ ಒಳಗೆ ಕುಳಿತು ಬರೆದುಕೊಳ್ಳುತ್ತಿದೆ. ಎಲ್ಲರಿಗೂ ಕಲ್ಯಾಣ ಮಂಟಪಕ್ಕೆ ಬರುವಂತೆ ಹೇಳಿಲ್ಲ’ ಎಂದು ಬಿಎಲ್‌ಒ ರವಿ ಸ್ಪಷ್ಟಪಡಿಸಿದ್ದಾರೆ.

ಸರ್ಕಾರದ ಹೆಸರು ಕೆಡಿಸಲು ಎಚ್‌ಡಿಕೆ ಸಂಚು: ಬಸವರಾಜ ರಾಯರಡ್ಡಿ

ಕೊಪ್ಪಳ: ‘ರಾಮನಗರದಲ್ಲಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ ರಾಜ್ಯ ಸರ್ಕಾರ ಹಸ್ತಕ್ಷೇಪ ಮಾಡಿಲ್ಲ. ರಾಜ್ಯ ಕಾಂಗ್ರೆಸ್ ಸರ್ಕಾರದ ಹೆಸರು ಕೆಡಿಸುವ ಉದ್ದೇಶದಿಂದಲೇ ಎಚ್.ಡಿ. ಕುಮಾರಸ್ವಾಮಿ ಮಸೀದಿಯಲ್ಲಿ ಬಿಎಲ್‌ಒಗಳ ಸಭೆ ಮಾಡಿಸಿ ಸಂಚು ಮಾಡಿರಬಹುದು’ ಎಂದು ಶಾಸಕ ಬಸವರಾಜ ರಾಯರಡ್ಡಿ ಆರೋಪಿಸಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿ, ‘ರಾಮನಗರ ಅವರದ್ದೇ ಜಿಲ್ಲೆ. ಎಸ್‌ಐಆರ್ ಪ್ರಕ್ರಿಯೆಗೂ ರಾಜ್ಯ ಸರ್ಕಾರಕ್ಕೂ ಯಾವುದೇ ಸಂಬಂಧವಿಲ್ಲ. ಬಿಎಲ್‌ಒಗಳಿಗೆ ರಾಜ್ಯ ಸರ್ಕಾರ ಯಾವುದೇ ನಿರ್ದೇಶನ ನೀಡಿಲ್ಲ. ಆದರೂ ಕೇಂದ್ರ ಸರ್ಕಾರ ಹಾಗೂ ಭಾರತ ಚುನಾವಣಾ ಆಯೋಗದ ಕಾರ್ಯದಲ್ಲಿ ಸರ್ಕಾರಿ ನೌಕರರು ತೊಡಗುವುದು ಅನಿವಾರ್ಯ’ ಎಂದರು.

ಅಂಗನವಾಡಿ, ಪೆಂಡಾಲ್, ಅಶ್ವತ್ಥಕಟ್ಟೆಯಲ್ಲಿ ಎಸ್‌ಐಆರ್

ಕೋಲಾರ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್‌ಐಆರ್) ಮನೆ ಮನೆಗೆ ತೆರಳಿ ಮಾಡಬೇಕಾಗಿದ್ದ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಕೆಲವೆಡೆ ಅಂಗನವಾಡಿ, ಶಾಲೆ ಮತ್ತು ಅಶ್ವತ್ಥಕಟ್ಟೆಗಳಲ್ಲಿ ಕುಳಿತು ಪ್ರಕ್ರಿಯೆ ನಡೆಸುವ ಮೂಲಕ ಚುನಾವಣಾ ಆಯೋಗದ ನಿಯಮ ಉಲ್ಲಂಘಿಸಿರುವ ಪ್ರಕರಣಗಳು ಪತ್ತೆಯಾಗಿವೆ.

ಕೋಲಾರ ನಗರದ ಕುರುಬರಪೇಟೆಯ ಅಶ್ವತ್ಥಕಟ್ಟೆಯಲ್ಲಿ, ರಹಮತ್ ನಗರದ ಅಂಗನವಾಡಿ ಕೇಂದ್ರದಲ್ಲಿ, ಬಂಬೂಬಜಾರ್‌ನಲ್ಲಿ ಹಾಗೂ ಮಹಾಲಕ್ಷ್ಮಿ ಬಡಾವಣೆಯಲ್ಲಿ ಪೆಂಡಾಲ್ ಹಾಕಿ ಎಸ್‌ಐಆರ್ ಪ್ರಕ್ರಿಯೆ ನಡೆಸಿದ್ದಾರೆ. ಇಲ್ಲಿ ಜನರು ದಾಖಲಾತಿಗಳೊಂದಿಗೆ ಕಿಕ್ಕಿರಿದು ಸೇರಿದ್ದು ಕಂಡುಬಂತು.

ಗಣತಿ ಕಾರ್ಯದ ನೆಪದಲ್ಲಿ ಬಿಎಲ್‌ಒಗಳು ಮತದಾರರನ್ನು ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ಒಂದು ಕಡೆ ಗುಂಪುಗೂಡಿಸಿ ಗಣತಿ ನಮೂನೆ ಭರ್ತಿ ಮಾಡಿಸುತ್ತಿರುವ ಪ್ರಕರಣಗಳು ಜಿಲ್ಲಾಡಳಿತದ ಗಮನಕ್ಕೆ ಬಂದಿದೆ. ನಿಯಮ ಉಲ್ಲಂಘಿಸಿ ಮಾರ್ಗಸೂಚಿಗೆ ವಿರುದ್ಧವಾಗಿ ಚಟುವಟಿಕೆ ನಡೆಸಿರುವ ಮೂವರು ಬಿಎಲ್‌ಒಗಳಿಗೆ ನೋಟಿಸ್ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಆರ್.ರವಿ ‘ಪ್ರಜಾವಾಣಿ’ಗೆ ತಿಳಿಸಿದರು.

ಸಾಮೂಹಿಕವಾಗಿ ಎಸ್‌ಐಆರ್ ಪ್ರಕ್ರಿಯೆ: ಆಕ್ಷೇಪ

ಕುಣಿಗಲ್: ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ- ಮನೆಗೆ ತೆರಳದೆ ಒಂದು ಕಡೆ ಕುಳಿತು ಎಸ್‌ಐಆರ್ ಗಣತಿ ನಮೂನೆ (ಎನುಮ್ಯುರೇಷನ್) ಭರ್ತಿ ಮಾಡುತ್ತಿದ್ದು, ಇದರ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ತಾಲ್ಲೂಕಿನ ನಿಡಸಾಲೆ ಗ್ರಾಮ, ಪಟ್ಟಣದ 19ನೇ ವಾರ್ಡ್ ಮತ್ತು ಗುಜ್ಜಾರಿ ಮೊಹಲ್ಲ ಭಾಗದಲ್ಲಿ ಮನೆಗಳಿಗೆ ಭೇಟಿ ನೀಡದೆ ಒಂದು ಜಾಗದಲ್ಲಿ ಕುಳಿತು ಗಣತಿ ನಮೂನೆ ವಿತರಿಸಲಾಗಿದೆ.

ಪಟ್ಟಣದ 19ನೇ ವಾರ್ಡ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆ ಇಂದುಮತಿ ಅಂಗನವಾಡಿ ಕೇಂದ್ರದಲ್ಲಿ ಕುಳಿತು ನಮೂನೆ ವಿತರಿಸಿ ಮತದಾರರಿಂದ ಭರ್ತಿ ಮಾಡಿಸಿದ್ದಾರೆ. ಇದಕ್ಕೆ ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಇಷ್ಟು ಫೈಲ್ ಹೊತ್ತುಕೊಂಡು ಮನೆ- ಮನೆಗೆ ಬರಲು ಆಗುವುದಿಲ್ಲ. ದಿನಕ್ಕೆ 50 ನಮೂನೆ ಮುಗಿಸಬೇಕು ಎಂಬ ಗುರಿ ನೀಡಲಾಗಿದೆ. ಅರ್ಹರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳಲಾಗುವುದು’ ಎಂದು ಬಿಎಲ್‌ಒ ಇಂದುಮತಿ ಹೇಳಿರುವುದು ವಿಡಿಯೊದಲ್ಲಿದೆ.

‘ಬಿಎಲ್‌ಒ ಪ್ರತಿ ಮನೆಗೆ ಭೇಟಿ ನೀಡಬೇಕು. ಜತೆಗೆ ಎಲ್ಲ ಪಕ್ಷದ ಬಿಎಲ್‌ಎಗಳು ಇರಬೇಕು. ಯಾರೂ ಇಲ್ಲದೆ ನಮೂನೆ ತುಂಬಲಾಗುತ್ತಿದೆ. ಇದರಲ್ಲಿ ಯಾರು ಅರ್ಹರು, ಯಾರು ಅನರ್ಹರು ಎಂದು ಹೇಗೆ ತಿಳಿಯುತ್ತದೆ. ಒಂದು ಕಡೆ ಕುಳಿತು ಕೆಲಸ ಮಾಡಿ ಎಂದು ಹೇಳಿದ್ದಾರೆಯೇ’ ಎಂದು ಜನರು ಪ್ರಶ್ನಿಸಿದ್ದಾರೆ. ಈ ಸಂಬಂಧ ಜೆಡಿಎಸ್‌ನಿಂದ ಚುನಾವಣಾ ಆಯೋಗಕ್ಕೆ ದೂರು ನೀಡಲಾಗಿದೆ.

ಬಿಎಲ್‌ಒ ಹೊಣೆಗಾರಿಕೆ ಕೈಪಿಡಿ ಹೇಳುವುದೇನು?

ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ (ಎಸ್‌ಐಆರ್) ಮತಗಟ್ಟೆ ಅಧಿಕಾರಿಗಳು (ಬಿಎಲ್‌ಒ) ಮನೆ– ಮನೆಗೆ ಭೇಟಿ ನೀಡಿಯೇ ಗಣತಿ ನಮೂನೆಗಳನ್ನು ವಿತರಿಸಬೇಕು ಎಂದು ಎಸ್‌ಐಆರ್ ಕೈಪಿಡಿ ಹೇಳುತ್ತದೆ. ಗಣತಿ ನಮೂನೆ ವಿತರಣೆ ಮತ್ತು ಸಂಗ್ರಹದ ಹಂತದಲ್ಲಿ ಬಿಎಲ್‌ಒಗಳು ಏನೆಲ್ಲಾ ಮಾಡಬೇಕು ಎಂಬುದನ್ನು ಕೈಪಿಡಿಯಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ.

ಕೈಪಿಡಿಯಲ್ಲಿರುವ ಪ್ರಮುಖಾಂಶಗಳು

- ಬಿಎಲ್‌ಒಗಳು ತಮ್ಮ ಮತಗಟ್ಟೆ ವ್ಯಾಪ್ತಿಯ ಪ್ರತಿಯೊಂದು ಮನೆಗೂ ಕಡ್ಡಾಯವಾಗಿ ಭೇಟಿ ನೀಡಬೇಕು. ಆ ಮತಗಟ್ಟೆಯ ಪ್ರತಿಯೊಬ್ಬ ಮತದಾರರಿಗೆ, ಅವರ ಪೂರ್ವಮುದ್ರಿತ ಗಣತಿ ನಮೂನೆಯ (ಎನ್ಯೂಮರೇಷನ್ ಅರ್ಜಿ) ಎರಡು ಪ್ರತಿಗಳನ್ನು ವಿತರಿಸಬೇಕು
- ಗಣತಿ ನಮೂನೆ ವಿತರಣೆಗೆಂದು ಬಿಎಲ್‌ಒಗಳು ಮನೆ ಭೇಟಿಗೆಂದು ಹೋದಾಗ ಮನೆಯಲ್ಲಿ ಯಾರೂ ಇಲ್ಲದಿದ್ದರೆ ಅಥವಾ ಮನೆಗೆ ಬೀಗ ಹಾಕಿದ್ದರೆ, ಗಣತಿ ನಮೂನೆಗಳನ್ನು ಮನೆಯ ಬಾಗಿಲಿಗೆ ಸಿಕ್ಕಿಸಿ ಹೋಗಬೇಕು. ಆ ಮನೆಯಲ್ಲಿ ಒಬ್ಬ ಮತದಾರಿದ್ದರೂ ಅಥವಾ ಹಲವು ಮತದಾರರು ಇದ್ದರೂ ಇದೇ ವಿಧಾನ ಅನುಸರಿಸಬೇಕು
- ಮತದಾರರು ಗಣತಿ ನಮೂನೆಯನ್ನು ಭರ್ತಿ ಮಾಡಲು ಎಸ್‌ಐಆರ್ ಮ್ಯಾಪಿಂಗ್ ವಿವರಗಳನ್ನು ಒದಗಿಸುವುದು ಮತ್ತು ನಮೂನೆ ಭರ್ತಿ ಮಾಡುವಲ್ಲಿ ಅಗತ್ಯ ನೆರವನ್ನು ನೀಡುವುದು ಬಿಎಲ್‌ಒ ಕರ್ತವ್ಯ
- ಮತದಾರರು ಆನ್‌ಲೈನ್ ಮೂಲಕ ಭರ್ತಿ ಮಾಡಿದ ಗಣತಿ ನಮೂನೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ನೆರವು ನೀಡುವುದು, ಅವುಗಳನ್ನು ದೃಢೀಕರಿಸುವುದು ಮತ್ತು ಮತ್ತೆ ಅಪ್‌ಲೋಡ್ ಮಾಡಲು ನೆರವು ನೀಡುವುದು ಬಿಎಲ್‌ಒಗಳ ಕೆಲಸ. ಜತೆಗೆ ಮತದಾರರನು ಉಲ್ಲೇಖಿಸಿರುವ ದಾಖಲೆ ಪತ್ರಗಳನ್ನು ಭೌತಿಕವಾಗಿ ಪರಿಶೀಲಿಸಿ, ಖಚಿತಪಡಿಸಿಕೊಳ್ಳಬೇಕು
- ಮತದಾರರಿಗೆ ವಿತರಿಸಿದ ಗಣತಿ ನಮೂನೆಗಳನ್ನು ಸಂಗ್ರಹಿಸಲು ಬಿಎಲ್‌ಒಗಳು ಮತದಾರರ ಮನೆಗೆ ಭೇಟಿ ನೀಡಬೇಕು. ನಮೂನೆಗಳನ್ನು ಸಂಗ್ರಹಿಸಲು ಮೂರು ಬಾರಿ ಭೇಟಿ ನೀಡಲೇಬೇಕು. ಮತದಾರರು ಭರ್ತಿ ಮಾಡಿದ ನಮೂನೆಯ ಎರಡೂ ಪ್ರತಿಯ ಮೇಲೆ ಬಿಎಲ್‌ಒ ಮತ್ತು ಮತದಾರರು (ಮತದಾರರ ಪರವಾಗಿ ಕುಟುಂಬದವರು) ಸಹಿ ಮಾಡುವುದು ಕಡ್ಡಾಯ
- ಮತದಾರರು ಭರ್ತಿ ಮಾಡಿ ಸಲ್ಲಿಸಿದ ಗಣತಿ ನಮೂನೆಯ ಒಂದು ಪ್ರತಿಯನ್ನು ಬಿಎಲ್‌ಒ ತಾವು ಇರಿಸಿಕೊಂಡು, ಮೇಲಧಿಕಾರಿಗಳಿಗೆ ಸಲ್ಲಿಸಬೇಕು ಮತ್ತು ಡಿಜಿಟಲೀಕರಿಸಬೇಕು. ಇನ್ನೊಂದು ಪ್ರತಿಯನ್ನು ಮತದಾರರಿಗೆ ಹಿಂತಿರುಗಿಸಬೇಕು

ಬಿಎಲ್‌ಒ ಮನೆ ಭೇಟಿ ಕಡ್ಡಾಯ

ಒಂದನೇ ಪುಟದಿಂದ...



ಅನ್ಬುಕುಮಾರ್

ಅಲ್ಲಿ ಸಹಾಯಕರು ಮತ್ತು ಬಿಎಲ್‌ಒಗಳ ನೆರವು ಪಡೆದು ನಮೂನೆಗಳನ್ನು ಭರ್ತಿ ಮಾಡ ಬೇಕು. ಈ ವಿಧಾನವನ್ನೇ ಅನು ಸರಿಸಬೇಕು ಎಂದು ಸೂಚಿಸಿದ್ದಾರೆ.

‘ಮನೆ ಬದಲಿಸಿದ್ದರೆ, ಬಿಎಲ್‌ಒ ಸಂಪರ್ಕಿಸಿ’: ‘ಮತದಾರರು ಮನೆ ಬದಲಿಸಿದ್ದು ಮತದಾರರ ಚೀಟಿಯನ್ನು ಹೊಸ ವಿಳಾಸಕ್ಕೆ ಸ್ಥಳಾಂತರ ಮಾಡಿಸದೇ ಇದ್ದರೆ, ಹಳೆಯ ವಿಳಾಸದಲ್ಲಿಯೇ ಗಣತಿ ನಮೂನೆಗಳನ್ನು ವಿತರಿಸಲಾಗುತ್ತದೆ. ಅಲ್ಲಿ ಮತದಾರರು ಅಥವಾ ಮತದಾರರ ಪರವಾಗಿ ಯಾರೂ ಲಭ್ಯವಿಲ್ಲದಿದ್ದರೆ, ಬಿಎಲ್‌ಒಗಳು ‘ಸ್ಥಳಾಂತರ’ ಎಂದು ನಮೂದು ಮಾಡಿಕೊಳ್ಳುತ್ತಾರೆ. ಹೀಗಾದಲ್ಲಿ, ಕರಡು ಮತದಾರರ ಪಟ್ಟಿಯಲ್ಲಿ ಅಂಥವರ ಹೆಸರು ಬಿಟ್ಟುಹೋಗುತ್ತದೆ. ಹೀಗೆ ಆಗದೇ ಇರುವ ರೀತಿಯಲ್ಲಿ ಎಚ್ಚರಿಕೆ ವಹಿಸಿಕೊಳ್ಳುವ ಹೊಣೆಗಾರಿಕೆ ಮತದಾರರದ್ದು’ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯ ಅಧಿಕಾರಿ ತಿಳಿಸಿದರು.

‘ಮನೆ ಬದಲಿಸಿರುವ ಮತದಾರರು, ತಮ್ಮ ಮತಚೀಟಿ ಇರುವ ಭಾಗದ ಬಿಎಲ್‌ಒ ಅವರನ್ನು ಸಂಪರ್ಕಿಸಬೇಕು. ಬಿಎಲ್‌ಒ ಕಚೇರಿಗೆ ತೆರಳಿ ಗಣತಿ ನಮೂನೆಯನ್ನು ಪಡೆದುಕೊಳ್ಳಬೇಕು. ಆ ಮತಗಟ್ಟೆ ವ್ಯಾಪ್ತಿಯ ಮತದಾರರ ಸಹಾಯಕ ಕೇಂದ್ರಕ್ಕೆ ತೆರಳಿ ಸಹಾಯ ಪಡೆದು, ನಮೂನೆ ಭರ್ತಿ ಮಾಡಬೇಕು. ನಮೂನೆಯನ್ನು ಬಿಎಲ್‌ಒಗೆ ಸಲ್ಲಿಸಬೇಕು’ ಎಂದು ಮಾಹಿತಿ ನೀಡಿದರು.

ಜಾಗೃತಿ ಮೆರವಣಿಗೆ

ಪ್ರಜಾವಾಣಿ ಚಿತ್ರ:

ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಚೌಡಾಪುರ ಗ್ರಾಮದಲ್ಲಿ ಶುಕ್ರವಾರ ಎತ್ತಿನ ಗಾಡಿಯಲ್ಲಿ ಮೆರವಣಿಗೆ ಹೋಗುವ ಮೂಲಕ ಎಸ್‌ಐಆರ್ ಕುರಿತು ಜಾಗೃತಿ ಮೂಡಿಸಲಾಯಿತು. ಈ ಸಂದರ್ಭದಲ್ಲಿ ತಹಶೀಲ್ದಾರ್ ವಿ.ಕೆ. ನೇತ್ರಾವತಿ, ತಾಲ್ಲೂಕು ಪಂಚಾಯಿತಿ ಇಒ ನರಸಪ್ಪ ಮತ್ತಿತರರು ಪಾಲ್ಗೊಂಡಿದ್ದರು

ವಿಜ್ಞಾನ ಇಲಾಖೆಗೆ ಉಮೇಶ್ ಕಾರ್ಯದರ್ಶಿ

ಉಮೇಶ್ ವಾಗ್ಮಾರೆ

ಬೆಂಗಳೂರು: ಬೆಂಗಳೂರಿನ ವಿಜ್ಞಾನಿ ಹಾಗೂ ಜವಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರೀಸರ್ಚ್ (ಜೆಎನ್‌ಸಿಎಎಸ್‌ಆರ್)ನ ಅಧ್ಯಕ್ಷ ಪ್ರೊ.ಉಮೇಶ್ ವಾಗ್ಮಾರೆ ಅವರನ್ನು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಮಿತಿಯ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ನೇಮಕಾತಿ: 341 ಶಿಕ್ಷಕರಿಗೆ ಕೋರ್ಟ್ ಅನುಮತಿ

ಬೆಂಗಳೂರು: ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಕುರಿತ ಹೈಕೋರ್ಟ್ ಮಧ್ಯಂತರ ಆದೇಶದ ಅನ್ವಯ 341 ಅಭ್ಯರ್ಥಿಗಳಿಗೆ ಕರ್ತವ್ಯಕ್ಕೆ ಹಾಜರಾಗಲು ಶಾಲಾ ಶಿಕ್ಷಣ ಇಲಾಖೆ ಅನುಮತಿ ನೀಡಿದೆ.

2023ನೇ ಮಾ. 8ರಂದು ಪ್ರಕಟಗೊಂಡಿದ್ದ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದ ತಂದೆಯ ಜಾತಿ ಮತ್ತು ಆದಾಯ ಪ್ರಮಾಣಪತ್ರ ಸಲ್ಲಿಸಿದ್ದ ಹಿಂದುಳಿದ ವರ್ಗಗಳ ವಿವಾಹಿತ ಮಹಿಳಾ ಅಭ್ಯರ್ಥಿಗಳನ್ನು ಕೈಬಿಟ್ಟ ಪ್ರಕರಣ ಕೋರ್ಟ್ ಮೆಟ್ಟಿಲೇರಿತ್ತು. ಹಾಗಾಗಿ, 481 ಅಭ್ಯರ್ಥಿಗಳ ಕೌನ್ಸಿಲಿಂಗ್ ಪ್ರಕ್ರಿಯೆ ಸ್ಥಗಿತಗೊಳಿಸಲಾಗಿತ್ತು. ‘ಪ್ರಕರಣದ ವಿಚಾರಣೆ ಕೆಎಟಿ, ಹೈಕೋರ್ಟ್, ಸುಪ್ರೀಂಕೋರ್ಟ್‌ನಲ್ಲಿ ನಡೆದು, ಹೈಕೋರ್ಟ್ 2026ನೇ ಜೂನ್24ರಂದು ನೀಡಿದ ಮಧ್ಯಂತರ ಆದೇಶವನ್ನು ಅನುಸರಿಸಿ, ನೇಮಕಾತಿ ಆದೇಶ ಪಡೆದಿದ್ದ 341 ಅಭ್ಯರ್ಥಿಗಳು ಸೇವೆಗೆ ಹಾಜರಾಗಲು ಅನುಮತಿ ನೀಡಲಾಗಿದೆ. ಈ ನೇಮಕಾತಿ ಕೋರ್ಟ್ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ’ ಎಂದು ಇಲಾಖೆ ಹೇಳಿದೆ.

‘ಕೆಪಿಎಸ್‌ಸಿ ಅಧ್ಯಕ್ಷ ರಾಜೀನಾಮೆ ನೀಡಲಿ’

ಒಂದನೇ ಪುಟದಿಂದ...

‘ಈ ವಿಷಯವು ಗಂಭೀರವಾಗಿರುವುದರಿಂದ ಸರ್ಕಾರದ ಗಮನಕ್ಕೆ ತರುವುದು ಸೂಕ್ತವಾಗಿದೆ. ಹೀಗಾಗಿ, ಆಯೋಗದ ಕಾರ್ಯದರ್ಶಿಯವರು ಒಂದು ವಿವರವಾದ ವರದಿಯನ್ನು ಸರ್ಕಾರಕ್ಕೆ ತಕ್ಷಣವೇ ನೀಡಬೇಕು’ ಎಂದೂ ನಿರ್ಣಯಿಸಲಾಗಿದೆ.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿನ ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಗೆ ಶಿವಶಂಕರಪ್ಪ ಸಾಹುಕಾರ್ ಅವರ ಪುತ್ರಿ ಸುಮಾ ಎಸ್. ಸಾಹುಕಾರ್ ಅವರು ಜಾತಿ/ಆದಾಯ ಪ್ರಮಾಣ ಪತ್ರದಲ್ಲಿ ಕುಟುಂಬದ ವಾರ್ಷಿಕ ಆದಾಯ ₹40 ಸಾವಿರವೆಂದು ತೋರಿಸಿ 3ಬಿ ಮೀಸಲಾತಿ ಅಡಿ ಅರ್ಜಿ ಸಲ್ಲಿಸಿದ್ದರು. ಮೂಲ ದಾಖಲೆಗಳ ಪರಿಶೀಲನೆಯ ವೇಳೆಯಲ್ಲಿ ಈ ವಿಷಯ ಆಯೋಗದ ಅಧಿಕಾರಿಗಳ ಗಮನಕ್ಕೆ ಬಂದಿತ್ತು. ಜೂನ್ 19ರಂದು ನಡೆದ ಆಯೋಗದ ಸಭೆಗೆ ಈ ವಿಷಯದ ಟಿಪ್ಪಣಿಯನ್ನು ಕಾರ್ಯದರ್ಶಿ ಕೆ. ಜ್ಯೋತಿ ಮಂಡಿಸಿದ್ದರು. ಅಂದಿನ ಸಭೆಗೆ ಟಿಪ್ಪಣಿ ನೀಡಿದ್ದ ಶಿವಶಂಕರಪ್ಪ ಸಾಹುಕಾರ್, ಮಗಳ ವಿಷಯ ಕಾರ್ಯಸೂಚಿಯಲ್ಲಿ ಇರುವುದರಿಂದ ಸಭೆಯಿಂದ ಹೊರಗುಳಿಯುವುದಾಗಿ ತಿಳಿಸಿದ್ದರು. ಹೀಗಾಗಿ, ಹಿರಿಯ ಸದಸ್ಯ ಬಿ. ಪ್ರಭುದೇವ ಅಧ್ಯಕ್ಷತೆಯಲ್ಲಿ ಸಭೆ ನಡೆದಿತ್ತು.

‘ಸುಮಾ ಸಲ್ಲಿಸಿರುವ 3ಬಿ ಮೀಸಲಾತಿ ಪ್ರಮಾಣ ಪತ್ರವು 2020ರ ಮಾರ್ಚ್ 4ರ ದಿನಾಂಕ ಹೊಂದಿದ್ದು, ಅವರ ತಂದೆ ಶಿವಶಂಕರಪ್ಪ ಸಾಹುಕಾರ್ ಆಯೋಗದ ಸದಸ್ಯರಾಗಿ 2019ರಿಂದಲೇ (ಈಗ ಅಧ್ಯಕ್ಷ) ಕಾರ್ಯನಿರ್ವಹಿಸುತ್ತಿದ್ದಾರೆ. ಅಂದಿನಿಂದಲೇ ಆಯೋಗದ ವೇತನ ಪಡೆಯುತ್ತಿದ್ದು, ಅವರ ವಾರ್ಷಿಕ ಆದಾಯ ಕೇವಲ ₹40 ಸಾವಿರ ಎಂಬುದು ಸುಳ್ಳು ಎನ್ನುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅಭ್ಯರ್ಥಿಯು ತನ್ನ ತಂದೆ ಸಾಂವಿಧಾನಿಕ ಹುದ್ದೆಯಲ್ಲಿ ಇರುವುದನ್ನು ತಿಳಿದಿದ್ದರೂ ನೈಜವಾಗಿಲ್ಲದ 3ಬಿ ಮೀಸಲಾತಿ ಪ್ರಮಾಣಪತ್ರ ಸಲ್ಲಿಸಿರುವುದನ್ನು ದುರಾಚಾರ ಪ್ರಕರಣದಡಿಯಲ್ಲಿ ಪರಿಗಣಿಸಿ, ಕ್ರಮ ತೆಗೆದುಕೊಳ್ಳಬೇಕಿದೆ’ ಎಂದು ಸಭೆಗೆ ಮಂಡಿಸಿದ್ದ ಟಿಪ್ಪಣಿಯಲ್ಲಿ ಕಾರ್ಯದರ್ಶಿ ಉಲ್ಲೇಖಿಸಿದ್ದರು. ಟಿಪ್ಪಣಿಯಲ್ಲಿದ್ದ ಅಂಶಗಳ ಕುರಿತು ಸಭೆಯಲ್ಲಿ ಸುದೀರ್ಘವಾಗಿ ಚರ್ಚೆ ನಡೆದಿದೆ.

ಸಭೆಯ ಬಳಿಕ ಲೋಕಭವನಕ್ಕೆ ತೆರಳಿದ ಆಯೋಗದ ಸದಸ್ಯರು, ಶಿವಶಂಕರಪ್ಪ ಸಾಹುಕಾರ್ ವಿರುದ್ಧ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ದೂರು ನೀಡಿದ್ದಾರೆ. ಆ ಬೆನ್ನಲ್ಲೆ, ಕಾರ್ಯದರ್ಶಿಯವರನ್ನೂ ಕರೆಸಿಕೊಂಡು ರಾಜ್ಯಪಾಲರು ಮಾಹಿತಿ ಪಡೆದುಕೊಂಡಿದ್ದಾರೆ. ಸಾಹುಕಾರ್ ಕೂಡಾ ರಾಜ್ಯಪಾಲರನ್ನು ಭೇಟಿ ಮಾಡಿದ್ದಾರೆ ಎಂದು ಲೋಕಭವನದ ಮೂಲಗಳು ತಿಳಿಸಿವೆ.

ಆಯೋಗದ ನಿರ್ಣಯಗಳೇನು?

- ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ತತ್‌ಕ್ಷಣವೇ ರಾಜೀನಾಮೆ ನೀಡಬೇಕು
- ಅಭ್ಯರ್ಥಿ ಸುಮಾ ಸಲ್ಲಿಸಿರುವ 3ಬಿ ಮೀಸಲಾತಿ ತಿರಸ್ಕರಿಸಬೇಕು
- ಅಭ್ಯರ್ಥಿ ಸುಳ್ಳು ಆದಾಯ ಪ್ರಮಾಣಪತ್ರ ಪಡೆಯಲು ಸಹಕರಿಸಿದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು
- ಅಭ್ಯರ್ಥಿಯನ್ನು ಅನರ್ಹಗೊಳಿಸಬೇಕು
- ಆಯೋಗದಿಂದ ನಡೆಸುವ ಯಾವುದೇ ನೇಮಕಾತಿಯಲ್ಲಿ ಭಾಗವಹಿಸದಂತೆ ಶಾಶ್ವತವಾಗಿ ನಿರ್ಬಂಧಿಸಬೇಕು
- ಆಯೋಗದ ಕಾರ್ಯ ಸುಗಮವಾಗಿ ನಡೆಯಲು ಮೊದಲನೇ ಹಿರಿಯ ಸದಸ್ಯರ ನೇತೃತ್ವದಲ್ಲಿ ನೇಮಕಾತಿ ಪ್ರಕ್ರಿಯೆ ನಡೆಸಬೇಕು
- ಆಯೋಗದ ಕಾರ್ಯದರ್ಶಿ ವಿವರವಾದ ವರದಿಯನ್ನು ತತ್‌ಕ್ಷಣವೇ ಸರ್ಕಾರಕ್ಕೆ ನೀಡಬೇಕು

ಆಯೋಗದ ಸಭೆಯಲ್ಲಿ ವಿಷಯ ವಿವರವಾಗಿ ಚರ್ಚೆಯಾಗಿದೆ. ಸದಸ್ಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದು, ಮುಖ್ಯ ಕಾರ್ಯದರ್ಶಿಗೆ ವಿವರವಾದ ವರದಿ ಸಲ್ಲಿಸುತ್ತೇನೆ

ಕೆ. ಜ್ಯೋತಿ, ಕಾರ್ಯದರ್ಶಿ, ಕೆಪಿಎಸ್‌ಸಿ

ಈ ಕುರಿತು ಪ್ರತಿಕ್ರಿಯಿಸಿದ ಕೆ. ಜ್ಯೋತಿ, ‘ಇದೊಂದು ಸೂಕ್ಷ್ಮ ವಿಷಯ. ಆಯೋಗದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ನಡಾವಳಿಯ ಸಹಿತ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ವಿವರವಾದ ವರದಿ ಸಲ್ಲಿಸಲಾಗುವುದು’ ಎಂದರು.

ಸಭಾ ಟಿಪ್ಪಣಿಯಲ್ಲಿ ಏನಿತ್ತು?: ಉಳಿಕೆ ಮೂಲ ವೃಂದದ 50 ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಗಳಿಗೆ 2024ರ ಮಾರ್ಚ್ 15ರಂದು ಅಧಿಸೂಚನೆ ಹೊರಡಿಸಿ, 2025ರ ಜುಲೈ 12ರಂದು ಕನ್ನಡ ಭಾಷಾ ಪರೀಕ್ಷೆ, 13ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಗಿತ್ತು. 2026ರ ಜನವರಿ 21ರಂದು ಅರ್ಹತಾ ಪಟ್ಟಿ ಪ್ರಕಟಿಸಿ, 1:3 ಅನುಪಾತದಲ್ಲಿ ಅರ್ಹರಾದ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯನ್ನು ಫೆ. 19ರಂದು ನಡೆಸಲಾಗಿದೆ. ಈ ಹುದ್ದೆಗೆ ಸುಮಾ ಎಸ್. ಸಾಹುಕಾರ್ ಅರ್ಜಿ ಸಲ್ಲಿಸಿದ್ದು, 3ಬಿ ಮೀಸಲಾತಿ ಕೋರಿದ್ದರು. 1:3 ಅನುಪಾತದ ಅರ್ಹತಾ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದ ಅವರು ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗಿದ್ದರು. ದಾಖಲೆಗಳ ಪರಿಶೀಲನೆಯ ವೇಳೆಯಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರದಲ್ಲಿ ಕುಟುಂಬದ ಆದಾಯವು ವಾರ್ಷಿಕ ₹40 ಸಾವಿರ ಎಂದು ನಮೂದಾಗಿತ್ತು.

ಆದರೆ, ಸರ್ಕಾರ 2018ರ ಸೆ. 14ರಂದು ಹೊರಡಿಸಿರುವ ಆದೇಶದ ಪ್ರಕಾರ, ಕೆನೆ ಪದರವನ್ನು ನಿರ್ಣಯಿಸಲು ಹಿಂದುಳಿದ ವರ್ಗಗಳ ಪ್ರವರ್ಗ 2ಎ, 2ಬಿ, 3ಎ ಮತ್ತು 3ಬಿಗಳಿಗೆ ಅನ್ವಯಿಸುವಂತೆ ಅಭ್ಯರ್ಥಿ ಮತ್ತು ಅವರ ತಂದೆ–ತಾಯಿ/ಪೋಷಕರ ವಾರ್ಷಿಕ ಒಟ್ಟು ಆದಾಯ ಮಿತಿಯನ್ನು ₹6 ಲಕ್ಷದಿಂದ ₹8 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಸುಮಾ ಎಸ್. ಸಾಹುಕಾರ್ ತಮ್ಮ ಅರ್ಜಿಯಲ್ಲಿ ತಂದೆಯ ಹೆಸರು ಶಿವಶಂಕರಪ್ಪ ಸಾಹುಕಾರ್ ಎಂದು ನಮೂದಿಸಿದ್ದು, ಅಭ್ಯರ್ಥಿಯು ನೀಡಿರುವ ಆದಾಯ ಪ್ರಮಾಣಪತ್ರದಲ್ಲಿರುವ ಮಾಹಿತಿಯು ಸುಳ್ಳು ಎಂದು ಮೇಲ್ನೋಟಕ್ಕೆ ತಿಳಿದು ಬಂದಿದೆ.

‘ಒಬ್ಬ ಅಭ್ಯರ್ಥಿ ನಕಲಿ ವ್ಯಕ್ತಿ ಅಥವಾ ನಕಲಿ ದಾಖಲೆ ಅಥವಾ ತಿದ್ದಿದ ದಾಖಲೆ ಸಲ್ಲಿಸಿದರೆ, ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿದರೆ, ವಾಸ್ತವ ಮಾಹಿತಿ ಮರೆಮಾಚಿದರೆ ಅಥವಾ ನೇಮಕಾತಿಗಾಗಿ ನಡೆಯುವ ಸಂದರ್ಶನದಲ್ಲಿ ಅನುಚಿತ ಮಾರ್ಗ ಅನುಸರಿಸಿರುವುದು ಕಂಡುಬಂದರೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕಾಗುತ್ತದೆ ಮತ್ತು ಶಿಸ್ತು ಕ್ರಮಕ್ಕೆ ಒಳಗಾಗಬೇಕಾಗುತ್ತದೆ. ಹುದ್ದೆಯ ಸಂದರ್ಶನ, ಆಯ್ಕೆಯಿಂದ ಅಭ್ಯರ್ಥಿತನವನ್ನು ರದ್ದುಪಡಿಸಲಾಗುವುದು. ಈ ಅಂಶಗಳ ಹಿನ್ನೆಲೆಯಲ್ಲಿ ಸುಮಾ ಎಸ್. ಸಾಹುಕಾರ್ ಸಲ್ಲಿಸಿರುವ ಅರ್ಜಿಯಲ್ಲಿ 3ಬಿ ಮೀಸಲಾತಿಗೆ ನಿಗದಿಪಡಿಸಿರುವ ಕೆನೆಪದರ ಆದಾಯ ಮಿತಿಯನ್ನು ಅವರ ಕುಟುಂಬದವರು ಮೀರಿರುವುದು ಮೇಲ್ನೋಟಕ್ಕೆ ತಿಳಿದು ಬಂದಿದೆ. ಹೀಗಾಗಿ, ಅಭ್ಯರ್ಥಿಯು 3ಬಿ ಮೀಸಲಾತಿ ಕೋರಲು ಅರ್ಹರಾಗಿರುವುದಿಲ್ಲ. ಹೀಗಾಗಿ ಅಭ್ಯರ್ಥಿಯ 3ಬಿ ಮೀಸಲಾತಿ ತಿರಸ್ಕರಿಸುವ, ಮುಂದಿನ ಕ್ರಮದ ಬಗ್ಗೆ ಚರ್ಚಿಸಲು ಆಯೋಗದ ಸಭೆಗೆ ಮಂಡಿಸಲಾಗಿದೆ’ ಎಂದು ಸಭಾ ಟಿಪ್ಪಣಿಯಲ್ಲಿದೆ.

‘ದಾಖಲೆಗಳ ನೈಜತೆ ಅನುಮಾನ’

‘ಸುಮಾ ಎಸ್. ಸಾಹುಕಾರ್ ಅವರು ವಿಜ್ಞಾನದಲ್ಲಿ ಪದವಿ ವಿದ್ಯಾರ್ಹತೆ ಹೊಂದಿರುವ ಬಗ್ಗೆ ‘ಪ್ರಾವಿಷನಲ್ ಡಿಗ್ರಿ ಸರ್ಟಿಫಿಕೇಟ್: 09-07-2021’ (ಪಿಡಿಸಿ) ಮತ್ತು ಅಂಕಪಟ್ಟಿಯನ್ನು ಅರ್ಜಿಯ ಜೊತೆ ಸಲ್ಲಿಸಿದ್ದಾರೆ. ಆದರೆ, ನಾಲ್ಕನೇ ಸೆಮಿಸ್ಟರ್‌ನ ಪೂರ್ಣ ಅಂಕಪಟ್ಟಿ ಸಲ್ಲಿಸಿಲ್ಲ. ಆನ್‌ಲೈನ್ ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಅದೇ ಪ್ರಮಾಣಪತ್ರಗಳನ್ನೇ ಅಪ್‌ಲೋಡ್ ಮಾಡಿರುವುದು ಗೊತ್ತಾಗಿದೆ. ಆದರೆ, 6ನೇ ಸೆಮಿಸ್ಟರ್ ಅಂಕಪಟ್ಟಿಯಲ್ಲಿ 1ರಿಂದ 6ನೇ ಸೆಮಿಸ್ಟರ್‌ಗಳಲ್ಲಿ ಪಡೆದಿರುವ ಅಂಕಗಳ ವಿವರ ಹಾಗೂ ಪಿಡಿಸಿ ಸಲ್ಲಿಸಿರುವುದರಿಂದ, ಒಂದೊಮ್ಮೆ ಅಭ್ಯರ್ಥಿಯು ಆಯ್ಕೆಯಾದರೆ ದಾಖಲೆಗಳ ‘ನೈಜತೆ’ ಪರಿಶೀಲನೆಯ ಷರತ್ತಿಗೆ ಒಳಪಟ್ಟು ಪರಿಗಣಿಸಬೇಕು’ ಎಂದೂ ಸಭಾ ಟಿಪ್ಪಣಿಯಲ್ಲಿ ಕಾರ್ಯದರ್ಶಿ ಉಲ್ಲೇಖಿಸಿದ್ದಾರೆ.

ಹೈ–ಕ ಪಟ್ಟಿ: ಮೊದಲ ಪುತ್ರಿಗೆ ದ್ವಿತೀಯ ಸ್ಥಾನ

ಕೈಗಾರಿಕಾ ವಿಸ್ತರಣಾಧಿಕಾರಿ 13 (ಹೈ–ಕ) ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕೆಪಿಎಸ್‌ಸಿ ಜೂನ್ 10ರಂದು ಪ್ರಕಟಿಸಿದೆ. ಆ ಪಟ್ಟಿಯಲ್ಲಿ ಶಿವಶಂಕರಪ್ಪ ಸಾಹುಕಾರ್ ಅವರ ಮೊದಲ ಪುತ್ರಿ ಅನುರಾಧಾ ಎಸ್.ಎಸ್. ಅವರ ಹೆಸರು ದ್ವಿತೀಯ ಸ್ಥಾನದಲ್ಲಿದೆ. ಈ ಹುದ್ದೆಗಳ ಆಯ್ಕೆಗೆ ಒಟ್ಟು 200 ಅಂಕಗಳಿಗೆ ನಡೆದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅನುರಾಧಾ 165 (ಶೇ 82.50) ಅಂಕ ಗಳಿಸಿ ಆಯ್ಕೆ ಆಗಿದ್ದಾರೆ.

ನಟ ದರ್ಶನ್ ಅರ್ಜಿ ತಿರಸ್ಕರಿಸಿದ ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ದರ್ಶನ್

ನವದೆಹಲಿ: ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದಲ್ಲಿ ಒಂದು ವರ್ಷದವರೆಗೆ ನಟ ದರ್ಶನ್ ಜಾಮೀನು ಪಡೆಯಲು ಅರ್ಹರಲ್ಲ ಎಂದು ಮೇ 15ರಂದು ನೀಡಿದ್ದ ಆದೇಶದ ಬಗ್ಗೆ ಸ್ಪಷ್ಟೀಕರಣಕ್ಕಾಗಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ.

ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್ ಪ್ರಕಾರ, ದರ್ಶನ್ ಅರ್ಜಿ ಇತ್ಯರ್ಥವಾಗಿದೆ. ಆದರೆ, ಅಲ್ಲಿ ಯಾವುದೇ ಲಿಖಿತ ಆದೇಶ ಲಭ್ಯವಿಲ್ಲ.

ಪರಿಶೀಲನೆಯ ಸಮಯದಲ್ಲಿ ರಿಜಿಸ್ಟ್ರಾರ್ ನ್ಯಾಯಾಲಯವು ದರ್ಶನ್ ಅರ್ಜಿಯನ್ನು ವಜಾಗೊಳಿಸಿ, ಮಾರ್ಪಾಡು ಕೋರುವ ನೆಪದಲ್ಲಿ ತೀರ್ಪಿನ ಮರುಪರಿಶೀಲನೆಯನ್ನು ಅರ್ಜಿದಾರರು ಕೋರುತ್ತಿದ್ದಾರೆ ಎಂದು ತಿಳಿಸಿದೆ.

ದರ್ಶನ್ ಜಾಮೀನು ಅರ್ಜಿಯನ್ನು ವಜಾಗೊಳಿಸಿದ್ದ ನ್ಯಾಯಪೀಠವು, ‘ಪ್ರಕರಣದ ಸಾಕ್ಷಿಗಳ ವಿಚಾರಣೆಯನ್ನು ವಿಚಾರಣಾ ನ್ಯಾಯಾಲಯವು ಒಂದು ವರ್ಷದೊಳಗೆ ಮುಗಿಸಬೇಕು. ಒಂದು ವೇಳೆ, ಈ ಅವಧಿಯಲ್ಲಿ ವಿಚಾರಣೆ ಪೂರ್ಣಗೊಳ್ಳದಿದ್ದರೆ ಒಂದು ವರ್ಷದ ಬಳಿಕ ದರ್ಶನ್ ಅವರು ಜಾಮೀನಿಗೆ ಅರ್ಜಿ ಸಲ್ಲಿಸಬಹುದು‘ ಎಂದು ಸ್ಪಷ್ಟಪಡಿಸಿತ್ತು.

60 ಪ್ರಮುಖ ಸಾಕ್ಷಿಗಳ ವಿಚಾರಣೆಯೊಂದಿಗೆ ಪ್ರಾರಂಭಿಸಿ, ದಿನನಿತ್ಯದ ಆಧಾರದ ಮೇಲೆ ವಿಚಾರಣೆ ನಡೆಸುವಂತೆ ವಿಚಾರಣಾ ನ್ಯಾಯಾಲಯಕ್ಕೆ ಪೀಠ ನಿರ್ದೇಶನ ನೀಡಿತ್ತು. ಒಂದು ವರ್ಷದ ಜಾಮೀನು ನಿಷೇಧದ ಕುರಿತು ಸ್ಪಷ್ಟನೆ ಕೋರಿ ದರ್ಶನ್ ಅರ್ಜಿ ಸಲ್ಲಿಸಿದ್ದರು.

ವಿಚಾರಣೆಯಲ್ಲಿ ಅರ್ಥಪೂರ್ಣ ಪ್ರಗತಿಯ ಕೊರತೆ, ದೀರ್ಘಕಾಲದ ಸೆರೆವಾಸ, ನಿರ್ಣಾಯಕ ಪ್ರಾಸಿಕ್ಯೂಷನ್ ಸಾಕ್ಷ್ಯಗಳ ವಿಚಾರಣೆ ಬಾಕಿ, ವೈದ್ಯಕೀಯ ತುರ್ತುಸ್ಥಿತಿಗಳು, ಮಾನವೀಯ ಕಾರಣಗಳು ಅಥವಾ ಅವರ ವೈಯಕ್ತಿಕ ಸ್ವಾತಂತ್ರ್ಯದ ಮೇಲೆ ಪರಿಣಾಮ ಬೀರುವ ಸಂದರ್ಭಗಳು ಇದ್ದಲ್ಲಿ ಸೂಕ್ತ ಪರಿಹಾರ ಪಡೆಯಲು ಅರ್ಜಿದಾರರು ಅರ್ಹರು ಎಂಬುದನ್ನು ಸ್ಪಷ್ಟಪಡಿಸುವಂತೆ ಅರ್ಜಿಯಲ್ಲಿ ಕೋರಲಾಗಿತ್ತು.

ಕಾನ್‌ಸ್ಟೆಬಲ್ ನೇಮಕಾತಿ: ಅವಧಿ ವಿಸ್ತರಣೆ



ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿ, ಅರ್ಜಿ ಸಲ್ಲಿಸಲು ನಿಗದಿಪಡಿಸಿದ್ದ ಕೊನೆಯ ದಿನಾಂಕವನ್ನು ವಿಸ್ತರಿಸಲಾಗಿದೆ.

ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಇದೇ 8ರ ಸಂಜೆ 4ರವರೆಗೆ ಅವಕಾಶ ಕಲ್ಪಿಸಲಾಗಿದೆ. ಹಾಗೆಯೇ ಅರ್ಜಿ ತಿದ್ದುಪಡಿ ಮಾಡಲು ಇದೇ 9 ರಿಂದ 12ರವರೆಗೆ ಅವಕಾಶ ನೀಡಲಾಗಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುತ್ತಿರುವ ನೇಮಕಾತಿ ಪ್ರಕ್ರಿಯೆಯಲ್ಲಿ ಮೀಸಲು ಪೊಲೀಸ್ ಕಾನ್‌ಸ್ಟೆಬಲ್ ವಿಭಾಗದ ಹುದ್ದೆಗಳಿಗೆ 2,80,216 ಅಭ್ಯರ್ಥಿಗಳು ಹಾಗೂ ಕಲ್ಯಾಣ ಕರ್ನಾಟಕ ವಿಭಾಗದ ಹುದ್ದೆಗಳಿಗೆ 59,309 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ.

ಯುವ ಜನರು ಯಾವುದೇ ಆತಂಕವಿಲ್ಲದೆ ನಿಗದಿತ ಅವಧಿಯೊಳಗೆ ಅರ್ಜಿ ಪ್ರಕ್ರಿಯೆ ಪೂರ್ಣಗೊಳಿಸಿ, ನೀಡಲಾಗಿರುವ ತಿದ್ದುಪಡಿ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ.

‘ನಾಗರಿಕರು ಸರ್ಕಾರದ ಗುಲಾಮರಲ್ಲ’

ಪ್ರತಿಭಟಿಸಿದ ಕಾರಣಕ್ಕೆ ಗಡಿಪಾರು ಮಾಡಲು ಸಾಧ್ಯವಿಲ್ಲ: ಬಾಂಬೆ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಮುಂಬೈ: ‘ದೇಶದ ನಾಗರಿಕರನ್ನು ಸರ್ಕಾರದ ಗುಲಾಮರನ್ನಾಗಿ ಮಾಡಲು ಸಾಧ್ಯವಿಲ್ಲ. ಸರ್ಕಾರದ ವಿರುದ್ಧ ಭಿನ್ನಾಭಿಪ್ರಾಯ ಅಥವಾ ಪ್ರತಿಭಟನೆ ಮಾಡಿದ ಕಾರಣಕ್ಕಾಗಿ ವ್ಯಕ್ತಿಯನ್ನು ಗಡಿಪಾರು ಮಾಡಲು ಸಾಧ್ಯವಿಲ್ಲ’ ಎಂದು ಬಾಂಬೆ ಹೈಕೋರ್ಟ್ ಮಹತ್ವದ ತೀರ್ಪು ಪ್ರಕಟಿಸಿದೆ.

ಸ್ಥಳೀಯ ರಾಜಕಾರಣಿಯ ವಿರುದ್ಧ ಒಂದು ವರ್ಷದಿಂದ ಜಾರಿಯಲಿದ್ದ ಗಡಿಪಾರು ಆದೇಶವನ್ನು ಇದೇ ವೇಳೆ ನ್ಯಾಯಾಲಯವು ರದ್ದುಗೊಳಿಸಿದೆ.

ಮಹಾರಾಷ್ಟ್ರ ರಾಜಕೀಯದಲ್ಲಿ ನಡೆಯುತ್ತಿರುವ ಕುದುರೆ ವ್ಯಾಪಾರವನ್ನು ಉಲ್ಲೇಖಿಸಿದ ಏಕಸದಸ್ಯ ಪೀಠದ ನ್ಯಾಯಮೂರ್ತಿ ಮಾಧವ ಜಾಮದಾರ, ತನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗಳನ್ನು ರದ್ದುಗೊಳಿಸಲು ಅರ್ಜಿದಾರನು ಕೂಡ ರಾಜಕೀಯ ಪಕ್ಷ ಬದಲಾಯಿಸುವ ಬಗ್ಗೆ ಚಿಂತನೆ ನಡೆಸ ಬಹುದು ಎಂದು ಲಘು ಧಾಟಿಯಲ್ಲಿ ಹೇಳಿದ್ದಾರೆ.

ಭಾರತ ಸರ್ಕಾರ, ಗೃಹಸಚಿವ ಅಮಿತ್ ಶಾ ಹಾಗೂ ಬಿಜೆಪಿ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿ ಘೋಷಣೆ ಕೂಗಿದ ಕಾರಣಕ್ಕಾಗಿ ಅರ್ಜಿದಾರ ಸಯೀದ್ ಅಹಮ್ಮದ್ ಅಬ್ದುಲ್ ವಾಹೀದ್ ಚೌಧರಿ ವಿರುದ್ಧ ಹಲವು ಎಫ್‌ಐಆರ್‌ಗಳು ದಾಖಲಾಗಿದ್ದವು, ಅಲ್ಲದೇ, ಅವರ ವಿರುದ್ಧ ಗಡಿಪಾರು ಆದೇಶ ಹೊರಡಿಸಲಾಗಿತ್ತು.

ಮುಖ್ಯಾಂಶಗಳು

- ಬಿಜೆಪಿ ಸರ್ಕಾರದ ವಿರುದ್ಧ ಎಸ್‌ಡಿಪಿಐ ಪ್ರತಿಭಟನೆ
- ಪ್ರತಿಭಟನಕಾರರ ಮೇಲೆ ಗಡಿಪಾರು ಆದೇಶ
- ಪೊಲೀಸರ ನಿರ್ಧಾರ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದ ಅರ್ಜಿದಾರ

ಅರ್ಜಿದಾರರ ವಿರುದ್ಧ ಹೊರಡಿಸಿದ್ದ ಗಡಿಪಾರು ಆದೇಶವನ್ನು ರದ್ದುಗೊಳಿಸಿದ ಹೈಕೋರ್ಟ್, 19 ಹಾಗೂ 21ನೇ ವಿಧಿಯಡಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ಘನತೆಯಿಂದ ಬದುಕುವ ಹಕ್ಕನ್ನು ದೇಶದ ಪ್ರತಿ ನಾಗರಿಕನಿಗೆ ಸಂವಿಧಾನವು ಖಾತರಿಪಡಿಸಿದೆ. ಈ ಪ್ರಕರಣದಲ್ಲಿ ಅರ್ಜಿದಾರರಿಂದ ಈ ಹಕ್ಕು ಕೂಡ ಕಸಿದುಕೊಳ್ಳಲಾಗಿದೆ ಎಂದು ಅಭಿಪ್ರಾಯಪಟ್ಟಿದೆ.

ಅರ್ಜಿದಾರರ ವಿರುದ್ಧ ಏಕೆ ಗಡಿಪಾರು ಆದೇಶ ಹೊರಡಿಸಲಾಗಿದೆ? ನಾಗರಿಕರು ಇಂತಹ ಘೋಷಣೆಗಳನ್ನು ಕೂಗ ಬಾರದೇ? ಸರ್ಕಾರದ ಕ್ರಮಗಳು ಹಾಗೂ ನಿರ್ಧಾರದ ವಿರುದ್ಧ ನಾಗರಿಕರು ಏಕೆ ಪ್ರತಿಭಟನೆ ನಡೆಸಬಾರದು? ಗಡಿಪಾರು ಆದೇಶಕ್ಕೆ ಸಹಿಹಾಕಿದ ಪೊಲೀಸರಿಗೆ ವೆಚ್ಚ ಭರಿಸುವ ಆದೇಶ ಹೊರಡಿಸಬೇಕಾಗುತ್ತದೆ ಎಂದು ನ್ಯಾಯಾಲಯವು ಎಚ್ಚರಿಕೆ ನೀಡಿದೆ.

‘ಇದೇನಿದು? ಎಲ್ಲ ನಾಗರಿಕರನ್ನು ಭಾರತದ ಸರ್ಕಾರದ ಗುಲಾಮರನ್ನಾಗಿ ಮಾಡಲಾಗುತ್ತಿದೆ. ಅವರಿಗೆ ಪ್ರತಿಭಟನೆ ನಡೆಸಲು ಅವಕಾಶವಿಲ್ಲ. ಒಂದೊಮ್ಮೆ ಪ್ರತಿಭಟನೆ ನಡೆಸಿದರೆ ಏನು ಮಾಡುತ್ತಿದ್ದೀರಿ? ಈಗ ಹಲವು ಕಡೆಗಳಲ್ಲಿ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿವೆ. ಒಂದೊಮ್ಮೆ ಪ್ರತಿಭಟನೆ ನಡೆಸಿದರೆ, ಅವರ ವಿರುದ್ಧವೂ ಪ್ರಕರಣ ದಾಖಲಿಸುತ್ತದೆ’ ಎಂದು ನ್ಯಾಯಪೀಠ ಅಸಮಾಧಾನ ಹೊರಹಾಕಿದೆ.

ಚೌಧರಿ ಅವರು ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ (ಎಸ್‌ಡಿಪಿಐ) ಪ್ರಧಾನ ಕಾರ್ಯ ದರ್ಶಿಯೆಂದು ಹೇಳಿಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮಹಾರಾಷ್ಟ್ರದ ರಾಜಕೀಯದಲ್ಲಿ ಕಂಡು ಬರುತ್ತಿರುವ ಪಕ್ಷಗಳನ್ನು ಬದಲಾಯಿಸುತ್ತಿರುವುದನ್ನು ಅರ್ಜಿದಾರರು ಚಿಂತನೆ ನಡೆಸಬಹುದು’ ಎಂದು ನ್ಯಾಯಮೂರ್ತಿ ಜಾಮದಾರ ಹಾಸ್ಯಭರಿತವಾಗಿ ತಿಳಿಸಿದರು.

‘ನೀವು ಕೂಡ (ಚೌಧರಿ) ಪಕ್ಷ ಬದಲಾಯಿಸಿಕೊಳ್ಳಬಹುದು. ಇಡೀ ಮಹಾರಾಷ್ಟ್ರದಲ್ಲಿ ಕುದುರೆ ವ್ಯಾಪಾರ ನಡೆಯುತ್ತಿದೆ. ಶಾಸಕರ ವಿರುದ್ಧ ಹಲವು ಎಫ್‌ಐಆರ್‌ಗಳು ದಾಖಲಾಗಿವೆ. ನೀವು ಕೂಡ ಪಕ್ಷ ಬದಲಾವಣೆಯ ಬಗ್ಗೆ ಚಿಂತಿಸಬಹುದು. ಅವರ ಬಳಿ ವಾಷಿಂಗ್ ಮೆಷಿನ್ ಇದೆ’ ಎಂದು ವ್ಯಂಗ್ಯವಾಡಿದ್ದಾರೆ.

ಬಾಂಬೆ ಹೈಕೋರ್ಟ್

ಪೊಲೀಸರು ನಾಗರಿಕರ ಸೇವಕರೇ ಹೊರತು ಮುಖ್ಯಮಂತ್ರಿ ಅಥವಾ ಪ್ರಧಾನಮಂತ್ರಿಯ ಸೇವಕರಲ್ಲ

ಮಾಧವ ಜಾಮದಾರ, ನ್ಯಾಯಮೂರ್ತಿ, ಬಾಂಬೆ ಹೈಕೋರ್ಟ್

ಗಡಿಪಾರು ಏಕೆ..?

ಎಸ್‌ಡಿಪಿಐ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಚೌಧರಿ ಹಾಗೂ ಪಕ್ಷದ ಹಲವು ಕಾರ್ಯಕರ್ತರು ಪೌರತ್ವ ಕಾಯ್ದೆ ತಿದ್ದುಪಡಿ ಹಾಗೂ ಗ್ಯಾನವ್ಯಾಪಿ ಮಸೀದಿ ಪ್ರಕರಣದಲ್ಲಿ ಕೇಂದ್ರ ಸರ್ಕಾರದ ನಿರ್ಧಾರಗಳನ್ನು ಖಂಡಿಸಿ ಪ್ರತಿಭಟನೆ ನಡೆಸಿದ್ದರು. 2025ರ ಡಿಸೆಂಬರ್ 3ರಂದು ವಲಯ-6ಯ ಡಿಸಿಪಿ ಅವರು ಚೌಧರಿ ವಿರುದ್ಧ ಗಡಿಪಾರು ಆದೇಶ ಹೊರಡಿಸಿದ್ದರು. 2026 ಮಾರ್ಚ್ 27 ರಂದು ಕೊಂಕಣ ವಿಭಾಗದ ಪ್ರಾದೇಶಿಕ ಆಯುಕ್ತರು ಗಡಿಪಾರು ಆದೇಶವನ್ನು ಎತ್ತಿಹಿಡಿದಿದ್ದರು.

ಸಂಬಂಧಪಟ್ಟ ಅಧಿಕಾರಿಗಳಿಂದ ಸೂಕ್ತ ಅನುಮತಿ ಪಡೆಯದೇ, ಅವರು ಪ್ರತಿಭಟನೆ ನಡೆಸಿದ್ದರು, ಹೀಗಾಗಿಯೇ, ಗಡಿಪಾರು ಆದೇಶ ಹೊರಡಿಸ ಲಾಗಿದೆ ಎಂದು ಪೊಲೀಸರು ತಮ್ಮ ನಡೆಯನ್ನು ಸಮರ್ಥಿಸಿಕೊಂಡಿದ್ದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ನ್ಯಾಯಪೀಠ, ‘ಪ್ರತಿಭಟನೆಯಿಂದ ಯಾವುದೇ ಹಾನಿಯಾಗಿರುವ ಕುರಿತು ದಾಖಲೆಗಳನ್ನು ನೀಡಿಲ್ಲ. ಆದರೂ, ಮಹಾರಾಷ್ಟ್ರ ಪೊಲೀಸ್ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಸ್ವಯಂ ಪ್ರೇರಿತರಾಗಿ ಗಡಿಪಾರು ಆದೇಶ ಹೊರಡಿಸಲು ಸಾಧ್ಯವಿಲ್ಲ’ ಎಂದು ಸ್ಪಷ್ಟಪಡಿಸಿದೆ.

ಮೋಟಾರು ವಾಹನ ಕಾಯ್ದೆಯಡಿ ಪರಿಹಾರ ಮೊತ್ತ ನಿಗದಿ

‘ಸುಪ್ರೀಂ’ನಿಂದ ಸ್ಪಷ್ಟ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೋಟಾರು ವಾಹನ ಅಪಘಾತ ಪ್ರಕರಣಗಳಲ್ಲಿ ಪರಿಹಾರ ನೀಡುವ ಪ್ರಕ್ರಿಯೆ ಸುಗಮಗೊಳಿಸುವ ಮಹತ್ವದ ತೀರ್ಪು ನೀಡಿರುವ ಸುಪ್ರೀಂ ಕೋರ್ಟ್, ಮೃತ ಅಥವಾ ಗಾಯ ಗೊಂಡವರ ಆದಾಯವನ್ನು ನಿರ್ಣಯಿಸಲು ಸ್ಪಷ್ಟ ಮಾರ್ಗಸೂಚಿ ರೂಪಿಸಿದೆ.

ವೇತನ ಪಡೆಯುವ ವ್ಯಕ್ತಿಗಳ ವಾರ್ಷಿಕ ಆದಾಯವನ್ನು ನಿರ್ಧರಿಸಲು ಹಿಂದಿನ ವರ್ಷದ ಆದಾಯ ತೆರಿಗೆ ವಿವರ (ಐಟಿಆರ್) ಮಾತ್ರ ಸಾಕಾಗುತ್ತದೆ. ಆದರೆ, ಸ್ವಯಂ ಉದ್ಯೋಗಿಗಳು ಮತ್ತು ಉದ್ಯಮಿಗಳ ವಿಚಾರದಲ್ಲಿ ಹಿಂದಿನ 3 ವರ್ಷಗಳವರೆಗಿನ ಐಟಿಆರ್ ಆಧಾರದ ಮೇಲೆ ಸರಾಸರಿ ಆದಾಯವನ್ನು ಮಾನದಂಡ ವಾಗಿ ಪರಿಗಣಿಸ ಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರ ಪೀಠವು ಮೋಟಾರು ವಾಹನ ಕಾಯ್ದೆಯಡಿ ವಾರ್ಷಿಕ ಆದಾಯ ವನ್ನು ಲೆಕ್ಕಾಚಾರ ಮಾಡಲು ‘ಕಠಿಣ ಸೂತ್ರ’ ಇರಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿತು. ಆದರೆ, ಐಟಿಆರ್‌ಗಳ ಆಧಾರದ ಮೇಲೆ ಪರಿಹಾರ ವನ್ನು ನಿರ್ಣಯಿಸುವ ಸಂದರ್ಭದಲ್ಲಿ ವೇತನ ಪಡೆಯುವ ಉದ್ಯೋಗಿಗಳು ಮತ್ತು ಸ್ವಯಂ ಉದ್ಯೋಗಿಗಳ ನಡುವಿನ ಸ್ಪಷ್ಟ ವ್ಯತ್ಯಾಸವನ್ನು ಎತ್ತಿ ತೋರಿಸಿತು.

‘ಈ ನ್ಯಾಯಾಲಯದ ದೃಷ್ಟಿಕೋನ ದಲ್ಲಿ, ಅಪಘಾತ ಪ್ರಕರಣಗಳ ಸಂತ್ರಸ್ತರ ವಾರ್ಷಿಕ ಆದಾಯವನ್ನು ಲೆಕ್ಕಾಚಾರ ಮಾಡಲು ಯಾವುದೇ ಸ್ಪಷ್ಟ ಮತ್ತು ಸಾರ್ವತ್ರಿಕವಾಗಿ ಅನ್ವಯವಾಗುವ ನಿಯಮ ಗಳು ಇಲ್ಲ. ಮೋಟಾರು ವಾಹನ ಕಾಯ್ದೆಯಡಿಯಲ್ಲಿ ಪರಿಹಾರ ನೀಡಲು ಒಬ್ಬರ ಆದಾಯವನ್ನು ನಿರ್ಣಯಿಸುವಾಗ ಐಟಿಆರ್‌ಗಳು ಶಾಸನಬದ್ಧ ದಾಖಲೆ ಯಾಗಿರುವುದು’ ಎಂದು ತೀರ್ಪನ್ನು ಬರೆದ ನ್ಯಾಯಮೂರ್ತಿ ಕರೋಲ್ ಹೇಳಿದರು.

2018ರಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಮೃತಪಟ್ಟ ಉದ್ಯಮಿ ಮನೋರಂಜನ್ ಪಾಂಡೆ ಅವರ ಪತ್ನಿ ರಶ್ಮಿರೇಖಾ ತ್ರಿಪಾಠಿ ಹಾಗೂ ವಿಮಾ ಕಂಪನಿ ನಡುವಿನ ಪ್ರಕರಣದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ.

ನಕಲಿ ಭೂ ದಾಖಲೆ: ಒಂಬತ್ತು ಮಂದಿ ಬಂಧನ

ಶ್ರೀರಂಗಪಟ್ಟಣ (ಮಂಡ್ಯ): ಇಲ್ಲಿಯ ಭೂ ದಾಖಲೆಗಳ ಕಚೇರಿ ಯಲ್ಲಿ ನಡೆದಿರುವ ನಕಲಿ ದಾಖಲೆ, ನಕಲಿ ಮೊಹರು (ಸೀಲು) ಬಳಕೆ ಆರೋಪದ ಮೇಲೆ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ 8 ಸರ್ಕಾರಿ ನೌಕರರು, ಹೊರಗಿನ ವ್ಯಕ್ತಿಯನ್ನು ಲೋಕಾಯುಕ್ತ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಪ್ರಮುಖ ಆರೋಪಿ ಭೂ ದಾಖಲೆಗಳ ಸಹಾಯಕ ನಿರ್ದೇಶಕ ಮಹಮದ್ ಹುಸೇನ್ ತಲೆ ಮರೆಸಿಕೊಂಡಿದ್ದಾರೆ.

ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಹೊರಡಿಸಿದ್ದ ಶೋಧನಾ ವಾರಂಟ್ ಆಧರಿಸಿ ಪಾಂಡವಪುರ ಉಪ ವಿಭಾಗಾಧಿ ಕಾರಿ, ಶ್ರೀರಂಗಪಟ್ಟಣ ತಹಶೀಲ್ದಾರ್, ಎಡಿಎಲ್‌ಆರ್, ಮಹದೇವಪುರ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಅವರ ಕಚೇರಿ ಮತ್ತು ಮನೆಗಳಲ್ಲಿ ಕೂಡ ಶೋಧ ನಡೆಸಲಾಗಿದೆ.

ಭೂದಾಖಲೆಗಳ ಕಚೇರಿಯಲ್ಲಿ ಸರ್ಕಾರಿ ನೌಕರನ ಸೋಗಿನಲ್ಲಿ ಕೆಲಸ ಮಾಡುತ್ತಿದ್ದ ನಿತಿನ್ ಪ್ರೇಮಾನಂದ ಮಹಾಲೆ, ಸರ್ವೆ ಸೂಪರ್‌ವೈಸರ್ ಯೋಗರಾಜ್, ಭೂಮಾಪಕರಾದ ಅರವಿಂದ್, ಜಯಬೋರೇಗೌಡ, ದಯಾನಂದ್, ಮಧು, ರಮೇಶ್, ಹರೀಶ್, ನಿಶಾ ಸಾರಿಕಾ ಮಲ್ಲಿ ಅವರನ್ನು ಬಂಧಿಸಲಾಗಿದೆ.

ಮಹಮದ್ ಹುಸೇನ್ ಮತ್ತು ನಿತಿನ್ ನವೀನ್ ಮಹಾಲೆ ಅವರಿದ್ದ ಮನೆಯಲ್ಲಿ ದಾಖಲೆ ಇಲ್ಲದ ₹1.40 ಲಕ್ಷ ವಶಪ-ಡಿಸಿಕೊಳ್ಳಲಾಗಿದೆ. ಪ್ರೇಮಾನಂದ ಮಹಾಲೆ ಅವರ ಬ್ಯಾಂಕ್ ಖಾತೆಯಲ್ಲಿ ಲಕ್ಷಾಂತರ ರೂಪಾಯಿ ಹಣದ ವಹಿವಾಟು ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಎಂಬಿಬಿಎಸ್ ವಿದ್ಯಾರ್ಥಿನಿ ಸಾವು

ಮುದಗಲ್ (ರಾಯಚೂರು ಜಿಲ್ಲೆ): ತುಮಕೂರು ತಾಲ್ಲೂಕಿನ ಕೋರಾ ಹತ್ತಿರದ ಸೋಮಸಾಗರ ಗೇಟ್ ಬಳಿ ಶುಕ್ರವಾರ ಬೆಳಗಿನ ಜಾವ ಬಸ್ ಮತ್ತು ಲಾರಿ ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ ಮುದಗಲ್ ಪಟ್ಟಣದ ಎಂಬಿಬಿಎಸ್ ವಿದ್ಯಾರ್ಥಿನಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸುಮಂಗಲಾ

ಮಾಜಿ ದೇವದಾಸಿ ಯಮನಮ್ಮ ಅವರ ಪುತ್ರಿ ಸುಮಂಗಲಾ ಭಂಗಿ (20) ಮೃತರು. ಬೆಂಗಳೂರಿನ ಪಿಇಎಸ್ ವೈದ್ಯಕೀಯ ವಿಜ್ಞಾನಗಳ ಸಂಶೋಧನಾ ಸಂಸ್ಥೆಯಲ್ಲಿ ದ್ವಿತೀಯ ವರ್ಷದ ಎಂಬಿಬಿಎಸ್ ಪದವಿ ಓದುತ್ತಿದ್ದರು. ಇತ್ತೀಚೆಗೆ ಪಟ್ಟಣಕ್ಕೆ ಬಂದಿದ್ದ ಅವರು, ಬೆಂಗಳೂರಿಗೆ ಪ್ರಯಾಣಿಸುತ್ತಿದ್ದಾಗ ಅಪಘಾತ ಸಂಭವಿಸಿದೆ.

2023–24ನೇ ಸಾಲಿನ ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ ಸುಮಂಗಲಾ ಶೇ 93.83ರಷ್ಟು ಅಂಕ ಪಡೆದಿದ್ದರು. ನೀಟ್ ಪರೀಕ್ಷೆಯಲ್ಲಿ ಅವರಿಗೆ 6,144ನೇ ರ‍್ಯಾಂಕ್ ಬಂದಿತ್ತು. ಬೆಂಗಳೂರಿನ ಇಂಡಿಯಾ ಸುಧಾರ್ ಎಜುಕೇಶನ್ ಚಾರಿಟಬಲ್ ಟ್ರಸ್ಟ್ ಈ ವಿದ್ಯಾರ್ಥಿನಿಯ 5 ವರ್ಷದ ಪ್ರವೇಶ ಶುಲ್ಕ ₹20 ಲಕ್ಷ ಪಾವತಿಸಲು ಒಪ್ಪಿಗೆ ನೀಡಿತ್ತು. 2 ವರ್ಷದ ಶುಲ್ಕವನ್ನೂ ಭರಿಸಿತ್ತು.

ವಚನಾನಂದ ಶ್ರೀ ಜಾಮೀನು ಅರ್ಜಿ ವಿಚಾರಣೆ ಮುಂದಕ್ಕೆ

ದಾವಣಗೆರೆ: ಬಾಲಕನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ಸಲ್ಲಿಸಿರುವ ಜಾಮೀನು ಅರ್ಜಿಯ ವಿಚಾರಣೆ ಇಲ್ಲಿನ ಜಿಲ್ಲಾ ವಿಶೇಷ ಪೋಕ್ಸೊ ನ್ಯಾಯಾಲ ಯದಲ್ಲಿ ಶುಕ್ರವಾರ ನಡೆಯಿತು.

ಸ್ವಾಮೀಜಿ ಪರ ವಾದ ಮಂಡಿಸಿದ ವಕೀಲ ಎಸ್.ವಿ. ಪಾಟೀಲ, ಜಾಮೀನು ಮಂಜೂರು ಮಾಡುವಂತೆ ಕೋರಿದರು. ತಕರಾರು ಅರ್ಜಿ ಸಲ್ಲಿಸಿರುವ ಸರ್ಕಾರಿ ಅಭಿಯೋಜಕರಿಗೆ ಶನಿವಾರ ವಾದ ಮಂಡಿಸಲು ಅವಕಾಶ ನೀಡಿದ ನ್ಯಾಯಾಧೀಶರು ವಿಚಾರಣೆ ಮುಂದೂಡಿದರು.

ಹಾವೇರಿ: ನೌಕಾಪಡೆ ಯೋಧ ಸಾವು

ಹಾವೇರಿ: ಕೇರಳದ ಕೊಚ್ಚಿಯಲ್ಲಿ ಭಾರತೀಯ ನೌಕಾಪಡೆಯ ತರಬೇತಿಯಲ್ಲಿದ್ದ ಯೋಧ ಯಶೋಧರ ವಡ್ಡರ (29) ಎಂಬವರು ಮೃತಪಟ್ಟಿದ್ದು, ಅವರ ಮೃತದೇಹವನ್ನು ಸ್ವಂತ ಊರಾದ ಹಾನಗಲ್ ತಾಲ್ಲೂಕಿನ ಉಪ್ಪುಣಶಿ ಗ್ರಾಮಕ್ಕೆ ತರಲಾಗುತ್ತಿದೆ. ತರಬೇತಿ ವೇಳೆ ಗುಂಡು ತಗುಲಿ ಯಶೋಧರ ಅವರು ಮೃತಪಟ್ಟಿರುವುದಾಗಿ ಗೊತ್ತಾಗಿದೆ. ಆದರೆ, ಖಚಿತ ಮಾಹಿತಿ ಲಭ್ಯವಾಗಿಲ್ಲ. ಕೊಚ್ಚಿಯ ನೌಕಾಪಡೆಯ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಮಂಗಳೂರು ಮೂಲಕ ಹಾವೇರಿಗೆ ಶನಿವಾರ ಮೃತದೇಹ ತರಲಾಗುವುದು’ ಎಂದು ಕುಟುಂಬ ಸದಸ್ಯರು ತಿಳಿಸಿದರು.

ಯಶೋಧರ ವಡ್ಡರ

ಉಪ್ಪುಣಶಿ ಗ್ರಾಮದ ಯಶೋಧರ ಅವರು 2016ರಲ್ಲಿ ಭಾರತೀಯ ನೌಕಾ ಪಡೆಗೆ ಸೇರಿದ್ದರು. ಅಂಡಮಾನ್ ಆ್ಯಂಡ್ ನಿಕೋಬಾರ್‌ನಲ್ಲಿ ಕೆಲಸ ಮಾಡಿದ್ದರು. 3 ತಿಂಗಳಿನಿಂದ ಕೊಚ್ಚಿಯಲ್ಲಿ ತರಬೇತಿಯಲ್ಲಿ ಭಾಗಿಯಾಗಿದ್ದರು.

ಕೃಷಿ ಇಲಾಖೆ ಅಗತ್ಯ ಸಿದ್ಧತೆ • ಬೆಳೆ ವಿಮೆ ಕಡ್ಡಾಯವಾಗಿ ಮಾಡಿಸಲು ರೈತರಲ್ಲಿ ಜಾಗೃತಿ

ಮಳೆ ಕೊರತೆ: ಪರ್ಯಾಯ ಬೆಳೆಗಳತ್ತ ಚಿತ್ತ

• ಮೋಹನ್ ಕುಮಾರ ಸಿ.

ಬೆಂಗಳೂರು: ಜುಲೈ 15ರೊಳಗೆ ಉತ್ತಮ ಮಳೆಯಾಗದಿದ್ದರೆ ಕಡಿಮೆ ಮಳೆಯಲ್ಲಿ ಉತ್ತಮ ಇಳುವರಿ ಕೊಡುವ ಪರ್ಯಾಯ ಬೆಳೆ ಬಿತ್ತನೆಗೆ ರೈತರನ್ನು ಉತ್ತೇಜಿಸಲು ಕೃಷಿ ಇಲಾಖೆ ಅಗತ್ಯ ಸಿದ್ಧತೆ ಮಾಡಿಕೊಂಡಿದೆ. ಜೊತೆಗೆ ಬೆಳೆ ವಿಮೆ ಮಾಡಿಸಲು ಸೂಚಿಸಿದೆ.

ಜಿಲ್ಲಾವಾರು ಮಳೆ, ಮಣ್ಣಿನ ತೇವಾಂಶ ಆಧರಿಸಿ ಪರ್ಯಾಯ ಬೆಳೆ ಬಿತ್ತನೆ ಬೀಜ ವಿತರಣೆಗೆ ಇಲಾಖೆ ಮುಂದಾಗಿದೆ. ಜುಲೈನಲ್ಲಿ ಬಿತ್ತನೆ ಮಾಡುವವರು ಕಡಿಮೆ ಅವಧಿಯಲ್ಲಿ ಫಸಲು ಕೊಡುವ ರಾಗಿ, ಜೋಳ, ಹುರುಳಿ, ಅಲಸಂದೆ, ದ್ವಿದಳ, ಸಿರಿಧಾನ್ಯ ಬೆಳೆಗಳಿಗೆ ಆದ್ಯತೆ ಕೊಡಬೇಕೆಂದು ಹೇಳಿದೆ.

ಕರಾವಳಿ, ಮಲೆನಾಡು, ಉತ್ತರ ಮತ್ತು ದಕ್ಷಿಣ ಒಳನಾಡು ಪ್ರದೇಶದಲ್ಲಿ ಪ್ರತಿ ವಾರದ ಹವಾಮಾನ ವರದಿ ಆಧರಿಸಿ ಕೃಷಿ ವಿಜ್ಞಾನ ಕೇಂದ್ರಗಳ ತಜ್ಞರು ಆ ಪ್ರದೇಶದ ವಸ್ತುಸ್ಥಿತಿಗೆ ಅನುಗುಣವಾಗಿ ಪರ್ಯಾಯ ಬೆಳೆಗಳ ಬಗ್ಗೆ ಸಲಹೆ ನೀಡಲಿದ್ದಾರೆ.

ಮುಖ್ಯಾಂಶಗಳು

- ರೈತ ಸಂಪರ್ಕ ಕೇಂದ್ರಗಳ ಮೂಲಕ ಜಾಗೃತಿ
- ಜಿಲ್ಲಾವಾರು ಅಗತ್ಯ ಬಿತ್ತನೆ ಬೀಜ ದಾಸ್ತಾನು
- ಬರ ಪರಿಸ್ಥಿತಿ ಎದುರಿಸಲು ಇಲಾಖೆ ಸನ್ನದ್ಧ

ರಾಜ್ಯದ ಉತ್ತರ ಒಳನಾಡಿನ ನಾಲ್ಕೈದು ಜಿಲ್ಲೆಗಳಲ್ಲಿ ಮುಂಗಾರು ಆರಂಭಕ್ಕೂ ಮೊದಲ 10 ದಿನ ಮಳೆ ಚೆನ್ನಾಗಿ ಆಗಿತ್ತು. ಸೋಯಾ ಸೇರಿದಂತೆ ವಿವಿಧ ಬೆಳೆಗಳ ಬಿತ್ತನೆ ಮಾಡಿದ್ದರು. 35 ದಿನಗಳ ಮಳೆ ಕೊರತೆಯಿಂದ ಕೃಷಿ ಚಟುವಟಿಕೆಗೆ ಹೊಡೆತ ಬಿದ್ದಿದೆ. ಹೀಗಾಗಿ 120 ದಿನಗಳ ಅವಧಿಯ ಬೆಳೆಗಳನ್ನು ಈಗ ಬೆಳೆಯಲಾಗದು. ಮುಂದಿನ 15 ದಿನದಲ್ಲಿ ಮಳೆ ಆಗದಿದ್ದರೆ, ಮಳೆಯಾಶ್ರಿತ ಪ್ರದೇಶದಲ್ಲಿ ಹೆಚ್ಚು ನೀರು, ಅವಧಿ ಬೇಡುವ ಭತ್ತದಂಥ ಬೆಳೆ ಸೂಕ್ತವಲ್ಲ ಎನ್ನುತ್ತಾರೆ ಕೃಷಿ ತಜ್ಞರು.

ಬಿತ್ತನೆಗೆ ಹಿನ್ನಡೆ: ಮುಂಗಾರು ಹಂಗಾಮಿನಲ್ಲಿ 2.07 ಕೋಟಿ ಎಕರೆ ಪ್ರದೇಶದಲ್ಲಿ ಆಹಾರ ಧಾನ್ಯ, ವಾಣಿಜ್ಯ, ಎಣ್ಣೆಕಾಳು ಬೆಳೆ ಬಿತ್ತನೆಗೆ ಕೃಷಿ ಇಲಾಖೆ ಗುರಿ ಹಾಕಿಕೊಂಡಿತ್ತು. ಅದರಲ್ಲಿ ಜೂನ್ ಅಂತ್ಯಕ್ಕೆ 70 ಲಕ್ಷ ಎಕರೆ ಪ್ರದೇಶದಲ್ಲಿ ಮಾತ್ರವೇ ಬಿತ್ತನೆ ಕಾರ್ಯ ಮುಗಿದಿದೆ.

ಬೆಳೆ ವಿಮೆ ಮಾಡಿಸಿ: ‘ಮಣ್ಣಿನ ತೇವಾಂಶ ಪರೀಕ್ಷೆ ನಡೆಸಿಯೇ ಬರ ಪರಿಸ್ಥಿತಿಯನ್ನು ತಡೆಯುವ ಪರ್ಯಾಯ ಬೆಳೆ ಬೆಳೆಯಬೇಕು. ಈಗಾಗಲೇ ಬಿತ್ತನೆ ಮಾಡಿದವರು ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಬೆಳೆ ವಿಮೆಗೆ ಕಡ್ಡಾಯವಾಗಿ ನೋಂದಾಯಿಸಲು ಜಾಗೃತಿ ಮೂಡಿಸಲಾಗುತ್ತಿದೆ’ ಎಂದು ಇಲಾಖೆಯ ಆಯುಕ್ತ ಬಿ.ಸಿ.ಸತೀಶ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬೆಳೆ ವಿಮೆಯಲ್ಲಿ ಶೇ 2ರಷ್ಟು ಪ್ರೀಮಿಯಂ ಮೊತ್ತವನ್ನು ಕಟ್ಟಬೇಕು. ಉಳಿದ ಮೊತ್ತದ ತಲಾ ಶೇ 50ರಷ್ಟನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಭರಿಸಲಿವೆ’ ಎಂದು ಅವರು ಹೇಳಿದರು.

‘ಜಿಲ್ಲಾವಾರು ಕ್ರಿಯಾ ಯೋಜನೆ’

ಎಲ್‌ನಿನೊ, ಸೂಪರ್ ಎಲ್‌ನಿನೊ ಆಗಿ ಬದಲಾದರೆ ಮುಂಗಾರು ಹಂಗಾಮು ಅಲ್ಲದೇ ಹಿಂಗಾರು ಹಂಗಾಮಿಗೂ ತೊಂದರೆ ಆಗುವುದೆಂದು ಕೇಂದ್ರ ಕೃಷಿ ಸಚಿವಾಲಯ ಎಚ್ಚರಿಸಿದೆ. ಮಳೆ ಕೊರತೆ ಪರಿಣಾಮ ಎದುರಿಸಲು ಜಿಲ್ಲಾವಾರು ಕ್ರಿಯಾ ಯೋಜನೆ ರೂಪಿಸಲಾಗಿದೆ. ಬಿತ್ತನೆ ಬೀಜ ದಾಸ್ತಾನು ಮಾಡಲಾಗಿದ್ದು, ಅದರ ಪ್ರಮಾಣ ಶೇ 15 ರಷ್ಟು ಹೆಚ್ಚೇ ಇದೆ. ರೈತ ಸಂಪರ್ಕ ಕೇಂದ್ರಗಳು, ರೈತ ಸಂಘಟನೆಗಳು, ಸಹಕಾರ ಸಂಘಗಳ ಮೂಲಕ ರೈತರಲ್ಲಿ ಅರಿವು ಮೂಡಿಸಲಾಗುತ್ತಿದೆ ಎಂದು ಕೃಷಿ ಇಲಾಖೆ ಆಯುಕ್ತ ಬಿ.ಸಿ.ಸತೀಶ್ ತಿಳಿಸಿದ್ದಾರೆ.

ಬಿತ್ತನೆ ಬೀಜ ದಾಸ್ತಾನು ವಿವರ

ಬೆಳೆ	ಬೇಡಿಕೆ	ಲಭ್ಯತೆ
	(ಕ್ವಿಂಟಲ್‌ಗಳಲ್ಲಿ)	
ರಾಗಿ	28,100	37,885
ಜೋಳ	1,000	1,050
ಮೆಕ್ಕೆಜೋಳ	65,100	76,347
ಸಜ್ಜೆ	3,611	4,136
ಸಿರಿಧಾನ್ಯ	315	1,135
ತೊಗರಿ	33,800	52,293
ಉದ್ದು	3,000	5,102
ಹೆಸರು	8,400	8,492
ಅಲಸಂದೆ	3,000	4,406
ನೆಲಗಡಲೆ	70,000	74,341
ಸೂರ್ಯಕಾಂತಿ	3,800	6,309
ಸೋಯಾ	1,80,500	2,30,863
ಭತ್ತ	70,000	76,113
ಹೈಬ್ರಿಡ್ ಭತ್ತ	500	550
ಒಟ್ಟು	4,71,126	5,79,022

‘ಗೃಹಜ್ಯೋತಿ: ಜಾತಿ ಪ್ರಮಾಣಪತ್ರ ಕಡ್ಡಾಯವಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹ ಜ್ಯೋತಿ ಯೋಜನೆಯ ಮಾಹಿತಿ ಸಂಗ್ರಹ ಸಂದರ್ಭದಲ್ಲಿ ಫಲಾನುಭವಿಯ ಪ್ರವರ್ಗ ಕುರಿತ ಮಾಹಿತಿ ನೀಡುವುದು ಕಡ್ಡಾಯ ಅಲ್ಲ ಎಂದು ಬೆಸ್ಕಾಂ ಸ್ಪಷ್ಟಪಡಿಸಿದೆ.

ಬೆಸ್ಕಾಂ ಸಿಬ್ಬಂದಿ ಹಾಗೂ ಮೀಟರ್ ರೀಡರ್‌ಗಳು ಫಲಾನುಭವಿಗಳ ಮನೆಗೆ ತೆರಳಿ ಸೇವಾ ಸಿಂಧು ಮೊಬೈಲ್ ಅಪ್ಲಿಕೇಷನ್ ಹಾಗೂ ಮುದ್ರಿತ ಘೋಷಣಾ ಪತ್ರದ ಮೂಲಕ ಮಾಹಿತಿ ಕಲೆ ಹಾಕುತ್ತಿದ್ದಾರೆ. ಈ ಸಂದರ್ಭದಲ್ಲಿ ಫಲಾನುಭವಿಯ ಪ್ರವರ್ಗಕ್ಕೆ (ಜಾತಿ ಪ್ರಮಾಣಪತ್ರ) ಸಂಬಂಧಿಸಿದ ಮಾಹಿತಿ ನೀಡುವುದು ಐಚ್ಛಿಕವಾಗಿದೆ ಎಂದು ತಿಳಿಸಿದೆ.

ಫಲಾನುಭವಿಗಳ ಜಾತಿ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಬಂದಿರುವ ಪ್ರಶ್ನೆಗೆ ಸಂಬಂಧಿಸಿದಂತೆ ಬೆಸ್ಕಾಂ ಈ ಸ್ಪಷ್ಟನೆ ನೀಡಿದೆ.

ಫಲಾನುಭವಿಗಳಿಗೆ ಜಾತಿ ಮಾಹಿತಿ ನೀಡಲು ಇಷ್ಟವಿಲ್ಲದಿದ್ದರೆ ಮೊಬೈಲ್ ಅಪ್ಲಿಕೇಷನ್‌ನಲ್ಲಿರುವ ‘ಮಾಹಿತಿ ನೀಡಲು ನಿರಾಕರಣೆ’ ಎಂಬ ಆಯ್ಕೆಯನ್ನು ನಮೂದಿಸಲು ಸಿಬ್ಬಂದಿಗೆ ಈಗಾಗಲೇ ಸೂಚನೆ ನೀಡಲಾಗಿದೆ.

‘ಮೀಟರ್ ರೀಡಿಂಗ್ ಇಲ್ಲ’

ಗೃಹ ಜ್ಯೋತಿ ಫಲಾನುಭವಿಗಳ ಮನೆ-ಮನೆ ಪರಿಶೀಲನೆ ಕಾರ್ಯಕ್ಕೆ ಬೆಸ್ಕಾಂ ಮೀಟರ್ ರೀಡರ್‌ಗಳು ನಿಯೋಜನೆಗೊಂಡಿರುವುದ ರಿಂದ ಈ ತಿಂಗಳು ನಿಯಮಿತ ಮೀಟರ್ ರೀಡಿಂಗ್ ಇರುವುದಿಲ್ಲ. ಕಳೆದ ಮೂರು ತಿಂಗಳಲ್ಲಿ ಗ್ರಾಹಕರು ಬಳಸಿರುವ ವಿದ್ಯುತ್‌ನ ಸರಾಸರಿ ಆಧರಿಸಿ ಬಿಲ್‌ಗಳನ್ನು ನೀಡಲಾಗುತ್ತದೆ. ಆದರೆ, ಎಚ್‌ಟಿ ಗ್ರಾಹಕರು, 40 ಎಚ್‌ಪಿ ಮತ್ತು ಅದಕ್ಕಿಂತ ಹೆಚ್ಚಿನ ಮಂಜೂರಾದ ಲೋಡ್ ಹೊಂದಿರುವ ಲೋ ಟೆನ್ಷನ್ (ಎಲ್‌ಟಿ) ಗ್ರಾಹಕರು, ಸೋಲಾರ್ ರೂಫ್‌ಟಾಪ್ ಹೊಂದಿರುವ ಗ್ರಾಹಕರು ಹಾಗೂ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ ಗ್ರಾಹಕರಿಗೆ ನೈಜ ಮೀಟರ್ ರೀಡಿಂಗ್ ಆಧಾರದ ಮೇಲೆ ಬಿಲ್ ನೀಡಲಾಗುವುದು ಎಂದು ಬೆಸ್ಕಾಂ ತಿಳಿಸಿದೆ.

ಜುಲೈ ತಿಂಗಳ ಸರಾಸರಿ ಬಿಲ್‌ಗಳನ್ನು ಗ್ರಾಹಕರಿಗೆ ಎಸ್‌ಎಮ್‌ಎಸ್ ಮತ್ತು ಇ-ಮೇಲ್ ಮೂಲಕ ಕಳುಹಿಸಲಾಗುವುದು. ಗೃಹ ಬಳಕೆದಾರರಿಗೆ ಆಗಸ್ಟ್ ತಿಂಗಳಿನಿಂದ ಯಥಾಪ್ರಕಾರ ನಿಯಮಿತ ಮೀಟರ್ ರೀಡಿಂಗ್ ಮತ್ತು ನೈಜ ವಿದ್ಯುತ್ ಬಳಕೆಯ ಆಧಾರದ ಮೇಲೆ ಬಿಲ್ ನೀಡಲಾಗುತ್ತದೆ. ಸರಾಸರಿ ಬಿಲ್ಲಿಂಗ್ ಅವಧಿಯಲ್ಲಿನ ವ್ಯತ್ಯಾಸದ ಯೂನಿಟ್‌ಗಳನ್ನು, ನೈಜ ಮೀಟರ್ ರೀಡಿಂಗ್ ಆರಂಭವಾದ ನಂತರ ಮುಂದಿನ ಬಿಲ್‌ಗಳಲ್ಲಿ ಹೊಂದಾಣಿಕೆ ಮಾಡಲಾಗುತ್ತದೆ.

ಅರ್ಜಿ ಹಿಂಪಡೆದ ಟಾಟಾ

ಬೆಂಗಳೂರು: ರಾಜ್ಯದ 19 ಜಿಲ್ಲೆಗಳಲ್ಲಿ ವಿದ್ಯುತ್ ವಿತರಣೆಯ ಪರವಾನಗಿ ನೀಡುವಂತೆ ಕೋರಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಸಲ್ಲಿಸಿದ್ದ ಅರ್ಜಿಯನ್ನು ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ (ಟಿಪಿಸಿಎಲ್) ವಾಪಸ್ ಪಡೆದಿದೆ.

ಟಾಟಾ ಕಂಪನಿಯ ಅರ್ಜಿ ವಿಚಾರಣೆಯನ್ನು ಆಯೋಗವು ಶುಕ್ರವಾರಕ್ಕೆ ನಿಗದಿ ಮಾಡಿತ್ತು. ಆದರೆ, ವಿಚಾರಣೆ ಆರಂಭ ವಾಗುವ ಮೊದಲೇ ಅರ್ಜಿಯನ್ನು ವಾಪಸ್ ಪಡೆಯುವುದಾಗಿ ಕಂಪನಿಯ ಪ್ರತಿನಿಧಿಗಳು ತಿಳಿಸಿದರು. ಇದಕ್ಕೆ ಸಮ್ಮತಿ ಸೂಚಿಸಿ, ಪ್ರಕರಣವನ್ನು ಇತ್ಯರ್ಥಪಡಿಸಲಾಯಿತು ಎಂದು ಆಯೋಗದ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ವಿದ್ಯುತ್ ವಿತರಣೆಯ ಖಾಸಗೀಕರಣಕ್ಕೆ ವಿರೋಧ ವ್ಯಕ್ತಪಡಿಸಿ, ಎಸ್ಕಾಂಗಳು, ರೈತ ಸಂಘಟನೆಗಳು, ವಿವಿಧ ಸಂಘಟನೆಗಳು ಆಯೋಗಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಿದ್ದವು. ಮೂಲಗಳ ಪ್ರಕಾರ 22 ಲಕ್ಷಕ್ಕೂ ಅಧಿಕ ಆಕ್ಷೇಪಗಳು ಸಲ್ಲಿಕೆಯಾಗಿದ್ದವು. ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ವಿದ್ಯುತ್ ವಿತರಣೆಯನ್ನು ಖಾಸಗೀಕರಣಗೊಳಿಸದೆ ಇರಲು ತೀರ್ಮಾನಿಸಲಾಗಿತ್ತು. ಇದರ ಬೆನ್ನಲ್ಲೇ ಟಾಟಾ ಕಂಪನಿ ಅರ್ಜಿಯನ್ನು ವಾಪಸ್ ಪಡೆದಿದೆ.

ವಿದ್ಯುತ್ ಕಾಯ್ದೆ 2003ರ ಪ್ರಕಾರ ವಿದ್ಯುತ್ ವಿತರಣೆಯ ಪರವಾನಗಿ ನೀಡುವಂತೆ ಟಾಟಾ ಕಂಪನಿಯು ಕೆಇಆರ್‌ಸಿಗೆ ಅರ್ಜಿ ಸಲ್ಲಿಸಿದ ಬೆನ್ನಲ್ಲೇ, ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ ಸಾರ್ವಜನಿಕರಿಂದ ಇದಕ್ಕೆ ಪ್ರತಿಕ್ರಿಯೆಗಳನ್ನು ಆಹ್ವಾನಿಸಲಾಗಿತ್ತು. ಇದನ್ನು ವಿರೋಧಿಸಿ ರೈತರು, ಸಂಘಟನೆಗಳ ಮುಖಂಡರು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿದ್ದರು. ಅಲ್ಲದೆ ಎಸ್ಕಾಂಗಳ ಸಿಬ್ಬಂದಿ ಕೂಡ ಇದನ್ನು ವಿರೋಧಿಸಿ ಹೋರಾಟ ನಡೆಸಿದ್ದರು. ಕ.ವಿ.ಮಂ. ನೌಕರರ ಸಂಘಗಳ ಒಕ್ಕೂಟದ ಅಧ್ಯಕ್ಷ ಕೆ.ಬಲರಾಮ್, ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಸಿ.ರಮೇಶ್ ಅವರು ಅರ್ಜಿ ವಾಪಸ್ ಪಡೆದಿರುವುದನ್ನು ಸ್ವಾಗತಿಸಿದ್ದು, ಹೋರಾಟಕ್ಕೆ ಸಂದ ಜಯ ಎಂದು ಹೇಳಿದ್ದಾರೆ.

ಮೃತಪಟ್ಟಿರುವ ಕಾಡಾನೆ

ವಿದ್ಯುತ್ ತಗುಲಿ ಆನೆ ಸಾವು

ಆಲ್ದೂರು (ಚಿಕ್ಕಮಗಳೂರು): ಸಮೀಪದ ಕುಂದೂರು ಸಾರಗೋಡು ಮೀಸಲು ಅರಣ್ಯ ವ್ಯಾಪ್ತಿಯಲ್ಲಿ ವಿದ್ಯುತ್ ತಗುಲಿ ಕಾಡಾನೆಯೊಂದು ಮೃತಪಟ್ಟಿದೆ.

ಅರಣ್ಯ ಪ್ರದೇಶದಲ್ಲಿ ಗಂಡಾನೆಯ ಶವ ಶುಕ್ರವಾರ ಕಂಡ ಕೂಡಲೇ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು. ಆನೆಗೆ 20 ವರ್ಷ ಆಗಿರಬಹುದು. 2–3 ದಿನಗಳ ಹಿಂದೆಯೇ ಆನೆ ಮೃತಪಟ್ಟಿದೆ. ಮೀಸಲು ಅರಣ್ಯದ ವ್ಯಾಪ್ತಿಯಲ್ಲಿ ವಿದ್ಯುತ್ ತಂತಿ ಎಲ್ಲಿತ್ತು ಎಂಬುದರ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ.

‘ಮರಣೋತ್ತರ ಪರೀಕ್ಷೆ ನಡೆಸ ಲಾಗಿದ್ದು, ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿರುವುದು ಖಚಿತವಾಗಿದೆ. ಮೃತದೇಹ ದೊರೆತ 30 ಮೀ. ದೂರ ದಲ್ಲಿ ಹಿಡುವಳಿ ಜಮೀನಿದೆ. ಅವರ ಬೇಲಿಯಲ್ಲಿ ವಿದ್ಯುತ್ ಸಂಪರ್ಕ ಇತ್ತೆ ಎಂಬುದನ್ನು ಪರಿಶೀಲಿಸಲಾಗುತ್ತಿದೆ’ ಎಂದು ಚಿಕ್ಕಮಗಳೂರು ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿ ಬೋರಯ್ಯ ತಿಳಿಸಿದರು.

ಡಿ.ಕೆ.ಶಿವಕುಮಾರ್, ಅವರ ಪತ್ನಿ ಉಷಾ, ಸಹೋದರ ಡಿ.ಕೆ.ಸುರೇಶ್ ಅವರು ಸಿದ್ದರಾಮಯ್ಯ ಅವರ ಜತೆ ಶುಕ್ರವಾರ ಉಪಾಹಾರ ಸೇವಿಸಿದರು

ಸಂಪುಟ ವಿಸ್ತರಣೆ ಕಸರತ್ತು ದೆಹಲಿಗೆ ಸಿ.ಎಂ ಡಿಕೆಶಿ

ಒಂದನೇ ಪುಟದಿಂದ...

ಮೂರು, ನಾಲ್ಕು ಬಾರಿ ಶಾಸಕರಾದವರು, ಪಕ್ಷಕ್ಕಾಗಿ ಹಿಂದಿನಿಂದಲೂ ದುಡಿದವರು, ಇದೇ ಮೊದಲ ಬಾರಿ ಆಯ್ಕೆಯಾದವರು, ವಿಧಾನ ಪರಿಷತ್ ಸದಸ್ಯರು, ಶಾಸಕಿಯರು ಜಿಲ್ಲಾವಾರು, ಜಾತಿವಾರು ಲೆಕ್ಕಾಚಾರದಲ್ಲಿ ಸಚಿವ ಸ್ಥಾನ ನೀಡುವಂತೆ ಒತ್ತಡ ತಂತ್ರ ಅನುಸರಿಸುತ್ತಿದ್ದಾರೆ. ನಾಯಕತ್ವ ಬದಲಾವಣೆಯ ಸನ್ನಿವೇಶದಲ್ಲಿ ತಮ್ಮ ಪರ ನಿಂತವರು, ಮುಖ್ಯಮಂತ್ರಿ ಸ್ಥಾನ ನೀಡುವಂತೆ ಬಹಿರಂಗವಾಗಿ ಹೇಳಿಕೆ ಕೊಟ್ಟವರು, ದೆಹಲಿಗೆ ತೆರಳಿ ತಮ್ಮ ಪರ ಹೈಕಮಾಂಡ್ ಮೇಲೆ ಒತ್ತಡ ಹಾಕಿದ ಕೆಲವರಿಗಾದರೂ ಸಂಪುಟದಲ್ಲಿ ಅವಕಾಶ ನೀಡಲು ಶಿವಕುಮಾರ್ ಕಸರತ್ತು ನಡೆಸಿದ್ದಾರೆ.

ಅತ್ತ ಸಿದ್ದರಾಮಯ್ಯ ಬೆಂಬಲಿಗ ಶಾಸಕರು ತಮ್ಮನ್ನು ಸಂಪುಟಕ್ಕೆ ತೆಗೆದಕೊಳ್ಳಲು ಶಿಫಾರಸು ಮಾಡುವಂತೆ ಅವರ ಮೇಲೆ ನಿರಂತರ ಒತ್ತಡ ಹಾಕುತ್ತಿದ್ದಾರೆ. ಅವರ ಸಂಪುಟದಲ್ಲಿ ಸಚಿವರಾಗಿದ್ದು, ಈಗ ಅವಕಾಶ ವಂಚಿತರಾದ ಮಾಜಿಗಳು, ಆಪ್ತ ಶಾಸಕರ ದಂಡು ನಿತ್ಯವೂ ಅವರನ್ನು ಭೇಟಿ ಮಾಡಿ, ಮನವಿ ಮಾಡುತ್ತಿದ್ದಾರೆ. ಅಂಥವರಿಗೆ ಸಂಪುಟದಲ್ಲಿ ಸ್ಥಾನ ಸಿಗುವಂತೆ ಮಾಡಲು ಸಿದ್ದರಾಮಯ್ಯ ಅವರೂ ಪ್ರಯತ್ನ ನಡೆಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಈಗಾಗಲೇ ದೆಹಲಿಯಲ್ಲಿ ಒಂದು ಸುತ್ತು ಚರ್ಚೆ ನಡೆಸಿದ್ದು, ಸಚಿವ ಸ್ಥಾನದ ಆಕಾಂಕ್ಷಿಗಳ ಅರ್ಹತೆ, ಪಕ್ಷ ನಿಷ್ಠೆ, ಭವಿಷ್ಯದಲ್ಲಿ ಅವರಿಂದ ಸರ್ಕಾರ ಹಾಗೂ ಪಕ್ಷಕ್ಕೆ ಆಗುವ ಲಾಭ ಮತ್ತಿತರ ಅಂಶಗಳನ್ನು ಪರಿಶೀಲಿಸಿದ್ದಾರೆ. ಇನ್ನೊಂದು ಸುತ್ತಿನ ಸಭೆ ನಡೆಸಿದ ತಕ್ಷಣ ಶಿವಕುಮಾರ್ ಅವರಿಗೆ ದೆಹಲಿಗೆ ಬರಲು ಸೂಚಿಸಲಿದ್ದಾರೆ. ಎರಡು, ಮೂರು ದಿನಗಳ ಒಳಗೆ ಪಟ್ಟಿ ಅಂತಿಮಗೊಳಿಸುವ ಸಾಧ್ಯತೆ ಇದೆ ಎಂದು ಕಾಂಗ್ರೆಸ್ ಮೂಲಗಳು ಖಚಿತಪಡಿಸಿವೆ.

ಸಿದ್ದರಾಮಯ್ಯ ನಿವಾಸಕ್ಕೆ ಶಿವಕುಮಾರ್

ಉಪಾಹಾರದ ನೆಪದಲ್ಲಿ ಸಿದ್ದರಾಮಯ್ಯ ಅವರ ನಿವಾಸಕ್ಕೆ ಶುಕ್ರವಾರ ತೆರಳಿದ ಮುಖ್ಯಮಂತ್ರಿ ಶಿವಕುಮಾರ್, ಸಂಪುಟ ವಿಸ್ತರಣೆ ಕುರಿತು ಕೆಲ ಸಮಯ ಚರ್ಚೆ ನಡೆಸಿದ್ದಾರೆ. ಜಿಲ್ಲಾವಾರು ಪ್ರಾತಿನಿಧ್ಯ, ಜಾತಿವಾರು ಶಾಸಕರು, ಹಲವು ಬಾರಿ ಶಾಸಕರಾದರೂ ಒಮ್ಮೆಯೂ ಸಚಿವ ಸ್ಥಾನ ಸಿಗದ ಪಕ್ಷದ ನಿಷ್ಠಾವಂತರು, ಒಬ್ಬಿಬ್ಬರು ಹೊಸ ಶಾಸಕರು ಹಾಗೂ ಶಾಸಕಿಯರ ಪಟ್ಟಿಯನ್ನು ಸಿದ್ದರಾಮಯ್ಯ ಅವರ ಮುಂದಿಟ್ಟು, ಮಾತುಕತೆ ನಡೆಸಿದ್ದಾರೆ.

‘ಈಗಾಗಲೇ ಸಾಕಷ್ಟು ವಿಳಂಬವಾಗಿದ್ದು, ಮಳೆಗಾಲದ ಅಧಿವೇಶನ ಆರಂಭಿಸಬೇಕಿದೆ. ಅಷ್ಟರ ಒಳಗೆ ಸಂಪುಟ ವಿಸ್ತರಣೆಯಾಗಬೇಕು. ದೆಹಲಿ ನಾಯಕರ ಕರೆ ಬಂದ ತಕ್ಷಣ ತಾವೂ ಬರಬೇಕು. ಪಟ್ಟಿ ಅಂತಿಮಗೊಳಿಸಲು ಸಹಕಾರ ನೀಡಬೇಕು’ ಎಂದು ಮನವಿ ಮಾಡಿದ್ದಾರೆ.

ಶಿವಕುಮಾರ್ ಅವರ ಜತೆಗೆ ಪತ್ನಿ ಉಷಾ, ಸಹೋದರ ಡಿ.ಕೆ.ಸುರೇಶ್ ಅವರು ಸಿದ್ದರಾಮಯ್ಯ ಅವರ ಜತೆ ಉಪಾಹಾರ ಕೂಟದಲ್ಲಿ ಭಾಗವಹಿಸಿದ್ದರು.

ಸಿಇಟಿ: ಅಪ್‌ಡೇಟ್ ಮಾಡದಿದ್ದರೆ ಕಾಲೇಜು ಪ್ರವೇಶದ ವೇಳೆ ಸಮಸ್ಯೆ

ಮರುಮೌಲ್ಯಮಾಪನದ ಅಂಕ ನೀಡಲು ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಬಿಎಸ್‌ಇ, ಸಿಐಎಸ್‌ಸಿಇ ಹಾಗೂ ಇತರೆ ರಾಜ್ಯಗಳ ಪರೀಕ್ಷಾ ಮಂಡಳಿಗಳ 12ನೇ ತರಗತಿಯ ಮರು ಮೌಲ್ಯಮಾಪನದ ಅಂಕಪಟ್ಟಿಯನ್ನು ಸಲ್ಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಜುಲೈ 4 ರಿಂದ 6ರವರೆಗೆ ಅವಕಾಶ ನೀಡಿದೆ.

‘ಕೌನ್ಸೆಲಿಂಗ್ ಪ್ರಕ್ರಿಯೆ ಆರಂಭವಾದ ನಂತರ ಈ ಮಂಡಳಿಗಳು ಮರುಮೌಲ್ಯಮಾಪನದ ಫಲಿತಾಂಶ ಪ್ರಕಟಿಸಿದ್ದು, ಆ ಕಾರಣಕ್ಕೆ ಆರಂಭದಲ್ಲಿ ಪರಿಗಣಿಸಲು ಸಾಧ್ಯವಾಗಿರಲಿಲ್ಲ. ನಂತರ ಬಂದ ಮನವಿಗಳನ್ನು ಪರಿಗಣಿಸಿ ಅಂಕಪಟ್ಟಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಮಲ್ಲೇಶ್ವರದ ಕೆಇಎ ಕಚೇರಿಗೆ ಅಂಕಪಟ್ಟಿ ಸಲ್ಲಿಸಬೇಕು. ಭಾನುವಾರವೂ ಸ್ವೀಕರಿಸಲಾಗುವುದು’ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

‘ಅಭ್ಯರ್ಥಿಗಳು ಅಂಕಪಟ್ಟಿ ಸಲ್ಲಿಸಿದರೂ ಅವರ ಡಿಜಿಲಾಕರ್ ಅಕೌಂಟ್ ಮೂಲಕ ಅಂಕಗಳನ್ನು ಪರಿಶೀಲಿಸಲಾಗುವುದು. ಮರು ಮೌಲ್ಯಮಾಪನದಲ್ಲಿ ಅಂಕ ಹೆಚ್ಚಾದವರು ಮಾತ್ರ ಕೆಇಎಗೆ ಅರ್ಜಿಗಳನ್ನು ಕೊಟ್ಟಿದ್ದಾರೆ. ಆದರೆ, ಅಂಕ ಕಡಿಮೆ ಆಗಿರುವವರೂ ಅಂಕಗಳನ್ನು ಬದಲಿಸಿಕೊಳ್ಳಬೇಕು. ರ‍್ಯಾಂಕ್ ಶ್ರೇಣಿಯಲ್ಲಿ ಬಹಳಷ್ಟು ವ್ಯತ್ಯಾಸವಾಗುವ ಸಾಧ್ಯತೆ ಇರುತ್ತದೆ. ಬದಲಾವಣೆ ಮಾಡಿಸಿಕೊಳ್ಳದಿದ್ದರೆ ಕಾಲೇಜು ಪ್ರವೇಶದ ಸಮಯದಲ್ಲಿ ಸಮಸ್ಯೆ ಎದುರಿಸಬೇಕಾಗುತ್ತದೆ’ ಎಂದಿದ್ದಾರೆ.

ಬಿ-ಫಾರ್ಮಾ, ಫಾರ್ಮಾ-ಡಿಗೆ ನಂತರ ಅವಕಾಶ: ಬಿ-ಫಾರ್ಮಾ, ಫಾರ್ಮಾ-ಡಿ, ಯೋಗ ಮತ್ತು ನ್ಯಾಚುರೋಪತಿ ಕೋರ್ಸ್‌ಗಳ ಸೀಟು ಲಭ್ಯತಾ ಪಟ್ಟಿ ಬಂದಿಲ್ಲ. ಹಾಗಾಗಿ, ಆಯ್ಕೆ ದಾಖಲಿಸಲು ಅವಕಾಶ ನೀಡಿಲ್ಲ. ನಂತರ ಆಯ್ಕೆ ದಾಖಲಿಸಲು ಅವಕಾಶ ನೀಡಲಾಗುವುದು ಎಂದು ಹೇಳಿದ್ದಾರೆ.

ಎಂಜಿನಿಯರ್ ಹುದ್ದೆ: ಇಂದು, ನಾಳೆ ಪರೀಕ್ಷೆ

ಬೆಂಗಳೂರು: ಕೃಷಿ ಮಾರಾಟ ಇಲಾಖೆ, ಕೆಎಸ್‌ಎಸ್‌ಐಡಿಸಿ ಮತ್ತು ಬೆಂಗಳೂರು ಜಲಮಂಡಲಿಯಲ್ಲಿ ಖಾಲಿ ಇರುವ ವಿವಿಧ ವಿಭಾಗಗಳ ಸಹಾಯಕ ಎಂಜಿನಿಯರ್ ಹುದ್ದೆಗಳಿಗೆ ಇದೇ 4 ಮತ್ತು 5ರಂದು ಲಿಖಿತ ಪರೀಕ್ಷೆ ನಡೆಯಲಿದೆ.

ಕಲ್ಯಾಣ ಕರ್ನಾಟಕ ವೃಂದದ ಅಭ್ಯರ್ಥಿಗಳಿಗೆ ಇದೇ 4ರಂದು ಬೆಂಗಳೂರು ಮತ್ತು ಕಲಬುರಗಿಯ ತಲಾ ಮೂರು ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಉಳಿಕ ಮೂಲ ವೃಂದದ ಅಭ್ಯರ್ಥಿಗಳಿಗೆ ಇದೇ 5ರಂದು ಬೆಂಗಳೂರಿನ 22 ಕೇಂದ್ರಗಳಲ್ಲಿ, ಹುಬ್ಬಳ್ಳಿಯ ಆರು ಮತ್ತು ಕಲ್ಬುರ್ಗಿಯ ಆರು ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಜುಲೈ 4ರಂದು 2,400 ಹಾಗೂ ಜುಲೈ 5ರಂದು 16,423 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ’ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ವೆಬ್‌ಕಾಸ್ಟಿಂಗ್ ಮೂಲಕ ಎಲ್ಲ ಪರೀಕ್ಷಾ ಕೇಂದ್ರಗಳ ಚಲನವಲನಗಳನ್ನು ಬೆಂಗಳೂರಿನ ಕೆಇಎ ಕಚೇರಿಯಲ್ಲಿ ಸ್ಥಾಪಿಸಿರುವ ಕಮಾಂಡ್ ಸೆಂಟರ್‌ನಿಂದಲೇ ನಿಗಾವಹಿಸಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಸ್ಥಳೀಯ ವಾಗಿಯೂ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ನಿಗಾ ವಹಿಸಲಿದ್ದಾರೆ ಎಂದಿದ್ದಾರೆ.

ಬೆಂಗಳೂರು ಉತ್ತರ ನಗರ ಪಾಲಿಕೆ, ವಲಯ-2
ಕಾರ್ಯಪಾಲಕ ಅಭಿಯಂತರರವರ ಕಛೇರಿ, ದಾಸರಹಳ್ಳಿ ವಿಭಾಗ, ಎಂಇಐ ಲೇಔಟ್, ಹೆಸರಘಟ್ಟ ಮುಖ್ಯ ರಸ್ತೆ, ಬಾಗಲಗುಂಟೆ, ಟಿ. ದಾಸರಹಳ್ಳಿ, ಬೆಂಗಳೂರು – 560073

ಸಂಖ್ಯೆ: ಬೆಂಉನಪಾ/ಕಾಪಾಅ/ದಾವಿ/ಟೆಂಡರ್/09/2026-27 ದಿನಾಂಕ: 03-07-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಟಿ) (ದ್ವಿ ಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವೆಬ್‌ಸೈಟ್ https://kppp.karnataka.gov.in

ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೆಂಉನಪಾ, ಬೆಂಗಳೂರು ಬಿಬಿಎಂಪಿ / ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೆಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು / ವರ್ಗ
1.	**ಬೆಂಉನಪಾ ವ್ಯಾಪ್ತಿಯ ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಜಾಲಹಳ್ಳಿ ವಾರ್ಡ್ ನಂ. 60, ಎಚ್‌ಎಂಟಿ ವಾರ್ಡ್ ನಂ. 61, ಬೃಂದಾವನ ನಗರ ವಾರ್ಡ್ ನಂ. 62, ಜೆಪಿ ಪಾರ್ಕ್ ವಾರ್ಡ್ ನಂ. 63 ಮತ್ತು ಯಶವಂತಪುರ ವಾರ್ಡ್ ನಂ. 64 ರಲ್ಲಿನ ಆಯ್ದ ರಸ್ತೆಗಳು ಹಾಗೂ ಒಳಚರಂಡಿಗಳ ಅಭಿವೃದ್ಧಿ ಮತ್ತು ಸುಧಾರಣಾ ಕಾಮಗಾರಿಗಳು. (ಇತರೆ).** ಕಾಮಗಾರಿಯ ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ): **1300.00.** ಇಎಂಡಿ (ರೂ.ಗಳಲ್ಲಿ): **ರೂ.15,00,000/-. (ಇದರಲ್ಲಿ ರೂ. 1.00 ಲಕ್ಷವನ್ನು ಇ-ಪಾವತಿ (NEFT) ಮೂಲಕ ಹಾಗೂ ಉಳಿದ ರೂ. 14,00,000/- ಮೊತ್ತವನ್ನು ಬಿಜಿ (BG) ಅಥವಾ ಎಫ್‌ಡಿಆರ್ (FDR) ಮೂಲಕ ಪಾವತಿಸಬೇಕು; ಇದನ್ನು ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು).**

ಟೆಂಡರ್‌ನ ಕಾರ್ಯಸೂಚಿ: 1) ಪೂರ್ವ ಬಿಡ್ ಸಭೆಯ **ದಿನಾಂಕ: 10-07-2026 ರ ಮಧ್ಯಾಹ್ನ 3:00 ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, ಬೆಂಉನಪಾ, ವಲಯ-2, ಯಲಹಂಕ ಮಿನಿ ವಿಧಾನಸೌಧ, ಬೆಂಗಳೂರು-560064 ಇಲ್ಲಿ ನಡೆಯಲಿದೆ. 2)** ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 17-07-2026 ರಂದು ಸಂಜೆ 4:00 ಗಂಟೆಯವರೆಗೆ. 3)** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 18-07-2026ರ ಸಂಜೆ 4:00 ಗಂಟೆಯ ನಂತರ. 4)** ಆರ್ಥಿಕ ಬಿಡ್ ತೆರೆಯುವಿಕೆ ದಿನಾಂಕ: **ತಾಂತ್ರಿಕ ಅನುಮೋದನೆಯ ನಂತರ.**

ಸಹಿ/- ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೆಂಉನಪಾ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಜೀವನದ ಸಂಕಷ್ಟಗಳನ್ನು ಸಹಿಸಿಕೊಳ್ಳಲು ಅಹಿಂಸೆಯು ಒಂದು ರಚನಾತ್ಮಕವಾದ ಪ್ರೇರಕ ಶಕ್ತಿಯಾಗಿದೆ.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ಕಾರ್ಮಿಕರ ಸುರಕ್ಷತೆಗಿಲ್ಲ ಒತ್ತು ಬಡಪಾಯಿಗಳ ಜೀವಕ್ಕೆ ಕುತ್ತು

ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿ ಮಾದಾಪಟ್ಟಣ ಬಳಿಯ ಕಲ್ಲು ಕ್ವಾರಿಯಲ್ಲಿ 7 ಕಾರ್ಮಿಕರು ಮೃತಪಟ್ಟಿರುವ ದುರಂತ ಆಕಸ್ಮಿಕ ಘಟನೆಯಷ್ಟೇ ಆಗಿರದೆ, ಕ್ವಾರಿ ಮಾಲೀಕರ ನಿರ್ಲಕ್ಷ್ಯ ಮತ್ತು ಆಡಳಿತ ವ್ಯವಸ್ಥೆಯ ಹೊಣೆಗೇಡಿತನದ ಫಲಿತವೂ ಆಗಿದೆ. ಕ್ವಾರಿಯಲ್ಲಿ ಕಾರ್ಯ ನಿರ್ವಹಿಸುವಾಗ ಬೃಹತ್ ಬಂಡೆಯೊಂದು ಬಿದ್ದು 7 ಕಾರ್ಮಿಕರು ಮೃತಪಟ್ಟಿದ್ದಾರೆ, ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಅನಧಿಕೃತ ಗಣಿಗಾರಿಕೆ, ಸುರಕ್ಷತಾ ನಿಯಮಗಳ ಉಲ್ಲಂಘನೆ, ಸ್ಫೋಟಕಗಳ ಅಸುರಕ್ಷಿತ ಬಳಕೆ ಮತ್ತು ಬಂಡೆ ಕುಸಿತಗಳಿಂದ ಕಾರ್ಮಿಕರು ಪ್ರಾಣ ಕಳೆದುಕೊಂಡ ಘಟನೆಗಳು ಕಳೆದ ಎರಡು ದಶಕಗಳಲ್ಲಿ ಆಗಾಗ್ಗೆ ವರದಿಯಾಗುತ್ತಲೇ ಇವೆ. ಕಲ್ಲು ಕುಸಿತ ಮತ್ತು ಸ್ಫೋಟ ಸಂಬಂಧಿತ ದುರಂತಗಳಲ್ಲಿ ಸಾವುನೋವು ಸಂಭವಿಸುವುದು ಸಾಮಾನ್ಯ ಎನ್ನುವಂತಾಗಿದೆ. 2009ರಲ್ಲಿ ಅಂಕೋಲಾದ ಕಲ್ಲು ಕ್ವಾರಿಯಲ್ಲಿ ಸಂಭವಿಸಿದ ಬಂಡೆ ಕುಸಿತದಲ್ಲಿ 6 ಕಾರ್ಮಿಕರು ಸಾವಿಗೀಡಾಗಿದ್ದರು. ಆ ದುರಂತವನ್ನು ನೆನಪಿಸುವಂತಹ ದುರ್ಘಟನೆ ಈಗ ಮಾದಾಪಟ್ಟಣದಲ್ಲಿ ಸಂಭವಿಸಿದೆ. ಕ್ವಾರಿ ಮಾಲೀಕರು ಗಣಿಗಾರಿಕೆಯ ಮಾನದಂಡಗಳನ್ನು ಗಾಳಿಗೆ ತೂರಿರುವುದು ಹಾಗೂ ಗಣಿಗಾರಿಕೆ ನಡೆಸುವಾಗ ಕಡ್ಡಾಯವಾಗಿ ಬಿಡಬೇಕಾದ ಬಫರ್ ವಲಯ ಬಿಡದಿರುವುದು ದುರಂತಕ್ಕೆ ಕಾರಣ ಎನ್ನಲಾಗಿದೆ.

ಅವೈಜ್ಞಾನಿಕ ಗಣಿಗಾರಿಕೆ ಹಾಗೂ ಸುರಕ್ಷತಾ ಕ್ರಮಗಳ ಕೊರತೆಯು ಕಲ್ಲು ಕ್ವಾರಿಗಳಲ್ಲಿ ಕಾರ್ಯ ನಿರ್ವಹಿಸುವ ಕಾರ್ಮಿಕರ ಜೀವಕ್ಕೆ ಕುತ್ತಾಗಿ ಪರಿಣಮಿಸಿದೆ.

ಕಲ್ಲು ಕ್ವಾರಿ ಚಟುವಟಿಕೆಯು ಅಪಾಯಕಾರಿ ಉದ್ಯಮವಾಗಿ ರೂಪುಗೊಂಡಿದೆ. ಕಾನೂನುಬಾಹಿರ ಗಣಿಗಾರಿಕೆ, ಸುರಕ್ಷತಾ ನಿಯಮಗಳ ಉಲ್ಲಂಘನೆ, ಅವೈಜ್ಞಾನಿಕ ಗಣಿಗಾರಿಕೆ ವಿಧಾನಗಳು ಹಾಗೂ ಸ್ಫೋಟಕಗಳ ಅನಿಯಂತ್ರಿತ ಬಳಕೆಯು ಕಾರ್ಮಿಕರ ಜೀವಗಳನ್ನು ಅಪಾಯಕ್ಕೆ ಸಿಲುಕಿಸಿದೆ. ಗಣಿಮಾಲೀಕರ ಲಾಭಕೋರತನವು ಕಾರ್ಮಿಕರ ಜೀವಗಳನ್ನು ಜೂಜಿನ ಪಣದಂತೆ ಮಾರ್ಪಡಿಸಿದೆ. ಪ್ರತಿ ಬಾರಿ ದುರಂತ ಸಂಭವಿಸಿದಾಗ ಕ್ವಾರಿಗಳಲ್ಲಿನ ಕಾನೂನುಬಾಹಿರ ಚಟುವಟಿಕೆಗಳು ಹಾಗೂ ಸುರಕ್ಷತಾ ನಿಯಮಗಳು ಪಾಲನೆ ಆಗದಿರುವ ಬಗ್ಗೆ ಆತಂಕ ವ್ಯಕ್ತವಾಗುತ್ತದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆ, ಜಿಲ್ಲಾಡಳಿತ, ಕಾರ್ಮಿಕ ಇಲಾಖೆ, ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಸ್ಥಳೀಯ ಆಡಳಿತ ಸಂಸ್ಥೆಗಳು ಕಲ್ಲು ಕ್ವಾರಿ ಚಟುವಟಿಕೆಗಳನ್ನು ನಿಯಂತ್ರಿಸುವ ಹೊಣೆಗಾರಿಕೆ ಹೊತ್ತಿವೆ. ಪರವಾನಗಿ ನೀಡುವುದರಿಂದ ಸುರಕ್ಷತಾ ಕ್ರಮಗಳ ಪರಿಶೀಲನೆಯವರೆಗೆ ಹಲವು ಹಂತಗಳಲ್ಲಿ ಸರ್ಕಾರಿ ಆಡಳಿತದ ಮೇಲ್ವಿಚಾರಣೆಯಿದೆ. ಹಾಗಿದ್ದರೂ ಅವಘಡಗಳು ಮರುಕಳಿಸುತ್ತಿರುವುದನ್ನು ನೋಡಿದರೆ, ಈ ದುರಂತಗಳಿಗೆ ಕ್ವಾರಿ ಮಾಲೀಕರ ನಿರ್ಲಕ್ಷ್ಯದೊಂದಿಗೆ ಆಡಳಿತ ಯಂತ್ರದ ವೈಫಲ್ಯವೂ ಕಾರಣವೆಂದು ಭಾವಿಸಬೇಕಾಗಿದೆ. ಕ್ವಾರಿಗಳಲ್ಲಿ ದುಡಿಯುವ ಕಾರ್ಮಿಕರು ದುರ್ಬಲ ವರ್ಗದವರು ಅಥವಾ ವಲಸೆ ಕಾರ್ಮಿಕರಾಗಿರುತ್ತಾರೆ. ಜೀವನೋಪಾಯಕ್ಕಾಗಿ ಅಪಾಯಕರ ಪರಿಸ್ಥಿತಿಯಲ್ಲಿಯೂ ದುಡಿಯುವ ಅನಿವಾರ್ಯತೆ ಅವರದಾಗಿರುತ್ತದೆ. ಸುರಕ್ಷತಾ ಸವಲತ್ತುಗಳಿಗಾಗಿ ಒತ್ತಾಯಿಸುವ ಧ್ವನಿಯೂ ಅವರಿಗಿರುವುದಿಲ್ಲ. ಬಹುತೇಕ ಸಂದರ್ಭಗಳಲ್ಲಿ ಸೂಕ್ತ ತರಬೇತಿ, ರಕ್ಷಣಾ ಸಾಧನಗಳು, ವಿಮೆ ಸೌಲಭ್ಯ, ತುರ್ತು ರಕ್ಷಣಾ ವ್ಯವಸ್ಥೆ ಇಲ್ಲದೆಯೇ ಕಾರ್ಮಿಕರನ್ನು ದುಡಿಸಿಕೊಳ್ಳಲಾಗುತ್ತದೆ.

ಬಂಡೆಗಳ ಸ್ಥಿರತೆಯನ್ನು ವೈಜ್ಞಾನಿಕವಾಗಿ ಪರಿಶೀಲಿಸದಿರುವುದು, ಅಪಾಯದ ಮುನ್ಸೂಚನೆಗಳನ್ನು ನಿರ್ಲಕ್ಷಿಸುವುದು ಹಾಗೂ ಅಗತ್ಯ ಸುರಕ್ಷತಾ ಉಪಕರಣಗಳನ್ನು ಒದಗಿಸದಿರುವ ಬಗ್ಗೆ ದುರಂತಗಳು ಘಟಿಸಿದಾಗ ಕಾಳಜಿ ವ್ಯಕ್ತವಾಗುತ್ತದೆ. ಈ ಕಾಳಜಿಯ ಆಯುಸ್ಸು ಕಡಿಮೆ ಅವಧಿಯದಾಗಿದ್ದು, ಕ್ವಾರಿಗಳ ಕಾರ್ಯ ನಿರ್ವಹಣೆಯಲ್ಲಿ ಯಾವುದೇ ಸುಧಾರಣೆ ಆಗದೆ ಯಥಾಸ್ಥಿತಿ ಮುಂದುವರಿಯುತ್ತದೆ. ಕ್ವಾರಿಗಳಲ್ಲಿ ಭೂವಿಜ್ಞಾನ ತಜ್ಞರಿಂದ ನಿಯಮಿತ ಪರಿಶೀಲನೆ, ಅಪಾಯದ ಸಾಧ್ಯತೆಗಳ ಅಂದಾಜು, ಆಧುನಿಕ ತಂತ್ರಜ್ಞಾನದ ಮೂಲಕ ಮೇಲ್ವಿಚಾರಣೆ, ಸ್ಫೋಟ ಕಾರ್ಯಾಚರಣೆಗೆ ಕಟ್ಟುನಿಟ್ಟಿನ ಮಾನದಂಡಗಳು ಹಾಗೂ ಕಾರ್ಮಿಕರಿಗೆ ಕಡ್ಡಾಯ ಸುರಕ್ಷತಾ ತರಬೇತಿಯನ್ನು ಜಾರಿಗೊಳಿಸಬೇಕಾಗಿದೆ. ನಿಯಮ ಉಲ್ಲಂಘಿಸುವ ಕ್ವಾರಿಗಳನ್ನು ಕಪ್ಪುಪಟ್ಟಿಯಲ್ಲಿಡುವುದರ ಜೊತೆಗೆ, ಅವುಗಳ ಮಾಲೀಕರ ಮೇಲೆ ಕ್ರಿಮಿನಲ್ ಹೊಣೆಗಾರಿಕೆಯನ್ನು ನಿಗದಿಪಡಿಸುವ ವ್ಯವಸ್ಥೆ ಆಗಬೇಕಾಗಿದೆ. ಕಲ್ಲು ಕ್ವಾರಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸುರಕ್ಷತೆ ಅದೃಷ್ಟವನ್ನಷ್ಟೇ ಅವಲಂಬಿಸುವುದು, ನಮ್ಮ ಅಭಿವೃದ್ಧಿ ಯೋಜನೆಗಳ ಪೊಳ್ಳುತನದ ಸಂಕೇತವಾಗಿದೆ. ಪ್ರಸ್ತುತ ಸಂಭವಿಸಿರುವ ಸಾವುಗಳು ನಾಗರಿಕ ಸಮಾಜಕ್ಕೆ ಎಚ್ಚರಿಕೆಯ ಸಂಕೇತಗಳಾಗಿವೆ. ಮುಂದೆ ಇಂತಹ ಅವಘಡ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಅವರ ಮಾತು ಬರೀ ಆಶ್ವಾಸನೆಯಾಗದೆ ಕಾರ್ಯರೂಪಕ್ಕೆ ಬರಲಿ. ಮಾದಾಪಟ್ಟಣದ ದುರಂತದ ಬಗ್ಗೆ ವಿಳಂಬವಿಲ್ಲದೆ ತನಿಖೆ ನಡೆದು, ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ; ಸಂತ್ರಸ್ತರ ಕುಟುಂಬಗಳಿಗೆ ಸೂಕ್ತ ಪರಿಹಾರ ದೊರಕಿಸಿಕೊಡುವ ಬದ್ಧತೆಯನ್ನು ಸರ್ಕಾರ ತೋರಲಿ.

ರೈತರ ಜ್ಞಾನ ಬಳಕೆಯಾಗಲಿ

ಬೆಂಕಿ ಬಿದ್ದಾಗ ಬಾವಿ ತೆಗೆಯುವ ಹಾಗೆ ಸರ್ಕಾರ ವರ್ತಿಸಬಾರದು. ಹೋಬಳಿ, ತಾಲ್ಲೂಕು, ಜಿಲ್ಲಾಮಟ್ಟದ ರೈತರ ನಿಜಸ್ಥಿತಿ ಬಗ್ಗೆ ಸಮೀಕ್ಷೆ ನಡೆಸಬೇಕು. ಬರ ಗೆಲ್ಲುವ ತಂತ್ರ ಬೇರೆ ಬೇರೆ ಪ್ರದೇಶದ ರೈತರಲ್ಲಿದೆ, ಅದನ್ನು ಮೊದಲು ಅರಿಯಬೇಕು. ಬಹುವಾರ್ಷಿಕ ತೋಟಗಾರಿಕೆ ಬೆಳೆ ವಿಸ್ತೀರ್ಣವಾಗಿದೆ, ನೀರು ಖಾಲಿಯಾಗುತ್ತಿದೆ. ನೀರು ಉಳಿಸುವ ಕಾರ್ಯ ಅತ್ಯಂತ ಮುಖ್ಯ.

ಶಿವಾನಂದ ಕಳವೆ, ಪರಿಸರ ಕಾರ್ಯಕರ್ತ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಬ್ರಿಟಿಷ್‌ರಾಜ್‌ನ ಪರಮ ಅಭಿಮಾನಿಗಳು ಎಂಬುದನ್ನು ಬಿಜೆಪಿ ಮತ್ತು ಆರ್‌ಎಸ್‌ಎಸ್ ಮತ್ತೊಮ್ಮೆ ಬಹಿರಂಗಪಡಿಸಿವೆ. ಪಶ್ಚಿಮ ಬಂಗಾಳದಲ್ಲಿನ ಬಿಜೆಪಿ ಸರ್ಕಾರವು 'ಸಾರ್ವಜನಿಕ ಸುರಕ್ಷತೆ ಮತ್ತು ಸಮಾಜ ವಿರೋಧಿ ಚಟುವಟಿಕೆಗಳ ನಿಯಂತ್ರಣ ಮಸೂದೆ' ಜಾರಿಗೆ ಮುಂದಾಗಿದೆ. 1929ರಲ್ಲಿ ಬ್ರಿಟಿಷ್ ರಾಜ್ ಕೂಡ ಭಿನ್ನಮತ–ನಾಗರಿಕ ಸ್ವಾತಂತ್ರ್ಯ ಹತ್ತಿಕ್ಕಲು 'ಪಬ್ಲಿಕ್ ಸೇಫ್ಟಿ ಬಿಲ್' ಜಾರಿಗೆ ಮುಂದಾಗಿತ್ತು.

ಸಾಗರಿಕಾ ಘೋಷ್, ರಾಜ್ಯಸಭಾ ಸದಸ್ಯೆ

25 ವರ್ಷಗಳ ಹಿಂದೆ

ಬುಧವಾರ, 4-7-2001

• **ಮಳೆ ಅಭಾವ: ಕಡಿಮೆ ಬಿತ್ತನೆ**

ಬೆಂಗಳೂರು, ಜುಲೈ 3– ಕಳೆದ 40 ವರ್ಷಗಳ ಇತಿಹಾಸದಲ್ಲಿ ಜೂನ್ ತಿಂಗಳಲ್ಲಿ ರಾಜ್ಯದಲ್ಲಿ ಅತಿ ಕಡಿಮೆ ಮಳೆಯಾದ ಹಿನ್ನೆಲೆಯಲ್ಲಿ ನಿಗದಿತ 69 ಲಕ್ಷ ಹೆಕ್ಟೇರ್ ಬಿತ್ತನೆಗೆ ಬದಲಾಗಿ ಕೇವಲ 8.97 ಲಕ್ಷ ಹೆಕ್ಟೇರ್‌ನಲ್ಲಿ (ಶೇ 13) ಬಿತ್ತನೆಯಾಗಿದೆ.

ಈ ವರ್ಷದ 2 ತಿಂಗಳಲ್ಲಿ ರಾಜ್ಯ ಗರಿಷ್ಠ ಮತ್ತು ಕನಿಷ್ಠ ಮಳೆ ಕಂಡಿದೆ. ಏಪ್ರಿಲ್‌ನಲ್ಲಿ 76 ಮಿ.ಮೀ. ಹಾಗೂ ಜೂನ್‌ನಲ್ಲಿ 42 ಮಿ.ಮೀ. ಸರಾಸರಿ ಮಳೆಯಾಗಿದೆ. ಏಪ್ರಿಲ್‌ನಲ್ಲಿ ಸರಾಸರಿ 37 ಮಿ.ಮೀ. ಮತ್ತು ಜೂನ್‌ನಲ್ಲಿ 87 ಮಿ.ಮೀ. ಮಳೆ ಆಗಬೇಕಿತ್ತು.

• **ರಾಜ್ಯದಲ್ಲಿ ಅಂತ್ಯೋದಯ ಅನ್ನ ಯೋಜನೆ ಆರಂಭ**

ಬೆಂಗಳೂರು, ಜುಲೈ 3– ರಾಜ್ಯದ 4.79 ಲಕ್ಷ ಕಡು ಬಡತನದ ಕುಟುಂಬಗಳಿಗೆ ತಿಂಗಳಿಗೆ 25 ಕೆ.ಜಿ ಆಹಾರ ಧಾನ್ಯವನ್ನು ಉಚಿತವಾಗಿ ವಿತರಿಸುವ ಕೇಂದ್ರ ಸರ್ಕಾರದ ನೆರವಿನ ಅಂತ್ಯೋದಯ ಅನ್ನ ಯೋಜನೆ ಉದ್ಘಾಟಿಸಲಾಯಿತು.

ವಿಧಾನಸೌಧದಲ್ಲಿ ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಶಾಂತ ಕುಮಾರ್ ಯೋಜನೆ ಉದ್ಘಾಟಿಸಿ, ಕಡುಬಡವರ ಹಸಿವು ನೀಗಿಸಲು ರಾಜ್ಯ ಸರ್ಕಾರಗಳು ಹಾಕಿಕೊಳ್ಳುವ ಇಂಥ ಯೋಜನೆಗಳಿಗೆ ಕೇಂದ್ರದ ನೆರವು ಸದಾ ಇರುತ್ತದೆ ಎಂದರು.

75 ವರ್ಷಗಳ ಹಿಂದೆ

ಬುಧವಾರ, 4-7-1951

• **ಮಿಡತೆ ತಂಡದ ದಾಳಿ: ಬೆಳೆ ನಷ್ಟ**

ಕಾನ್‌ಪುರ, ಜುಲೈ 3– ಒಂದು ಮೈಲಿಯಷ್ಟು ವಿಸ್ತಾರ ಪ್ರಮಾಣದ ಮಿಡತೆಗಳ ಭಾರಿ ತಂಡವು ಇಂದು ಬೆಳಿಗ್ಗೆ ಎರಡು ಗಂಟೆವರೆಗೆ ಕಾನ್‌ಪುರದ ಮೇಲೆ ದಾಳಿ ಮಾಡಿತು.

ಉತ್ತರದಿಂದ ಪೂರ್ವಾಭಿಮುಖವಾಗಿ ಬಹಳ ಕೆಳಗೆ ಹಾರುತ್ತಿದ್ದ ಈ ಮಿಡತೆಗಳ ತಂಡವು ಸ್ವಲ್ಪಕಾಲ ಮರಗಳ ಮೇಲೂ ಹಾಗೂ ಮತ್ತೆ ಸ್ವಲ್ಪ ಕಾಲ ಮನೆಯ ಮೇಲ್ಛಾವಣಿಗಳ ಮೇಲೂ ವಿರಮಿಸಿತು.

ಮಂದಿರ: ರಾಜಕಾರಣ ಮತ್ತು ಹೊಣೆ



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಅಯೋಧ್ಯೆಯ ರಾಮಮಂದಿರ ರಾಜಕೀಯ ಚಳವಳಿಯೊಂದರ ಉತ್ಪನ್ನ. ಆ ಕಾರಣದಿಂದಲೇ, ಅಲ್ಲಿ ನಡೆದಿದೆ ಎನ್ನಲಾದ 'ಕಾಣಿಕೆ ಕಳವು' ಆರೋಪಕ್ಕೆ ವಿಶೇಷ ಮಹತ್ವ. ಸಾರ್ವಜನಿಕ ನಂಬಿಕೆಯ ಅಣೆಕಟ್ಟೆಯಲ್ಲಿ ಮೂಡಿರುವ ಬಿರುಕನ್ನು ಸರಿಪಡಿಸುವ ಉತ್ತರದಾಯಿತ್ವವನ್ನು ಸಂಬಂಧಿಸಿದವರು ಹೊರಲೇಬೇಕಾಗಿದೆ.

ಕೋಟ್ಯಂತರ ಹಿಂದೂಗಳಂತೆ ನಾನು ಕೂಡ ಶ್ರೀರಾಮಚಂದ್ರನ ಪ್ರಾಮಾಣಿಕತೆ, ಕರ್ತವ್ಯತತ್ಪರತೆ ಹಾಗೂ ನೈತಿಕಶಕ್ತಿಯ ಬಗೆಗಿನ ರಾಮಾಯಣದ ಕಥೆಗಳನ್ನು ಹರಿಕಥಾ ಪ್ರಸಂಗಗಳ ಮೂಲಕ ಕೇಳಿ ನೋಡಿ ತಿಳಿದವನು. ನಂತರದ ವರ್ಷಗಳಲ್ಲಿ, ಮಹಾಕವಿ ಕುವೆಂಪು ವಿರಚಿತ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯ ಕೃತಿಯನ್ನೂ ಓದಿದವನು.

ಬಹಳಷ್ಟು ಭಾರತೀಯರಿಗೆ ರಾಮನು ಶಾಸ್ತ್ರಗ್ರಂಥಗಳನ್ನು ಮೀರಿದ ವ್ಯಕ್ತಿತ್ವ. ಆತ ನಮ್ಮ ಸಾಂಸ್ಕೃತಿಕ ಪರಂಪರೆಯ ಅವಿಭಾಜ್ಯ ಅಂಗ. ಆ ಕಾರಣದಿಂದಲೇ, ಇತ್ತೀಚೆಗೆ ಅಯೋಧ್ಯೆಯ ರಾಮಮಂದಿರದಲ್ಲಿ ದೇಣಿಗೆಗೆ ಕನ್ನ ಹಾಕಿರುವ ವಿದ್ಯಮಾನವು ಹಲವು ಅಹಿತಕರ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಕಾಣಿಕೆ ಕಳವು ಹಗರಣವು ಬೃಹದಾಕಾರವಾಗಿ ಬೆಳೆಯುತ್ತಿದೆ. ಸಣ್ಣಪುಟ್ಟ ನುಂಗಪ್ಪಗಳನ್ನು ಹರಕೆಯ ಕುರಿಗಳನ್ನಾಗಿ ಮಾಡಲಾಗಿದ್ದು, ತಿಮಿಂಗಿಲಗಳು ತಪ್ಪಿಸಿಕೊಂಡಿವೆ ಎಂಬ ವದಂತಿ ದಟ್ಟವಾಗುತ್ತಿದೆ.

ಬಿಜೆಪಿ ಹಾಗೂ ವಿವಿಧ ಹಿಂದೂ ಸಂಘಟನೆಗಳ ಮುಖಂಡರು ಮಾಡುತ್ತಿರುವ ಆರೋಪಗಳು ವಿರೋಧಾಭಾಸದಿಂದ ಕೂಡಿರುವುದು ಮಾತ್ರವಲ್ಲ, ಆತಂಕಕಾರಿಯೂ ಆಗಿವೆ. ಈ ಹಗರಣದ ಹಿನ್ನೆಲೆಯಲ್ಲಿ ನಾವು ಕೇಳಿಕೊಳ್ಳಲೇಬೇಕಾದ ಪ್ರಶ್ನೆ: ಅಯೋಧ್ಯೆಯ ಶ್ರೀರಾಮನ ದೇವಸ್ಥಾನವು ಈ ದೇಶದ ಇನ್ನೊಂದು ಶ್ರದ್ಧಾಕೇಂದ್ರ ಮಾತ್ರವೇ ಅಥವಾ ಭಾರತದ ಸಮಕಾಲೀನ ಸಾರ್ವಜನಿಕ ಬದುಕಿನಲ್ಲಿ ಅದು ಅಪರೂಪದ ಸ್ಥಾನ ಗಳಿಸಿಕೊಂಡಿದೆಯೇ?

ಇದು ನಂಬಿಕೆಗೆ ಸಂಬಂಧಿಸಿದ ಪ್ರಶ್ನೆಯಲ್ಲ. ನಂಬಿಕೆ ಎನ್ನುವುದು ವ್ಯಕ್ತಿಗತವಾದುದು. ಇದು, ಅಯೋಧ್ಯೆಗೆ ಸಂಬಂಧಿಸಿದ ಕಾನೂನು ಸಂಘರ್ಷದ ವಿದ್ಯಮಾನ ಅಲ್ಲವೇ ಎಂಬ ಪ್ರಶ್ನೆಯೂ ಅಲ್ಲ. ಯಾಕೆಂದರೆ, ಸಾಂವಿಧಾನಿಕ ಪ್ರಕ್ರಿಯೆಗಳನ್ನು ದಾಟಿ ಮುನ್ನಡೆದು, ಭಾರತದಲ್ಲಿ ಸ್ವೀಕೃತ ವಾಸ್ತವವಾಗಿ ಅಯೋಧ್ಯೆಯ ರಾಮ ಪಡಿಮೂಡಿದ್ದಾನೆ. ಹಾಗಾಗಿ, ಈ ಪ್ರಶ್ನೆ ಉತ್ತರದಾಯಿತ್ವಕ್ಕೆ ಸಂಬಂಧಿಸಿದ್ದು.

ಶತಮಾನಗಳ ಕಾಲ ದಾನಿಗಳ ಪೋಷಣೆ, ಯಾತ್ರಾರ್ಥಿಗಳ ಭೇಟಿ ಹಾಗೂ ಸ್ಥಳೀಯರ ಪೂಜೆಗಳಿಂದ ನಿಧಾನವಾಗಿ ಜನಮಾನಸದಲ್ಲಿ ಗುರುತಾಗಿರುವ ಭಾರತದ ಬಹುತೇಕ ಪ್ರಾಚೀನ ದೇವಾಲಯಗಳಿಗಿಂತಲೂ ಅಯೋಧ್ಯೆಯ ರಾಮಮಂದಿರ ಭಿನ್ನವಾದುದು. ಸ್ವತಂತ್ರ ಭಾರತದ ಪ್ರಮುಖ ರಾಜಕೀಯ ಚಳವಳಿಯೊಂದರ ಪರಿಣಾಮದಿಂದ ಹೊರಹೊಮ್ಮಿರುವ ದೇವಸ್ಥಾನವಿದು. ವಿವಾದಿತ ಜಾಗದಿಂದ ಶುರುವಾದ ಈ ವಿದ್ಯಮಾನವು ಭವ್ಯಮೂರ್ತಿ ಪ್ರತಿಷ್ಠಾಪನೆ ಆಗುವವರೆಗೆ ಮುಂದುವರಿದಿದೆಯೇ ಹೊರತು, ಧಾರ್ಮಿಕ ನಂಬಿಕೆಯಿಂದಷ್ಟೇ ಅಲ್ಲ. ರಾಜಕೀಯ ಇಚ್ಛಾಶಕ್ತಿಯ ಪ್ರಚಾರ, ಸಾರ್ವಜನಿಕ ಆಂದೋಲನಗಳು, ನ್ಯಾಯಾಲಯದ ವಿಚಾರಣೆಗಳು, ಸರ್ಕಾರದ ಕ್ರಿಯಾಶೀಲತೆ ಹಾಗೂ ತೀವ್ರವಾದ ರಾಷ್ಟ್ರೀಯ ಸಂವಾದದ ಫಲ, ಇವೆಲ್ಲವೂ ಈ ದೇಗುಲ ನಿರ್ಮಾಣದ ಪ್ರಯತ್ನವನ್ನು ಸಾಕಾರಗೊಳಿಸಿವೆ.

ರಾಮಮಂದಿರ ನಿರ್ಮಾಣದ ಪಯಣವನ್ನು ಕೆಲವರು ಶ್ಲಾಘಿಸಬಹುದು, ಮತ್ತೆ ಕೆಲವರು ಟೀಕಿಸಬಹುದು. ಆದರೆ, ಅದರ ರಾಜಕೀಯ ಸ್ವರೂಪವನ್ನು ಉಪೇಕ್ಷಿಸುವುದು ಖಂಡಿತ ಸಾಧ್ಯವಿಲ್ಲ. ಈ ರಾಜಕೀಯ ಪಾತ್ರವು ವಿಶೇಷ ಉತ್ತರದಾಯಿತ್ವವನ್ನು ಹೇರಿದೆ ಎಂದು ಹೇಳಬಹುದು.

ರಾಜಕೀಯ ಮುಖಂಡರು, ಸರ್ಕಾರಿ ಹಾಗೂ ಸಾರ್ವಜನಿಕ ಸಂಸ್ಥೆಗಳು ಧಾರ್ಮಿಕ ಯೋಜನೆಯೊಂದರ ಸಮೀಪವರ್ತಿಗಳಾಗಿ ಗುರ್ತಿಸಿಕೊಂಡಾಗ, ಅವರ ಹೊಣೆಗಾರಿಕೆಯು ತಥಾಕಥಿತ ಸಾಮಾನ್ಯ ಆಡಳಿತದ ಚೌಕಟ್ಟನ್ನು ಸಹಜವಾಗಿಯೇ ಮೀರುತ್ತದೆ. ಭಕ್ತರು ನೀಡಿದ ಪ್ರತಿಯೊಂದು ರೂಪಾಯಿ ದೇಣಿಗೆಯು ಬರೀ ಹಣವಷ್ಟೇ ಆಗಿರದೆ, ಭಕ್ತಿ ಹಾಗೂ ನಂಬಿಕೆಯ ಸಂಕೇತವಾಗಿರುತ್ತದೆ. ಇಂಥ ಸಂದರ್ಭದಲ್ಲಿ, ಎಲ್ಲ ಆಡಳಿತಾತ್ಮಕ ನಿರ್ಣಯಗಳೂ ಸಾರ್ವಜನಿಕ ಮಹತ್ವ ಪಡೆದುಕೊಳ್ಳುತ್ತದೆ. ತಪ್ಪುಗಳು ಸಂಭವಿಸಿದಾಗ, ಅದಕ್ಕೆ ಕಾರಣರಾದ ವ್ಯಕ್ತಿಗಳ ಕುರಿತು ಮಾತ್ರ ಪ್ರಶ್ನೆಗಳು ಮೂಡುವುದಿಲ್ಲ, ಸಾರ್ವಜನಿಕ ನಂಬಿಕೆಯನ್ನು ರಕ್ಷಿಸಲು ರೂಪಿಸಲಾದ ಇಡೀ ವ್ಯವಸ್ಥೆಯ ಪ್ರಾಮಾಣಿಕತೆ ಕುರಿತು ಶಂಕೆ ಉಂಟಾಗುತ್ತದೆ. ಈ ಹಿನ್ನೆಲೆಯಲ್ಲಿ, ಅಯೋಧ್ಯೆಯಲ್ಲಿನ ಕಾಣಿಕೆ ಕಳವು ವಿದ್ಯಮಾನವು ಹಣದ ಸಂಗತಿಯನ್ನೂ ಮೀರಿದ್ದು ಯಾಕೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬಹುದು.

ದಶಕಗಳ ಕಾಲ ಕೋಟ್ಯಂತರ ಜನರು ಅಯೋಧ್ಯೆ ಚಳವಳಿಗೆ ಹಣದ ಕಾಣಿಕೆಯನ್ನಷ್ಟೇ ನೀಡಿರಲಿಲ್ಲ, ಭಾವನಾತ್ಮಕ ಬೆಂಬಲವನ್ನೂ ನೀಡಿದ್ದರು. ತ್ಯಾಗ, ದೃಢ ನಂಬಿಕೆಯನ್ನು ಚಳವಳಿಗೆ ಧಾರೆ ಎರೆದಿದ್ದರು. ಗ್ರಾಮೀಣ ಪ್ರದೇಶಗಳಲ್ಲೂ ಹಲವರು ತಂತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಕಾಣಿಕೆ ನೀಡಿದ್ದಾರೆ, ದೇಣಿಗೆ ಸಂಗ್ರಹಿಸಿದ್ದಾರೆ. ಇನ್ನು ಕೆಲವರು ಪ್ರಚಾರ ಸಭೆಗಳಲ್ಲಿ ಭಾಗವಹಿಸಲು ದೂರದೂರುಗಳಿಗೆ ಪಯಣಿಸಿ, ತೀರ್ಥಯಾತ್ರಿಗಳಲ್ಲಿ, ಸಾರ್ವಜನಿಕರಲ್ಲಿ ತಮ್ಮ ಪ್ರಯತ್ನದ ಉದ್ದೇಶವನ್ನು ಪ್ರಚಾರ ಮಾಡಿದ್ದಾರೆ. ಹೀಗಾಗಿಯೇ ಅಯೋಧ್ಯೆ ದೇವಸ್ಥಾನವು ಲೆಕ್ಕದ ಪುಸ್ತಕಗಳಿಗೂ ಮಿಗಿಲಾದ ಸಂಚಿತ ನೈತಿಕ ಹೂಡಿಕೆಯೊಂದರಿಂದ ರೂಪಿತವಾಗಿದೆ. ದೇಣಿಗೆ ನಿರ್ವಹಣೆಯ ಕುರಿತು ಮೂಡಿರುವ ಪ್ರಶ್ನೆಗಳು, ಹಣಕಾಸು ನಿರ್ವಹಣೆ ಸರಿಯಿಲ್ಲ ಎನ್ನುವುದನ್ನೂ ಮೀರಿದ್ದಾಗಿದೆ ಹಾಗೂ ತಲೆಮಾರುಗಳಿಂದ ಕಟ್ಟಿದ ಸಾರ್ವಜನಿಕ ನಂಬಿಕೆಯ ಅಣೆಕಟ್ಟೆಯಲ್ಲಿ ಬಿರುಕು ಮೂಡಿದೆಯಲ್ಲ ಎಂಬ ಆತಂಕವನ್ನು ಒಳಗೊಂಡಿದೆ.

ದುರುಪಯೋಗವಾದ ಹಣದ ಮೊತ್ತವೆಷ್ಟು ಎನ್ನುವುದು ಸಮಸ್ಯೆಯ ಕೇಂದ್ರ ಅಲ್ಲ. ಸರ್ಕಾರಿ ಇಲಾಖೆಗಳು, ಕಾರ್ಪೊರೇಷನ್‌ಗಳು, ದತ್ತಿ ಸಂಸ್ಥೆಗಳು ಹಾಗೂ ಧಾರ್ಮಿಕ ಕೇಂದ್ರಗಳಲ್ಲಿ ಹಣಕಾಸು ಅವ್ಯವಹಾರಗಳು ಏಕಪ್ರಕಾರವಾಗಿ ನಡೆಯುತ್ತವೆ. ಮನುಷ್ಯನ ದೌರ್ಬಲ್ಯವನ್ನು ತಡೆಯಲು ದೇವಸ್ಥಾನಗಳಿಗೂ ಸಾಧ್ಯವಿಲ್ಲ. ಧನ, ಪ್ರಭಾವ ಹಾಗೂ ಪ್ರತಿಷ್ಠೆಗಳು ಜಮೆಯಾದಷ್ಟೂ ಉದ್ರೇಕಭಾವ ಉಲ್ಬಣಿಸುತ್ತದೆ.

ಈ ವಿದ್ಯಮಾನಕ್ಕೆ ಸಂಬಂಧಿಸಿದಂತೆ ನಿಜವಾದ ಪರೀಕ್ಷೆ ಇರುವುದು ಬೇರೆಡೆಯಲ್ಲಿ. ಅಕ್ರಮಗಳನ್ನು ಪತ್ತೆ ಹಚ್ಚುವ ಮೇಲ್ವಿಚಾರಣೆ ವ್ಯವಸ್ಥೆಯು ಸಾಕಷ್ಟು ಶಕ್ತಿಯುತವಾಗಿದೆಯೆ? ತನಿಖೆಗಳನ್ನು ಪಾರದರ್ಶಕವಾಗಿ ನಡೆಸಲಾಗುತ್ತಿದೆಯೆ? ತಪ್ಪಿತಸ್ಥರನ್ನು ಸಂಭವಿಸಿದ ಲೋಪಗಳಿಗೆ ಹೊಣೆಗಾರರನ್ನಾಗಿ ಮಾಡಲಾಗುತ್ತದೆಯೆ? ತಮ್ಮ ದೇಣಿಗೆ ಸುರಕ್ಷಿತವಾಗಿದೆ ಎಂಬ ಖಾತರಿಯನ್ನು ಭಕ್ತರಿಗೆ ನೀಡುವುದು ಸಾಧ್ಯವೆ?

ಭಾರತದ ಭೂಸೇನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ನಾನು ಕಲಿತ ಪಾಠ ಹೀಗಿದೆ. ಸಂಸ್ಥೆಯೊಂದರ ದಕ್ಷತೆಯನ್ನು ಅಲ್ಲಿ ಸಂಭವಿಸುವ ಪ್ರಮಾದಗಳಿಂದ ಅಳೆಯದೆ, ಬಿಕ್ಕಟ್ಟು ಎದುರಾದಾಗ ಅದನ್ನು ಬಗೆಹರಿಸಲು ಎಷ್ಟು ತ್ವರಿತವಾಗಿ ಕ್ರಮ ತೆಗೆದುಕೊಳ್ಳಲಾಗುತ್ತದೆ ಎನ್ನುವುದರ ಮೇಲೆ ಗುಣಮಟ್ಟ ನಿರ್ಣಯಿಸಲಾಗುತ್ತದೆ. ಪರಿಪೂರ್ಣತೆ ಅಸಾಧ್ಯವೇ ಇರಬಹುದು. ಎಚ್ಚರಿಕೆ ಮತ್ತು ಜಾಗರೂಕತೆ ಸಾಧ್ಯವಿದೆ.

ದೇಶದ ಯಾವುದೇ ದೊಡ್ಡ ಸಾರ್ವಜನಿಕ ಟ್ರಸ್ಟ್‌ಗೆ ಇರುವಂತಹ ಸಮರ್ಥ ಆಡಳಿತ ವ್ಯವಸ್ಥೆ ಅಯೋಧ್ಯೆಯ ರಾಮಮಂದಿರಕ್ಕೂ ಅಗತ್ಯ; ಆಡಳಿತದ ಕಠಿಣ ಮಾನದಂಡಗಳೂ ಅನ್ವಯಗೊಳ್ಳಬೇಕು. ಆರೋಪಗಳು ಎದುರಾದಾಗ, ಪಾರದರ್ಶಕ ಲೆಕ್ಕಪತ್ರ ವ್ಯವಸ್ಥೆ, ಸ್ಪಷ್ಟ ಹೊಣೆಗಾರಿಕೆ ಮತ್ತು ವಿಳಂಬವಿಲ್ಲದ ತನಿಖೆಯನ್ನು ಅನುಮಾನವೆಂದು ಭಾವಿಸಿ ಉಪೇಕ್ಷಿಸಬಾರದು. ಆರೋಪಗಳು ಎದುರಾದಾಗ ನಡೆಸುವ ತನಿಖೆ ಕೋಟ್ಯಂತರ ಭಕ್ತರ ನಂಬಿಕೆಗೆ ತೋರಿಸುವ ಗೌರವದ ಅಭಿವ್ಯಕ್ತಿ ಆಗಿರುತ್ತದೆ.

ಮಂದಿರದಲ್ಲಿ ನಗ–ನಗದು ದುರುಪಯೋಗದ ಆರೋಪಗಳ ಕುರಿತು ಸಮರ್ಪಕ ತನಿಖೆ ನಡೆಸಬೇಕೆಂಬ ವಾದವನ್ನು ದೇವಸ್ಥಾನದ ಮೇಲಿನ ದಾಳಿ ಎಂದು ಕೆಲವರು ಹೇಳಬಹುದು. ಆದರೆ, ನಾನು ಇದನ್ನು ಬೇರೆ ರೀತಿಯಲ್ಲಿ ನೋಡುತ್ತೇನೆ. ಪವಿತ್ರವಾದುದು ಬೇರೆ, ಪವಿತ್ರವಾದುದರ ವ್ಯವಸ್ಥೆ ನೋಡಿಕೊಳ್ಳುವವರು ಬೇರೆ. ರಾಮದೇವರಿಗೆ ಮನುಷ್ಯರಿಂದ ರಕ್ಷಣೆಯೇನೂ ಬೇಕಿಲ್ಲ. ಆದರೆ, ಅವನ ಹೆಸರಿನಲ್ಲಿ ಸೃಷ್ಟಿಸಿದ ಸಂಸ್ಥೆಗಳಿಗೆ ಪ್ರಾಮಾಣಿಕ ವ್ಯವಸ್ಥೆಯ ಅಗತ್ಯವಿದೆ.

ನಿರ್ಭೀತಿಯಿಂದ ಪ್ರಶ್ನಿಸುವ ಅವಕಾಶ ಇದ್ದಾಗಷ್ಟೇ ಪ್ರಜಾಪ್ರಭುತ್ವದ ನಿರ್ವಹಣೆ ಶ್ರೇಷ್ಠ ರೀತಿಯಲ್ಲಿ ಆಗುತ್ತದೆ. ಪ್ರಶ್ನೆ ಕೇಳುವವರನ್ನೇ ವಿಧ್ವಂಸಕರು ಎಂದುಬಿಟ್ಟರೆ ಕಷ್ಟ. ಉತ್ತರದಾಯಿತ್ವ ಬೇಕೆನ್ನುವುದು ನಂಬಿಕೆ ಧ್ವಂಸ ಮಾಡಿದಂತೆ ಅಲ್ಲ. ಸರಿಯಾಗಿ ಅರ್ಥ ಮಾಡಿಕೊಂಡರೆ, ನಂಬಿಕೆ ರಕ್ಷಿಸುವ ಮಾರ್ಗವಿದು.

ಅಸಂಖ್ಯ ಭಕ್ತರು ಅಯೋಧ್ಯೆಯನ್ನು ದೀರ್ಘಾವಧಿ ನಾಗರಿಕತೆಯ ಕನಸು ಎಂದೇ ಭಾವಿಸಿದ್ದಾರೆ. ಉಳಿದವರು ರಾಜಕೀಯ ಹೋರಾಟದಿಂದ ಭಾರತದ ಸಾರ್ವಜನಿಕ ಬದುಕಿನಲ್ಲಿ ಬದಲಾವಣೆ ತಂದ ವಿದ್ಯಮಾನ ಎಂದುಕೊಂಡಿದ್ದಾರೆ. ಮತ್ತೆ ಕೆಲವರು, ದೇಶದ ಜಾತ್ಯತೀತ ವ್ಯವಸ್ಥೆ ಹಾಗೂ ಬಹುತ್ವದ ಮೇಲೆ ಇದರ ಪರಿಣಾಮಗಳೇನು ಎಂದು ವಿಶಾಲ ದೃಷ್ಟಿಕೋನದಲ್ಲಿ ವಿಶ್ಲೇಷಿಸುತ್ತಿದ್ದಾರೆ.

'ಕಣ್ತೆರೆದು ನೋಡು, ನಿನ್ನ ದೇವರು ನಿನ್ನ ಮುಂದಿಲ್ಲ/ ಗಟ್ಟಿನೆಲವನ್ನು ಹದಗೊಳಿಸುವ ರೈತ ಇರುವೆಡೆ ಅವನಿದ್ದಾನೆ' ಎಂದು ರವೀಂದ್ರನಾಥ ಟ್ಯಾಗೋರ್ ಅವರು ಬರೆದ ಸಾಲುಗಳು ಕಾಡುತ್ತವೆ. ಎಚ್ಚರ ಎನ್ನುವುದು ಪೂಜಿಸುವವನನ್ನು ತಿರಸ್ಕರಿಸುವ ನಡೆಯಲ್ಲ, ಅವಮಾನ ಮೀರಲು ಅಗತ್ಯವಿರುವ ಕರೆ. ಯಾವುದೇ ಸಂಸ್ಥೆಯ ಗುಣಮಟ್ಟವು ಅದರ ಅದ್ಭುತ ರಚನೆಯಿಂದ ಮಾತ್ರ ನಿರ್ಧರಿತವಾಗುವುದಿಲ್ಲ; ಅಳವಡಿಸಿಕೊಳ್ಳುವ ಮೌಲ್ಯಗಳಿಂದ ನಿರ್ಧರಿತವಾಗುತ್ತದೆ. ಇದು ಅಯೋಧ್ಯೆಯ ರಾಮಮಂದಿರಕ್ಕೂ ಅನ್ವಯವಾಗುವ ಸಂಗತಿ.

ಅಯೋಧ್ಯೆಯ ರಾಮಮಂದಿರವು ಭಾರತದ ಇತರ ಪ್ರಮುಖ ದೇವಾಲಯಗಳಿಗಿಂತ ರಾಜಕೀಯದೊಂದಿಗೆ ಹೆಚ್ಚು ನಿಕಟವಾಗಿ ಹೆಣೆದುಕೊಂಡಿದೆ. ಈ ಸತ್ಯವು ಅಯೋಧ್ಯೆಯ ದೇವಾಲಯದ ಆಡಳಿತಕ್ಕೆ ವಿಶೇಷ ಹೊಣೆಗಾರಿಕೆಯನ್ನೂ ನೀಡುತ್ತದೆ.

ಅಯೋಧ್ಯೆಯ ಭವ್ಯ ಮಂದಿರ, ಅಲ್ಲಿಗೆ ಭೇಟಿ ನೀಡುವ ದೊಡ್ಡ ಸಂಖ್ಯೆಯ ಭಕ್ತರಿಂದ ಅದರ ಯಶಸ್ಸನ್ನು ಅಳೆಯಕೂಡದು. ಅದರ ರಚನೆಯ ಹಿಂದೆ ಅಡಕವಾಗಿರುವ ಸತ್ಯ, ಕರ್ತವ್ಯಪರತೆ, ಋಜುತ್ವ, ಪಾರದರ್ಶಕತೆ ಹಾಗೂ ಸಮಗ್ರತೆ ಎನ್ನುವ ಮೌಲ್ಯಗಳು ಪ್ರತಿದಿನದ ಆಡಳಿತದಲ್ಲಿ ಬಿಂಬಿತವಾಗಬೇಕು. ರಾಮನಿಗೆ ಸಲ್ಲಿಸಬಹುದಾದ ನಿಜವಾದ ಗೌರವ ಅದೇ ಆಗಿದೆ.

ವಾಚಕರ ವಾಣಿ

ಮಳೆ ಕೊರತೆಗೆ ಮೋಡ ಬಿತ್ತನೆ ಪರಿಹಾರ

ರಾಜ್ಯದಲ್ಲಿ ಮಳೆ ಕೊರತೆಯಿಂದಾಗಿ ರೈತರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಕೆಲವೆಡೆ ಬಿತ್ತನೆಯಾಗಿರುವ ಬೆಳೆ ಒಣಗುವ ಆತಂಕ ತಲೆದೋರಿದೆ. ಕುಡಿಯುವ ನೀರಿನ ಅಭಾವ ಕಾಡುತ್ತಿದೆ. ಜಲಾಶಯಗಳ ನೀರಿನಮಟ್ಟ ಇಳಿಕೆಯಾಗಿರುವುದು ಗ್ರಾಮೀಣ ಜನಜೀವನದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ವೈಜ್ಞಾನಿಕ ಅಧ್ಯಯನ ಮತ್ತು ಅನುಕೂಲಕರ ಹವಾಮಾನ ಪರಿಸ್ಥಿತಿಗಳನ್ನು ಪರಿಗಣಿಸಿ ಮೋಡ ಬಿತ್ತನೆ ಕೈಗೊಳ್ಳಲು ಸರ್ಕಾರ ಪರಿಶೀಲಿಸಬೇಕಿದೆ. ಸೂಕ್ತ ಸಂದರ್ಭಗಳಲ್ಲಿ ಕೈಗೊಳ್ಳುವ ಈ ಕ್ರಮವು ಮಳೆ ಸಾಧ್ಯತೆ ಹೆಚ್ಚಿಸಲು ಸಹಾಯಕವಾಗಬಹುದು ಎಂದು ಹಲವು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ರೈತರ ಹಿತದೃಷ್ಟಿಯಿಂದ ಮೋಡ ಬಿತ್ತನೆ ಅನಿವಾರ್ಯವಾಗಿದೆ. ಜೊತೆಗೆ, ಬರಪೀಡಿತ ಪ್ರದೇಶಗಳಲ್ಲಿ ತುರ್ತು ಪರಿಹಾರ ಯೋಜನೆಗಳನ್ನು ಜಾರಿಗೊಳಿಸಬೇಕಿದೆ. ರೈತರು ಉಳಿದರಷ್ಟೆ ದೇಶ ಉಳಿಯುತ್ತದೆ; ಅವರ ಬದುಕು ಹಸನಾದರೆ ರಾಜ್ಯದ ಭವಿಷ್ಯವೂ ಗಟ್ಟಿಯಾಗುತ್ತದೆ.

ಪ್ರಶಾಂತ ಎಂ. ಕುನ್ನೂರ, ಯಡ್ರಾಮಿ

ಗ್ರಂಥಾಲಯ ಇಲಾಖೆ ಬಗ್ಗೆ ಉಪೇಕ್ಷೆ ಬೇಡ

ಸಚಿವ ಸಂಪುಟದ ವಿಸ್ತರಣೆ ಶೀಘ್ರವೇ ನಡೆಯಲಿದೆ ಎನ್ನಲಾಗಿದೆ. ಪ್ರಾಥಮಿಕ ಶಿಕ್ಷಣದ ಜೊತೆಗೆ ಉಪೇಕ್ಷೆಗೆ ಒಳಗಾಗಿರುವ ಗ್ರಂಥಾಲಯ ಇಲಾಖೆಯ ಬಗ್ಗೆ ಕಳಕಳಿ ಇರುವ ಸಚಿವರನ್ನು ನೇಮಿಸಲು ಮುಖ್ಯಮಂತ್ರಿ ಅವರು ಕ್ರಮವಹಿಸಬೇಕಿದೆ. ಏಕೆಂದರೆ ಪುಸ್ತಕ ಸಂಸ್ಕೃತಿಯಿಂದ ಶಿಕ್ಷಣದ ಮೌಲ್ಯ ವೃದ್ಧಿಸುತ್ತದೆ. ಅದು ಶ್ರೀಮಂತವಾಗಿ ಬೆಳೆದಾಗ ಪ್ರಜಾಪ್ರಭುತ್ವ ಜೀವಂತವಾಗಿ ಉಳಿಯುತ್ತದೆ. ನಮ್ಮ ಪ್ರಜಾಪ್ರಭುತ್ವವನ್ನು ಬೆಳೆಸಿದವರು ಗಾಂಧಿ, ಅಂಬೇಡ್ಕರ್, ನೆಹರೂ, ಮೌಲಾನ ಅಬ್ದುಲ್ ಕಲಾಂ ಅಜಾದ್. ಅವರು ಪುಸ್ತಕಗಳ ಮೂಲಕ ಬೆಳೆದವರು. ಸದಾ ಸಂವಿಧಾನದ ಬಗ್ಗೆ ಮಾತನಾಡುವವರು ಪುಸ್ತಕಗಳ ಮೂಲಕ ತಮ್ಮ ಮನೋಲೋಕವನ್ನು ಬೆಳೆಸಿಕೊಳ್ಳಬೇಕು. ಸಚಿವರು ಮತ್ತು ಶಾಸಕರು ಕೂಡ ಗ್ರಂಥಾಲಯಗಳ ಬಗ್ಗೆ ಸ್ವಲ್ಪಮಟ್ಟಿಗಾದರೂ ಕಳಕಳಿ ತೋರಿಸುವಂತಾಗಬೇಕು. ಪ್ರಾಥಮಿಕ ಶಿಕ್ಷಣದ ಜವಾಬ್ದಾರಿ ಹೊರುವ ಸಚಿವರು ತಮ್ಮ ಜೊತೆಗಿರುವ ಗ್ರಂಥಾಲಯ ಇಲಾಖೆಯನ್ನು ಉಪೇಕ್ಷಿಸಬಾರದು.

ಶೂದ್ರ ಶ್ರೀನಿವಾಸ್, ಬೆಂಗಳೂರು

ಗುಟ್ಕಾ ಅಮಲು: ಆರೋಗ್ಯಕ್ಕೆ ದಿಗಿಲು

ಗುಟ್ಕಾ ಉಗಿಯಲು ಬಸ್‌ನ ಕಿಟಕಿಯಿಂದ ತಲೆ ಹೊರಹಾಕಿದ ಯುವಕನ ರುಂಡವೇ ಕತ್ತರಿಸಿ ಹೋಗಿರುವ ಘಟನೆ ದಿಗ್ಭ್ರಮೆ ಮೂಡಿಸುವಂತಹದ್ದು. ಬಸ್, ರೈಲು, ಟೆಂಪೊ, ಬೈಕ್‌ನಲ್ಲಿ ಸಂಚರಿಸುವಾಗ ಕೆಲವು ಪ್ರಯಾಣಿಕರು ಗುಟ್ಕಾ ಚಪ್ಪರಿಸುತ್ತಲೇ ಎಲ್ಲೆಂದರಲ್ಲಿ ಉಗುಳುತ್ತಾರೆ. ಇದರಿಂದ ವಾಹನದ ಕಿಟಕಿಗಳು, ರಸ್ತೆಗಳು, ಸಾರ್ವಜನಿಕ ಸ್ಥಳಗಳು ಮಲಿನಕಾರಕವಾಗುತ್ತಿವೆ. ಮತ್ತೊಂದೆಡೆ ಗುಟ್ಕಾ ಮತ್ತು ಪಾನ್ ಮಸಾಲಾಗಳಲ್ಲಿ ಅಮಲು ಪದಾರ್ಥ ಬೆರೆಸುತ್ತಿರುವ ಆರೋಪ ಇದೆ. ಈ ಬಗ್ಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ಆತಂಕ ವ್ಯಕ್ತಪಡಿಸಿದ್ದಾರೆ. ಶಾಲಾಕಾಲೇಜಿನ ವಿದ್ಯಾರ್ಥಿಗಳು ಗುಟ್ಕಾ ವ್ಯಸನಿಗಳಾಗುತ್ತಿದ್ದಾರೆ. ಹದಿಹರೆಯದಲ್ಲಿಯೇ ಅವರ ಆರೋಗ್ಯ ಹದಗೆಡುತ್ತಿದೆ. ಆರೋಗ್ಯಕರ ಸಮಾಜ ನಿರ್ಮಾಣವು ಸರ್ಕಾರದ ಗುರಿಯಾಗಬೇಕಿದೆ. ಹಾಗಾಗಿ, ರಾಜ್ಯದಾದ್ಯಂತ ಗುಟ್ಕಾ ಮತ್ತು ಪಾನ್ ಮಸಾಲಾ ಮಾರಾಟಕ್ಕೆ ನಿಷೇಧ ಹೇರಬೇಕಿದೆ.

ವೀರಪ್ಪ ಹ. ತಾಳದವರ, ಯಾವಗಲ್

ಬರಗಾಲದ ಬೆಳೆ: ಅನ್ನದಾತರಿಗೆ ವರದಾನ

ಪ್ರಸ್ತುತ ಎಲ್ ನಿನೊ ಪರಿಣಾಮದಿಂದಾಗಿ ಮುಂಗಾರು ಮಳೆ ಪ್ರಮಾಣ ಕಡಿಮೆ ಆಗಿದೆ. ಬರದ ಛಾಯೆ ಆವರಿಸುವ ಮುನ್ಸೂಚನೆ ಇದೆ. ಹಾಗಾಗಿ, ಕಡಿಮೆ ನೀರಿನಲ್ಲಿ ಮತ್ತು ಒಣಹವೆಯಲ್ಲಿ ಉಳಿಯುವ ಸಾಂಪ್ರದಾಯಿಕ ಬೆಳೆಗಳನ್ನು ಬೆಳೆಯಲು ರೈತರಿಗೆ ಸರ್ಕಾರ ಉತ್ತೇಜನ ನೀಡಬೇಕಿದೆ. ರೈತರು ಕೂಡ ಸಜ್ಜೆ, ರಾಗಿ, ಅಲಸಂದೆ, ಜೋಳ, ಹುರುಳಿ ಹಾಗೂ ಸಿರಿಧಾನ್ಯಗಳನ್ನು ಬೆಳೆಯಲು ಮುಂದಾಗಬೇಕು. ಈ ಬೆಳೆಗಳು ಕಡಿಮೆ ನೀರು ಬೇಡುತ್ತವೆ. ಇದರಿಂದ ಆಹಾರ ಸಮಸ್ಯೆಯನ್ನು ತಗ್ಗಿಸಲು ನೆರವಾಗಲಿದೆ.

ರಾಸುಮ ಭಟ್, ಚಿಕ್ಕಮಗಳೂರು

ಬೀಳ್ಕೊಡುಗೆ ಸಂಭ್ರಮ: ಮಾಸದ ನೆನಪು

ದಶಕಗಳ ಹಿಂದೆ ಸರ್ಕಾರಿ ಶಾಲಾಕಾಲೇಜುಗಳಲ್ಲಿ ವರ್ಗಗೊಂಡ ಶಿಕ್ಷಕರ ಬೀಳ್ಕೊಡುಗೆ ಸಮಾರಂಭ ಜರುಗಿದರೆ ಊರಿನ ಹಿರಿಯರೆಲ್ಲ ಶಾಲೆಗೆ ಬರುತ್ತಿದ್ದರು. ಶಿಕ್ಷಕರಿಗೆ ನಮ್ಮೂರಿನ ಲ್ಲಿಯೇ ಇನ್ನೂ ಸ್ವಲ್ಪ ವರ್ಷ ಸೇವೆ ಸಲ್ಲಿಸಿ ಎಂದು ಕೋರುತ್ತಿದ್ದರು. ಊರಿಗೆ ಊರೇ ಬೀಳ್ಕೊಡುಗೆ ಸಮಾರಂಭದಲಿ ಭಾಗವಹಿಸಿ, ಮಕ್ಕಳ ಜೊತೆಗೆ ಶಿಕ್ಷಕರು ಹನಿಗಣ್ಣಾಗುತ್ತಿದ್ದ ಪ್ರಸಂಗಗಳು ನಡೆಯುತ್ತಿದ್ದವು. ಈಗಲೂ ಅಲ್ಲಲ್ಲಿ ಗುರು ವಂದನೆ ಕಾರ್ಯಕ್ರಮಗಳು ನಡೆಯುತ್ತಿವೆ. ಆದರೆ, ಇತ್ತೀಚೆಗೆ ಅತಿಯಾದ ಖಾಸಗೀಕರಣ ಮತ್ತು ಶಿಕ್ಷಣದ ವಾಣಿಜ್ಯೀಕರಣ ಇದೆಲ್ಲವನ್ನೂ ಮರೆಮಾಚಿದೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕಡಿಮೆಯಾಗುತ್ತಿದೆ. ಇನ್ನು ಮುಂದೆ ಅಂತಹ ಸನ್ನಿವೇಶಗಳು ಸೃಷ್ಟಿಯಾಗುವುದು ಕನಸಿನ ಮಾತು.

ಚೇತನ್ ಕುಮಾರ್, ಮೈಸೂರು

ಗೃಹಜ್ಯೋತಿಗೆ ಜಾತಿ ಪ್ರಮಾಣಪತ್ರ ಏಕೆ?

ರಾಜ್ಯ ಸರ್ಕಾರವು ಗೃಹಜ್ಯೋತಿ ಸೌಲಭ್ಯ ಮುಂದುವರಿಸಲು ಹಾಗೂ ಅರ್ಹ ಫಲಾನುಭವಿಗಳನ್ನು ಗುರ್ತಿಸಲು ಕೆಲವೊಂದು ದಾಖಲೆಗಳನ್ನು ಕೇಳುತ್ತಿದೆ. ಈ ಪಟ್ಟಿಯಲ್ಲಿ ಜಾತಿ ಪ್ರಮಾಣಪತ್ರವೂ ಸೇರಿದೆ. ಈ ಯೋಜನೆಗೂ ಮೀಸಲಾತಿ ಅನ್ವಯಿಸುತ್ತದೆಯೆ? ಎಲ್ಲರಿಗೂ ಈ ಸೌಲಭ್ಯ ನೀಡಲಾಗುತ್ತಿದೆ. ಹೀಗಿದ್ದರೂ ಜಾತಿ ಪ್ರಮಾಣಪತ್ರದ ಅವಶ್ಯಕತೆಯಾದರೂ ಏನಿದೆ? ಅಲ್ಲದೆ, ಇಷ್ಟೊಂದು ಅವಸರದಲ್ಲಿ ಪ್ರಮಾಣಪತ್ರ ಮಾಡಿಸಲು ಸಾಧ್ಯವೇ? ಇದಕ್ಕೆ ವಿನಾಯಿತಿ ನೀಡಬೇಕಿದೆ.

ಎಸ್.ಎಂ. ಚಂದ್ರಮೌಳಿ ಸ್ವಾಮಿ, ಬೆಂಗಳೂರು

ಚುರುಮುರಿ

ವಿಚ್ಛೇದನ, ಅಚ್ಛೇದಿನ!

• ತುರುವೇಕೆರೆ ಪ್ರಸಾದ್

'ಏನ್ರೀ, ಏಕಾಏಕಿ ನನ್ ಅಕೌಂಟ್‌ಗೆ 30 ಸಾವಿರ ರೂಪಾಯಿ ಹಾಕಿದೀರಿ. ಇಷ್ಟು ಒಳ್ಳೇ ಬುದ್ಧಿ ಎಲ್ಲಿಂದ ಬಂತ್ರೀ?' ಪದ್ದಮ್ಮ ಅಚ್ಚರಿಯಲ್ಲಿ ಕೇಳುದ್ರು.

'ನೀನು ಪಾಪ ಎಷ್ಟೊಂದು ಮನೆ ಕೆಲಸ ಮಾಡ್ತೀಯ! ಅದಕ್ಕೊಂದು ಬೆಲೆ ಅಂತ ಇರಬೇಕಲ್ವಾ?' ಎಂದ ಪರ್ಮೇಶಿ. ಪದ್ದಮ್ಮನವರಿಗೆ 7.8 ಕಂಪನದ ಇನ್ನೊಂದು ಶಾಕ್ ಆಯ್ತು. ಅವನು ಕೈಲಿ ಹಿಡಿದಿದ್ದ ಪೇಪರ್‌ನಲ್ಲಿ 'ಆದಾಯ ಹೆಚ್ಚಿರುವ ಪತ್ನಿಗೆ ಪರಿಹಾರ ಇಲ್ಲ' ಸುದ್ದಿ ಕಣ್ಣಿಗೆ ಬಿತ್ತು.

'ಹುಂ! ನಿಮ್ ಯೋಗ್ಯತೆ ನಂಗ್ ಗೊತ್ತಿಲ್ವಾ? ನಿಮಗಿಂತ ನನ್ ಇನ್‌ಕಂ ಜಾಸ್ತಿ ಅಂತ ಪ್ರೂವ್ ಮಾಡಿ ನಂಗೆ ಆಸ್ತಿಗೆ ನಾಮ ಹಾಕ್ಬೇಕು ಅಂತ ಯೋಚ್ನೆ ಮಾಡ್ತಿದೀರಲ್ವಾ?'

'ಮಾತೆತ್ತುದ್ರೆ ಡಿವೋರ್ಸ್ ಬಿಸಾಕ್ತೀನಿ ಅಂತ ಹೆದರುಸ್ತೀಯ! ಗಂಡಂದಿರಿಗೂ ಬಂದಿದೆ ಅಚ್ಛೇದಿನ! ಖಾಲಿ ವಿಚ್ಛೇದನ, ನೋ ಪರಿಹಾರಧನ. ಹೋದ್ರೂ ಹೆಂಡ್ತಿ, ಉಳಿಯುತ್ತೆ ಆಸ್ತಿ, ಅದೇ ಸಮಾಧಾನ'.

'ತಿಂಗಳಿಗೆ 30 ಸಾವಿರ ಕೊಟ್ರೆ ನಿಮಗಿಂತ ಆದಾಯ ಜಾಸ್ತಿ ಆಗುತ್ತೆ ಅಂತ ಹೇಗ್ರೀ ಪ್ರೂವ್ ಮಾಡ್ತೀರಿ?'

'ಯಾಕ್ ಮಾಡಕ್ಕಾಗಲ್ಲ? ಹಪ್ಪಳ ಸಂಡಿಗೆ ಆದಾಯ, ನಿಮ್ಮಮ್ಮನ್ನ ಹೆದರಿಸಿ ಕಿತ್ಕೊಳ್ಳೋ ದುಡ್ಡು, ನಿಮ್ ಕ್ಲಬ್ಬಿನ ಚೀಟಿ ವ್ಯವಹಾರದ ದುಡ್ಡು, ಇವನ್ನೆಲ್ಲಾ ಲೆಕ್ಕ ಹಾಕಿ ಪ್ರೂವ್ ಮಾಡ್ತೀನಿ' ಎಂದು ಹಟದಿಂದ ಹೇಳಿದ ಪರ್ಮೇಶಿ.

'ಇದೆಲ್ಲಾ ಸೇರುದ್ರೂ ನಿಮ್ ಆದಾಯನ ಮೀರಲ್ಲ, ಆಸ್ತಿ ಬಿಚ್ಚಲೇಬೇಕು' ನಕ್ಕರು ಪದ್ದಮ್ಮ.

'ಯಾಕ್ ಮೀರಲ್ಲ? ನನ್ ಜೇಬಿಂದ ಹೊಡೆಯೋ ದುಡ್ಡು ಯಾವ ಲೆಕ್ಕ?'

'ಅದು ರಾಮನ ಲೆಕ್ಕ ಅಲ್ಲ, ಕೃಷ್ಣನ ಲೆಕ್ಕ'.

'ರಾಮನ್ ಹುಂಡಿ ದೋಚಿದ್ ಮೇಲೆ ರಾಮನ ಲೆಕ್ಕ, ಕೃಷ್ಣನ ಲೆಕ್ಕ ಎಲ್ಲಾ ಒಂದೇ! ಹೆಂಡತೀರು ಗಂಡನ ಜೇಬಿಂದ ದುಡ್ಡು ಎತ್ತುತಾರೆ ಅನ್ನೋದನ್ನ ಯಾವ ಸಾಕ್ಷಿನೂ ಇಲ್ದೆ ಮ್ಯಾಜಿಸ್ಟ್ರೇಟ್ರು ನಂಬ್ತಾರೆ ಗೊತ್ತಾ?' ಎಂದು ಪರ್ಮೇಶಿ ಗಹಿಗಹಿಸಿದ.

ಪದ್ದಮ್ಮ ಕಣ್‌ಕಣ್ ಬಿಟ್ಟರು!

ಸಂಗತ

ಬೀದಿಬದಿ ವ್ಯಾಪಾರ: ಅನುಕಂಪ ಅಗತ್ಯ

ಪಾದಚಾರಿ ರಸ್ತೆಗಳ ಅಡೆತಡೆ ನಿವಾರಣೆಗೊಳ್ಳಲಿ, ಮಾನವೀಯತೆ ತೆರವುಗೊಳ್ಳದೆ ಇರಲಿ. ಬೀದಿಬದಿ ವ್ಯಾಪಾರಿಗಳ ರಕ್ಷಣೆ–ಪುನರ್ವಸತಿ ಆಡಳಿತದ ಆದ್ಯತೆಯಾಗಲಿ.

• ದಾಸನೂರು ಕೂಸಣ್ಣ

ಪಾದಚಾರಿ ರಸ್ತೆಗಳಲ್ಲಿನ ಅಡಚಣೆಗಳನ್ನು ತೆರವುಗೊಳಿಸುವ ಉದ್ದೇಶದಿಂದ ಬೆಂಗಳೂರು ಮಹಾನಗರದಲ್ಲಿ ಬೀದಿಬದಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಅವರ ತವಕ ತಲ್ಲಣಗಳು ಮತ್ತೆ ಮುನ್ನೆಲೆಗೆ ಬಂದಿವೆ.

ಬೀದಿಬದಿಯ ವ್ಯಾಪಾರ ಬೆಂಗಳೂರಿಗೆ ಸೀಮಿತವಾದುದಲ್ಲ; ಅದು ವಿಶ್ವದಾದ್ಯಂತ ನಡೆಯುತ್ತಿದೆ. ಈ ವ್ಯಾಪಾರಿಗಳು ಅನೌಪಚಾರಿಕ ಆರ್ಥಿಕತೆಯ ಪ್ರಮುಖ ಭಾಗೀದಾರರಾಗಿದ್ದರೂ, ಅವರನ್ನು ಹತ್ತಾರು ಸಮಸ್ಯೆಗಳು ಬಾಧಿಸುತ್ತಿವೆ. ಆ ಸಮಸ್ಯೆಗಳಲ್ಲಿ ಮುಖ್ಯವಾದವು: ಏಕಾಏಕಿ ಸ್ಥಳಾಂತರದ ಆತಂಕ, ಸಂಚಾರ ಪೊಲೀಸರ ದಾಳಿ, ಮೂಲಸೌಕರ್ಯದ ಕೊರತೆ (ಶೌಚಾಲಯ, ಕುಡಿಯುವ ನೀರು, ವಿದ್ಯುತ್ ಸಂಪರ್ಕವಿಲ್ಲದಿರುವಿಕೆ), ರೌಡಿಗಳ ಭಯ, ಇತ್ಯಾದಿ.

ಅನಿಶ್ಚಿತ ಆರ್ಥಿಕತೆಯ ನಡುವೆ ವ್ಯಾಪಾರ ಮಾಡುವವರು ಅಸಂಘಟಿತ ದುಡಿಮೆಗಾರರು. ಮೀಟರ್ ಬಡ್ಡಿ ದಂಧೆಗೆ ಮೊದಲ ಬಲಿಪಶುಗಳು ಇವರೇ ಎಂದರೆ ತಪ್ಪಾಗದು. ಇವರೆಲ್ಲರ ಕಷ್ಟಕಾರ್ಪಣ್ಯಗಳಿಗೆ ಕಾನೂನಿನ ಚೌಕಟ್ಟಿನಡಿ ನೈತಿಕ ಮತ್ತು ಆಡಳಿತಾತ್ಮಕ ಬೆಂಬಲ ನೀಡಿದವರು ಮಾಜಿ ಪ್ರಧಾನಿ ಮನಮೋಹನ್ ಸಿಂಗ್. ಅವರು ಮಾಹಿತಿ ಹಕ್ಕು ಕಾಯ್ದೆ, ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ ಮತ್ತು ರಾಷ್ಟ್ರೀಯ ಉದ್ಯೋಗ ಖಾತರಿ ಕಾಯ್ದೆಗಳ ಜೊತೆಗೆ ಜಾರಿಗೊಳಿಸಿದ 'ರಾಷ್ಟ್ರೀಯ ಬೀದಿಬದಿ ವ್ಯಾಪಾರಿಗಳ ಕಾಯ್ದೆ–2014' ಬಗ್ಗೆ ಹೆಚ್ಚಿನ ಚರ್ಚೆ ಆಗಲಿಲ್ಲ. ಅಸಂಘಟಿತ ಕಾಯಕ ಜೀವಿಗಳ ಮತ್ತು ಅವರ ಅನೌಪಚಾರಿಕ ಆರ್ಥಿಕತೆಯನ್ನು ವೃದ್ಧಿಸುವ ನಿಟ್ಟಿನಲ್ಲಿ ಈ ಕಾಯ್ದೆಗೆ ವಿಶೇಷವಾದ ಮಹತ್ವ ಇದೆ.

ಕರ್ನಾಟಕದಲ್ಲಿರುವ 316 ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪ್ರಮುಖ ನಗರ ಪಾಲಿಕೆಗಳಲ್ಲಿರುವ ಬೀದಿಬದಿಯ ವ್ಯಾಪಾರಿಗಳ ಸಮಸ್ಯೆಗಳಿಗೆ ಹೋಲಿಸಿದರೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಇರುವವರ ಸಮಸ್ಯೆಗಳು ಹೆಚ್ಚು ಜಟಿಲ ಮತ್ತು ಸಂಕೀರ್ಣ. ಬೆಂಗಳೂರು ನಗರ ಭೌಗೋಳಿಕ ವಾಗಿ ಮತ್ತು ಜನಸಂಖ್ಯಾ ಬೆಳವಣಿಗೆಯಲ್ಲಿ ಹಿಗ್ಗುತ್ತಿದೆ. ಕೃಷಿ ಕೈಗೆಟುಕದಿದ್ದಾಗ ಗ್ರಾಮೀಣರು ನಗರ ಪ್ರದೇಶಗಳಿಗೆ ವಲಸೆ ಬರುತ್ತಾರೆ.

1969ರಲ್ಲಿ ಮೈಕಲ್ ಪಿ. ಥೋಡಾರೊ ಎಂಬ ಅಭಿವೃದ್ಧಿ ಅರ್ಥಶಾಸ್ತ್ರಜ್ಞ ತನ್ನ ಕಾರ್ಮಿಕರ ವಲಸೆ ಸಿದ್ಧಾಂತದಲ್ಲಿ 'ತಳ್ಳು' ಮತ್ತು 'ಎಳೆತ' ಎಂಬ ಅಂಶಗಳನ್ನು ವಿಶ್ಲೇಷಿಸಿದ್ದಾರೆ. ಅವರ ಪ್ರಕಾರ, 'ಕುಶಲರಹಿತ ಶ್ರಮಿಕರು' ನಗರ ಪ್ರದೇಶಗಳಿಗೆ ಹೆಚ್ಚಾಗಿ ವಲಸೆ ಬಂದಾಗ, ಅವರು ಸಾಮಾನ್ಯವಾಗಿ ಹೋಟೆಲ್, ಮನೆಗೆಲಸ, ಸೆಕ್ಯುರಿಟಿ, ತಳ್ಳುವಗಾಡಿ, ಮೂಟೆ ಸಾಗಿಸುವುದು, ತರಕಾರಿ ಮತ್ತು ಹಣ್ಣಿನ ವ್ಯಾಪಾರ, ಇತ್ಯಾದಿ ವೃತ್ತಿಗಳನ್ನು ಅವಲಂಬಿಸುತ್ತಾರೆ. ದೇಶದ ಒಟ್ಟು ಜಿಡಿಪಿಗೆ ಇವರ ಆದಾಯ ಶೇ 45ರಿಂದ 50ರಷ್ಟು ಸಂದಾಯವಾಗುತ್ತಿದೆ. ಇದು ಅಧಿಕ ಶ್ರಮಿಕರನ್ನು ಒಳಗೊಳ್ಳುವ ಮತ್ತು ಜೀವನಾಧಾರಗಳನ್ನು ಒದಗಿಸುವ ವಲಯವಾಗಿದೆ. ನಗರ ಪ್ರದೇಶಗಳಲ್ಲಿ ಅಸಂಘಟಿತ ವಲಯ ಅಧಿಕ ಶ್ರಮಿಕರಿಗೆ ಉದ್ಯೋಗ ನೀಡುತ್ತಿದೆ. ಅದರಲ್ಲಿ ಬೀದಿಬದಿಯ ವ್ಯಾಪಾರಿಗಳೂ ಸೇರಿದ್ದಾರೆ.

ಕೆ.ಆರ್. ಮಾರುಕಟ್ಟೆಯ ಬೀದಿ ವ್ಯಾಪಾರಿಗಳ ಸ್ಥಿತಿಗತಿ ಅಧ್ಯಯನ ಮಾಡಿದರೆ, ಅನೇಕ ಬಗೆಯ ಬದುಕುಗಳು ಎದುರಾಗುತ್ತವೆ. ಇಂದು ವಯೋವೃದ್ಧರಾಗಿರುವ ಅನೇಕ ಹಣ್ಣು–ತರಕಾರಿ ಮಾರಾಟಗಾರರು ಇಲ್ಲಿಯೇ ಹುಟ್ಟಿ, ಯೌವನ ದಾಟಿದವರಾಗಿದ್ದಾರೆ. ಅಂತಹ ಜನರ ಬದುಕು ಇಂದು ಅಯೋಮಯವಾಗಿದೆ. ಸದಾ ಜನಸಂದಣಿಯಿಂದ ಗಿಜಿಗುಡುತ್ತಿದ್ದ ಪ್ರದೇಶದಲ್ಲಿ ಮೌನ ಆವರಿಸಿದೆ. ಸರ್ಕಾರ ಕೈಗೊಂಡಿರುವ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಯಾರಿಗೂ ಆಕ್ಷೇಪವಿಲ್ಲ. ಮಾರುಕಟ್ಟೆಯ ಪ್ರಾಂಗಣದೊಳಗೆ ಸೀಮಿತ ಅಂಗಡಿ ಸನ್ನದು ದಾರರಿಗೆ ಮಾತ್ರ ಮಾರಾಟಕ್ಕೆ ಅವಕಾಶವಿದೆ. ಇನ್ನುಳಿದವರು ಬೀದಿಬದಿಯಲ್ಲಿ ಮಾರಾಟ ಮಾಡಿ ಬದುಕುವವರಾಗಿದ್ದಾರೆ. ಯಾವುದೇ ಪರ್ಯಾಯ ಕ್ರಮಗಳಿಲ್ಲದೆ ಅವರನ್ನು ಒಕ್ಕಲೆಬ್ಬಿಸಿ ರುವುದು ಪ್ರತಿಭಟನೆಗಳಿಗೆ ಕಾರಣವಾಗಿದೆ. ಸದರಿ ಮಾರುಕಟ್ಟೆಯ ಸುತ್ತಮುತ್ತಲ ಬೀದಿಬದಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸಿರುವ ಕಾರಣದಿಂದ ಸೋವಿ ದರದಲ್ಲಿ ಹಣ್ಣು–ಕಾಯಿಪಲ್ಲೆ ಖರೀದಿಸುತ್ತಿದ್ದ ಗ್ರಾಹಕರ ಸಂಖ್ಯೆಯೂ ಕ್ಷೀಣಿಸಿದೆ.

ಜನನಿಬಿಡ ಪ್ರದೇಶಗಳಲ್ಲಿ ಬೀದಿಬದಿಯ ವ್ಯಾಪಾರಕ್ಕೆ ಎಲ್ಲೆಂದರಲ್ಲಿ ಅವಕಾಶ ನೀಡಿದರೆ ಪಾದಚಾರಿ ಮಾರ್ಗಗಳ ಅತಿಕ್ರಮಣವಾಗಿ, ಸಂಚಾರಕ್ಕೆ ಅಡ್ಡಿ ಉಂಟಾಗುವುದು ಸರ್ವವಿದಿತ. ಆದರೆ, ರಾಷ್ಟ್ರೀಯ ಬೀದಿಬದಿಯ ವ್ಯಾಪಾರ ಕಾಯ್ದೆ–2014, ಇವರ ಸಬಲೀಕರಣ ಮತ್ತು ಸುರಕ್ಷತೆಗೆ ಅನೇಕ ಮಾರ್ಗೋಪಾಯಗಳನ್ನು ಸೂಚಿಸಿದೆ. ಈ ವಿಚಾರದಲ್ಲಿ ಜನಾಂಗೀಯ ಅಥವಾ ಭಾಷಿಕದ್ವೇಷದ ಮುಖೇನ ಯಾವುದೇ ಉಪಕ್ರಮಗಳನ್ನು ಅನುಷ್ಠಾನ ಮಾಡಬಾರದು.

ಬಹುತೇಕ ಬೀದಿಬದಿಯ ವ್ಯಾಪಾರಿಗಳು 'ಅಹಿಂದ' ಸಮುದಾಯಕ್ಕೆ ಸೇರಿದ ಬಡವರಾಗಿದ್ದಾರೆ. ಬೀದಿಬದಿ ವ್ಯಾಪಾರ ಮಾಡಿ ಊಟ, ಬಟ್ಟೆ ಮತ್ತು ಮಕ್ಕಳ ವಿದ್ಯಾಭ್ಯಾಸವನ್ನು ನಿರ್ವಹಿಸುವವರೇ ಹೆಚ್ಚು. ಅವರಲ್ಲಿ ಬಹುತೇಕರು ಕೊಳೆಗೇರಿಗಳ ನಿವಾಸಿಗಳಾಗಿದ್ದಾರೆ. ಅದೆಷ್ಟೋ ವ್ಯಾಪಾರಿಗಳು ಸೂಕ್ತ ಆರೋಗ್ಯ ಪಾಲನೆಯಿಲ್ಲದೆ ಸಾವಿಗೀಡಾಗಿದ್ದಾರೆ. ಅಕಾಲಿಕವಾಗಿ ಬರುವ ಕಾಯಿಲೆ, ಮಕ್ಕಳ ವ್ಯಾಸಂಗ ಮತ್ತು ಇತರೆ ಸಾಂಪ್ರದಾಯಿಕ ಕಾರ್ಯಗಳ ನಿರ್ವಹಣೆಗೆ ಮೀಟರ್ ಬಡ್ಡಿಗೆ ಬಲಿಯಾದವರೇ ಜಾಸ್ತಿ. ಪೊಲೀಸರ ಕಿರುಕುಳ, ಹಫ್ತಾ ವಸೂಲಿ, ಪುಡಿ ರೌಡಿಗಳ ಕಾಟ ಮತ್ತು ಸ್ವಹಿತಾಸಕ್ತಿ ಗುಂಪುಗಳ ನಡುವಿನ ಕಾದಾಟವೂ ಸಾಮಾನ್ಯವಾಗಿರುತ್ತದೆ. ಬದುಕಬೇಕೆಂಬ ಅದಮ್ಯ ಆಶಯದಿಂದಾಗಿ ಈ ತೊಡಕುಗಳನ್ನು ಸಹಿಸಿಕೊಳ್ಳುವುದು ಅವರಿಗೆ ರೂಢಿಯಾಗಿದೆ.

ಸ್ಥಳೀಯ ಸಂಸ್ಥೆಯಾದ ಜಿಬಿಎ ವಿಧಿಸುವ ಕರ ಪಾವತಿ ಮತ್ತು ಸ್ವಚ್ಛತಾ ಉಪಕ್ರಮಗಳನ್ನು ಅನುಸರಿಸಲು ಅನೇಕ ಬೀದಿಬದಿ ವ್ಯಾಪಾರಿಗಳು ಸಿದ್ಧರಿದ್ದಾರೆ. ಈ ವ್ಯಾಪಾರಿಗಳ ಹಿತಾಸಕ್ತಿಯನ್ನು ಜಿಬಿಎ ಸಂರಕ್ಷಿಸಬೇಕು. ಪಾದಚಾರಿ ರಸ್ತೆಗಳಲ್ಲಿನ ಅಡಚಣೆಗಳು ನಿವಾರಣೆ ಆಗುವುದರ ಜೊತೆಗೆ ವ್ಯಾಪಾರಿಗಳ ಹಿತಾಸಕ್ತಿ ರಕ್ಷಣೆಯೂ ಆಗಬೇಕಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನೋಂದಣಿ ಮಾಡಿಸಬೇಕೇ, ಬೇಡವೇ ಎನ್ನುವುದರ ಬಗ್ಗೆ ಎರಡು ಅಭಿಪ್ರಾಯಗಳು

ಹೊಣೆಯೇ ಬೇಡವೇ? ಆರ್‌ಎಸ್‌ಎಸ್ ನೋಂದಣಿ ಹಂಗೇಕೆ?

• ರಮೇಶ್ ಬಾಬು



ಶತಮಾನದ ಇತಿಹಾಸವನ್ನು ಹೊಂದಿರುವ ಸಂಘಟನೆ ಎಂದು ತನ್ನನ್ನು ತಾನು ವೈಭವೀಕರಿಸಿಕೊಳ್ಳುವ ರಾಷ್ಟ್ರೀಯ ಸ್ವಯಂ ಸೇವಕ ಸಂಘ, ರಾಜ್ಯದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಬಹಿರಂಗ ಪತ್ರಕ್ಕೆ ತಲ್ಲಣಗೊಂಡು, ತನ್ನ 35 ಅಂಗ ಸಂಸ್ಥೆಗಳ ಕೂಗುಮಾರಿಗಳ ಹತಾಶ ಹೇಳಿಕೆಗಳ ಮೂಲಕ ಸ್ವಯಂ ಸಮರ್ಥನೆಗೆ ಪ್ರಯತ್ನಿಸುತ್ತಾ ತನಗೆ ತಾನೇ ಮಸಿ ಬಳಿದುಕೊಳ್ಳುತ್ತಿದೆ.

ಜೂನ್ 13ರಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರಿಗೆ ಬರೆದ ಪತ್ರದಲ್ಲಿ ಪ್ರಿಯಾಂಕ್ ಖರ್ಗೆ ಅವರು ಕೇಳಿರುವುದು ಸಂಕೀರ್ಣವಾದ ಪ್ರಶ್ನೆಯೇನಲ್ಲ; ನಿಮ್ಮ ಕಾನೂನು ಸ್ಥಾನಮಾನವೇನು? ಆದಾಯ ಎಲ್ಲಿಂದ ಬರುತ್ತದೆ? ಆಸ್ತಿ ಎಷ್ಟು? ಲೆಕ್ಕಪತ್ರ ಎಲ್ಲಿದೆ? –ಇಷ್ಟನ್ನು ಜನರ ಮುಂದಿಡಿ ಎಂಬುದಷ್ಟೇ. ರಾಷ್ಟ್ರೀಯತೆ, ಶಿಸ್ತು, ಕರ್ತವ್ಯದ ಪಾಠವನ್ನು ಇಡೀ ದೇಶಕ್ಕೆ ಬೋಧಿಸುವ ಸಂಘಟನೆ ಆ ಮೌಲ್ಯಗಳನ್ನು ತಾನೇ ಮೊದಲು ಪಾಲಿಸಿ ತೋರಿಸಲಿ ಎಂಬುದು ಇದರ ಹೂರಣ. ಇದು ಬಲೆಯಲ್ಲ, ಬದಲಿಗೆ ದೇಶಭಕ್ತಿಯ ಪ್ರಮಾಣಪತ್ರ ನೀಡುವುದು ನಮ್ಮ ಅಬಾಧ್ಯ ಹಕ್ಕು ಎಂದು ಭಾವಿಸಿರುವವರಿಗೆ ಕನ್ನಡಿ ಹಿಡಿಯುವ ಪ್ರಯತ್ನ.

ಪ್ರಶ್ನೆಯ ತೂಕ ಅರ್ಥವಾಗಬೇಕಾದರೆ ಸಂಘದ ಗಾತ್ರವನ್ನು ಅದರ ಸ್ವಂತ ಲೆಕ್ಕದಲ್ಲೇ ನೋಡಬೇಕು. ಸಂಘದ ವಾರ್ಷಿಕ ವರದಿಯ ಪ್ರಕಾರ, ಪ್ರತಿದಿನ 88 ಸಾವಿರಕ್ಕೂ ಹೆಚ್ಚು ಶಾಖೆಗಳು ನಡೆಯುತ್ತವೆ. ಸಂಘದೊಂದಿಗೆ ತಳಕು ಹಾಕಿಕೊಂಡಿರುವ ಸಂಸ್ಥೆಗಳ ಸಂಖ್ಯೆ 2,500ಕ್ಕೂ ಹೆಚ್ಚು; ಅಮೆರಿಕ ಒಂದರಲ್ಲೇ 107. ಕಳೆದ ವರ್ಷ 'ಗೃಹ ಸಂಪರ್ಕ ಅಭಿಯಾನ'ದಲ್ಲಿ ತಾನು ಭೇಟಿ ನೀಡಿದ ಮನೆಗಳ ಸಂಖ್ಯೆ ಹತ್ತು ಕೋಟಿ ಎಂದು ಸಂಘ ಹೇಳಿಕೊಂಡಿದೆ; ಮಾರಿದ ಪುಸ್ತಕಗಳು 84 ಲಕ್ಷ; ಹಿಂದೂ ಸಮ್ಮೇಳನಗಳಿಗೆ ಸೇರಿದವರು ಮೂರೂವರೆ ಕೋಟಿ. ಕರ್ನಾಟಕದಲ್ಲೇ 4,000ಕ್ಕೂ ಹೆಚ್ಚು ದೈನಂದಿನ ಶಾಖೆಗಳು, 562 ಪಥಸಂಚಲನಗಳು, 2.21 ಲಕ್ಷ ಸಮವಸ್ತ್ರಧಾರಿ ಕಾರ್ಯಕರ್ತರು. ಇಷ್ಟು ದೊಡ್ಡ, ಇಷ್ಟು ವ್ಯಾಪಕ ಸಂಘಟನೆಗೆ ಸಂಘದ್ದೇ ಮಾತಿನ ಪ್ರಕಾರ ಪ್ಯಾನ್ ಇಲ್ಲ, ಆದಾಯ ತೆರಿಗೆ ಲೆಕ್ಕಪತ್ರ ಸಲ್ಲಿಕೆ ಮಾಡುವುದಿಲ್ಲ, ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆ ಮತ್ತು ವಿದೇಶಿ ದೇಣಿಗೆ (ನಿಯಂತ್ರಣ) ಕಾಯ್ದೆ (ಎಫ್‌ಸಿಆರ್‌ಎ) ವ್ಯಾಪ್ತಿಗೆ ಬರುವುದಿಲ್ಲ, ದೇಣಿಗೆ ನೀಡಿದವರ ವಿವರ ಬಹಿರಂಗಪಡಿಸುವ ಹೊಣೆ ಇಲ್ಲ. ಹೀಗಾಗಿ ಪ್ರಶ್ನೆಗಳು ತಾನಾಗಿಯೇ ಹುಟ್ಟಿಕೊಳ್ಳುತ್ತವೆ.

ಪ್ರಧಾನಿ ನರೇಂದ್ರ ಮೋದಿ ಸ್ವತಃ ನಾಗ್ಪುರದ ಸಂಘದ ಕೇಂದ್ರ ಕಚೇರಿಗೆ ಭೇಟಿ ನೀಡಿ ಗೌರವ ಸಲ್ಲಿಸಿದ್ದಾರೆ; ಬಿಜೆಪಿ ತನ್ನದೇ ಅಧಿಕೃತ ಖಾತೆಯಲ್ಲಿ ತಾನು ಸಂಘದ ರಾಜಕೀಯ ಅಂಗ ಎಂದು ಬಿಂಬಿಸಿಕೊಂಡಿದೆ; ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು, ದೇಶದ ವಿದೇಶಾಂಗ ನೀತಿಯಲ್ಲಿ ಸಂಘದ ದೃಷ್ಟಿಕೋನವಿದೆ ಎಂದಿದ್ದಾರೆ; ಬಿಜೆಪಿಯ ಯಶಸ್ಸಿನ ಹಿಂದೆ ಸಂಘದ ಶ್ರಮವಿದೆ ಎಂದು ಭಾಗವತ್ ಅವರೇ ಹೇಳಿದ್ದಾರೆ. ಆಳುವ ಪಕ್ಷವನ್ನೂ, ದೇಶದ ನೀತಿಯನ್ನೂ ರೂಪಿಸುವ ಶಕ್ತಿ ತನಗಿದೆ ಎನ್ನುತ್ತಲೇ, ತಾನು ಬರೀ ಬೆಳಗಿನ ಕಸರತ್ತು-ಪ್ರಾರ್ಥನೆಯ ಸಂಸ್ಥೆ, ಲೆಕ್ಕ ಕೊಡುವಷ್ಟು ರಾಜಕೀಯವೂ ಅಲ್ಲ, ಸಾರ್ವಜನಿಕವೂ ಅಲ್ಲ ಎಂದು ಹೇಳುವುದು ಸಾಧ್ಯವಿಲ್ಲ.

ಸಂಘವನ್ನು ನಿಷೇಧಿಸಬೇಕು ಎಂದು ಯಾರೂ ಕೇಳಿಲ್ಲ; 'ನಿಮ್ಮ ಲೆಕ್ಕ ತೆರೆದಿಡಿ' ಎಂದಷ್ಟೇ ಕೇಳಿರುವುದು. ಆರ್‌ಎಸ್‌ಎಸ್ ತನಗೆ ಎದುರಾಗಿರುವ ಪ್ರಶ್ನೆಗಳಿಗೆ 'ಉತ್ತರಕ್ಕೆ ನಮ್ಮನ್ನು ಒತ್ತಾಯಿಸಲಾಗದು' ಎನ್ನುತ್ತಿದೆ; ಜನರು ಕೇಳುತ್ತಿರುವುದು 'ನೀವೇಕೆ ಮುಚ್ಚಿಡುತ್ತಿದ್ದೀರಿ' ಎಂದು. 'ನೋಂದಣಿ' ಎಂಬ ಪದವನ್ನೇ ಮುಂದಿಟ್ಟು, ತಮಗೆ ಅನುಕೂಲಕರವಾದ ನೆಲದಲ್ಲಿ ಹೋರಾಡುವ ತಂತ್ರ ಇದು. ಆತ್ಮವಿಶ್ವಾಸವಿದ್ದವರು ಒಂದೇ ಸಾಲಿನಲ್ಲಿ ಉತ್ತರಿಸುತ್ತಾರೆ; ಮುಜುಗರಕ್ಕೊಳಗಾದವರು ವಿಷಯ ಬದಲಿಸುತ್ತಾರೆ ಮತ್ತು ಪ್ರಶ್ನಿಸಿದವರ ಮೇಲೆಯೇ ಮುಗಿಬೀಳುತ್ತಾರೆ.

ಬೀದಿಬದಿ ವ್ಯಾಪಾರಿ, ಪೌರಕಾರ್ಮಿಕ, ಸಣ್ಣ ಸಂಘ-ಸಂಸ್ಥೆ, ದೇವಸ್ಥಾನ, ಗಣೇಶೋತ್ಸವದ ಸಮಿತಿ ಎಲ್ಲರೂ ನೋಂದಾಯಿಸುತ್ತಾರೆ, ಲೆಕ್ಕ ಸಲ್ಲಿಸುತ್ತಾರೆ, ತೆರಿಗೆ ಕಟ್ಟುತ್ತಾರೆ. ಸಂವಿಧಾನವು ಗಾತ್ರ, ಸಿದ್ಧಾಂತ ಅಥವಾ ಆಶ್ರಯದ ಆಧಾರದ ಮೇಲೆ ಯಾರಿಗೂ ವಿನಾಯಿತಿ ಕೊಡುವುದಿಲ್ಲ. ಇಡೀ ದೇಶಕ್ಕೆ ಶಿಸ್ತು ಮತ್ತು ಕರ್ತವ್ಯದ ಪಾಠ ಹೇಳುವ ಸಂಘಟನೆ, ತಾನು ಇದಕ್ಕೆ ಅಪವಾದವಾಗಬೇಕು ಎನ್ನುವುದು ದೇಶಭಕ್ತಿಯಲ್ಲ, ಅದು ವಿಶೇಷ ಸವಲತ್ತಿನ ಬೇಡಿಕೆ. ಆರ್‌ಎಸ್‌ಎಸ್ ನಾಯಕರು ಪ್ರಿಯಾಂಕ್ ಖರ್ಗೆ ಪತ್ರಕ್ಕೆ ಉತ್ತರಿಸದೇ, ಅದರ ಅಗತ್ಯವನ್ನು ಪ್ರಶ್ನಿಸಿದಷ್ಟೂ ಸಲ ಅದು ಜನರಲ್ಲಿ ಸೃಷ್ಟಿಯಾಗಿರುವ ಅನುಮಾನದ ಹುತ್ತಕ್ಕೆ ಮತ್ತೆ ಮತ್ತೆ ಹಾಲೆರೆದಂತೆ. ಆರ್‌ಎಸ್‌ಎಸ್ ಪ್ರಶ್ನಾತೀತ, ಅದಕ್ಕೆ ಉತ್ತರ ಕೊಡುವ ಅವಶ್ಯಕತೆ ಇಲ್ಲ ಎಂದು ಬಿಜೆಪಿ ನಾಯಕರು ಹೇಳಿದಷ್ಟೂ ಅವರ ಅಹಂ ಪ್ರದರ್ಶಿಸಿದಂತೆ, ಪಲಾಯನ ಮಾಡಿದಂತೆ.

1925ರಲ್ಲಿ ಮಹಾರಾಷ್ಟ್ರದ ನಾಗ್ಪುರದಲ್ಲಿ ಸ್ಥಾಪಿತವಾದ ಆರ್‌ಎಸ್‌ಎಸ್ ಬೇರೆ ಬೇರೆ ಕಾರಣಗಳಿಗೆ ಈ ನೆಲದ ಕಾನೂನಿಗೆ ಅನುಗುಣವಾಗಿ ನಮ್ಮ ದೇಶದಲ್ಲಿ ಮೂರು ಬಾರಿ ನಿಷೇಧಕ್ಕೆ ಒಳಗಾಗಿತ್ತು. ಪ್ರಮುಖವಾಗಿ ಮಹಾತ್ಮ ಗಾಂಧೀಜಿಯವರ ಹತ್ಯೆಯ ಸಂಬಂಧ 1948-49ರಲ್ಲಿ ನಿಷೇಧಕ್ಕೆ ಒಳಗಾಗಿದ್ದ ಆರ್‌ಎಸ್‌ಎಸ್, ತಾನು ದೇಶದಲ್ಲಿ ಯಾವುದೇ ರಾಜಕೀಯ ಚಟುವಟಿಕೆಗಳಲ್ಲಿ ಭಾಗಿ ಆಗುವುದಿಲ್ಲ ಎಂಬ ವಾಗ್ದಾನ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ನೀಡುವುದರ ಮೂಲಕ ನಿಷೇಧದಿಂದ ಮುಕ್ತವಾಗಿತ್ತು. ಶತಮಾನದ ಇತಿಹಾಸವನ್ನು ಹೇಳಿಕೊಳ್ಳುವ ಆರ್‌ಎಸ್‌ಎಸ್‌ನಲ್ಲಿ ಮುಕ್ತವಾಗಿ ಮತ್ತು ಕಾಲಕಾಲಕ್ಕೆ ಮುಖ್ಯಸ್ಥರನ್ನು ಆಯ್ಕೆ ಮಾಡಲೂ ಅವಕಾಶ ಇರುವುದಿಲ್ಲ. ಅದೇ ರೀತಿ ಸಂಘದಲ್ಲಿ ಸದಸ್ಯತ್ವವನ್ನೂ ನೀಡುವುದಿಲ್ಲ. ಸದಸ್ಯತ್ವಕ್ಕೆ ಅವಕಾಶವೇ ಇಲ್ಲದ ಒಂದು ಸಂಘಟನೆಯನ್ನು ಸಂಘವೆಂದು ಕರೆಯಲು ಸಾಧ್ಯವಿಲ್ಲ.

ನೋಂದಣಿ ಆಗದ ಯಾವುದೇ ಸಂಘ ಸಂಸ್ಥೆ ಸಾರ್ವಜನಿಕ ಅಥವಾ ಸರ್ಕಾರಿ ಸ್ಥಳಗಳಲ್ಲಿ ಯಾವುದೇ ಚಟುವಟಿಕೆಯನ್ನು ಮಾಡಲು ಅವಕಾಶ ಇಲ್ಲ. ಯಾವುದೇ ಸಂಘ– ಸಂಸ್ಥೆ ವ್ಯಕ್ತಿಗಳಿಗೆ ಅಥವಾ ವ್ಯಕ್ತಿಗಳ ಗುಂಪಿಗೆ ಸದಸ್ಯತ್ವ ನೀಡದೇ ತಾನು ಒಂದು ಸಂಘವೆಂದು ಹೇಳಿಕೊಳ್ಳಲು ಬರುವುದಿಲ್ಲ. 2025ರ ಅ.4ರಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ರಾಜ್ಯದಲ್ಲಿ ಆರ್‌ಎಸ್‌ಎಸ್‌ನ ಚಟುವಟಿಕೆಗಳನ್ನು ನಿಯಂತ್ರಿಸಲು ಅಂದಿನ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದರು. ತನ್ನನ್ನು ತಾನು ಪ್ರಪಂಚದ ದೊಡ್ಡ ಸಂಘಟನೆಯೆಂದು ಸಾರಿಕೊಳ್ಳುವ ರಾಷ್ಟ್ರೀಯ ಸ್ವಯಂಸೇವಕ ಸಂಘ, ಸಂವಿಧಾನದ ಅಡಿಯಲ್ಲಿ ಮತ್ತು ಕಾನೂನಿನ ವ್ಯಾಪ್ತಿಯಲ್ಲಿ ತನ್ನನ್ನು ತಾನು ನೋಂದಾಯಿಸಿಕೊಳ್ಳಲು ಮುಂದಾಗದೆ ಇರುವುದು ಹಾಸ್ಯಾಸ್ಪದ.

ಆರ್‌ಎಸ್‌ಎಸ್ ಈ ದೇಶದಲ್ಲಿ ಭಾರತೀಯ ಜನತಾ ಪಕ್ಷದ (ಬಿಜೆಪಿ) ರಾಜಕೀಯ ಸಂಘಟನೆಯೂ ಸೇರಿದಂತೆ ಸುಮಾರು 35 ವಿವಿಧ ಸಂಘಟನೆಗಳ ಹೆಸರಿನಲ್ಲಿ ಕೆಲಸ ಮಾಡುತ್ತಿದೆ. ಅನಿವಾರ್ಯ, ಮಾತು, ಅವಶ್ಯಕತೆಗೆ ಅನುಗುಣವಾಗಿ ಕೆಲವು ಸಂಘಟನೆಗಳು ನೋಂದಣಿಯಾಗಿವೆ. ಉಳಿದಂತೆ ಬಹುತೇಕ ಸಂಘಟನೆಗಳು ನೋಂದಣಿ ಆಗದೇ ಕೆಲಸ ಮಾಡುತ್ತಿವೆ. ಒಂದು ರಾಜಕೀಯ ಪಕ್ಷವಾಗಿ ನೋಂದಣಿ ಅವಶ್ಯಕತೆ ಇರುವುದರಿಂದ ಬಿಜೆಪಿಯನ್ನು ನೋಂದಾಯಿಸಲಾಗಿದೆ. ಇಲ್ಲದೇ ಇದ್ದಲ್ಲಿ ಅದು ಕೂಡ ನೋಂದಣಿ ಇಲ್ಲದೆ ಕಾರ್ಯ ಚಟುವಟಿಕೆಗೆ ಮುಂದಾಗುತ್ತಿತ್ತು. ನೋಂದಣಿ ಅವಶ್ಯಕತೆ ಇಲ್ಲವೆನ್ನುವುದು ಅವಕಾಶವಾದದ ಪರಮಾವಧಿಯ ಜೊತೆಗೆ ಸಂವಿಧಾನವನ್ನು ಧಿಕ್ಕರಿಸುವ ಪ್ರಕ್ರಿಯೆ.

ಕರ್ನಾಟಕದಲ್ಲಿ ಸಂಘಸಂಸ್ಥೆಗಳ ನೋಂದಣಿ ಕಾಯ್ದೆ ಜಾರಿಯಲ್ಲಿದೆ. ಈ ಕಾನೂನು ಸಂಘ ಸಂಸ್ಥೆಗಳು ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸುತ್ತದೆ. ನೋಂದಣಿ ಕಡ್ಡಾಯವೆಂದು ಕಾಯ್ದೆಯಲ್ಲಿ ತಿಳಿಸದೇ ಇದ್ದರೂ, ಯಾವುದೇ ಸಂಘ ಸಂಸ್ಥೆ ಕಾರ್ಯ ಚಟುವಟಿಕೆಗಳು ನೋಂದಣಿ ಮೂಲಕ ಪಾರದರ್ಶಕವಾಗಿ ಮತ್ತು ಸಾರ್ವಜನಿಕವಾಗಿ ನಡೆಸಲು, ನಿಯಮಗಳ ಮೂಲಕ ಬೈಲಾ ರಚಿಸಲು, ಲೆಕ್ಕ ಪತ್ರ ನೀಡಲು, ಲೆಕ್ಕಪರಿಶೋಧನೆಗೆ ಒಳಪಡಿಸಲು ಅವಕಾಶ ನೀಡುತ್ತದೆ. ನೋಂದಾಯಿತ ಟ್ರಸ್ಟ್ ಮುಖಾಂತರವೂ ಸಾರ್ವಜನಿಕ ಉದ್ದೇಶಗಳಿಗೆ ಅನುಗುಣವಾಗಿ ಚಟುವಟಿಕೆಗಳನ್ನು ನಡೆಸಲು ಅವಕಾಶವಿದೆ. ನೋಂದಣಿ ಇಲ್ಲದೆ ಯಾವುದೇ ಒಂದು ಸಂಘ ಸಂಸ್ಥೆ ಅಥವಾ ಟ್ರಸ್ಟ್ ಕೆಲಸ ಮಾಡುತ್ತಿದ್ದರೆ, ಇದು ಅನೇಕ ಅನುಮಾನಗಳಿಗೆ ಅವಕಾಶ ನೀಡುತ್ತದೆ. ಆರ್‌ಎಸ್‌ಎಸ್ ತನ್ನ ಅನುಕೂಲಕ್ಕೆ ಅನುಗುಣವಾಗಿ ಕಾನೂನನ್ನು ವ್ಯಾಖ್ಯಾನ ಮಾಡುವ ಮೂಲಕ ಸಾರ್ವಜನಿಕ ಜವಾಬ್ದಾರಿಯಿಂದ ಪಲಾಯನ ಮಾಡುತ್ತಿದೆ.

ವಾರ್ಷಿಕ ವರದಿಯನ್ನು ಪ್ರಧಾನಿಯ ಭಾವಚಿತ್ರದೊಂದಿಗೆ ಆರ್‌ಎಸ್‌ಎಸ್ ಪ್ರಕಟಿಸುತ್ತದೆ. ದೇಶ ವಿದೇಶಗಳಲ್ಲಿ ಕೋಟ್ಯಂತರ ಸ್ವಯಂಸೇವಕರನ್ನು ಹೊಂದಿರುವ ಸಂಘವು ಕರ್ನಾಟಕದ ಗೃಹ ಸಚಿವರ ಒಂದು ಬಹಿರಂಗ ಪತ್ರಕ್ಕೆ ಉತ್ತರಿಸದೆ ಪಲಾಯನ ಮಾಡುತ್ತಿರುವುದು ಅದರ ಇನ್ನೊಂದು ಮುಖವನ್ನು ತೋರಿಸುತ್ತದೆ. ರಾಜಪ್ರಭುತ್ವಕ್ಕೆ ತಿಲಾಂಜಲಿ ಇಟ್ಟು ಸಂವಿಧಾನದ ಅಳವಡಿಕೆಯ ಮೂಲಕ ಪ್ರಜಾಪ್ರಭುತ್ವದ ಸರ್ಕಾರಕ್ಕೆ ಮುನ್ನುಡಿ ಬರೆದುಕೊಂಡಿರುವ ನಾವು ಸಂವಿಧಾನವನ್ನು ಒಪ್ಪಿಕೊಂಡಿದ್ದೇವೆ. ಭಾರತದ ನೆಲದಲ್ಲಿ ಸಂವಿಧಾನವನ್ನು ಗೌರವಿಸುವ ಪ್ರತಿಯೊಬ್ಬರೂ ಕಾನೂನು ಪಾಲನೆ ಮಾಡಬೇಕಾಗುತ್ತದೆ. ನೋಂದಣಿ ಅವಶ್ಯಕತೆ ಇಲ್ಲ ಎಂದು ಹೇಳುವ ಮೂಲಕ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಬದಲು, ಶತಮಾನದ ಆಚರಣೆಯ ಸಂದರ್ಭದಲ್ಲಿ ಕರ್ನಾಟಕದ ಗೃಹ ಸಚಿವ ಪ್ರಿಯಾಂಕ್ ಖರ್ಗೆರವರ ಬಹಿರಂಗ ಪತ್ರಕ್ಕೆ ಆರ್‌ಎಸ್‌ಎಸ್ ಉತ್ತರಿಸಲಿ.

ಲೇಖಕ: ಕಾಂಗ್ರೆಸ್ ವಕ್ತಾರ, ವಿಧಾನ ಪರಿಷತ್ ಸದಸ್ಯ

> ಪ್ರಧಾನಿ ನರೇಂದ್ರ ಮೋದಿ ಸ್ವತಃ ನಾಗ್ಪುರದ ಸಂಘದ ಕೇಂದ್ರ ಕಚೇರಿಗೆ ಭೇಟಿ ನೀಡಿ ಗೌರವ ಸಲ್ಲಿಸಿದ್ದಾರೆ; ಬಿಜೆಪಿ ತನ್ನದೇ ಅಧಿಕೃತ ಖಾತೆಯಲ್ಲಿ ತಾನು ಸಂಘದ ರಾಜಕೀಯ ಅಂಗ ಎಂದು ಬಿಂಬಿಸಿಕೊಂಡಿದೆ; ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು, ದೇಶದ ವಿದೇಶಾಂಗ ನೀತಿಯಲ್ಲಿ ಸಂಘದ ದೃಷ್ಟಿಕೋನವಿದೆ ಎಂದಿದ್ದಾರೆ; ಬಿಜೆಪಿಯ ಯಶಸ್ಸಿನ ಹಿಂದೆ ಸಂಘದ ಶ್ರಮವಿದೆ ಎಂದೂ ಭಾಗವತ್ ಹೇಳಿದ್ದಾರೆ. ಆಳುವ ಪಕ್ಷವನ್ನೂ, ದೇಶದ ನೀತಿಯನ್ನೂ ರೂಪಿಸುವ ಶಕ್ತಿ ತನಗಿದೆ ಎನ್ನುತ್ತಲೇ, ತಾನು ಬರೀ ಬೆಳಗಿನ ಕಸರತ್ತು-ಪ್ರಾರ್ಥನೆಯ ಸಂಸ್ಥೆ, ಲೆಕ್ಕ ಕೊಡುವಷ್ಟು ರಾಜಕೀಯವೂ ಅಲ್ಲ, ಸಾರ್ವಜನಿಕವೂ ಅಲ್ಲ ಎಂದು ಹೇಳುವುದು ಸಾಧ್ಯವಿಲ್ಲ

ಲೆಕ್ಕಾಚಾರದ ಮೌನ

ಆರ್‌ಎಸ್‌ಎಸ್‌ನಲ್ಲಿ ಇಂದು ಮನೆ ಮಾಡಿರುವ ಆತಂಕ ಎಂದರೆ ಪ್ರಿಯಾಂಕ್ ಖರ್ಗೆ ಬರೆದಿರುವ ಪತ್ರಕ್ಕೆ ತಾನು ಅಧಿಕೃತವಾಗಿ ಉತ್ತರ ನೀಡಿದರೆ ಸರ್ಕಾರಗಳಿಗೆ ಆ ಲೋಪಗಳನ್ನು ಸರಿಪಡಿಸುವ ನೂತನ ಕಾಯ್ದೆ ಜಾರಿಮಾಡುವ 'ನಿದರ್ಶನ'ವನ್ನು ಸೃಷ್ಟಿಸಿದಂತಾಗುತ್ತದೆ ಎನ್ನುವ ಅಂಶ. ಸಂಘ ಅಧಿಕೃತವಾಗಿ ಒಮ್ಮೆ ಉತ್ತರಿಸಿದರೆ, ಪಾರದರ್ಶಕತೆಯ ಒಂದು ಪೂರ್ವನಿದರ್ಶನ ಸೃಷ್ಟಿಯಾಗುತ್ತದೆ. ಒಮ್ಮೆ ಲೆಕ್ಕ ತೋರಿಸಿದರೆ ಪ್ರತಿ ವರ್ಷ ತೋರಿಸಬೇಕಾಗುತ್ತದೆ; ಒಮ್ಮೆ ಕಾನೂನಿಗೆ ತಲೆಬಾಗಿದರೆ ಮುಂದೆ ಪ್ರತಿ ಬಾರಿ ಬಾಗಬೇಕಾಗುತ್ತದೆ. ಹಾಗಾಗಿಯೇ ಸಂಘ ತನ್ನ ಬಾಯಿ ಮುಚ್ಚಿಟ್ಟುಕೊಂಡು, ಉತ್ತರಿಸುವ ಕೆಲಸವನ್ನು ಲೇಖನ ಬರೆಯುವ ಕೆಲವು ವಕೀಲರಿಗೆ ಹೊರಗುತ್ತಿಗೆ ನೀಡಿದೆ. ಈ ಮೌನ ಆಕಸ್ಮಿಕವಲ್ಲ; ಲೆಕ್ಕಾಚಾರದ್ದು.

• ಎಸ್.ಸುರೇಶ್‌ಕುಮಾರ್

ನಾನು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಒಬ್ಬ ಸ್ವಯಂಸೇವಕ ಎಂಬುದನ್ನು ಮೊದಲೇ ಸ್ಪಷ್ಟಪಡಿಸಿಬಿಡುತ್ತೇನೆ. ನಾನು ಬಾಲ್ಯ ಸ್ವಯಂಸೇವಕ. ಅಂದರೆ, ಬಾಲ್ಯಾವಸ್ಥೆಯಲ್ಲೇ ಸಂಘದ ಶಾಖೆಗೆ ಹೋಗಲು ಪ್ರಾರಂಭಿಸಿದೆ. ಅದು ಬಿಡಿಸಲಾಗದ ಬಂಧ. ನನ್ನ ವ್ಯಕ್ತಿತ್ವ ರೂಪುಗೊಳ್ಳುವುದರಲ್ಲಿ ಸಂಘದ ಪ್ರಭಾವ ಅಗಾಧ.

ಸಂಘದ ಶಾಖೆಯ ಮೂಲಕ ಅನೇಕ ಉನ್ನತ ಚಿಂತನೆಯ ವ್ಯಕ್ತಿಗಳ ಸಹವಾಸ ಸಿಕ್ಕಿದ್ದು ನನ್ನ ಸುಕೃತ; ಸಂಘದ ಮೂಲಕವೇ ಸಮಾಜದ ವಿವಿಧ ಸ್ತರಗಳ ಜನರ ಸಂಪರ್ಕ, ಸಂವಾದದ ಮೂಲಕ ಎಲ್ಲರೊಡನೆ ಸಂಬಂಧ ಪ್ರಾಪ್ತಿಯಾಗಿದೆ. ತುರ್ತುಪರಿಸ್ಥಿತಿಯಲ್ಲಿ ಸಂಘವನ್ನು ಎರಡನೇ ಬಾರಿ ನಿಷೇಧ ಮಾಡಿದಾಗ, ಅದರ ವಿರುದ್ಧ ಹೋರಾಡಿ ಪೊಲೀಸರ ಆತಿಥ್ಯವನ್ನು ಚೆನ್ನಾಗಿಯೇ ಅನುಭವಿಸಿದೆ.

ಕಳೆದ ಹಲವಾರು ತಿಂಗಳುಗಳಿಂದ ನಮ್ಮ ರಾಜ್ಯದಲ್ಲಿ ಸಂಘದ ಬಗ್ಗೆ ಪ್ರಚಾರ ಜೋರಾಗಿಯೇ ನಡೆದಿದೆ. ಸಂಘದಲ್ಲಿ ನಾವು ಪ್ರತಿವರ್ಷ ಆರು ಉತ್ಸವಗಳನ್ನು ನಡೆಸಿಕೊಂಡು ಬರುತ್ತೇವೆ. ಅದರಲ್ಲಿ ಒಂದು 'ವಿಜಯದಶಮಿ ಉತ್ಸವ'. ಸಂಘದ ಸ್ವಯಂಸೇವಕರಿಗೆ ವಿಜಯದಶಮಿಯ ವಿಶೇಷ ಮಹತ್ವವೆಂದರೆ, 1925ರ ವಿಜಯದಶಮಿ ದಿನ ಮಹಾರಾಷ್ಟ್ರದ ನಾಗ್ಪುರದಲ್ಲಿ ಆರ್‌ಎಸ್‌ಎಸ್ ಸ್ಥಾಪನೆಗೊಂಡದ್ದು. ಕಳೆದ ವರ್ಷ 2025ರ ವಿಜಯದಶಮಿಗೆ ಸಂಘ ನೂರು ವರ್ಷದ ಮೈಲಿಗಲ್ಲು ದಾಟಿದೆ.

ಆ ಸಂದರ್ಭದಲ್ಲಿ ರಾಜ್ಯದ ಎಲ್ಲೆಡೆ ಪ್ರತಿವರ್ಷ ನಡೆಸುವಂತೆ ಪಥಸಂಚಲನ ಕಾರ್ಯಕ್ರಮಗಳು ನಡೆದವು. ಎಲ್ಲ ಕಡೆಯೂ ಪಥಸಂಚಲನದ ಸ್ವರೂಪ, ಅದು ಹಾದು ಹೋಗುವ ರಸ್ತೆಗಳು ಮತ್ತು ತೆಗೆದುಕೊಳ್ಳುವ ಅವಧಿ ಈ ಎಲ್ಲದರ ಕುರಿತು ಪೊಲೀಸ್ ಇಲಾಖೆಗೆ ಮಾಹಿತಿ ನೀಡಿ, ಅನುಮತಿ ಪಡೆದುಕೊಂಡೇ ನಮ್ಮ ಪಥಸಂಚಲನ ಕಾರ್ಯಕ್ರಮ ನಡೆಯುವುದು.

ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲೂ ನಮ್ಮ ಪಥಸಂಚಲನ ಪ್ರತಿವರ್ಷದ ಸಾಮಾನ್ಯ ಕಾರ್ಯಕ್ರಮದಂತೆ ನಡೆದು ಹೋಗಿಬಿಡುತ್ತಿತ್ತು. ಪ್ರಸ್ತುತ ರಾಜ್ಯದ ಗೃಹ ಸಚಿವರಾಗಿರುವ ಪ್ರಿಯಾಂಕ್ ಖರ್ಗೆ ಅವರ ಅಪೂರ್ವ ಸಹಕಾರದಿಂದ ಚಿತ್ತಾಪುರದ ಆರ್‌ಎಸ್‌ಎಸ್ ಪಥಸಂಚಲನ ಇಡೀ ರಾಜ್ಯದ ಗಮನ ಸೆಳೆಯಿತು. ಸಾಮಾನ್ಯವಾಗಿ ಸೇರುವ ಸಂಖ್ಯೆಗಿಂತ ಚಿತ್ತಾಪುರದಲ್ಲಿನ ಪಥಸಂಚಲನ ಹಲವು ಪಟ್ಟು ಹೆಚ್ಚು ಸ್ವಯಂಸೇವಕರನ್ನು ಆಕರ್ಷಿಸಿತ್ತು.

ಇದೀಗ ಆರ್‌ಎಸ್‌ಎಸ್ ನೋಂದಣಿಯಾಗಬೇಕು ಎಂದು ಹೇಳುತ್ತಾ, ನೋಂದಣಿಯಾಗದೆ ಸಂಘ ಚಟುವಟಿಕೆ ನಡೆಸುವುದರ ಔಚಿತ್ಯ ಕುರಿತು ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತಾವೇ ಮುಂದೆ ನಿಂತು ನೋಂದಣಿ ಮಾಡಿಸುವುದಾಗಿ ಘೋಷಿಸಿದ್ದಾರೆ.

ಕಳೆದ ವಿಧಾನಸಭೆಯ ಅಧಿವೇಶನ ಸಂದರ್ಭದಲ್ಲಿ ನಾನು ಪ್ರಿಯಾಂಕ್ ಖರ್ಗೆ ಅವರ ಪಕ್ಕ ಕುಳಿತು ಅವರಿಗೆ ಸಂಘದ ಬಗ್ಗೆ ಇರುವ ಅಸಮಾಧಾನ ಅಥವಾ ತೀವ್ರ ಕೋಪದ ಕಾರಣ ಏನು ಎಂದು ಕೇಳಿದ್ದೆ. ಅವರು ನನಗೆ ಉತ್ತರ ನೀಡುತ್ತಿರುವ ಸಮಯದಲ್ಲಿಯೇ ಯಾರೋ ಮಧ್ಯಪ್ರವೇಶಿಸಿದಾಗ ನಮ್ಮಿಬ್ಬರ ಸಂಭಾಷಣೆ ಅಲ್ಲಿಗೆ ನಿಂತು ಹೋಯಿತು. ಇದೀಗ ಆರ್‌ಎಸ್‌ಎಸ್ ನೋಂದಾಯಿತ ಸಂಸ್ಥೆ ಅಲ್ಲ ಎಂಬ ನೆಪವೊಡ್ಡಿ ತೀವ್ರ ವಾಗ್ದಾಳಿ ನಡೆಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನನ್ನ ಅನುಭವದ ಮತ್ತು ಅಧ್ಯಯನದ ಕೆಲವು ಅನಿಸಿಕೆಗಳನ್ನು ಮುಂದಿಡಲು ಬಯಸುತ್ತೇನೆ.

ಸಂಘದ ಹೆಸರೇ ರಾಷ್ಟ್ರೀಯ ಸ್ವಯಂಸೇವಕ ಸಂಘ. ಇದನ್ನು ಸೇರಲು ಯಾರನ್ನೂ ಬಲವಂತಪಡಿಸುವುದಿಲ್ಲ. ಸ್ವಯಂಪ್ರೇರಣೆಯಿಂದ, ಸ್ವಯಂಸ್ಫೂರ್ತಿಯಿಂದ ಸಂಘಕ್ಕೆ ಸದಸ್ಯರಾಗಬಹುದು, ನಂತರ ಕಾರ್ಯಕರ್ತರಾಗಿ ಬೆಳೆಯಬಹುದು. ಸಂಘ ಸೇರಲು ಪ್ರವೇಶ ಶುಲ್ಕವಿಲ್ಲ. ಹೀಗಾಗಿ ಹೆಸರು ನೋಂದಾಯಿಸಿಕೊಳ್ಳುವ ಅಗತ್ಯವಿಲ್ಲ.

ಸಂಘದಲ್ಲಿ ನಮ್ಮೆಲ್ಲರ ಗುರುವನ್ನಾಗಿ ಸ್ವೀಕರಿಸಿರುವುದು ಹಿಂದೂ ಧರ್ಮದಲ್ಲಿ ವಿಶಿಷ್ಟ ಗೌರವದ ಸ್ಥಾನ ಪಡೆದಿರುವ ಭಗವಾ ಧ್ವಜವನ್ನು. ಸಂಘದ ಶಾಖೆಯಲ್ಲಿ ಭಗವಾ ಧ್ವಜಕ್ಕೆ ಪ್ರಣಾಮ ಸಲ್ಲಿಸುವುದರ ಮೂಲಕ ಭಾರತಾಂಬೆಗೆ, ಭಾರತ ದೇಶಕ್ಕೆ ನಮ್ಮ ಗೌರವ ಸಲ್ಲಿಸುವುದು ಆರಂಭದಿಂದಲೂ ಬೆಳೆದು ಬಂದಿರುವ ಪದ್ಧತಿ. ಸಂಘದಲ್ಲಿ ನಾನು ಬಾಲ್ಯದಿಂದ ಕಂಡಂತೆ ಕಥೆಗಳು, ಆಟಗಳ ಮೂಲಕ ದೇಶಪ್ರೇಮವನ್ನು ಬಿತ್ತುವ ಕಾರ್ಯ ನಿರಂತರವಾಗಿ ನಡೆಯುತ್ತದೆ. ಮಾತೃಭೂಮಿಗೆ ನಮಸ್ಕರಿಸುವ ಮೂಲಕ ಪ್ರಾರಂಭವಾಗುವ ಸಂಘದ ಪ್ರಾರ್ಥನೆ 'ಭಾರತ್ ಮಾತಾ ಕೀ ಜೈ'ನೊಂದಿಗೆ ಕೊನೆಗೊಳ್ಳುತ್ತದೆ.

ಸಂಘದ ಯಾವುದೇ ಶಾಖೆಯಲ್ಲಿ ಯಾವುದೇ ವ್ಯಾವಹಾರಿಕ ಕಾರ್ಯ ನಡೆಯುವುದಿಲ್ಲ. ಸಂಘದ ಶಾಖೆಗಳ ಮೂಲಕ ದೇಶದ ವಿವಿಧ ಆಯಾಮಗಳಲ್ಲಿ ಸದ್ಭಾವನೆಯಿಂದ ಕೆಲಸ ಮಾಡಲು ಬೇಕಾದ ವ್ಯಕ್ತಿ ನಿರ್ಮಾಣ ಕಾರ್ಯ ನಡೆಯುತ್ತಿದೆ. ಈ ರೀತಿ ದೇಶದ ಬಗ್ಗೆ ಸದಾ ಒಳ್ಳೆಯದನ್ನು ಚಿಂತಿಸುವ, ಒಳ್ಳೆಯ ಕಾರ್ಯ ಮಾಡುವ ವ್ಯಕ್ತಿಗಳ ಸಮೂಹ ರಾಷ್ಟ್ರೀಯ ಸ್ವಯಂಸೇವಕ ಸಂಘ. ಇಂತಹ ಕಾರ್ಯ ಮಾಡುವುದಕ್ಕೆ ನೋಂದಣಿಯ ಅಗತ್ಯವೇನು ಎನ್ನುವುದು ಇದುವರೆವಿಗೂ ಯಾರಿಗೂ ತಿಳಿದುಬಂದಿಲ್ಲ.

ಸಂಘವನ್ನು ಯಾವ ಇಲಾಖೆಯಡಿ ನೋಂದಣಿ ಮಾಡಿಕೊಳ್ಳಬೇಕು?

ಸಹಕಾರ ಇಲಾಖೆಯಡಿ ಎಂದರೆ, ಆರ್‌ಎಸ್‌ಎಸ್ ಒಂದು ಸಹಕಾರಿ ಸಂಘ ಅಲ್ಲ, ಸಹಕಾರಿ ಬ್ಯಾಂಕೂ ಅಲ್ಲ. ವಸತಿ ಇಲಾಖೆಯಡಿ ನೋಂದಣಿ ಮಾಡಿಕೊಳ್ಳಬೇಕೆಂದರೆ, ನಮ್ಮದು ವಸತಿ ನಿರ್ಮಾಣ ಸೊಸೈಟಿ ಅಲ್ಲ. ಆರ್‌ಎಸ್‌ಎಸ್‌ನ ಚಟುವಟಿಕೆಗಳಿಗೆ ಸರ್ಕಾರದಿಂದ ಏನಾದರೂ ಅನುದಾನ ಪಡೆಯುವಂತಿದ್ದರೆ ನೋಂದಣಿಗೊಂದು ಅರ್ಥವಿರುತ್ತಿತ್ತು. ಸಂಘವು ಕೇಂದ್ರ ಸರ್ಕಾರದಿಂದಾಗಲಿ ಅಥವಾ ಯಾವುದೇ ರಾಜ್ಯ ಸರ್ಕಾರದಿಂದಾಗಲಿ ಅನುದಾನವನ್ನು ಪಡೆಯುತ್ತಿಲ್ಲ.

ಸಂಘದ ಚಟುವಟಿಕೆಗಳಿಗೆ ಅಗತ್ಯವಿರುವ ಆರ್ಥಿಕ ಬಲ ಎಲ್ಲಿಂದ ಬರುತ್ತದೆ?

ಪ್ರತಿ ವರ್ಷ ಸಂಘದ ಸ್ವಯಂಸೇವಕರು 'ಗುರುಪೂಜೆ' ಎಂಬ ಕಾರ್ಯಕ್ರಮದಡಿ ಭಗವಾ ಧ್ವಜಕ್ಕೆ ನಮಸ್ಕರಿಸಿ ಗುರುದಕ್ಷಿಣೆ ಅರ್ಪಿಸುತ್ತಾರೆ. ಇದು ದೇಶದಾದ್ಯಂತ ಎಲ್ಲಾ ಶಾಖೆಗಳಲ್ಲಿ ನಿರಂತರವಾಗಿ ನಡೆದುಕೊಂಡು ಬಂದಿರುವ ಪ್ರಕ್ರಿಯೆ. ಹೀಗೆ ಸಂಗ್ರಹವಾಗುವ ಗುರುದಕ್ಷಿಣೆ ಸಂಘದ ಎಲ್ಲಾ ಚಟುವಟಿಕೆಗಳಿಗೆ ಸಂಪನ್ಮೂಲ ನೀಡುತ್ತದೆ. ನಾನು ನನ್ನ ಗುರುವಿಗೆ ಗೌರವದಿಂದ ಅರ್ಪಿಸುವ ದಕ್ಷಿಣೆಯ ಮೇಲೆ ಯಾವ ರೀತಿ ತೆರಿಗೆ ಹೇರಲು ಸಾಧ್ಯ?

ಹೌದು; ಸಂಘಪ್ರೇರಿತವಾದ ಅಥವಾ ಸಂಘದ ವಿಚಾರಧಾರೆಯಿಂದ ಪ್ರೇರಣೆಗೊಂಡ ಬೇರೆ ಬೇರೆ ಸಂಘಟನೆಗಳು ನೋಂದಣಿಯಾಗಿವೆ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಭಾರತೀಯ ಮಜ್ದೂರ್ ಸಂಘ, ವಿದ್ಯಾ ಭಾರತಿ, ಭಾರತೀಯ ಜನತಾ ಪಕ್ಷವು ನಿರ್ದಿಷ್ಟ ಇಲಾಖೆಗಳು ಅಥವಾ ಸಂಸ್ಥೆಗಳಡಿ ನೋಂದಣಿಗೊಂಡಿವೆ. ವ್ಯಕ್ತಿ ನಿರ್ಮಾಣ, ವ್ಯಕ್ತಿಗಳಲ್ಲಿ ಮೌಲ್ಯಗಳನ್ನು ತುಂಬಿ ಅವರು ರಾಷ್ಟ್ರ ನಿರ್ಮಾಣದ ಕಾರ್ಯಗಳಲ್ಲಿ ಭಾಗಿಯಾಗುವಂತೆ ಮಾಡುವುದನ್ನು ಬಿಟ್ಟರೆ ಸಂಘ ಯಾವುದೇ ರೀತಿಯ ಉದ್ದಿಮೆ ಅಥವಾ ವ್ಯಾವಹಾರಿಕ ಚಟುವಟಿಕೆಗಳಲ್ಲಿ ತೊಡಗಿಲ್ಲ.

ಪ್ರಕೃತಿ ವಿಕೋಪದಿಂದ ಸಂಭವಿಸುವ ದುರ್ಘಟನೆಗಳಾಗಲಿ, ರೈಲು ದುರಂತ ಅಥವಾ ವಿಮಾನ ದುರಂತ, ಕೊಡಗಿನ ಭೂಕುಸಿತ... ಈ ಎಲ್ಲಾ ಸಂದರ್ಭಗಳಲ್ಲಿ ಧಾವಿಸಿ ಹೋಗುವ ಸಂಘದ ಸ್ವಯಂಸೇವಕರಿಗೆ ನೋಂದಣಿಯ ಅಗತ್ಯವೇ ಕಂಡುಬಂದಿಲ್ಲ. ಸ್ವಂತಕ್ಕೆ ಸ್ವಲ್ಪ ಸಮಾಜಕ್ಕೆ ಸರ್ವಸ್ವ ಎಂಬ ಭಾವನೆಯನ್ನು ಸರ್ವಸ್ಪರ್ಶಿ ಸರ್ವ ವ್ಯಾಪಿ ಮಾಡುವ ಮಹಾನ್ ಕಾರ್ಯಕ್ಕೆ ನೋಂದಣಿ ಅಗತ್ಯವಿಲ್ಲ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ.

ಇದು ದೇಶದಲ್ಲಿ 60 ವರ್ಷ ಆಳ್ವಿಕೆ ನಡೆಸಿದ ಕಾಂಗ್ರೆಸ್ ಪಕ್ಷಕ್ಕೆ ಅಥವಾ ಸುಮಾರು ಎಂಟು ವರ್ಷಗಳವರೆಗೆ ಆಡಳಿತ ನಡೆಸಿರುವ ಬಿಜೆಪಿಯೇತರ ಸರ್ಕಾರಗಳಿಗೆ ಚೆನ್ನಾಗಿ ತಿಳಿದಿರುವ ಕಾರಣ ಯಾರೂ ಸಂಘದ ನೋಂದಣಿ ಕಡ್ಡಾಯವೆಂದು ತಿಳಿಸಿಲ್ಲ ಅಥವಾ ದೇಶದ ಯಾವುದೇ ನ್ಯಾಯಾಲಯ ಈ ರೀತಿ ನೋಂದಣಿ ಮಾಡಿಕೊಳ್ಳಬೇಕೆಂಬ ಆದೇಶ ನೀಡಿಲ್ಲ.

1950ರಲ್ಲಿ ಸಂಘದ ಮೇಲಿನ ನಿಷೇಧ ತೆರವುಗೊಳಿಸಿದ ಸಂದರ್ಭದಲ್ಲಿ ಸರ್ಕಾರ ಅಪೇಕ್ಷಿಸಿದ್ದಂತೆ ಸಂಘವು ತನ್ನ ಸಂಘಟನೆಯ ಲಿಖಿತ ಸಂವಿಧಾನವನ್ನು ರಚಿಸಿ ಪ್ರಕಟಿಸಿತ್ತು. ಭಾರತದ ಗೃಹ ಇಲಾಖೆಗೂ ಸಲ್ಲಿಸಿತ್ತು. ಆ ಮೂಲಕ ಸಂಘದ ಅಧಿಕೃತ ಕಾರ್ಯಗಳನ್ನು ದೇಶದ ಆಳುವ ವ್ಯವಸ್ಥೆಗೆ ತಿಳಿಯಪಡಿಸಲಾಗಿತ್ತು.

ಒಟ್ಟು ಪರಿಸ್ಥಿತಿ ಹೀಗಿರುವಾಗ ತನ್ನದೇ ಆದ ಕಾರಣಗಳಿಗಾಗಿ, ತನ್ನಲ್ಲಿ ಇರುವ ದುರುದ್ದೇಶಗಳಿಗಾಗಿ ನೂರು ವರ್ಷಗಳ ಇತಿಹಾಸವುಳ್ಳ, ಪ್ರತಿದಿನ ಎಲ್ಲರಿಗೂ ಕಾಣುವಂತೆ ಮುಕ್ತ ಬಯಲು ಪ್ರದೇಶದಲ್ಲಿ ಚಟುವಟಿಕೆಗಳನ್ನು ನಡೆಸುತ್ತಾ ಬಂದಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ನೋಂದಣಿ ಅಗತ್ಯವೆಂದು ಹೇಳುವುದು ವಿಕೃತ ಮನಸ್ಸಿನ ಸಂಕೇತ ಎಂದು ಹೇಳದೇ ಬೇರೆ ದಾರಿ ಇಲ್ಲ.

ಲೇಖಕ: ಬಿಜೆಪಿ ಶಾಸಕ

> ಸಂಘದ ಯಾವುದೇ ಶಾಖೆಯಲ್ಲಿ ಯಾವುದೇ ವ್ಯಾವಹಾರಿಕ ಕಾರ್ಯ ನಡೆಯುವುದಿಲ್ಲ. ಸಂಘದ ಶಾಖೆಗಳ ಮೂಲಕ ವಿವಿಧ ಆಯಾಮಗಳಲ್ಲಿ ಸದ್ಭಾವನೆಯಿಂದ ದೇಶಕ್ಕಾಗಿ ಕೆಲಸ ಮಾಡಲು ಬೇಕಾದ ವ್ಯಕ್ತಿ ನಿರ್ಮಾಣ ಕಾರ್ಯ ನಡೆಯುತ್ತಿದೆ. ಈ ರೀತಿ ದೇಶದ ಬಗ್ಗೆ ಸದಾ ಒಳ್ಳೆಯದನ್ನು ಚಿಂತಿಸುವ, ಒಳ್ಳೆಯ ಕಾರ್ಯ ಮಾಡುವ ವ್ಯಕ್ತಿಗಳ ಸಮೂಹ ರಾಷ್ಟ್ರೀಯ ಸ್ವಯಂಸೇವಕ ಸಂಘ. ಇಂತಹ ಕಾರ್ಯ ಮಾಡುವುದಕ್ಕೆ ನೋಂದಣಿಯ ಅಗತ್ಯವೇನು ಎನ್ನುವುದು ಇದುವರೆವಿಗೂ ಯಾರಿಗೂ ತಿಳಿದುಬಂದಿಲ್ಲ. ಹಿಂದೆ ಯಾವ ಸರ್ಕಾರವೂ ನೋಂದಣಿ ಮಾಡಿಸುವಂತೆ ಆದೇಶಿಸಿಲ್ಲ

ನಿಷೇಧವಾಗಿದ್ದಾಗಲೂ ಇರಲಿಲ್ಲ ಸೂಚನೆ

ಜವಾಹರಲಾಲ್ ನೆಹರೂ ಅವರು ಪ್ರಧಾನಿಯಾಗಿದ್ದಾಗ (1948-49ರಲ್ಲಿ) ಮತ್ತು ಅವರ ಸುಪುತ್ರಿ ಇಂದಿರಾ ಗಾಂಧಿ ಅವರು ಪ್ರಧಾನಿಯಾಗಿದ್ದಾಗ (1975-77ರ ಅವಧಿಯಲ್ಲಿ) ಹಾಗೂ ಬಾಬರಿ ಮಸೀದಿ ಧ್ವಂಸದ ಘಟನೆ ನಡೆದಾಗ (1992ರ ಡಿಸೆಂಬರ್ 6 ರಂದು)– ಮೂರು ಬಾರಿ ಸಂಘವನ್ನು ನಿಷೇಧಿಸಲಾಗಿತ್ತು.

ಆ ನಿಷೇಧದ ಆಜ್ಞೆಯನ್ನು ಸವಾಲಾಗಿ ಸ್ವೀಕರಿಸಿ, ನಿಷೇಧ ತೆರವುಗೊಳಿಸಿದ ಮೇಲೆ ಸಂಘ ಇನ್ನಷ್ಟು ಪ್ರವರ್ಧಮಾನವಾಗಿ ಬೆಳೆದಿದೆ. ಆದರೆ ಆ ಸಂದರ್ಭಗಳಲ್ಲಿಯೂ ಸಂಘವನ್ನು ನೋಂದಣಿ ಮಾಡಿಕೊಳ್ಳಬೇಕೆಂದು ಯಾವ ಸರ್ಕಾರವೂ ಆದೇಶ ನೀಡಿರಲಿಲ್ಲ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

04 ಜುಲೈ 2026 ಶನಿವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ನಿಜ ಜ್ಯೇಷ್ಠ ಕೃಷ್ಣ ಚತುರ್ಥಿ ಗಂ. 12-41, ನಕ್ಷತ್ರ: ಧನಿಷ್ಠ ಗಂ. 13-44, ಯೋಗ: ಪ್ರೀತಿ ಗಂ. 17-02, ಕರಣ: ಬಾಲವ ಗಂ. 12-41 ಮಿಥುನ ಮಾಸದ 19 ನೇ ದಿನ. ಮಳೆ ನಕ್ಷತ್ರ: ಆರ್ದ್ರಾ 4 ನೇ ಪಾದ. ರಾಹುಕಾಲ: ಬೆಳಿಗ್ಗೆ 09-00 - 10-30, ಸೂರ್ಯೋದಯ: 06-12, ಸೂರ್ಯಾಸ್ತ: 06-58, ಮುಸ್ಲಿಂ ದಿನಾಂಕ: 18 ಮೊಹರಂ, ಅದೃಷ್ಟ ಸಂಖ್ಯೆ: 5

ಮೇಷ: ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಂತಸದ ಸುದ್ದಿ ಬರಲಿದೆ. ಅನಿರೀಕ್ಷಿತ ವರ್ಗಾವಣೆಯಿಂದ ಅನುಕೂಲ ಪಡೆದುಕೊಳ್ಳುವಿರಿ. ಋಣದ ಬಾಧೆಯಿಂದ ಮುಕ್ತರಾಗಲು ಹೆಚ್ಚಿನ ಗಮನ ನೀಡಿ.

ವೃಷಭ: ಮನೆಯ ಜವಾಬ್ದಾರಿಯನ್ನು ಮಗನಿಗೆ ವಹಿಸುವ ಆಲೋಚನೆಗಳು ಬರುವುವು, ಆದರೆ ತಕ್ಷಣಕ್ಕೆ ಯಾವುದೇ ತೀರ್ಮಾನ ತೆಗೆದುಕೊಳ್ಳಬೇಡಿ. ಸಂಶೋಧಕರಿಗೆ, ನ್ಯಾಯಾಂಗ ಇಲಾಖೆಯವರಿಗೆ ಒಳ್ಳೆಯ ದಿನ.

ಮಿಥುನ: ಬೋಧನೆಯಲ್ಲಿ ವಿಶೇಷ ಪರಿಣತಿಯನ್ನು ಹೊಂದಿರುವ ನಿಮಗೆ ಶಿಷ್ಯರ ಸಂಖ್ಯೆ ವೃದ್ಧಿಯಾಗಲಿದೆ. ಕೆಲಸವನ್ನು ತ್ವರಿತಗೊಳಿಸುವುದರಿಂದ ನಷ್ಟದ ಪ್ರಮಾಣವನ್ನು ಕಡಿಮೆಗೊಳಿಸಿಕೊಳ್ಳಬಹುದು.

ಕರ್ಕಾಟಕ: ಗೊಂದಲದಲ್ಲಿ ಸಿಕ್ಕಿರುವ ನಿಮಗೆ ಈ ದಿನ ದೃಢ ನಿರ್ಧಾರವನ್ನು ಕೈಗೊಂಡ ಫಲದಿಂದಾಗಿ ಒಳ್ಳೆಯ ಫಲಿತಾಂಶ ಸಿಗುವುದು. ಗೃಹ ನಿರ್ಮಾಣದಂತಹ ವಿಚಾರವನ್ನು ಅವಲೋಕಿಸಲು ಇದು ಒಳ್ಳೆಯ ದಿನ.

ಸಿಂಹ: ಪರಿಸ್ಥಿತಿಗಳನ್ನು ನೀವು ನಿಮ್ಮ ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಳ್ಳುವ ಪ್ರಯತ್ನದಲ್ಲಿ ಸಫಲರಾಗುವಿರಿ. ಸ್ನೇಹಿತರು ನಿಮ್ಮ ಆಲೋಚನೆಗಳನ್ನು ಗೌರವಿಸುವುದಲ್ಲದೆ ಸಲಹೆಗಳನ್ನು ಕೇಳಲಿದ್ದಾರೆ.

ಕನ್ಯಾ: ಉದ್ಯೋಗಿಗಳಿಗೆ ವೃತ್ತಿಯು ತಾತ್ಕಾಲಿಕ ಸಮಾಧಾನವನ್ನು ತಂದರೂ ಬದಲಾವಣೆಗೆ ಅವಕಾಶ ಇರುತ್ತದೆ. ಇತರರಿಗೆ ನೀವೇನೆಂದು ತೋರಿಸಲು ಸೂಕ್ತ ದಿನ. ಲೋಹದ ವಸ್ತುಗಳ ವ್ಯಾಪಾರಿಗಳಿಗೆ ಸಂಪಾದನೆ ಹೆಚ್ಚುವುದು.

ತುಲಾ: ಚಿಂತೆ, ಅನವಶ್ಯಕ ಖರ್ಚು ಹಾಗೂ ಹಾಳು ವ್ಯಸನಗಳು ಈ ದಿನ ಕಡಿಮೆಯಾಗಲಿವೆ. ನಿಮ್ಮ ಕೆಲಸದ ಬಗ್ಗೆ ಪ್ರೀತಿ ಪಾತ್ರರೊಡನೆ ಸಮಾಲೋಚನೆಯನ್ನು ನಡೆಸುವಿರಿ.

ವೃಶ್ಚಿಕ: ವಿದ್ಯಾರ್ಥಿಗಳಿಗೆ ಉನ್ನತ ಶ್ರೇಣಿ ಪ್ರಾಪ್ತವಾಗಿ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ಭಾಗ್ಯವಿದೆ, ಆದರೆ ಉದ್ಯೋಗ ಸ್ಥಳದ ಬಗ್ಗೆ ಗಮನಿಸಿ. ರಾಜಕೀಯ ವ್ಯಕ್ತಿಗಳಿಗೆ ಪಕ್ಷದಲ್ಲಿ ಸ್ಥಾನಮಾನದ ಅರಿವು ನಿಮಗಾಗುವುದು.

ಧನು: ಸಮಾರಂಭಗಳಲ್ಲಿ ಭಾಗವಹಿಸುವಿರಿ ಅಥವಾ ಬಂಧುಮಿತ್ರರು ಮನೆಗೆ ಬರಲಿದ್ದಾರೆ. ವ್ಯಾಪಾರ ಕ್ಷೇತ್ರದಲ್ಲಿನ ನಿಮ್ಮ ಪೈಪೋಟಿಗಾರರಿಗೆ ಬಹಳ ಹಿಂದುಳಿಕೆಯ ದಿನವಾಗಲಿದೆ. ವ್ಯಾಪಾರಿಗಳಿಗೆ ಇಂದು ಸ್ವಲ್ಪ ಬಿಡುವು ಸಿಗಲಿದೆ.

ಮಕರ: ವಾಹನ ವಹಿವಾಟುಗಳಲ್ಲಿ ಅನಿರೀಕ್ಷಿತ ನಷ್ಟವಾದರೂ ಅಸಲಿಗೆ ಯಾವ ರೀತಿಯ ತೊಂದರೆ ಉಂಟಾಗುವುದಿಲ್ಲ. ಕೌಟುಂಬಿಕ ಸಮಸ್ಯೆಗಳಿಗೆ ತಾಳ್ಮೆಯಿಂದಲೇ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿ.

ಕುಂಭ: ನೀವು ತೆಗೆದುಕೊಳ್ಳುವ ತೀರ್ಮಾನಗಳು ಸರಿಯಾಗಿಯೇ ಇರುವುವು. ಇತರರ ಮಾತುಗಳನ್ನು ಕೇಳಿ ನಿಮ್ಮ ತೀರ್ಮಾನಗಳನ್ನು ಬದಲಾಯಿಸುವ ಅಗತ್ಯವಿಲ್ಲ. ಮೊದಲ ಪ್ರಯತ್ನ ಸಫಲವಾಗಿದ್ದರಿಂದ ಉತ್ಸಾಹ ಹೆಚ್ಚಲಿದೆ.

ಮೀನ: ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಸ್ವಲ್ಪ ಹಿನ್ನಡೆ ಉಂಟಾಗಬಹುದು. ನಿಮಗೆ ಜನ್ಮತಃ ಬಂದಿರುವ ಧೈರ್ಯ ಹಾಗೂ ಸಹಿಷ್ಣುತೆ ಈ ದಿನ ನಿಮ್ಮ ನೆರವಿಗೆ ಬರಲಿದೆ. ಬಿಳಿ ಬಣ್ಣದ ಉಡುಗೆ ಶುಭ ತರುವುದು.

ಪದಬಂಧ 04

ಅ.ನಾ. ಪ್ರಹ್ಲಾದರಾವ್

ಎಡದಿಂದ ಬಲಕ್ಕೆ

1. ಶುಭ ಸಮಾರಂಭದಲ್ಲಿ ಕರಹಿಡಿದದ್ದು ಶುಭಪ್ರದವಾಗಿದೆ 5
4. ಕಪಿ ಕರೆದ ಕಡೆಗೆಲ್ಲ ಬರುವ ಕೋಗಿಲೆ 2
6. ಸಾಗರದಲ್ಲಿ ತುಂಬಿದ ಸತ್ವ 2
7. ಹರನನ್ನು ಭಜಿಸಲು ಜಾಗರಣೆ ಮಾಡಿದ ನಡುಮನೆ 3
9. ಕುಮಾರವ್ಯಾಸನ ದೈವ ನೆಲಸಿದ ಶಹರು 3
11. ಹಳದಿ ಬಣ್ಣ ಬಯಸುವ ಈತ ಹೊಸಬನಲ್ಲ 3
13. ಮೂಗಿನ ಮೇಲೆ ಬೆರಳಿಡುವಂತೆ ಮಾಡಿದ ವಿಸ್ಮಯ 3
15. ಇರಲಿ ನಮ್ಮ ಜೊತೆಯಲ್ಲಿ ಗಣಪನ ವಾಹನ 2
16. ಮಾರಿ ಪುಳಕಗೊಂಡಾಗ ಬಂದ ಶತ್ರು 2
17. ಹರಿಯುವ ತರಂಗಿಣಿ ಹಾಗೂ ಸೇರುವ ಸಮುದ್ರ 5

ಮೇಲಿಂದ ಕೆಳಕ್ಕೆ

2. ಆಯುಧವನ್ನು ಹಿಡಿದು ಬಂದ ಮಹಾವಿಷ್ಣು 4
3. ತುಂಬಿದ ದರ್ಬಾರಿನಿಂದ ಕೂಡಿದ ದೊಡ್ಡ ರಾಜಸಭೆ 4
5. ಹಲವು ಕಡೆ ನಡೆಯುವ ಜಗಳ 3
6. ಸುರಂಗದಲ್ಲಿ ಸಾಗಿ ಹೊರಗೆ ಬಂದ ಜಿಂಕೆ 3
8. ಬೆಳಗಿನ ಜಾವದಲ್ಲಿ ಮಕ್ಕಳಿಗೆ ನಡೆಸಿದ ಚೌಲ ಸಂಸ್ಕಾರ 3
10. ವ್ಯವಸ್ಥಿತವಾಗಿ ಜೋಡಿಸಿಟ್ಟ ಕಾಗದ ಪತ್ರಗಳ ಕಟ್ಟು 3
11. ಮಾಲಿಯಂತೆ ಇವನು ಸಾಮಾನು ಹೊರುವ ಕೆಲಸಗಾರ 3
12. ಮಂದಿರ ನೋಡಲು ಬಹಳ ಹೆಚ್ಚಾಗಿ ಸೇರಿದ ಜನ 4
13. ಬಾನಲ್ಲಿ ತುಂಬಿಕೊಂಡ ರಜತ ಲೋಹದಂತಹ ಮುಗಿಲು 4
14. ಹಳೆಯ ಕಬ್ಬಿಣದ ಸಾಮಾನು ಸಿಗುವ ಅಂಗಡಿ 3



03ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಸಹಕಾರ 3.ಗರಿಮುರಿ 4.ಸವಡಿ 7.ನವನಾಡು 9.ಋಜುವಾತು 11.ಪರಿಕರ 13.ಸೇವಂತಿಗೆ 15.ಗಣಪ 16.ಪಡುವಣ 17.ತಿಲೋತ್ತಮೆ

ಮೇಲಿಂದ ಕೆಳಕ್ಕೆ:

2.ರಸಗುಂಡು 3.ಗಡಿಪಾರು 5.ಭಾನ 6.ತಂತು 8.ವಯ್ಯಾರಿ 10.ವಾಸಂತಿ 11.ಪರ 12.ರಣಾಂಗಣ 13.ಸೇನಾಪತಿ 14.ಗೆರೆ

ಸುಡೊಕು 04

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	1	8		7		9	3	
			2		1			
9		2			8		7	1
	4		3		6		2	
3	8		1					
		9		5		3	1	8
8		6		4		1		7
					7			
7	9		8		3	2		4

03 ಸುಡೊಕು

5	9	7	3	6	4	8	2	1
3	6	2	1	8	9	7	4	5
8	4	1	5	2	7	3	6	9
4	3	9	2	7	5	6	1	8
2	7	6	9	1	8	5	3	4
1	5	8	6	4	3	2	9	7
7	2	5	4	3	1	9	8	6
9	1	3	8	5	6	4	7	2
6	8	4	7	9	2	1	5	3

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,175
ಇಂದಿನ ಅಂತ್ಯ:	24,270
ದಿನದ ಗರಿಷ್ಠ:	24,378
	95

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹710
12 ಕ್ಕೆ	₹94
ಮೈಸೂರು: 100 ಕ್ಕೆ	₹725

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹263.50
ಆರ್‌ಎಸ್‌ಎಸ್-5	₹258.50
ಗುಡ್ ಲಾಟ್	₹226

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹360-683
ದ್ವಿತಳಿ (ಬಿ.ವಿ)	₹485-862

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1580 (1560)
ಸೋಯಾ (ರಿಫೈನ್ಡ್)	₹1450 (1450)
ಸೂರ್ಯಕಾಂತಿ (ರಿಫೈನ್ಡ್)	₹1665 (1655)
ಪಾಮೋಲಿನ್	₹1455 (1450)

ಮುದ್ರಮನೆ ಕಾಫಿ (50 ಕೆಜಿಗೆ)	
ಎಪಿ	₹24500
ಎಸಿ	₹14900
ಆರ್‌ಪಿ	₹18700
ಆರ್‌ಸಿ	₹10375

ಎಥೆನಾಲ್: ಕೇಂದ್ರ ಸ್ಪಷ್ಟನೆ

ನವದೆಹಲಿ (ಪಿಟಿಐ): ‘ಇ20 ಪೆಟ್ರೋಲ್’ ಮಾರಾಟ ವ್ಯವಸ್ಥೆಯ ಬಗ್ಗೆ ಸಾಮಾಜಿಕ ಜಾಲತಾಣಗಳ ಮೂಲಕ ತಪ್ಪುಮಾಹಿತಿ ಹರಡಲಾಗುತ್ತಿದೆ ಎಂದು ಹೇಳಿರುವ ಕೇಂದ್ರ ಸರ್ಕಾರವು, ಇದರ ಬಗ್ಗೆ ಹತ್ತು ಅಂಶಗಳ ಸ್ಪಷ್ಟನೆಯನ್ನು ಶುಕ್ರವಾರ ನೀಡಿದೆ.

ವೈಜ್ಞಾನಿಕ ಅಧ್ಯಯನ, ಅಂತರ-ರಾಷ್ಟ್ರೀಯ ಮಟ್ಟದಲ್ಲಿನ ಅನುಭವ ಹಾಗೂ ನಿಯಮಗಳ ಅನ್ವಯ ಈ ಯೋಜನೆಯನ್ನು ಜಾರಿಗೆ ತರಲಾಗಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಹೇಳಿದೆ.

ಒಂದು ಲೀಟರ್ ಎಥೆನಾಲ್ ಉತ್ಪಾದಿಸಲು 10 ಸಾವಿರ ಲೀಟರ್ ನೀರು ಬೇಕು ಎಂಬ ಮಾತುಗಳು ಸುಳ್ಳು, ದೇಶದ ಆಹಾರ ಭದ್ರತೆಗೆ ಅಗತ್ಯವಿರುವ ಅಕ್ಕಿಯನ್ನು ತೆಗೆದಿರಿಸಿದ ನಂತರ ಉಳಿಯುವ ಹೆಚ್ಚುವರಿ ಅಕ್ಕಿಯನ್ನು ಮಾತ್ರ ಎಥೆನಾಲ್ ಉತ್ಪಾದನೆಗೆ ಬಳಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದೆ.

ಸರ್ಕಾರ ಹೇಳಿದ್ದೇನು?

- ಲೀಟರ್ ಎಥೆನಾಲ್ ಉತ್ಪಾದನೆಗೆ 3–5 ಲೀಟರ್ ಸಂಸ್ಕರಿಸಿದ ನೀರು ಬಳಕೆಯಾಗುತ್ತದೆ
- ಅಮೆರಿಕ, ಬ್ರೆಜಿಲ್, ಕೆನಡಾ, ಜಪಾನ್ ಸೇರಿದಂತೆ ಹಲವು ದೇಶಗಳಲ್ಲಿ ಇಂಧನದಲ್ಲಿ ವಿವಿಧ ಪ್ರಮಾಣದಲ್ಲಿ ಎಥೆನಾಲ್ ಬಳಕೆ ಇದೆ
- ಪ್ರಯಾಣಿಕ ಕಾರು ಹಾಗೂ ದ್ವಿಚಕ್ರ ವಾಹನಗಳನ್ನು ಬಳಸಿ ಪರೀಕ್ಷೆ ನಡೆಸಲಾಗಿದೆ, ಎಥೆನಾಲ್‌ನಿಂದಾಗಿ ಇಂಧನ ದಕ್ಷತೆ ಅಲ್ಪ ಮಾತ್ರ ಬದಲಾಗುತ್ತದೆ
- ಇ20 ಪೆಟ್ರೋಲ್‌ಗಾಗಿ ವಿನ್ಯಾಸ ಆಗಿರುವ ವಾಹನಗಳು ಅನ್ವಯವಾಗುವ ವಾರಂಟಿಗಳಿಗೆ ಹಾಗೂ ವಿಮೆಗಳಿಗೆ ಅರ್ಹವಾಗಿರುತ್ತವೆ
- ಇ20 ಇಂಧನ ಯೋಜನೆಯು ‘ಪ್ರಯೋಗ ಮಾತ್ರ’ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಸರ್ಕಾರ ಹೇಳಿದೆ ಎಂಬುದು ತಪ್ಪು. ಕೋರ್ಟ್‌ನಲ್ಲಿ ನಡೆಯುತ್ತಿರುವ ವಿಚಾರಣೆಯು ಎಥೆನಾಲ್ ಪಡೆಯುವ ಪ್ರಕ್ರಿಯೆಯ ಗುತ್ತಿಗೆ ಅಂಶಗಳಿಗೆ ಸಂಬಂಧಿಸಿದೆ, ಎಥೆನಾಲ್ ಮಿಶ್ರಣ ಯೋಜನೆಯ ಒಳಿತು–ಕೆಡುಕುಗಳ ಬಗ್ಗೆ ಅಲ್ಲ

‘₹95 ಲಕ್ಷ ಕೋಟಿ ರಫ್ತು ಗುರಿ’

ಮಹತ್ವಾಕಾಂಕ್ಷೆಯ ಗುರಿ ಸಾಧನೆಗೆ ಎಲ್ಲರ ಸಹಕಾರ ಅಗತ್ಯ: ಗೋಯಲ್

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹95 ಲಕ್ಷ ಕೋಟಿಗೂ (1 ಟ್ರಿಲಿಯನ್ ಡಾಲರ್) ಹೆಚ್ಚು ಮೌಲ್ಯದ ಸರಕು ಮತ್ತು ಸೇವೆಗಳನ್ನು ದೇಶದಿಂದ ರಫ್ತು ಮಾಡುವ ಗುರಿ ಹೊಂದಲಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಕಳೆದ ಆರ್ಥಿಕ ವರ್ಷದಲ್ಲಿ ದೇಶದಿಂದ ₹82 ಲಕ್ಷ ಕೋಟಿ (863 ಬಿಲಿಯನ್ ಡಾಲರ್) ಮೊತ್ತದಷ್ಟು ಸರಕು ಮತ್ತು ಸೇವೆಗಳನ್ನು ರಫ್ತು ಮಾಡಲಾಗಿತ್ತು. ಈ ಪೈಕಿ ₹42 ಲಕ್ಷ ಕೋಟಿ (442 ಬಿಲಿಯನ್ ಡಾಲರ್) ಮೌಲ್ಯದ ಸರಕುಗಳು ಮತ್ತು ₹40 ಲಕ್ಷ ಕೋಟಿ (421 ಬಿಲಿಯನ್ ಡಾಲರ್) ಮೌಲ್ಯದ ಸೇವೆಗಳನ್ನು ರಫ್ತು ಮಾಡಲಾಗಿತ್ತು.

ಈ ರಫ್ತು ಮೌಲ್ಯವು ಪ್ರಸಕ್ತ ಆರ್ಥಿಕ ವರ್ಷದಲ್ಲಿ 1 ಟ್ರಿಲಿಯನ್ ಡಾಲರ್‌ಗೆ ಹೆಚ್ಚಾಗಬೇಕು. ಈ ಪೈಕಿ ಸರಕುಗಳ ರಫ್ತು ಹಣಕಾಸಿನ ಮೌಲ್ಯದಲ್ಲಿ ₹50.44 ಲಕ್ಷ ಕೋಟಿ (530 ಬಿಲಿಯನ್ ಡಾಲರ್) ಮತ್ತು ಸೇವೆಗಳ ರಫ್ತು ಮೌಲ್ಯ ₹44.73 ಲಕ್ಷ ಕೋಟಿಯಷ್ಟು (470 ಬಿಲಿಯನ್ ಡಾಲರ್) ಆಗಬೇಕು ಎಂಬ ಗುರಿ ಹೊಂದಲಾಗಿದೆ. ಕಳೆದ ಆರ್ಥಿಕ ವರ್ಷಕ್ಕೆ ಇದನ್ನು ಹೋಲಿಸಿದರೆ ಸರಕುಗಳ ರಫ್ತಿನಲ್ಲಿ ಶೇ 16ರಿಂದ ಶೇ 17ರಷ್ಟು ಮತ್ತು ಸೇವಾ ವಲಯದ ರಫ್ತಿನಲ್ಲಿ ಶೇ 11ರಷ್ಟು ಹೆಚ್ಚಳದ ಗುರಿ ಹೊಂದಲಾಗಿದೆ ಎಂದು ಶುಕ್ರವಾರ ನಡೆದ ವಾಣಿಜ್ಯ ಮಂಡಳಿಯ ಸಭೆಯಲ್ಲಿ ಗೋಯಲ್ ಹೇಳಿದ್ದಾರೆ.

ಕಳೆದ ಆರ್ಥಿಕ ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ ಪ್ರಸಕ್ತ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ದೇಶದ ಸರಕುಗಳ ರಫ್ತು ಶೇ 15ರಷ್ಟು ಮತ್ತು ಸೇವೆಗಳ ರಫ್ತು ಶೇ 11ರಷ್ಟು ಬೆಳವಣಿಗೆ ದಾಖಲಿಸಿದೆ.

‘ಈ ಬೆಳವಣಿಗೆಯನ್ನು ಗಮನಿಸಿದಾಗ ನಾವು ನಮ್ಮ ಗುರಿಯನ್ನು ಸಾಧಿಸುವಲ್ಲಿ ಸರಿಯಾದ ಹಾದಿಯಲ್ಲಿದ್ದೇವೆ ಅನ್ನಿಸುತ್ತದೆ’ ಎಂದು ಗೋಯಲ್ ತಿಳಿಸಿದ್ದಾರೆ.

ಉದ್ಯಮಗಳು ದೇಶದ ಮಾರುಕಟ್ಟೆಯನ್ನಷ್ಟೇ ಅವಲಂಬಿಸದೆ, ಜಾಗತಿಕ ಮಾರುಕಟ್ಟೆಗಳಿಗೆ ವಿಸ್ತರಿಸಬೇಕು. ವಿದೇಶಗಳಲ್ಲಿ ದೇಶದ ಸರಕುಗಳ ಬ್ರ್ಯಾಂಡಿಂಗ್ ಮಾಡಲು, ಗೋದಾಮುಗಳನ್ನು ನಿರ್ಮಿಸಲು ಮತ್ತು ಜಾಗತಿಕ ಪ್ರದರ್ಶನದಲ್ಲಿ ಭಾಗವಹಿಸಲು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ರಫ್ತು ಉತ್ತೇಜನ ಮಿಷನ್ ಸಹಾಯ ಮಾಡಲಿದೆ ಎಂದು ಹೇಳಿದ್ದಾರೆ.

ಮುಖ್ಯಾಂಶಗಳು

- ಸರಕುಗಳ ರಫ್ತು ಶೇ 17, ಸೇವಾ ರಫ್ತು ಶೇ 11ರಷ್ಟು ಹೆಚ್ಚಳದ ಗುರಿ
- ಭಾರತದಿಂದ 100 ದೇಶಗಳಿಗೆ ರಕ್ಷಣಾ ಸಾಮಗ್ರಿಗಳ ರಫ್ತು
- 2025–26ರಲ್ಲಿ ₹38 ಸಾವಿರ ಕೋಟಿಯಷ್ಟು ರಕ್ಷಣಾ ಸಾಮಗ್ರಿ ರಫ್ತು

ಹೆಚ್ಚಿನ ಗುಣಮಟ್ಟದ ಸರಕುಗಳನ್ನು ತಯಾರಿಸುವುದರತ್ತ ಉದ್ಯಮವು ಗಮನ ಹರಿಸಬೇಕು ಮತ್ತು ಮುಕ್ತ ವ್ಯಾಪಾರ ಒಪ್ಪಂದದ ಅವಕಾಶಗಳನ್ನು ಬಳಸಿಕೊಳ್ಳಬೇಕು

ಪೀಯೂಷ್ ಗೋಯಲ್, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ

15ರಂದು ಎಫ್‌ಟಿಎ

ಭಾರತ ಮತ್ತು ಬ್ರಿಟನ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದವು (ಎಫ್‌ಟಿಎ) ಜುಲೈ 15ರಿಂದ ಜಾರಿಯಾಗಲಿದೆ ಎಂದು ಗೋಯಲ್ ಹೇಳಿದ್ದಾರೆ. ಈ ಒಪ್ಪಂದದ ಅಡಿಯಲ್ಲಿ ದೇಶದ ಶೇ 99ರಷ್ಟು ಸರಕುಗಳು ಶೂನ್ಯ ಸುಂಕದೊಂದಿಗೆ ಬ್ರಿಟನ್ ಮಾರುಕಟ್ಟೆಗೆ ಪ್ರವೇಶಿಸಲಿವೆ ಎಂದು ತಿಳಿಸಿದ್ದಾರೆ.

ವಾಟ್ಸ್‌ಆ್ಯಪ್ ಘೋಷಿಸಿರುವ ಹೊಸ ಸೌಲಭ್ಯದ ಬಗ್ಗೆ ಐ.ಟಿ ಕಾರ್ಯದರ್ಶಿ ಹೇಳಿಕೆ

ಯೂಸರ್‌ನೇಮ್: ಸೈಬರ್ ಅಪರಾಧಕ್ಕೆ ಅವಕಾಶ

ನವದೆಹಲಿ (ಪಿಟಿಐ): ವಾಟ್ಸ್‌ಆ್ಯಪ್‌ನ ‘ಯೂಸರ್‌ನೇಮ್’ ಸೌಲಭ್ಯ ಬಳಸಿ ಇನ್ನೊಬ್ಬರ ಹೆಸರಿನಲ್ಲಿ ಸಂದೇಶ ರವಾನಿಸುವ ಮತ್ತು ಸೈಬರ್ ಅಪರಾಧಗಳನ್ನು ಎಸಗುವ ಗಂಭೀರ ಸಾಧ್ಯತೆ ಇರುವ ಕಾರಣದಿಂದಾಗಿ ಕೇಂದ್ರ ಸರ್ಕಾರವು ಆ ಕಂಪನಿಯಿಂದ ವಿವರಣೆ ಕೇಳಿದೆ ಎಂದು ಮಾಹಿತಿ ತಂತ್ರಜ್ಞಾನ (ಐ.ಟಿ.) ಕಾರ್ಯದರ್ಶಿ ಎಸ್. ಕೃಷ್ಣನ್ ಹೇಳಿದ್ದಾರೆ.

ಯೂಸರ್‌ನೇಮ್ ಸೌಲಭ್ಯದ ಬಗ್ಗೆ ಪ್ರಶ್ನೆಗಳನ್ನು ಕೇಳಿ ಕೇಂದ್ರ ಸರ್ಕಾರವು ವಾಟ್ಸ್‌ಆ್ಯಪ್, ಟೆಲಿಗ್ರಾಂ ಮತ್ತು ಸಿಗ್ನಲ್ ಕಂಪನಿಗಳಿಗೆ ಈ ವಾರ ನೋಟಿಸ್ ಕಳುಹಿಸಿದೆ. ಈ ಸೌಲಭ್ಯವು ಬಳಕೆದಾರರಿಗೆ ತಮ್ಮ ಮೊಬೈಲ್ ದೂರವಾಣಿ ಸಂಖ್ಯೆಯನ್ನು ಬಹಿರಂಗಪಡಿಸದೆಯೇ ಇನ್ನೊಬ್ಬರಿಗೆ ಸಂದೇಶ ರವಾನಿಸಲು ಅವಕಾಶ ನೀಡುತ್ತದೆ.

ಯೂಸರ್‌ನೇಮ್ ಸೌಲಭ್ಯವನ್ನು ನೀಡುವುದಾಗಿ ವಾಟ್ಸ್‌ಆ್ಯಪ್ ಪ್ರಕಟಿಸಿದ ಕೆಲವೇ ದಿನಗಳಲ್ಲಿ ಕೇಂದ್ರವು ಅದಕ್ಕೆ ನೋಟಿಸ್ ಜಾರಿಗೊಳಿಸಿದೆ. ಈ ಸೌಲಭ್ಯದ ಬಗ್ಗೆ ಪೂರ್ಣ ವಿವರ ನೀಡಬೇಕು, ತನಗೆ ತೃಪ್ತಿಯಾಗುವ ಬಗೆಯಲ್ಲಿ ಸಮಾಲೋಚನೆ ಪೂರ್ಣಗೊಳ್ಳುವವರೆಗೆ ಈ ಸೌಲಭ್ಯವನ್ನು ಜಾರಿಗೆ ತರಬಾರದು ಎಂದು ಕೇಂದ್ರವು ಸೂಚನೆ ನೀಡಿದೆ.

ಟೆಲಿಗ್ರಾಂ ಹಾಗೂ ಸಿಗ್ನಲ್ ಆ್ಯಪ್‌ಗಳಲ್ಲಿ ಈ ಸೌಲಭ್ಯವು ಈಗಾಗಲೇ ಲಭ್ಯವಿದೆ. ಈ ಎರಡು ಕಂಪನಿಗಳಿಗೆ ಕೂಡ ಕೇಂದ್ರ ನೋಟಿಸ್ ನೀಡಿದೆ. ವಾಟ್ಸ್‌ಆ್ಯಪ್ ಕಂಪನಿಯು ಭಾರತದಲ್ಲಿ 50 ಕೋಟಿ ಬಳಕೆದಾರರನ್ನು ಹೊಂದಿದೆ. ಟೆಲಿಗ್ರಾಂ ಕಂಪನಿಯ ಗ್ರಾಹಕರ ಸಂಖ್ಯೆ ಬಹಳ ಕಡಿಮೆ ಇದೆ.

‘ಸೈಬರ್ ಅಪರಾಧಗಳನ್ನು ಎಸಗುವ ಬಗೆಗೆ ಯೂಸರ್‌ನೇಮ್ ಸೌಲಭ್ಯವು ಇನ್ನೊಂದು ಆಯಾಮವಿದ್ದಂತೆ’ ಎಂದು ಕೃಷ್ಣನ್ ಅವರು ಸಿಐಐ ಸೈಬರ್ ಭದ್ರತಾ ಶೃಂಗದಲ್ಲಿ ಪಾಲ್ಗೊಂಡ ವೇಳೆ ಹೇಳಿದ್ದಾರೆ.

ಮೆಟಾ ತಂಡದಿಂದ ಅಧಿಕಾರಿಗಳ ಭೇಟಿ

ನವದೆಹಲಿ (ಪಿಟಿಐ): ಯೂಸರ್‌ನೇಮ್ ಸೌಲಭ್ಯದ ವಿಚಾರವಾಗಿ ಸರ್ಕಾರದಿಂದ ನೋಟಿಸ್ ಬಂದ ಬಳಿಕ ಮೆಟಾ ಕಂಪನಿಯ ಪ್ರತಿನಿಧಿಗಳ ತಂಡವು ಐ.ಟಿ. ಸಚಿವಾಲಯದ ಅಧಿಕಾರಿಗಳನ್ನು ಭೇಟಿ ಮಾಡಿದೆ.

ವಾಟ್ಸ್‌ಆ್ಯಪ್‌ನ ಮಾಲೀಕತ್ವವನ್ನು ಮೆಟಾ ಹೊಂದಿದೆ. ಯೂಸರ್‌ನೇಮ್ ಸೌಲಭ್ಯದ ಬಗ್ಗೆ ಮೂರು ದಿನಗಳಲ್ಲಿ ಪೂರ್ಣ ವಿವರ ನೀಡುವಂತೆ ನೋಟಿಸ್‌ನಲ್ಲಿ ತಿಳಿಸಲಾಗಿದ್ದು, ಆ ಕಾಲಮಿತಿಯಲ್ಲಿ ಮೆಟಾ ವಿವರ ಒದಗಿಸಲಿದೆ ಎಂದು ಮೂಲವೊಂದು ಹೇಳಿದೆ.

ಸರ್ಕಾರವು ತನ್ನ ಕಳವಳವನ್ನು ಮೆಟಾ ಪ್ರತಿನಿಧಿಗಳಿಗೆ ವಿವರಿಸಿದೆ ಎಂದು ಗೊತ್ತಾಗಿದೆ.

ಮುಂಬೈ ಧಾರಣೆ (ಶೇಂಗಾ)	
03-07-2026	
ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1590 (1570)
ಒಂದು ವಾರದ ಡೆಲಿವರಿ	1585 (1565)
ಪಾಮ್ ವಾರದ ಡೆಲಿವರಿ	1453 (1448)
ಸೂರ್ಯಕಾಂತಿ ಎಣ್ಣೆ ಕಚ್ಚಾ	1600 (1580)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,45,200 (1,41,600)
ಬೆಳ್ಳಿ ಕೆ.ಜಿಗೆ	2,33,200 (2,26,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಸುದ್ದಿ 2 ನಿಮಿಷ

ಸೇವಾ ವಲಯದ ಪ್ರಗತಿ ಇಳಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಬೇಡಿಕೆ ಇಳಿಕೆಯಿಂದ ಸೇವಾ ವಲಯದ ಬೆಳವಣಿಗೆ ಜೂನ್ ತಿಂಗಳಿನಲ್ಲಿ 17 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿದಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷಾ ವರದಿ ಶುಕ್ರವಾರ ತಿಳಿಸಿದೆ.

ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆ ಸಿದ್ಧಪಡಿಸುವ ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಪಿಎಂಐ ಬ್ಯುಸಿನೆಸ್ ಆ್ಯಕ್ಟಿವಿಟಿ ಸೂಚ್ಯಂಕ ಮೇ ತಿಂಗಳಿನಲ್ಲಿ 59.8 ದಾಖಲಾಗಿತ್ತು. ಇದು ಜೂನ್‌ನಲ್ಲಿ 57.4ಕ್ಕೆ ಇಳಿದಿದೆ ಎಂದು ತಿಳಿಸಿದೆ.

ಸೂಚ್ಯಂಕವು 50ಕ್ಕಿಂತ ಮೇಲಿದ್ದರೆ ಬೆಳವಣಿಗೆಯು ಸಶಕ್ತವಾಗಿದೆ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಬೆಳವಣಿಗೆಯು ಕುಂಠಿತವಾಗಿದೆ ಎಂದು ಅರ್ಥ.

ಮಾರುಕಟ್ಟೆಯಲ್ಲಿ ಉಂಟಾಗಿರುವ ಸವಾಲಿನ ಸ್ಥಿತಿ ಮತ್ತು ವಲಯದ ಕೆಲವು ಸೇವೆಗಳಿಗೆ ಬೇಡಿಕೆ ಕಡಿಮೆ ಆಗಿರುವುದರಿಂದ ಒಟ್ಟಾರೆ ಮಾರಾಟ ಮತ್ತು ಉತ್ಪಾದನೆ ಕುಂಠಿತವಾಗಿದೆ. ಇದು ಸೂಚ್ಯಂಕ ಇಳಿಕೆಗೆ ಕಾರಣವಾಯಿತು. ಅಲ್ಲದೆ, ಇದರ ಪರಿಣಾಮವಾಗಿ ನೇಮಕಾತಿ ಮತ್ತು ವ್ಯವಹಾರದ ವಿಶ್ವಾಸ ಕಡಿಮೆ ಆಯಿತು ಎಂದು ತಿಳಿಸಿದೆ.

‘ಬೇಡಿಕೆ ಇಳಿದಿದ್ದರೂ, ರಫ್ತು ಪ್ರಮಾಣವು ಸದೃಢವಾಗಿದೆ. ಆಸ್ಟ್ರೇಲಿಯಾ, ಬೆಲ್ಜಿಯಂ, ಕೆನಡಾ, ಜರ್ಮನಿ, ಮಲೇಷ್ಯಾ, ನೇಪಾಳ, ಒಮಾನ್, ಕತಾರ್, ಸಿಂಗಪುರ, ಯುಎಇ ಮತ್ತು ಅಮೆರಿಕದಿಂದ ದೇಶದ ಸೇವಾವಲಯಕ್ಕೆ ಬೇಡಿಕೆ ಹೆಚ್ಚಿದೆ’ ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ಹೇಳಿದ್ದಾರೆ.

ಎಚ್‌ಎಸ್‌ಬಿಸಿ ಇಂಡಿಯಾ ಕಾಂಪೋಸಿಟ್ ಪಿಎಂಐ ಉತ್ಪಾದನಾ ಸೂಚ್ಯಂಕವು ಮೇ ತಿಂಗಳಿನಲ್ಲಿ 59.3ರಷ್ಟಿದ್ದರೆ, ಜೂನ್‌ನಲ್ಲಿ 57.1ಕ್ಕೆ ಇಳಿದಿದೆ. ಇದು ದೇಶದ ಖಾಸಗಿ ವಲಯದಲ್ಲಿ ವ್ಯಾಪಾರ ಚಟುವಟಿಕೆ, ಉದ್ಯೋಗ ಮತ್ತು ಹೊಸ ಕಾರ್ಯಾದೇಶವು ಇಳಿಕೆ ಆಗಿರುವುದನ್ನು ಸೂಚಿಸುತ್ತಿದೆ ಎಂದು ತಿಳಿಸಿದ್ದಾರೆ.

ಕಂದಕಕ್ಕೆ ಬಿದ್ದ ಬಸ್– 40 ಸಾವು

ಪೆಶಾವರ/ಇಸ್ಲಾಮಾಬಾದ್ (ಪಿಟಿಐ/ಎಎಫ್‌ಪಿ): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಶುಕ್ರವಾರ ಬಸ್‌ವೊಂದು ಕಂದಕಕ್ಕೆ ಉರುಳಿಬಿದ್ದ ಪರಿಣಾಮ ಮಕ್ಕಳು, ಮಹಿಳೆಯರು ಸೇರಿದಂತೆ 40 ಮಂದಿ ಮೃತಪಟ್ಟಿದ್ದಾರೆ.

ಬ್ರೇಕ್ ವೈಫಲ್ಯಗೊಂಡ ಪರಿಣಾಮ ಬಸ್ ಬೆಟ್ಟದ ತುದಿಯ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ಬಳಿಕ ಕಂದಕಕ್ಕೆ ಉರುಳಿ ಬಿದ್ದಿದೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

‘ಬಲೂಚಿಸ್ತಾನ ಕ್ವೆಟ್ಟಾದಿಂದ ಪೆಶಾವರಕ್ಕೆ ತೆರಳುತ್ತಿದ್ದ ಬಸ್ ಡೇರಾ ಇಸ್ಮಾಯಿಲ್ ಖಾನ್ ಜಿಲ್ಲೆಯಲ್ಲಿ ಅಪಘಾತಕ್ಕೀಡಾಗಿದೆ. ಬಸ್ ಬಿದ್ದ ಕಂದಕವು 70ರಿಂದ 80 ಅಡಿ ಆಳವಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಘಟನೆ ನಡೆಯುವಾಗ ಬಸ್‌ನಲ್ಲಿ 48 ಜನರಿದ್ದರು ಎಂದು ರಕ್ಷಣಾ ತಂಡ ತಿಳಿಸಿದೆ. ಕ್ವೆಟ್ಟಾದಿಂದ ಹೊರಡುವಾಗ ಬಸ್‌ನಲ್ಲಿ 36 ಜನರಿದ್ದರು ಬಳಿಕ ಹಲವರು ಹತ್ತಿದ್ದಾರೆ ಎಂದು ‘ಡಾನ್’ ಪತ್ರಿಕೆ ವರದಿ ಮಾಡಿದೆ.

ಬಂದರು ಅಭಿವೃದ್ಧಿಯಲ್ಲಿ ಚೀನಾ ಕಂಪನಿಗಳು ಭಾಗಿ: ತರೂರ್ ಎಚ್ಚರಿಕೆ

ತಿರುವನಂತಪುರ (ಪಿಟಿಐ): ಇಲ್ಲಿನ ಅದಾನಿ ವಿಳಿಂಜಮ್ ಪೋರ್ಟ್ ಪ್ರೈವೆಟ್ ಲಿಮಿಟೆಡ್ ಕಂಪನಿಯ (ಎವಿಪಿಪಿಎಲ್) ಶೇ 49ರಷ್ಟು ಷೇರುಗಳನ್ನು ಸ್ವಿಟ್ಜರ್‌ಲೆಂಡ್ ಮೂಲದ ಮೆಡಿಟರೇನಿಯನ್ ಶಿಪ್ಪಿಂಗ್ ಕಂಪನಿಗೆ (ಎಂಎಸ್‌ಸಿ) ವರ್ಗಾಯಿಸುವ ಪ್ರಸ್ತಾವದ ಕುರಿತು ಪ್ರತಿಕ್ರಿಯಿಸಿ ರುವ ಸಂಸದ ಶಶಿ ತರೂರ್, ‘ಈ ಯೋಜನೆಯಲ್ಲಿ ಚೀನಾದ ಕಂಪನಿಗಳ ಒಳಗೊಳ್ಳುವಿಕೆಯ ಸಾಧ್ಯತೆ ಇದ್ದಿದ್ದ ರಿಂದ ಈಗಾಗಲೇ ಹಲವು ಬಾರಿ ಬಿಡ್ಡಿಂಗ್ ವಿಫಲವಾಗಿದೆ, ಸರ್ಕಾರ ಅಂತಿಮ ಅನುಮೋದನೆ ನೀಡುವ ಮುನ್ನ ಈ ಅಂಶವನ್ನು ಸಮಗ್ರವಾಗಿ ಪರಿಶೀಲಿಸಬೇಕು’ ಎಂದು ಹೇಳಿದ್ದಾರೆ.

‘ಎವಿಪಿಪಿಎಲ್ ಷೇರುಗಳನ್ನು ಎಂಎಸ್‌ಸಿಗೆ ವರ್ಗಾಯಿಸುವ ಪ್ರಸ್ತಾವವನ್ನು ಸರ್ಕಾರ ಸೂಕ್ಷ್ಮವಾಗಿ ಪರಿಶೀಲಿಸಲಿದೆ’ ಎಂದು ಇತ್ತೀಚೆಗೆ ಕೇರಳಂ ಮುಖ್ಯಮಂತ್ರಿ ವಿ.ಡಿ.ಸತೀಶನ್ ಹೇಳಿದ್ದರು.

ಅಡಿಕೆ ಧಾರಣೆ

ಕುಮಟಾ	
ಚಿಪ್ಪು	29899-33609
ಕೋಕ	17169-32099
ಫ್ಯಾಕ್ಟರಿ	12099-25999
ಹಳೆಚಾಲಿ	42899-47319
ಹೊಸಚಾಲಿ	38099-46089
ಪುತ್ತೂರು	
ಕೋಕ	20000-33000
ಹೊಸತು	30000-47000
ಶಿವಮೊಗ್ಗ	
ಸರಕು	56599-88099
ಬೆಟ್ಟೆ	50119-61639
ರಾಶಿ	41899-53299
ಗೊರಬಲು	21200-42299
ಸಿದ್ದಾಪುರ	
ಬಿಳಿಗೋಟು	26109-33609
ಚಾಲಿ	39209-46099
ಕೋಕ	22619-31929
ಕೆಂಪುಗೋಟು	30089-37089
ರಾಶಿ	44599-49899
ತಟ್ಟಿಬೆಟ್ಟೆ	35689-45199
ಶಿರಸಿ	
ಬೆಟ್ಟೆ	39699-45899
ಬಿಳಿಗೋಟು	27019-33900
ಚಾಲಿ	42500-48191
ಕೆಂಪುಗೋಟು	30099-35099
ರಾಶಿ	48739-51500
ಯಲ್ಲಾಪುರ	
ಬಿಳಿಗೋಟು	16909-35299
ಚಾಲಿ	36899-46799
ಕೋಕ	16615-30899
ಕೆಂಪುಗೋಟು	18811-33499
ರಾಶಿ	48009-54299
ತಟ್ಟಿಬೆಟ್ಟೆ	39399-46799

ಜೈಷ್ ಉಗ್ರ ಸಂಘಟನೆ ಸದಸ್ಯರ ಬಂಧನ

ಅಹಮದಾಬಾದ್ (ಪಿಟಿಐ): ಪಾಕಿಸ್ತಾನ ಮೂಲದ ಜೈಷ್–ಎ–ಮೊಹಮ್ಮದ್ ಭಯೋತ್ಪಾದಕ ಸಂಘಟನೆಯ ಜೊತೆ ಸಂಪರ್ಕ ಹೊಂದಿದ್ದ ಆರೋಪದ ಮೇಲೆ ಎಂಟು ಮಂದಿಯನ್ನು ಗುಜರಾತ್‌ನ ಭಯೋತ್ಪಾದಕ ನಿಗ್ರಹ ದಳ (ಎಟಿಎಸ್) ಬಂಧಿಸಿದೆ.

‘ಗುಜರಾತ್ ಮತ್ತು ಮಧ್ಯಪ್ರದೇಶದ ಹಲವು ಜಿಲ್ಲೆಗಳಲ್ಲಿ ಗುರುವಾರ ಬಂಧನ ಕಾರ್ಯಾಚರಣೆ ನಡೆದಿದೆ. ಬಂಧಿತರು ನಿಷೇಧಿತ ಜೈಷ್–ಎ–ಮೊಹಮ್ಮದ್ ಉಗ್ರ ಸಂಘಟನೆ ಸದಸ್ಯರಾಗಿದ್ದರು’ ಎಂದು ಎಟಿಎಸ್‌ನ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

‘ಬಂಧಿತರ ವಿರುದ್ಧ ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಮತ್ತು ಬಿಎನ್‌ಎಸ್‌ನ ಹಲವು ಕಾಯ್ದೆಗಳ ಅಡಿಯಲ್ಲಿ ಪ್ರಕರಣ ದಾಖಲಾಗಿದೆ’ ಎಂದು ಅವರು ಹೇಳಿದ್ದಾರೆ.

‘ಪಾಕಿಸ್ತಾನದ ಭಯೋತ್ಪಾದಕ ಸಂಘಟನೆ ಸಹಚರರಾದ ಅಬ್ದುಲ್ಲಾ ಮತ್ತು ಮೊಹಮ್ಮದ್ ಉಮರ್ ಜೊತೆ ಇವರಿಗೆ ಸಂಪರ್ಕ ಇತ್ತು. ಗುಜರಾತ್‌ನಲ್ಲಿ ಉಗ್ರ ಸಂಘಟನೆಯ ಸಿದ್ಧಾಂತ ಪ್ರಚಾರ ಮಾಡುವ ಮತ್ತು ಕಾರ್ಯರೂಪಕ್ಕೆ ತರುವ ಕೆಲಸ ಮಾಡುತ್ತಿದ್ದರು’ ಎಂದು ಎಟಿಎಸ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

‘ಶಂಕಿತರು ₹3 ಲಕ್ಷ ನೆರವು ಪಡೆದು ಹಳೆಯ ಕಾರೊಂದನ್ನು ಖರೀದಿಸಿದ್ದರು. ಅವರ ಬಳಿ ನಿಷೇಧಿತ ವಸ್ತುಗಳು, ಜಿಹಾದಿ ಪುಸ್ತಕ, ಚಿತ್ರಗಳು, ಭಾಷಣದ ತುಣುಕುಗಳಿದ್ದ ಮೊಬೈಲ್ ಅನ್ನು ವಶಕ್ಕೆ ಪಡೆಯಲಾಗಿದೆ. ಪಾಕಿಸ್ತಾನದಲ್ಲಿ ಮುದ್ರಿಸಿದ್ದು ಎನ್ನಲಾದ ಮಸೂದ್ ಅಜರ್ ಬರೆದಿರುವ ಎರಡು ಪುಸ್ತಕಗಳೂ ಇವರ ಬಳಿ ದೊರೆತಿವೆ’ ಎಂದು ಎಟಿಎಸ್ ತಿಳಿಸಿದೆ.

ನಾವಿಕನ ಅಂಗಾಂಗ ಕಣ್ಮರೆ ತನಿಖೆಗೆ ಭಾರತ ಆಗ್ರಹ

ನವದೆಹಲಿ (ಪಿಟಿಐ): ವೆನೆಜುವೆಲಾದಿಂದ ಸ್ವದೇಶಕ್ಕೆ ತಂದಿದ್ದ ಭಾರತದ ನಾವಿಕರೊಬ್ಬರ ಮೃತದೇಹದಲ್ಲಿ ಅಂಗಾಂಗ ಕಣ್ಮರೆಯಾಗಿರುವ ಕುರಿತು ವಿದೇಶಾಂಗ ಇಲಾಖೆಯು ಅಲ್ಲಿನ ಸರ್ಕಾರದ ಗಮನಸೆಳೆದಿದ್ದು, ತ್ವರಿತವಾಗಿ ತನಿಖೆ ನಡೆಸುವಂತೆ ಮನವಿ ಮಾಡಿದೆ.

ಉತ್ತರ ಪ್ರದೇಶದ ದೇವರಿಯಾ ಜಿಲ್ಲೆಯ 33 ವರ್ಷದ ನಾವಿಕ ರಾಕೇಶ್ ಚೌಹಾಣ್ ಅವರು ವೆನೆಜುವೆಲಾದ ಹಡಗಿನಲ್ಲಿ ನಾವಿಕರಾಗಿ ಕೆಲಸ ಮಾಡುತ್ತಿದ್ದರು. ಮೇ ತಿಂಗಳಲ್ಲಿ ಅವರು ಮೃತಪಟ್ಟ ಬಳಿಕ ಮೃತದೇಹವನ್ನು ಭಾರತಕ್ಕೆ ಕರೆ ತಂದು ಮರಣೋತ್ತರ ಪರೀಕ್ಷೆ ನಡೆಸಲಾಗಿತ್ತು. ಈ ವೇಳೆ ಅವರ ಅಂಗಾಂಗಳು ಕಣ್ಮರೆಯಾಗಿರುವುದು ಕಂಡುಬಂದಿತ್ತು.

‘ಮಿದುಳು, ಎರಡು ಶ್ವಾಸಕೋಶಗಳು, ಯಕೃತ್ತು, ಮೂತ್ರಪಿಂಡಗಳು, ಮೇದೋಜೀರಕ ಗ್ರಂಥಿ, ಕರುಳು, ಮೂಳೆ, ಧ್ವನಿಪೆಟ್ಟಿಗೆಯು ಕಣ್ಮರೆಯಾಗಿರುವುದು ಮರಣೋತ್ತರ ಪರೀಕ್ಷೆಯಲ್ಲಿ ಕಂಡುಬಂದಿದೆ’ ಎಂದು ದೇವರಿಯಾ ವೈದ್ಯಕೀಯ ಕಾಲೇಜಿನ ಅಧೀಕ್ಷಕ ಎಚ್.ಕೆ. ಮಿಶ್ರಾ ತಿಳಿಸಿದ್ದಾರೆ.

ಅಂಗಾಂಗ ಕಣ್ಮರೆಯಾಗಿರುವ ಕಾರಣ, ಸಾವಿನ ನೈಜ ಕಾರಣ ಪತ್ತೆಯಾಗಿಲ್ಲ.

ರಷ್ಯಾದಲ್ಲಿ ಇಂಧನ ಕೊರತೆ: ಜನರ ಪರದಾಟ

ಸಂಸ್ಕರಣಾ ಘಟಕಗಳ ಮೇಲೆ ಉಕ್ರೇನ್ ದಾಳಿ; ಸಮಸ್ಯೆ ಗಂಭೀರವಾಗಿ ಪರಿಗಣಿಸದ ಪುಟಿನ್

ಮಾಸ್ಕೊ (ಎಪಿ): ರಷ್ಯಾದ ತೈಲ ಸಂಸ್ಕರಣಾ ಘಟಕಗಳನ್ನು ಗುರಿಯಾಗಿಸಿ ಉಕ್ರೇನ್ ದಾಳಿ ನಡೆಸುತ್ತಿದೆ. ಇದರಿಂದ, ರಷ್ಯಾದಲ್ಲಿ ತೀವ್ರ ಇಂಧನ ಕೊರತೆ ಎದುರಾಗಿದೆ.

ಲಕ್ಷಾಂತರ ರಷ್ಯನ್ನರಿಗೆ ಸಂಕಷ್ಟ ಎದುರಾಗಿದ್ದು, ಜನಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ.

ಕಳೆದ ಮಾರ್ಚ್‌ನಿಂದ ರಷ್ಯಾ ಮತ್ತು ಅದರ ಆಕ್ರಮಿತ ಕ್ರಿಮಿಯಾದಲ್ಲಿನ ತೈಲ ಸಂಸ್ಕರಣ ಘಟಕಗಳು ಮತ್ತು ಇತರ ಇಂಧನ ಸೌಲಭ್ಯಗಳ ಮೇಲೆ ಉಕ್ರೇನ್ 50ಕ್ಕೂ ಹೆಚ್ಚಿನ ದಾಳಿಗಳನ್ನು ನಡೆಸಿದೆ.

ಮಾಸ್ಕೊದಲ್ಲಿರುವ ತೈಲ ಸಂಸ್ಕರಣಾ ಘಟಕದ ಮೇಲೆ ಉಕ್ರೇನ್ ಎರಡು ಬಾರಿ ದಾಳಿ ನಡೆಸಿದೆ. ಜೂನ್ 18ರಂದು ನಡೆದ ಎರಡನೇ ದಾಳಿಯಿಂದ ಬೆಂಕಿ ಹೊತ್ತಿಕೊಂಡು ಪ್ರಮುಖ ಉಪಕರಣಗಳಿಗೆ ಹಾನಿಯಾಗಿತ್ತು.

ಅನೇಕ ಪ್ರದೇಶಗಳಲ್ಲಿ ಪಡಿತರ ವ್ಯವಸ್ಥೆಯನ್ನು ಪರಿಚಯಿಸಲಾಗಿದೆ. ವಾಹನ ಚಾಲಕರು ಇಂಧನ ತುಂಬಲು ಗಂಟೆಗಟ್ಟಲೆ ಸಾಲಿನಲ್ಲಿ ಕಾಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಮಾಸ್ಕೊ ನಗರದ ಬಂಕ್‌ವೊಂದರಲ್ಲಿ ಸಾಲುಗಟ್ಟಿ ವಾಹನಗಳು ನಿಂತಿದ್ದವು –ಎಎಫ್‌ಪಿ ಚಿತ್ರ

ವಿಶ್ವದ ಪ್ರಮುಖ ತೈಲ ಉತ್ಪಾದಕ ರಾಷ್ಟ್ರಗಳಲ್ಲಿ ಒಂದಾಗಿರುವ ರಷ್ಯಾಕ್ಕೆ ಎದುರಾಗಿರುವ ಈ ಸಮಸ್ಯೆಯನ್ನು ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಗಂಭೀರವಾಗಿ ಪರಿಗಣಿಸಿಲ್ಲ. ಕದನ ವಿರಾಮ ಪ್ರಸ್ತಾವಗಳನ್ನು ತಿರಸ್ಕರಿಸಿದ್ದಾರೆ. ಗುರಿ ಈಡೇರುವವರೆಗೂ ಯುದ್ಧ ಮುಂದುವರಿಯುತ್ತದೆ ಎಂದು ಅವರು ಹೇಳಿದ್ದಾರೆ.

‘ರಷ್ಯಾದ ಇಂಧನ ಮೂಲಸೌಕರ್ಯಗಳ ಮೇಲಿನ ಉಕ್ರೇನ್ ದಾಳಿಯು, ಯುದ್ಧದಲ್ಲಿ ಉಂಟಾದ ನಷ್ಟಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ಪ್ರಯತ್ನದ ಭಾಗವಾಗಿದೆ’ ಎಂದು ಪುಟಿನ್ ಹೇಳಿದ್ದಾರೆ.

‘ಉಕ್ರೇನ್‌ನ ದಾಳಿಗಳಿಂದಾಗಿ ಇಂಧನ ಮೂಲಸೌಕರ್ಯಗಳಿಗೆ ವ್ಯಾಪಕವಾಗಿ ಹಾನಿ ಉಂಟಾಗಿದೆ. ಇವುಗಳ ದುರಸ್ತಿಗೆ ಹೆಚ್ಚಿನ ಹಣ ಬೇಕಾಗುತ್ತದೆ. ಸಮಯವೂ ಹಿಡಿಯಲಿದೆ’ ಎಂದು ಮ್ಯಾಕ್ರೊ ಅಡ್ವೈಸರಿ ಸಂಸ್ಥೆಯ ಸಿಇಒ ಕ್ರಿಸ್ ವೀಫರ್ ಹೇಳಿದ್ದಾರೆ.

ಉಕ್ರೇನ್ ದಾಳಿಗೆ ಪ್ರತಿಯಾಗಿ ರಷ್ಯಾದ ಸೇನೆಯು ಗುರುವಾರ ರಾತ್ರಿಯಿಡೀ ಕೀವ್ ನಗರದ ಮೇಲೆ ಗುಂಡಿನ ದಾಳಿ ನಡೆಸಿದ್ದು, 30 ಮಂದಿ ಮೃತಪಟ್ಟಿದ್ದಾರೆ.

ಭಾರತ–ಜಪಾನ್ ಬಾಂಧವ್ಯ ಸಂಭ್ರಮಕ್ಕೆ ಸಿದ್ಧತೆ

ನವದೆಹಲಿ (ಪಿಟಿಐ): ಭಾರತ ಮತ್ತು ಜಪಾನ್ ನಡುವಿನ ದ್ವಿಪಕ್ಷೀಯ ಸಂಬಂಧಕ್ಕೆ ಮುಂದಿನ ವರ್ಷ 75 ವರ್ಷಗಳು ಪೂರ್ಣಗೊಳ್ಳುತ್ತಿವೆ.

ಇದರ ಅಂಗವಾಗಿ ಕ್ರಿಕೆಟ್ ಮ್ಯಾಚ್, ಉಭಯ ದೇಶಗಳ ಕಲೆ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ವರ್ಣರಂಜಿತ ಕಾರ್ಯಕ್ರಮಗಳನ್ನು ಆಯೋಜಿಸಲು ಉಭಯ ದೇಶಗಳು ಚಿಂತನೆ ನಡೆಸಿವೆ.

‘ಉಭಯ ದೇಶಗಳು 2027ನೇ ಇಸವಿಯನ್ನು ‘ಭಾರತ–ಜಪಾನ್ ಇಯರ್ ಆಫ್ ಶೇರ್ಡ್ ಹಾರಿಜಾನ್ಸ್’ ಎಂದು ಆಚರಿಸುತ್ತಿವೆ’ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಘೋಷಿಸಿದೆ.

ಎರಡು ದೇಶಗಳ ನಡುವಿನ ದ್ವಿಪಕ್ಷೀಯ ಸಹಕಾರವು ಮೂರನೇ ದೇಶವನ್ನು ಗುರಿ ಮಾಡಬಾರದು ಮತ್ತು ಆ ದೇಶದ ಹಿತಾಸಕ್ತಿಯನ್ನು ಕಡೆಗಣಿಸಬಾರದು

ಚೀನಾ

‘ಉಭಯ ದೇಶಗಳು ಜಂಟಿಯಾಗಿ ವರ್ಷಪೂರ್ತಿ ಸ್ಮರಣಾರ್ಥ ಕಾರ್ಯಕ್ರಮವನ್ನು ಆಯೋಜಿಸುವ ಬಗ್ಗೆ ಚಿಂತನೆ ನಡೆಸುತ್ತಿವೆ’ ಎಂದೂ ತಿಳಿಸಿದೆ.

‘2027ರ ಏಪ್ರಿಲ್ 28’ ಅನ್ನು ‘ಭಾರತ–ಜಪಾನ್ ವಾರ’ ಎಂದು ಗೊತ್ತುಪಡಿಸಲಾಗಿದೆ’ ಎಂದು ಸಚಿವಾಲಯ ಹೇಳಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಜಪಾನ್ ಪ್ರಧಾನಿ ಸನೇ ತಕೈಚಿ ಅವರು ದ್ವಿಪಕ್ಷೀಯ ಸಂಬಂಧದ ಅಮೃತ ಮಹೋತ್ಸವದ ಬಗ್ಗೆ ಶುಕ್ರವಾರ ಮಾತನಾಡಿದರು.

ರೈತರು ಬೆಳೆಗಳನ್ನು ಬೆಳೆಯಬಾರದು ಎಂದು ಸಿಎಂ ಸೂಚನೆ ನೀಡಿರುವುದು ಬರ ನಿರ್ವಹಣೆಗಿರುವ ಪರಿಹಾರವೇ?

ಹೌದು | ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

3 ಚೀನಾ ಆ್ಯಪ್ ತೆಗೆಯಲು ಸೂಚನೆ

ನವದೆಹಲಿ (ಪಿಟಿಐ): ಬ್ಯಾಟರಿ ಚಾಲಿತ ವಾಹನಗಳನ್ನು ನಿಷ್ಕ್ರಿಯಗೊಳಿಸಲು ದುರ್ಬಳಕೆ ಮಾಡಲಾಗುತ್ತಿದ್ದ ಚೀನಾದ ಮೂರು ಆ್ಯಪ್‌ಗಳನ್ನು ತೆಗೆಯುವಂತೆ ವಿವಿಧ ವೇದಿಕೆಗಳಿಗೆ ಕೇಂದ್ರ ಸರ್ಕಾರ ಸೂಚಿಸಿದೆ ಎಂದು ಮೂಲಗಳು ಶುಕ್ರವಾರ ತಿಳಿಸಿವೆ. ಬಿಎಟಿ–ಬಿಎಂಎಸ್, ಲಾಸ್ಸಿಜಿ, ಎಪೊಕ್–ಐ–ಅಯಾನ್ ಆ ಮೂರು ಆ್ಯಪ್‌ಗಳು.

ಕೆಲವು ಇ–ರಿಕ್ಷಾಗಳನ್ನು ಚೀನಾದ ಆ್ಯಪ್ ಬಿಎಟಿ–ಬಿಎಂಎಸ್‌ನಲ್ಲಿ ಲಭ್ಯವಿರುವ ಸೌಲಭ್ಯವೊಂದನ್ನು ಬಳಸಿ ದೂರದಿಂದಲೇ ನಿಷ್ಕ್ರಿಯಗೊಳಿಸುತ್ತಿರುವ ವಿಡಿಯೊಗಳು ವ್ಯಾಪಕವಾಗಿ ಪ್ರಸಾರವಾದ ನಂತರದಲ್ಲಿ ಸರ್ಕಾರ ಈ ಹೆಜ್ಜೆ ಇರಿಸಿದೆ.

ಈ ವಿಡಿಯೊಗಳು ಇಂಟರ್ನೆಟ್ ಜೊತೆ ಸಂಪರ್ಕ ಹೊಂದಿರುವ ವಾಹನ ನಿರ್ವಹಣಾ ವ್ಯವಸ್ಥೆಗಳು ಒಡ್ಡುವ ಸೈಬರ್ ಅಪಾಯಗಳ ಬಗ್ಗೆ ಕಳವಳ ಮೂಡಿಸಿವೆ.

ಈ ಮೂರು ಆ್ಯಪ್‌ಗಳ ಮಾದರಿಯಲ್ಲಿಯೇ ಬಳಕೆ ಆಗುತ್ತಿರುವ ಇತರ ಯಾವುದೇ ಆ್ಯಪ್‌ಅನ್ನು ತೆಗೆಯಲಾಗುತ್ತದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

‘ಯಾವುದೇ ಸಂಘಟನೆ ನಿಯಂತ್ರಿಸಲ್ಲ’

ನಾಗ್ಪುರ (ಪಿಟಿಐ): ‘ಆರ್‌ಎಸ್‌ಎಸ್ ಸ್ವಯಂಸೇವಕರು ಭಾಗಿಯಾಗಿರುವ ಪ್ರತಿಯೊಂದು ಸಂಸ್ಥೆಯನ್ನು ದೂರದಿಂದಲೇ ನಿಯಂತ್ರಿಸುತ್ತದೆ ಎಂಬ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಪ್ರತಿ ಸಂಸ್ಥೆಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತವೆ’ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ತಿಳಿಸಿದ್ದಾರೆ.



ಮೋಹನ್ ಭಾಗವತ್

‘ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಮರ್ಥ್ಯವಿರುವ ವ್ಯಕ್ತಿಗಳನ್ನು ಸೃಷ್ಟಿಸುವುದೇ ಆರ್‌ಎಸ್‌ಎಸ್‌ನ ಪ್ರಮುಖ ಆದ್ಯತೆಯಾಗಿದೆ’ ಎಂದು ತಿಳಿಸಿದ್ದಾರೆ.

ಆರ್‌ಎಸ್‌ಎಸ್‌ನ ಕಾರ್ಯವೈಖರಿಯನ್ನು ಗಮನಿಸಿರುವ ವಿವಿಧ ರಾಷ್ಟ್ರಗಳು, ತಮ್ಮ ದೇಶದ ಯುವಕರಿಗೂ ತರಬೇತಿ ನೀಡಲು ಕೇಳಿಕೊಂಡಿದೆ ಎಂದು ಹೇಳಿದ್ದಾರೆ.

ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ ನೇತೃತ್ವದಲ್ಲಿ ಸಿದ್ಧತಾ ಕಾರ್ಯ

ಖಮೇನಿ ಅಂತ್ಯಕ್ರಿಯೆ: ಗೌರವ ಸಮರ್ಪಣೆ

ಟೆಹರಾನ್ (ಎಪಿ): ಇರಾನ್‌ನ ಪರಮೋಚ್ಚ ನಾಯಕರಾಗಿದ್ದ ಆಯತೊಲ್ಲಾ ಅಲಿ ಖಮೇನಿ ಅವರ ಅಂತ್ಯಕ್ರಿಯೆಯ ವಿಧಿವಿಧಾನಗಳು ಶನಿವಾರದಿಂದ ಆರಂಭವಾಗಲಿದ್ದು, ಇದಕ್ಕಾಗಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

‘ಖಮೇನಿ ಅವರ ಅಂತ್ಯಕ್ರಿಯೆಯಲ್ಲಿ ಜನರು ಭಾರಿ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಇಸ್ಲಾಮಿಕ್ ಗಣರಾಜ್ಯವನ್ನು ಬೆಂಬಲಿಸಬೇಕು’ ಎಂಬ ಬ್ಯಾನರ್‌ಗಳು ಟೆಹರಾನ್‌ನಾದ್ಯಂತ ರಾರಾಜಿಸುತ್ತಿವೆ.

ಅಮೆರಿಕ ಹಾಗೂ ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಯುದ್ಧ ಆರಂಭಿಸಿದಾಗ, ಮೊದಲ ದಿನವಾದ ಫೆಬ್ರುವರಿ 28ರಂದು ನಡೆದ ದಾಳಿಯಲ್ಲಿ ಅಲಿ ಖಮೇನಿ, ಹಿರಿಯ ಮಗಳು, ಅಳಿಯ, 14 ತಿಂಗಳ ಮೊಮ್ಮಗಳು, ಇರಾನ್‌ನ ಈಗಿನ ಪರಮೋಚ್ಚ ನಾಯಕ ಆಯತೊಲ್ಲಾ ಮೊಜ್ತಬಾ ಖಮೇನಿ ಅವರ ಪತ್ನಿ ಮೃತಪಟ್ಟಿದ್ದರು.

ಟೆಹರಾನ್‌ನ ಗ್ರ್ಯಾಂಡ್ ಮೊಸಲ್ಲಾದಲ್ಲಿ ಆಯತೊಲ್ಲಾ ಅಲಿ ಖಮೇನಿ ಹಾಗೂ ಕುಟುಂಬ ಸದಸ್ಯರ ಶವಪೆಟ್ಟಿಗೆಗಳನ್ನು ಇರಿಸಿದ್ದು, ಧಾರ್ಮಿಕ ಮುಖಂಡರು ಹಾಗೂ ಕುಟುಂಬಸ್ಥರು ಅಂತಿಮ ಗೌರವ ಸಮರ್ಪಿಸಿದರು –ಎಪಿ ಚಿತ್ರ

ಟೆಹರಾನ್‌ನ ಗ್ರ್ಯಾಂಡ್ ಮೊಸಲ್ಲಾದಲ್ಲಿ ಕುಟುಂಬ ಸದಸ್ಯರ ಶವಪೆಟ್ಟಿಗೆಗಳ ಪಕ್ಕದಲ್ಲಿ ಖಮೇನಿ ಅವರ ಶವಪೆಟ್ಟಿಗೆಯನ್ನು ಶುಕ್ರವಾರ ಇರಿಸಲಾಗಿತ್ತು. ಮಿಲಿಟರಿ ಬ್ಯಾಂಡ್ ನುಡಿಸುತ್ತಿದ್ದಂತೆ ಇರಾನ್‌ನ ಸಂಸತ್ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್, ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ, ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್, ಧಾರ್ಮಿಕ ಮುಖಂಡರು, ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್, ಸೇನಾ ಮುಖ್ಯಸ್ಥ ಆಸೀಮ್ ಮುನೀರ್ ಸೇರಿದಂತೆ ವಿದೇಶಿ ಗಣ್ಯರು ಅಂತಿಮ ಗೌರವ ಸಲ್ಲಿಸಿದ್ದಾರೆ.

ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್‌ನ (ಐಆರ್‌ಜಿಸಿ) ಜನರಲ್ ಅಹ್ಮದ್ ವಹಿದಿ ಅವರು ಯುದ್ಧ ಆರಂಭವಾದ ಬಳಿಕ ಇದೇ ಮೊದಲ ಬಾರಿಗೆ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದಾರೆ. ಖಮೇನಿ ಅವರ ಅಂತ್ಯಕ್ರಿಯೆ ಕುರಿತು ಗುರುವಾರ ನಡೆದ ಸಭೆಯಲ್ಲಿ ಅವರು ಭಾಗವಹಿಸಿದ್ದರು. ಜತೆಗೆ ಖಮೇನಿ ಅವರ ಶವಪೆಟ್ಟಿಗೆ ಪಕ್ಕದಲ್ಲಿ ಕುಳಿತಿರುವ ಫೋಟೊಗಳು ಸರ್ಕಾರಿ ಮಾಧ್ಯಮದಲ್ಲಿ ಪ್ರಸಾರವಾಗಿವೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Domestic Helpers / Housekeeping

ಜಾಬ್! ಜಾಬ್!! ಜಾಬ್!!! ಹೌಸ್ ಕೀಪಿಂಗ್ ಸಿಬ್ಬಂದಿಗಳು ಮತ್ತು ಸೂಪರ್ವೈಸರ್ ಪ್ರಸಿದ್ಧ ಆಸ್ಪತ್ರೆಯಲ್ಲಿ ತುರ್ತಾಗಿ ಅಗತ್ಯವಿದೆ. ಬೆಂಗಳೂರು, ಕಲ್ಯಾಣ ನಗರದಲ್ಲಿ ಸಂಬಳ: ಸಿಬ್ಬಂದಿ - ₹ 19,300/- ಸೂಪರ್ವೈಸರ್ - ₹ 23,000/- ವಯಸ್ಸು: 18 ರಿಂದ 39 ವರ್ಷಗಳು ಕರೆಮಾಡಿ: 9250073007, 9945779607.

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

Drivers

ಅನುಭವವುಳ್ಳ ಭಾರಿವಾಹನ ಚಾಲಕರು (Heavy vehicles) ಹಾಗೂ JCB ಆಪರೇಟರಗಳು ಕೂಡಲೇ ಬೇಕಾಗಿದ್ದಾರೆ. ಸಂಪರ್ಕಿಸಿ: 'Canara Projects' ಫೋನ್ 9900240446

Part-Time Jobs

ತಕ್ಷಣ ಬೇಕಾಗಿದ್ದಾರೆ. ಕರ್ನಾಟಕದಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ. 20,000 - 25,000 ಸಂಪಾದಿಸಿ. 8095222026

ವ್ಯಾಪಾರ

Business to Business

Finance

'ಬಂಡವಾಳ ಹೂಡಿಕೆ' ಲಾಭದಾಯಕ ಸ್ವತ್ತುಗಳ ಮೇಲೆ ಬಂಡವಾಳ ಹೂಡಿಕೆ ಮಾಡಲು ಇಚ್ಛಿಸುವವರು ಸಂಪರ್ಕಿಸಿ 9739627282

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮೊದಲಾರ್ಧ ಭರವಸೆ ದ್ವಿತೀಯಾರ್ಧ ನಿರಾಸೆ

ಮಣ್ಣಿನ ಘಮವಿರುವ ಚಿತ್ರಗಳು ಆ ಪರಿಮಳವನ್ನು ಸೂಸುವುದರತ್ತ ಗಮನಹರಿಸದೆ ಹಳಿ ತಪ್ಪಿದರೆ ಸಿನಿಮಾದ ಮೂಲ ಉದ್ದೇಶವೇ ಮರೆಯಾಗುತ್ತದೆ. ಹಳ್ಳಿಯ ಸೊಗಡಿನ 'ಗ್ರಾಮಾಯಣ'ವು ಮೊದಲಾರ್ಧದಲ್ಲಿ ಭರವಸೆಯನ್ನು ಮೂಡಿಸಿ, ದ್ವಿತೀಯಾರ್ಧದಲ್ಲಿ ರಾಜಕೀಯ ಭಾಷಣದಂತೆ ಭಾಸವಾಗುತ್ತದೆ.

ಸೀನ ಎಂದೇ ಕರೆಯಲ್ಪಡುವ ಶ್ರೀನಿವಾಸ(ವಿನಯ್ ರಾಜ್‌ಕುಮಾರ್) ದೇವಪುರ ಎಂಬ ಊರಿನಲ್ಲಿದ್ದು ಕೊಂಡೇ ಜೀವನ ನಡೆಸುವ ಕನಸು ಕಟ್ಟಿಕೊಂಡಾತ. ಬಹು ಮುಂಗೋಪಿ. ಟ್ರ್ಯಾಕ್ಟರ್ ಖರೀದಿ ಈತನ ಕನಸು. ನಗರದ ಕಡೆ ಮುಖಮಾಡುವ ಯುವಕರಿಗೂ ಹಳ್ಳಿಯ ಜೀವನದ ಪಾಠ ಮಾಡುವಾತ. ಊರಿನ ಹುಡುಗಿ 'ಕುಸುಮಾ'ಳೆಂದರೆ ಈತನಿಗೆ ಬಲು ಪ್ರೀತಿ. ಇವನ ಜೀವನದಲ್ಲಿ ಗ್ರಾಮ ಪಂಚಾಯತಿ ಸದಸ್ಯ 'ಸದಾನಂದ ಸ್ವಾಮಿ'(ಗೋಪಾಲಕೃಷ್ಣ ದೇಶಪಾಂಡೆ) ಹಾಗೂ 'ಕರಿ ಬೆಕ್ಕು'(ಯೋಗಿ) ಬಂದ ಬಳಿಕ ಆಗುವ ತಿರುವುಗಳೇ ಸಿನಿಮಾದ ಕಥೆ.

ಮೊದಲಾರ್ಧದಲ್ಲಿ ಬೆಟ್ಟದಷ್ಟು ಭರವಸೆ ಮೂಡಿಸುವ ಕಥೆ, ಚಿತ್ರಕಥೆ, ಅದಕ್ಕೆ ತಕ್ಕುದಾದ ಛಾಯಾಚಿತ್ರಗ್ರಹಣ, ಹಾಡುಗಳು ಸಿನಿಮಾದಲ್ಲಿದೆ. ಪಾತ್ರಗಳ ಪರಿಚಯವೂ ಆಳವಾಗಿದೆ. ಹಳ್ಳಿಯ ಬದುಕು, ಅದರ ಚಿತ್ರಣ, ಆ ಜಾತ್ರೆ, ಅದರೊಳಗಿನ ಪದ, ಹೆಜ್ಜೆ ಎಲ್ಲವೂ ಚೆಂದ. ಅಷ್ಟು ಸೂಕ್ಷ್ಮವಾಗಿ ನಿರ್ದೇಶಕರು ಈ ಭಾಗವನ್ನು ಕೆತ್ತಿದ್ದಾರೆ. ಸೀನ ಹಾಗೂ ಕುಸುಮಾಳ ಮುಗ್ಧವಾದ ಪ್ರೇಮಕ್ಕೂ ಒಂದು ಚೆಂದದ ಗ್ರಾಫ್ ನೀಡಿದ್ದಾರೆ. ಅಮ್ಮ–ಮಗನ ಬಾಂಧವ್ಯ, ಹಳ್ಳಿ ಸೊಗಡು ಭರಪೂರವಾಗಿದೆ.

ವಿನಯ್ ರಾಜ್‌ಕುಮಾರ್

ಸಮಯ ಉರುಳಿದಂತೆ ಕಥೆ ಕೇವಲ ದ್ವೇಷ, ರಾಜಕೀಯ, ಹೊಡೆದಾಟಕ್ಕೆ ಹೊರಳುತ್ತದೆ. ಕಥೆಯ ಕೆಲವು ಭಾಗ ಅನಗತ್ಯ ಎಂದೆನಿಸುತ್ತದೆ. ಬರ, ಕೃಷಿಯಲ್ಲಿನ ಸಮಸ್ಯೆ, ಬದುಕಿನ ಬವಣೆಗಳನ್ನು ಕೆಲ ದೃಶ್ಯ ಹಾಗೂ ಸಂಭಾಷಣೆಗೆ ನಿರ್ದೇಶಕರು ಸೀಮಿತಗೊಳಿಸಿದ್ದಾರೆ. ನಾಯಕನ ಬದುಕನ್ನು ಇದರತ್ತ ತಿರುಗಿಸುವ ಅವಕಾಶವನ್ನು ಸೃಷ್ಟಿಸಬಹುದಿತ್ತು. ಇದು ಕಥೆಗೆ ಹೊಸ ಆಯಾಮವನ್ನೇ ನೀಡುವ ಸಾಧ್ಯತೆಯನ್ನು ಹೊಂದಿತ್ತು. ಬದಲಾಗಿ ದ್ವಿತೀಯಾರ್ಧದ ಕಥೆಯು ಹಳ್ಳಿ ರಾಜಕೀಯಕ್ಕೆ ಸೀಮಿತವಾಗಿದೆ. ಇದರಲ್ಲಿ ಮಾಹಿತಿ ಹಕ್ಕು ಕಾಯ್ದೆ, ಜಾತಿ ರಾಜಕೀಯ ಮುಂತಾದುವುಗಳನ್ನು ತರಲಾಗಿದೆ.

ನಟನೆಯಲ್ಲಿ ವಿನಯ್ ರಾಜ್‌ಕುಮಾರ್ 'ಸೀನ'ನಾಗಿ ಜೀವಿಸಿದ್ದಾರೆ. ಮುಗ್ಧತೆಯೂ, ಮುಂಗೋಪವೂ ತುಂಬಿದ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಮೇಘ ಶೆಟ್ಟಿ ಮಾತಿನ ಹಾಗೂ ನೋಟದ ಬಾಣಗಳಲ್ಲೇ ಗುರಿ ಮುಟ್ಟಿದ್ದಾರೆ. ಅಪರ್ಣಾ ಅವರು ಸದಾ ಬೈಯುವ ಆದರೂ ಪ್ರೀತಿಸುವ ಅಮ್ಮನಾಗಿ ಮನಮುಟ್ಟುತ್ತಾರೆ. ಯೋಗಿ ಅವರು ನಿಭಾಯಿಸಿದ 'ಕರಿ ಬೆಕ್ಕು' ಹಾಗೂ ಅಚ್ಯುತ್ ಕುಮಾರ್ ಅವರ ವೈದ್ಯರ ಪಾತ್ರದ ಬರವಣಿಗೆ ಇನ್ನಷ್ಟು ಭಿನ್ನ, ಗಟ್ಟಿಯಾಗಿರಬೇಕಿತ್ತು. ಕ್ಲೈಮ್ಯಾಕ್ಸ್ ಹಂತದಲ್ಲಿ 'ಕೊತ್ತಲವಾಡಿ' ಸಿನಿಮಾದ ಪಾತ್ರದಂತೆಯೇ ಗೋಪಾಲಕೃಷ್ಣ ದೇಶಪಾಂಡೆ ಅವರ ಪಾತ್ರ ಕಾಣಿಸುತ್ತದೆ. 'ಸಿಕ್ಸ್ತ್ ಸೆನ್ಸ್ ಸೀನ' ಎಂದು ತನ್ನನ್ನು ತಾನೇ ಕರೆದುಕೊಳ್ಳುವ ನಾಯಕನಿಗೆ ನಡೆಯುವ ಘಟನೆಗಳೇಕೆ ಅರಿವೇ ಆಗುವುದಿಲ್ಲ ಎನ್ನುವುದಕ್ಕೆ ಉತ್ತರವಿಲ್ಲ! ಕೆಲ ದೃಶ್ಯಗಳು ಸಂಭಾಷಣೆಗೆ ತದ್ವಿರುದ್ಧವಾಗಿದೆ. ಕ್ಲೈಮ್ಯಾಕ್ಸ್‌ನ ಕೊನೆಯ ದೃಶ್ಯಕ್ಕೂ ಅರ್ಥವಿಲ್ಲ.

ಸಿನಿಮಾದುದ್ದಕ್ಕೂ ಸಂಭಾಷಣೆ ಸೊಗಸಾಗಿದೆ, ಹಲವೆಡೆ ತೀಕ್ಷ್ಣವೂ ಆಗಿದೆ. ಎರಡನೇ ಭಾಗದ ಸಣ್ಣ ಸುಳಿವನ್ನೂ ನಿರ್ದೇಶಕರು ನೀಡಿದ್ದಾರೆ. 'ಏನೇ ಹೇಳು ಕುಸುಮ' ಹಾಗೂ 'ಬೆಂಕಿ' ಹಾಡುಗಳು ಚೆನ್ನಾಗಿವೆ. ಪೂರ್ಣಚಂದ್ರ ತೇಜಸ್ವಿ ಸಂಗೀತ ಹಾಗೂ ಸಂತೋಷ್ ರೈ ಪಾತಾಜೆ ಛಾಯಾಚಿತ್ರಗ್ರಹಣ 'ಗ್ರಾಮಾಯಣ'ಕ್ಕೆ ಜೀವ ತುಂಬಿದೆ.

ಅಭಿಲಾಷ್ ಪಿ.ಎಸ್.

ಗ್ರಾಮಾಯಣ
- ನಿರ್ಮಾಣ: ಲಹರಿ ಫಿಲಂಸ್
- ನಿರ್ದೇಶನ: ದೇವನೂರು ಚಂದ್ರು
- ತಾರಾಗಣ: ವಿನಯ್ ರಾಜ್‌ಕುಮಾರ್, ಮೇಘ ಶೆಟ್ಟಿ, ಲೂಸ್‌ಮಾದ ಯೋಗಿ, ಅಚ್ಯುತ್ ಕುಮಾರ್, ಗೋಪಾಲಕೃಷ್ಣ ದೇಶಪಾಂಡೆ, ಅರುಣ್ ಸಾಗರ್, ಬಲ ರಾಜವಾಡಿ, ಅಪರ್ಣಾ ವಸ್ತಾರೆ ಮತ್ತಿತರರು.

ನೋಡಬಹುದಾದ ಚಿತ್ರ

ನಾವು ನೋಡಿದ ಸಿನಿಮಾ

ಅಭಯ್ ವೀರ್, ಥ್ರಿಲ್ಲರ್ ಮಂಜು

ಆ್ಯಕ್ಷನ್ ದೃಶ್ಯಗಳ ಅಬ್ಬರ ಹಿಂದೆ ಸರಿದ ಕಥೆ

ಸಾಹಸ ದೃಶ್ಯಗಳ ಸಂಯೋಜನೆಯಲ್ಲಿ ಹೆಸರಾಗಿರುವ ಥ್ರಿಲ್ಲರ್ ಮಂಜು ಅವರು, 15 ವರ್ಷಗಳ ಬಳಿಕ ಮತ್ತೆ ತೆರೆ ಮೇಲೆ ಕಾಣಿಸಿಕೊಂಡಿದ್ದಾರೆ. ಅವರ ನಿರ್ದೇಶನದ 'ಡೆಡ್ಲಿ ಕಿಲ್ಲರ್' ಹೆಸರೇ ಸೂಚಿಸುವಂತೆ ಸಾಹಸ ಪ್ರಧಾನ ಚಿತ್ರ.

ಈ ಬಾರಿ ಥ್ರಿಲ್ಲರ್ ಮಂಜು ಅವರು ಸಾಹಸ ಸಂಯೋಜನೆಯ ಜೊತೆಗೆ ಕಥೆ, ಚಿತ್ರಕಥೆ, ಸಾಹಿತ್ಯ, ನಟನೆ ಮತ್ತು ನಿರ್ದೇಶನದ ಹೊಣೆಯನ್ನೂ ಹೊತ್ತಿದ್ದಾರೆ. 'ಆ್ಯಕ್ಷನ್ ನನ್ನ ನೆಚ್ಚಿನ ಕ್ಷೇತ್ರ' ಎಂಬುದನ್ನು ಡಾನ್ ಪಾತ್ರದ ಮೂಲಕವೂ, ನಿರ್ದೇಶನದ ಮೂಲಕವೂ ಚಿತ್ರದುದ್ದಕ್ಕೂ ಒತ್ತಿ ಹೇಳುತ್ತಾರೆ.

ಅಸ್ಸಾಂನಲ್ಲಿ ಬಂಧಿತವಾಗಿದ್ದ ಆರು ಮಂದಿಯ ದುಷ್ಕರ್ಮಿಗಳ ಗ್ಯಾಂಗ್‌ನ್ನು ಕರ್ನಾಟಕಕ್ಕೆ ಕರೆತರುವಾಗ, ಆಂಧ್ರ ಪ್ರದೇಶದ ಕಾಡಿನಲ್ಲಿ ಅವರು ಪೊಲೀಸರ ಕೈಯಿಂದ ತಪ್ಪಿಸಿಕೊಳ್ಳುತ್ತಾರೆ. ಥ್ರಿಲ್ಲರ್ ಮಂಜು ಈ ಗ್ಯಾಂಗ್‌ನ ನಾಯಕ ಡಾನ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ತಪ್ಪಿಸಿಕೊಂಡ ಗ್ಯಾಂಗ್ ಕಾಡಿನಲ್ಲಿರುವ ಒಂಟಿ ಮನೆಗೆ ಆಶ್ರಯ ಪಡೆಯುತ್ತದೆ. ಅಲ್ಲಿ ನಾಯಕ–ನಾಯಕಿ ಎದುರಾಗುತ್ತಾರೆ. ನಾಯಕನನ್ನು ಸಹಚರರೇ ಥಳಿಸಿದರೂ, ಆತ ಪುಕ್ಕಲನಂತೆ ವರ್ತಿಸುತ್ತಾನೆ. ನಾಯಕಿಗೆ ಏನಾದರೂ ಅಪಾಯವಾಗಬಾರದು ಎಂಬ ಕಾಳಜಿಯೇ ಇದಕ್ಕೆ ಕಾರಣ ಎನ್ನುವುದು ಮೊದಲ ಟ್ವಿಸ್ಟ್. ಆದರೆ ಮಧ್ಯಂತರದ ಬಳಿಕ ಇದೇ ನಾಯಕ, ಗ್ಯಾಂಗ್‌ನ್ನು ಬಂಧಿಸಲು ಬರುವ ಪೊಲೀಸರನ್ನೇ ಮಣಿಸಿ, ದುಷ್ಕರ್ಮಿಗಳನ್ನೇ ರಕ್ಷಿಸುತ್ತಾನೆ. ಇದು ಮತ್ತೊಂದು ಟ್ವಿಸ್ಟ್.

ಈ ತಿರುವುಗಳ ಹಿಂದಿನ ಕಾರಣವನ್ನು ನಿರ್ದೇಶಕರು ಕೊನೆಯವರೆಗೂ ಬಿಚ್ಚಿಡುವುದಿಲ್ಲ. ಯೋಚಿಸಲು ಬಿಡುವು ನೀಡದಂತೆ ಒಂದರ ಹಿಂದೆ ಒಂದರಂತೆ ಸಾಹಸ ದೃಶ್ಯಗಳು ಸಾಗುತ್ತವೆ. ಪಾತ್ರಗಳಷ್ಟೇ ಅಲ್ಲ, ಹಿನ್ನೆಲೆ ಸಂಗೀತವೂ ಅಬ್ಬರಿಸುತ್ತದೆ. ವಿನು ಮನಸು ಅವರ ಸಂಗೀತದಲ್ಲಿ ಎರಡು ಹಾಡುಗಳಿದ್ದರೂ, ಸಾಹಸ ದೃಶ್ಯಗಳ ಪ್ರಭಾವದಲ್ಲಿ ಅವು ಹೆಚ್ಚು ನೆನಪಿನಲ್ಲಿ ಉಳಿಯುವುದಿಲ್ಲ.

ನಾಯಕ ಅಭಯ್ ವೀರ್ ಸಾಹಸ ದೃಶ್ಯಗಳಲ್ಲಿ ಗಮನ ಸೆಳೆಯುತ್ತಾರೆ. ಆದರೆ ಭಾವಾಭಿವ್ಯಕ್ತಿ, ಸಂಭಾಷಣೆ ನಿರ್ವಹಣೆ ಮತ್ತು ನೃತ್ಯದಲ್ಲಿ ಅದೇ ಮಟ್ಟದ ಪ್ರಭಾವ ಮೂಡಿಸುವುದಿಲ್ಲ. ನಾಯಕಿ ನಿವೀಕ್ಷಾಗೆ ಅಭಿನಯಕ್ಕೆ ಹೆಚ್ಚಿನ ಅವಕಾಶ ಸಿಕ್ಕಿಲ್ಲ. ಎರಡು ಹಾಡುಗಳಲ್ಲಿ ಕಾಣಿಸಿಕೊಂಡರೂ ಪಾತ್ರ ಹೆಚ್ಚು ಪರಿಣಾಮ ಬೀರುವುದಿಲ್ಲ.

ಗ್ಯಾಂಗ್‌ನ ಅಂತ್ಯ ಹೇಗಾಗುತ್ತದೆ? ನಾಯಕನಿಗೂ ದುಷ್ಕರ್ಮಿಗಳ ಗ್ಯಾಂಗ್‌ಗೂ ನಡುವಿನ ದ್ವೇಷದ ಹಿನ್ನೆಲೆ ಏನು? ಎಂಬ ಕುತೂಹಲಕ್ಕೆ ಅಂತ್ಯದಲ್ಲಿ ಉತ್ತರ ಸಿಗುತ್ತದೆ. ಆದರೆ ನಾಯಕ–ನಾಯಕಿ ಕಾಡಿನಲ್ಲಿರುವ ಆ ಒಂಟಿ ಮನೆಗೆ ಹೇಗೆ, ಏಕೆ ಬಂದರು ಎಂಬ ಪ್ರಶ್ನೆಗೆ ಸಮರ್ಪಕ ಉತ್ತರ ಸಿಗುವುದಿಲ್ಲ. ಒಟ್ಟಾರೆ, ಚಿತ್ರದುದ್ದಕ್ಕೂ ಸಾಹಸ ದೃಶ್ಯಗಳೇ ಮೇಲುಗೈ ಸಾಧಿಸಿದ್ದು, ಕಥೆ ಎರಡನೇ ಸ್ಥಾನಕ್ಕೆ ಸರಿದಿದೆ. ತರ್ಕವನ್ನು ಬದಿಗಿಟ್ಟರೆ ಆ್ಯಕ್ಷನ್ ಪ್ರಿಯರಿಗೆ ಇಷ್ಟವಾಗಬಹುದಾದ ಸಿನಿಮಾ ಇದು.

ಉ.ಮ.ಮಹೇಶ್

'ಡೆಡ್ಲಿ ಕಿಲ್ಲರ್'
- ನಿರ್ಮಾಣ: ಕೀರ್ತಿ ಸಿಲ್ವರ್ ಸ್ಕ್ರೀನ್ ಹಾಗೂ ವೇದಿಕ್ ಕಾಸ್ಮಾಸ್ ಬ್ಯಾನರ್
- ನಿರ್ದೇಶನ: ಥ್ರಿಲ್ಲರ್ ಮಂಜು
- ತಾರಾಗಣ: ಅಭಯ್ ವೀರ್, ನಿವೀಕ್ಷಾ, ಥ್ರಿಲ್ಲರ್ ಮಂಜು, ಲೋಕೇಂದ್ರ ಸೂರ್ಯ, ಸುನಿಲ್ ಬಾಲ್ದರ್ ಮುಂತಾದವರು

ರಾಮಮಂದಿರ ಟ್ರಸ್ಟ್: 5 ವರ್ಷದ ಲೆಕ್ಕಪತ್ರ ಪರಿಶೀಲನೆ

ದೇಗುಲ ನಿರ್ಮಾಣದ ಖರ್ಚು ವೆಚ್ಚ, ದೇಣಿಗೆಯಾಗಿ ಸ್ವೀಕರಿಸಿದ ಆಭರಣಗಳ ಮಾಹಿತಿ ಸಂಗ್ರಹಕ್ಕೆ ಮುಂದಾದ ಎಸ್‌ಐಟಿ

ಅಯೋಧ್ಯೆ (ಪಿಟಿಐ): ರಾಮ ಮಂದಿರಕ್ಕೆ ನೀಡಲಾದ ದೇಣಿಗೆಯಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪಗಳ ಕುರಿತು ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) 'ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌'ನ ಕಳೆದ ಐದು ವರ್ಷಗಳ ಲೆಕ್ಕಪತ್ರಗಳ ಮರು ಪರಿಶೀಲನೆಯನ್ನೂ ನಡೆಸಲಿದೆ ಎಂದು ಮೂಲಗಳು ಶುಕ್ರವಾರ ತಿಳಿಸಿವೆ.

ತನಿಖೆ ವೇಳೆ ವ್ಯಾಪಕ ಅಕ್ರಮಗಳು ಪತ್ತೆಯಾಗಿರುವ ಕಾರಣ ಟ್ರಸ್ಟ್‌ನ ಲೆಕ್ಕಪತ್ರಗಳ ಮರು ಪರಿಶೀಲನೆಗೆ ಎಸ್‌ಐಟಿ ಮುಂದಾಗಿದೆ ಎಂದು ಅವು ಹೇಳಿವೆ.

ದೇವಾಲಯ ನಿರ್ಮಾಣಕ್ಕೆ ತಗುಲಿದ ಖರ್ಚು ವೆಚ್ಚಗಳು, ದೇಣಿಗೆಯಾಗಿ ಸ್ವೀಕರಿಸಿದ ಚಿನ್ನ, ಬೆಳ್ಳಿ ವಸ್ತುಗಳು ಮತ್ತು ಆಭರಣಗಳ ಮರುಪರಿಶೀಲನೆ ನಡೆಯಲಿದೆ. ಜತೆಗೆ ಟ್ರಸ್ಟ್‌ನ ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದ ಐದು ವರ್ಷಗಳ ದಾಖಲೆಗಳನ್ನು ಪರೀಲಿಸಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಅವಿನಾಶ್ ಶುಕ್ಲಾ ವಿಚಾರಣೆ: ಈ ಪ್ರಕರಣದಲ್ಲಿ ಬಂಧಿಸಲಾಗಿರುವ ಆರೋಪಿ ಅವಿನಾಶ್ ಶುಕ್ಲಾ ಅವರನ್ನು ನ್ಯಾಯಾಲಯದ ಅನುಮತಿ ಪಡೆದು ಅಯೋಧ್ಯಾ ಪೊಲೀಸರು ಶುಕ್ರವಾರ ವಿಚಾರಣೆ ನಡೆಸಿದರು. ದೇಣಿಗೆ ಎಣಿಕೆ ಕಾರ್ಯದಲ್ಲಿ ತೊಡಗಿದ್ದ ಅವಿನಾಶ್ ಶುಕ್ಲಾ ಈ ಪ್ರಕರಣದ ಪ್ರಮುಖ ಆರೋಪಿಗಳಲ್ಲಿ ಒಬ್ಬರು.

ಪ್ರಕರಣದಲ್ಲಿ ಇಲ್ಲಿಯವರೆಗೆ ಅತಿ ಹೆಚ್ಚು ನಗದನ್ನು ಶುಕ್ಲಾ ಬಳಿಯಿಂದ ವಶಕ್ಕೆ ಪಡೆಯಲಾಗಿದೆ. ಎಸ್‌ಐಟಿ ಇಲ್ಲಿಯವರೆಗೆ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್, ಟ್ರಸ್ಟಿ ಅನಿಲ್ ಮಿಶ್ರಾ, ಗೋಪಾಲ್ ರಾವ್ ಅವರ ವಿಚಾರಣೆ ನಡೆಸಿದೆ. ಈ ಪೈಕಿ ರಾಯ್ ಮತ್ತು ಮಿಶ್ರಾ ತಮ್ಮ ಹುದ್ದೆಗಳಿಗೆ ರಾಜೀನಾಮೆ ಸಲ್ಲಿಸಿದ್ದು, ಇದೇ 6ರಂದು ನಡೆಯಲಿರುವ ಟ್ರಸ್ಟ್‌ನ ಸಭೆಯಲ್ಲಿ ಈ ಕುರಿತು ನಿರ್ಧಾರ ಆಗುತ್ತದೆ ಎನ್ನಲಾಗಿದೆ.

ಎಷ್ಟೆಷ್ಟು ವಶ?: ಬಂಧಿತ ಆರೋಪಿಗಳಾದ ಶುಕ್ಲಾ ಅವರಿಂದ ₹20.39 ಲಕ್ಷ, ಕರುಣೇಶ್ ಪಾಂಡೆಯಿಂದ ₹18.07, ಅನುಕಲ್ಪ್ ಮಿಶ್ರಾ ಅವರಿಂದ ₹16,82 ಲಕ್ಷ, ಲವಕುಶ್ ಮಿಶ್ರಾ ಇಂದ ₹14.25 ಲಕ್ಷ, ರಾಮಾಶಂಕರ್ ಮಿಶ್ರಾ ಅವರಿಂದ ₹7.32 ಲಕ್ಷ ಹಾಗೂ ರಾಮಾಶಂಕರ್ ಯಾದವ್ ಅಲಿಯಾಸ್ ಟಿನ್ನು ಅವರಿಂದ ₹ 1 ಲಕ್ಷ ವಶಕ್ಕೆ ಪಡೆದಿರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ.

ಅದರ ಜತೆಗೆ 11 ಗ್ರಾಂ ಚಿನ್ನ, 375 ಗ್ರಾಂ ಬೆಳ್ಳಿ, 1,121 ಅಮೆರಿಕನ್ ಡಾಲರ್ ಅನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಅಲ್ಲದೆ ಅಯೋಧ್ಯೆ ಯೋಗ ಕೇಂದ್ರವೊಂದರಿಂದ 'ರಾಮ ರಾಜ್ಯ ಕೋಶ' ಎಂದು ನಮೂದಿಸಲಾಗಿದ್ದ, 'ಪೇಟಿಎಂ ಕ್ಯೂಆರ್ ಕೋಡ್' ಹೊಂದಿದ್ದ ದೇಣಿಗೆ ಪಟ್ಟಿಯನ್ನೂ ತನಿಖಾಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಕೇಂದ್ರದಲ್ಲಿ ಶುಕ್ಲಾ ಅವರು ದಶಕದಿಂದ ನೆಲೆಸಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಎಸ್‌ಐಟಿ ತನಿಖೆಯ ಬಗ್ಗೆ ಪೂರ್ಣ ನಂಬಿಕೆಯಿದೆ. ಹಣ ದುರುಪಯೋಗಕ್ಕೆ ಕಾರಣರಾದವರು ಶಿಕ್ಷೆ ಎದುರಿಸಬೇಕಾಗುತ್ತದೆ
ಧೀರೇಂದ್ರ ಕೃಷ್ಣಶಾಸ್ತ್ರಿ
ಮುಖ್ಯಸ್ಥ, ಬಾಗೇಶ್ವರ ಧಾಮ

ತಪ್ಪು ಎಸಗಿದವರಿಗೆ ಕಠಿಣ ಶಿಕ್ಷೆಯಾಗಲಿ: ಆರ್‌ಎಸ್‌ಎಸ್

ನವದೆಹಲಿ (ಪಿಟಿಐ): ಅಯೋಧ್ಯೆ ರಾಮ ಮಂದಿರದ ದೇಣಿಗೆ ಕಳವು ಪ್ರಕರಣದಿಂದ ಸಮಾಜದ ನಂಬಿಕೆ ಮತ್ತು ಭಾವನೆಗಳಿಗೆ ಗಾಸಿಯಾಗಿದೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ ದ(ಆರ್‌ಎಸ್‌ಎಸ್) ಸರ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಶುಕ್ರವಾರ ಆಗ್ರಹಿಸಿದ್ದಾರೆ.

ದತ್ತಾತ್ರೇಯ ಹೊಸಬಾಳೆ

'ಈ ದುರದೃಷ್ಟಕರ ಘಟನೆಯನ್ನು ಬಳಸಿಕೊಂಡು ಹಿಂದೂ ವಿರೋಧಿ ಮತ್ತು ರಾಷ್ಟ್ರ ವಿರೋಧಿ ಶಕ್ತಿಗಳು ಹಿಂದೂ ಧರ್ಮಕ್ಕೆ ಕಳಂಕ ತರಲು ಪ್ರಯತ್ನಿಸುತ್ತಿವೆ. ಇಂಥ ಕಷ್ಟಕರ ಸಮಯದಲ್ಲಿ ಪಿತೂರಿಗಳನ್ನು ತಡೆಯಲು ಸಮಸ್ತ ಹಿಂದೂ ಸಮಾಜ ತಾಳ್ಮೆಯಿಂದಿರಬೇಕು' ಎಂದು 'ಎಕ್ಸ್' ಮೂಲಕ ಕರೆ ನೀಡಿದ್ದಾರೆ.

'ಈ ಘಟನೆಯಿಂದ ನಾವೆಲ್ಲರೂ ನೋವುಂಡಿದ್ದೇವೆ ಮತ್ತು ಕೋಪಗೊಂಡಿದ್ದೇವೆ. ಈ ಖಂಡನೀಯ ಕೃತ್ಯವನ್ನು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಗಂಭೀರ ಪ್ರಕರಣ ಎಂದು ಪರಿಗಣಿಸಿ, ದೇಗುಲ ನಿರ್ವಹಣೆಯಲ್ಲಿನ ಲೋಪಗಳನ್ನು ಸರಿಪಡಿಸಲು ಪರಿಣಾಮಕಾರಿ ಕ್ರಮ ಕೈಗೊಳ್ಳುತ್ತದೆ ಎನ್ನುವುದು ಆರ್‌ಎಸ್‌ಎಸ್ ಸೇರಿದಂತೆ ಸಮಸ್ತ ಹಿಂದೂ ಸಮಾಜದ ನಿರೀಕ್ಷೆಯಾಗಿದೆ' ಎಂದು ವಿವರಿಸಿದ್ದಾರೆ.

'ಕೋಟ್ಯಂತರ ಭಕ್ತರ ನಂಬಿಕೆ ಮತ್ತು ಭಕ್ತಿಗೆ ಗಾಸಿಯಾಗದಂತೆ ಕ್ರಮ ಗಳನ್ನು ಕೈಗೊಳ್ಳುವುದು ನಿರ್ಣಾಯಕವಾಗಿದೆ. ಗೊಂದಲ ಮತ್ತು ಅನಿಶ್ಚಿತತೆಗಳು ಕೊನೆಗೊಳ್ಳಬೇಕು. ಇದಕ್ಕಾಗಿ ದೇಗುಲದ ಆಡಳಿತ ಮತ್ತು ವಿಶೇಷ ತನಿಖಾ ತಂಡವು(ಎಸ್‌ಐಟಿ) ಅಗತ್ಯ ಕ್ರಮಗಳನ್ನು ಕೈಗೊಳ್ಳುವ ನಿರೀಕ್ಷೆಯಿದೆ' ಎಂದು ಹೇಳಿದ್ದಾರೆ.

'ಕೋಟ್ಯಂತರ ರಾಮಭಕ್ತರ ತಲೆಮಾರುಗಳ ಹೋರಾಟ, ತ್ಯಾಗ, ಮತ್ತು ವೀರ ಮರಣದಿಂದಾಗಿ ಹಿಂದೂಗಳ ನಂಬಿಕೆ ಮತ್ತು ಭಕ್ತಿಯ ಪ್ರತೀಕವಾದ ರಾಮ ಜನ್ಮಭೂಮಿಯಲ್ಲಿ ಭವ್ಯ ದೇಗುಲ ನಿರ್ಮಾಣವಾಗಿದೆ. ಸಮರ್ಪಕ ಆರ್ಥಿಕ ನಿರ್ವಹಣೆ, ಪಾರದರ್ಶಕ ವ್ಯವಸ್ಥೆ ಮತ್ತು ಪರಿಶುದ್ಧತೆ, ನೈಜ ಧಾರ್ಮಿಕತೆಯ ಮೂಲಕ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಹಿಂದೂ ಸಮಾಜದ ನಂಬಿಕೆಯನ್ನು ಬಲಪಡಿಸುವುದನ್ನು ಮುಂದುವರಿಸಲಿದೆ' ಎಂದು ತಿಳಿಸಿದ್ದಾರೆ.

'ಇದು ಕೇವಲ ಕಲಿಯುಗ ಮಾತ್ರವಲ್ಲ, ಚಾಲಾಕಿಗಳ ಯುಗವೂ ಹೌದು. ಸ್ವಾಮೀಜಿಗಳು ಮತ್ತು ದೇವಸ್ಥಾನಗಳನ್ನು ಗುರಿ ಮಾಡಲಾಗುತ್ತಿದೆ' ಎಂದರು.

ರಾಮಮಂದಿರ ದೇಣಿಗೆ ಕಳವು ವಿಚಾರದಲ್ಲಿ ಆರ್‌ಎಸ್‌ಎಸ್ 'ಕ್ಲೀನ್ ಚಿಟ್' ನೀಡಿರುವುದು ನಾಚಿಕೆಗೇಡು ಸಂಗತಿ ಮತ್ತು ಇದು ತನಗಾಗುವ ಹಾನಿಯನ್ನು ತಡೆಯುವ ಪ್ರಯತ್ನ
ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ರಾಮಮಂದಿರ ದೇಣಿಗೆ ಕಳವಿನ ಕುರಿತು ಆರ್‌ಎಸ್‌ಎಸ್ ಹೇಳಿಕೆಯು ಸತ್ಯವನ್ನು ಮರೆಮಾಚುವ ಮತ್ತು ಸಂಘದ ವರ್ಚಸ್ಸನ್ನು ಉಳಿಸುವ ಕೆಟ್ಟ ಪ್ರಯತ್ನದ ಭಾಗವಾಗಿದೆ. ಆರ್‌ಎಸ್‌ಎಸ್ ಪ್ರಾಮಾಣಿಕವಾಗಿದ್ದರೆ ಇಷ್ಟು ದೊಡ್ಡ ಅವ್ಯವಹಾರ ನಡೆಯುತ್ತಿರಲಿಲ್ಲ. ಇದು ಸಂಘದ ನಿಜವಾದ ಮುಖ–ಬಾಯಿಯಲ್ಲಿ ರಾಮನ ಹೆಸರು, ಕೈಯಲ್ಲಿ ಚೂರಿ ಇದೆ
ಪವನ್ ಖೇರಾ, ಕಾಂಗ್ರೆಸ್ ನಾಯಕ

ರಾಮಮಂದಿರದ ವಿಚಾರದಲ್ಲಿ ಯಾವುದೇ ತಪ್ಪನ್ನು ಸಹಿಸಲು ಸಾಧ್ಯವಿಲ್ಲ. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ಮಾತನಾಡಿದ್ದೇನೆ. ಈ ಪ್ರಕರಣದಲ್ಲಿ ಮುಂದೇನಾಗಬಹುದು ಎಂದು ತಿಳಿಯಲು ಅವರು ಬಯಸಿದ್ದರು
ವಿನಯ್ ಕಟಿಯಾರ್, ಬಿಜೆಪಿ ಮಾಜಿ ಸಂಸದ

ನಾಳೆಯಿಂದ 'ರಾಮರಕ್ಷಾ' ಆಂದೋಲನ

ಮುಂಬೈ (ಪಿಟಿಐ): ಅಯೋಧ್ಯೆ ದೇಗುಲದಲ್ಲಿನ ಅವ್ಯವಹಾರಗಳ ಬಗ್ಗೆ ಬಿಜೆಪಿ ಹೊಣೆ ಹೊರುವಂತೆ ಆಗ್ರಹಿಸಿ ಜುಲೈ 5ರಿಂದ 'ರಾಮ ರಕ್ಷಾ' ಆಂದೋಲನ ನಡೆಸುವುದಾಗಿ ಶಿವಸೇನಾ(ಯುಬಿಟಿ) ನಾಯಕ ಉದ್ಧವ್ ಠಾಕ್ರೆ ಅವರು ಶುಕ್ರವಾರ ತಿಳಿಸಿದರು.

ಉದ್ಧವ್ ಠಾಕ್ರೆ

'ಸೆಂಟ್ರಲ್ ಮುಂಬೈನ ದಾದರ್‌ನಲ್ಲಿರುವ ಹನುಮಾನ್ ದೇಗುಲದಲ್ಲಿ ಎಲ್ಲರೂ ಒಟ್ಟು ಸೇರಿ ಹನುಮಾನ್ ಸ್ತೋತ್ರ ಮತ್ತು ಹನುಮಾನ್ ಚಾಲೀಸಾ ಪಠಣ ಮಾಡಲಿದ್ದೇವೆ. ಅವ್ಯಹಾರದ ವಿರುದ್ಧ ಹೋರಾಡುತ್ತಿರುವವರೆಲ್ಲರೂ ನಮ್ಮ ಜೊತೆ ಸೇರಿ. ಕಾಣಿಕೆ ಕಳವು ಮಾಡಿದವರ ವಿರುದ್ಧ ಕ್ರಮಕ್ಕೆ ಹೋರಾಡೋಣ' ಎಂದು ಕರೆ ನೀಡಿದರು.

'ಪಾಕ್ ಏಜೆಂಟ್ ರೀತಿ ಠಾಕ್ರೆ ವರ್ತನೆ'

ಬಿಜೆಪಿ ವಿರುದ್ಧ ಆರೋಪಗಳಿಗೆ ತಿರುಗೇಟು ನೀಡಿದ ಮಹಾರಾಷ್ಟ್ರ ಸಚಿವ ನಿತೀಶ್ ರಾಣೆ ಅವರು, 'ಉದ್ಧವ್ ಠಾಕ್ರೆ ಪಾಕಿಸ್ತಾನಿ ಏಜೆಂಟ್ ರೀತಿ ಮತ್ತು ಒಸಾಮಾ ಬಿನ್ ಲಾಡೆನ್ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ. ಅವರು 'ಮಹಾ ಆರತಿ' ಮಾಡುವ ಸ್ಥಳಗಳನ್ನು ಗೋಮೂತ್ರದಿಂದ ಶುದ್ಧಿಗೊಳಿಸಬೇಕು' ಎಂದು ಹೇಳಿದರು.

ನಾಳೆ ಆಸ್ಟ್ರೇಲಿಯಾ ವಿರುದ್ಧ ಕಿರೀಟಕ್ಕಾಗಿ ಹಣಾಹಣಿ

ಮಿಂಚಿದ ಬ್ರಂಟ್: ಫೈನಲ್‌ಗೆ ಇಂಗ್ಲೆಂಡ್

ಲಂಡನ್ (ಎಎಫ್‌ಪಿ): ನಾಯಕಿ ನ್ಯಾಟ್ ಶಿವರ್ ಬ್ರಂಟ್ ಅವರ ಆಕರ್ಷಕ 75 ರನ್‌ಗಳ ನೆರವಿನಿಂದ ಇಂಗ್ಲೆಂಡ್ ತಂಡ ಗುರುವಾರ ನಡೆದ ಸೆಮಿಫೈನಲ್‌ನಲ್ಲಿ 40 ರನ್‌ಗಳಿಂದ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿ ಐಸಿಸಿ ಟಿ20 ಮಹಿಳೆಯರ ವಿಶ್ವಕಪ್ ಫೈನಲ್‌ಗೆ ಲಗ್ಗೆಯಿಟ್ಟಿತು.

ಮೀನಖಂಡದ ಗಾಯದಿಂದ ಗುಣಮುಖರಾಗಿ ತಂಡಕ್ಕೆ ಮರಳಿದ್ದ ಶಿವರ್ ಬ್ರಂಟ್ ಅವರು ಮುಂಚೂಣಿಯಿಂದ ಹೊಣೆಗಾರಿಕೆ ನಿರ್ವಹಿಸಿದರು. ಇಂಗ್ಲೆಂಡ್ ತಂಡ, ಲಾರ್ಡ್ಸ್‌ನಲ್ಲಿ ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಆರು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ.

ಬ್ಯಾಟಿಂಗ್‌ಗೆ ಕಳುಹಿಸಲ್ಪಟ್ಟ ಇಂಗ್ಲೆಂಡ್, ಈ ಪ್ರಮುಖ ಪಂದ್ಯದಲ್ಲಿ ನಾಲ್ಕು ಓವರುಗಳು ಮುಗಿಯುವ ವೇಳೆ 3 ವಿಕೆಟ್‌ಗೆ 23 ರನ್ ಗಳಿಸಿ ಸಂಕಟದಲ್ಲಿತ್ತು. ಆಮಿ ಜೋನ್ಸ್ (2), ಡ್ಯಾನಿ ವಾಟ್ ಹಾಜ್ (12) ಮತ್ತು ಅಲೆಕ್ಸ್ ಕ್ಯಾಪ್ಸಿ (1) ಇವರಲ್ಲಿ ಒಳಗೊಂಡಿದ್ದರು. ಈ ವೇಳೆ ಪ್ರತ್ಯಾಕ್ರಮಣಕ್ಕೆ ಇಳಿದ ಶಿವರ್ ಬ್ರಂಟ್ 47 ಎಸೆತಗಳ ಇನಿಂಗ್ಸ್‌ನಲ್ಲಿ 1 ಸಿಕ್ಸರ್, 11 ಬೌಂಡರಿಗಳನ್ನು ಬಾರಿಸಿ ತಂಡಕ್ಕೆ ಚೇತರಿಕೆ ನೀಡಿದರು.

ಮಾಜಿ ನಾಯಕಿ ಹೀದರ್ ನೈಟ್ (58, 47 ಎಸೆತ) ಜೊತೆ ನಾಲ್ಕನೇ ವಿಕೆಟ್‌ಗೆ 133 ರನ್ ಸೇರಿಸಿದ್ದರಿಂದ ಇಂಗ್ಲೆಂಡ್, 21 ಸಾವಿರ ದಷ್ಟಿದ್ದ ತವರಿನ ಪ್ರೇಕ್ಷಕರ ಸಮ್ಮುಖದಲ್ಲಿ ಚೇತರಿಸಿ 5 ವಿಕೆಟ್‌ಗೆ 169 ರನ್ ಗಳಿಸಿತು.

ದಕ್ಷಿಣ ಆಫ್ರಿಕಾ ತಂಡ ಉತ್ತಮ ಆರಂಭ ಮಾಡಿತ್ತು. ನಾಯಕಿ ಲಾರಾ ವೋಲ್ವಾರ್ಟ್ (17, 15 ಎಸೆತ) ಮತ್ತು ತಾಝ್ಮಿನ್ ಬ್ರಿಟ್ಸ್ (51, 45 ಎಸೆತ) ಅವರು 5.4 ಓವರುಗಳಲ್ಲಿ 43 ರನ್ ಸೇರಿಸಿದ್ದರು. ಆದರೆ ನಂತರ ವಿಕೆಟ್‌ಗಳು ನಿಯಮಿತವಾಗಿ ಉರುಳಿದವು. ಬ್ರಿಟ್ಸ್ ಅವರಿಗೆ ಸೂಕ್ತ ಬೆಂಬಲ ಸಿಗಲಿಲ್ಲ. ಬಿಟ್ಸ್ ಅವರನ್ನು ಬಿಟ್ಟರೆ ಉಳಿದವರಾರೂ 20ರ ಗಡಿದಾಟಲಿಲ್ಲ. ತಂಡ 8 ವಿಕೆಟ್‌ಗೆ 129 ಗಳಿಸಲಷ್ಟೇ ಶಕ್ತವಾಯಿತು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 20 ಓವರುಗಳಲ್ಲಿ 5 ವಿಕೆಟ್‌ಗೆ 169 (ನಾಟ್ ಶಿವರ್ ಬ್ರಂಟ್ 75, ಹೀದರ್ ನೈಟ್ 51; ಶಬ್ನಿಮ್ ಇಸ್ಮಾಯಿಲ್ 31ಕ್ಕೆ2, ನಾನ್‌ಕುಲುಲೆಕೊ ಮ್ಲಾಬಾ 25ಕ್ಕೆ2); ದಕ್ಷಿಣ ಆಫ್ರಿಕಾ: 20 ಓವರುಗಳಲ್ಲಿ 8 ವಿಕೆಟ್‌ಗೆ 129 (ತಾಝ್ಮಿನ್ ಬ್ರಿಟ್ಸ್ 51; ಲಾರೆನ್ ಬೆಲ್ 28ಕ್ಕೆ2, ಚಾರ್ಲಿ ಡೀನ್ 31ಕ್ಕೆ2).

ನಾಟ್ ಶಿವರ್ ಬ್ರಂಟ್ ಎಎಫ್‌ಪಿ ಚಿತ್ರ

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2026

ಶೂಟಿಂಗ್: ಜಾನ್ವಿಗೆ ಎರಡು ಪದಕ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಶೂಟಿಂಗ್ ಪಟು ಡಿ.ಎಸ್. ಜಾನ್ವಿ ಅವರು ಬೆಂಗಳೂರಿನ ಭಾರತೀಯ ಕ್ರೀಡಾ ಪ್ರಾಧಿಕಾರ (ಎಸ್‌ಎಐ)ದಲ್ಲಿ ಈಚೆಗೆ ನಡೆದ 14ನೇ ಕರ್ನಾಟಕ ರಾಜ್ಯ ಓಪನ್ ಸ್ಟೈಟ್ ಶೂಟಿಂಗ್ ಚಾಂಪಿಯನ್‌ಷಿಪ್ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಎರಡು ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಸಬ್ ಯೂತ್ ವಿಭಾಗದಲ್ಲಿ ಚಿನ್ನದ ಪದಕ ಮತ್ತು ಜೂನಿಯರ್ ವಿಭಾಗದಲ್ಲಿ ಕಂಚಿನ ಪದಕ ಗಳಿಸಿದ್ದಾರೆ.

ಬೆಂಗಳೂರು ರೇಸ್

ಮನ್ವಾರ್ ಗೆಲ್ಲುವ ನಿರೀಕ್ಷೆ

ಡಿ.ಎಲ್.ಕುಮಾರಸ್ವಾಮಿ ಮೆಮೊರಿಯಲ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮನ್ವಾರ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಯಾರ್‍ರಾ ಯಾರ್‍ರಾ 6, ಗಾರ್ಜಿಯನ್ 3, ಶೈನಿಂಗ್ ಡಾನ್ 1
2ನೇ ರೇಸ್: ಡಬಲ್ ಸ್ಕಾಬ್ 6, ವಿಟ್ನಿ 4, ಸ್ಲಿಂಗ್ ಶಾಟ್ 3
3ನೇ ರೇಸ್: ಮೆಜೆಸ್ಟಿಕ್ ಪರ್ಸೋನ 1, ಅಥರ್ವ 8, ವೈಬ್ರ್ಯಾಂಟ್ ಕ್ವೀನ್ 7
4ನೇ ರೇಸ್: ಮನ್ವಾರ್ 6, ಸರ್ಕಲ್ ಆಫ್ ಡ್ರೀಮ್ಸ್ 1, ಹ್ಯಾಜಲ್ 4
5ನೇ ರೇಸ್: ಎಲ್‌ಜೀ'ಸ್ ಸ್ಕ್ರಿಪ್ಟ್ 6, ಅನ್ಯಾಕ್ಟ್ ಪೆರೇಡ್ 1, ಗ್ಲೇಝ್ 5
6ನೇ ರೇಸ್: ಶೆರ್ಲಾಕ್ 1, ವೋರ್‌ಫ್ರೀಡ್ 2, ಸಿಆರ್ ಸೆವೆನ್ 5

ಉತ್ತಮ ಬೆಟ್: ಮೆಜೆಸ್ಟಿಕ್ ಪರ್ಸೋನ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಜಯದ ಕನಸಿನಲ್ಲಿ ಶ್ರೇಯಸ್ ಪಡೆ

ಟಿ20 ಸರಣಿ: ಭಾರತ–ಇಂಗ್ಲೆಂಡ್ ಹಣಾಹಣಿ ಇಂದು • ಅವಕಾಶದ ನಿರೀಕ್ಷೆಯಲ್ಲಿ ಸೂರ್ಯವಂಶಿ

ಮ್ಯಾಂಚೆಸ್ಟರ್ (ಪಿಟಿಐ): ಸಂಜು ಸ್ಯಾಮ್ಸನ್ ಅವರು ಸತತ ವೈಫಲ್ಯದ ಸುಳಿಯಿಂದ ಹೊರಬರುವ ಒತ್ತಡದಲ್ಲಿದ್ದಾರೆ. ಇನ್ನೊಂದೆಡೆ ವೈಭವ್ ಸೂರ್ಯವಂಶಿ ಅವರು ಪದಾರ್ಪಣೆ ಅವಕಾಶಕ್ಕಾಗಿ ತುದಿಗಾಲಿನಲ್ಲಿ ನಿಂತಿದ್ದಾರೆ. ಶನಿವಾರ ಇಲ್ಲಿ ನಡೆಯಲಿರುವ ಇಂಗ್ಲೆಂಡ್ ಎದುರಿನ ಸರಣಿಯ ಎರಡನೇ ಪಂದ್ಯದಲ್ಲಿ ಇವರಿಬ್ಬರಲ್ಲಿ ಯಾರು ಇನಿಂಗ್ಸ್ ಆರಂಭಿಸುತ್ತಾರೆ ಎಂಬ ಕುತೂಹಲ ಗರಿಗೆದರಿದೆ.

ಸರಣಿಯ ಮೊದಲ ಪಂದ್ಯವು ಮಳೆಯ ಪಾಲಾಗಿತ್ತು. ಆ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಭಾರತ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 189 ರನ್ ಹೋರಾಟದ ಮೊತ್ತ ಗಳಿಸಿತ್ತು. ನಾಯಕ ಶ್ರೇಯಸ್ ಅಯ್ಯರ್ ಮತ್ತು ಅಭಿಷೇಕ್ ಶರ್ಮಾ ಅವರು ಅರ್ಧಶತಕಗಳನ್ನು ಗಳಿಸಿದ್ದರು. ಆದರೆ ಮಳೆ ಸುರಿದ ಕಾರಣ ಇಂಗ್ಲೆಂಡ್ ಇನಿಂಗ್ಸ್ ನಡೆಯಲಿಲ್ಲ. ಪಂದ್ಯವನ್ನು ರದ್ದುಗೊಳಿಸಲಾಯಿತು. ಸರಣಿಯಲ್ಲಿ ಇನ್ನೂ ನಾಲ್ಕು ಪಂದ್ಯಗಳು ಉಳಿದಿವೆ.

ಭಾರತ ತಂಡದ ಶ್ರೇಯಸ್ ಅಯ್ಯರ್

ಎರಡನೇ ಪಂದ್ಯದಲ್ಲಿ ಸಂಜು ಮೇಲೆ ಎಲ್ಲರ ಕಣ್ಣು ನೆಟ್ಟಿದೆ. ಕಳೆದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತವು ಚಾಂಪಿಯನ್ ಆಗಲು ಸಂಜು ಆಟವೇ ಪ್ರಮುಖವಾಗಿತ್ತು. ಆದರೆ ಐರ್ಲೆಂಡ್ ಎದುರು ಮತ್ತು ಇಂಗ್ಲೆಂಡ್ ವಿರುದ್ಧದ ಮೊದಲ ಪಂದ್ಯದಲ್ಲಿ ಅವರು ಲಯಕ್ಕೆ ಮರಳಲಿಲ್ಲ. ಈ ಚಿಂತೆಯು ತಂಡವನ್ನು ಕಾಡುತ್ತಿದೆ.

ಅದರಿಂದಾಗಿ ಅವರಿಗೆ ವಿಶ್ರಾಂತಿ ಕೊಟ್ಟು ವೈಭವ್ ಅವರನ್ನು ಇನಿಂಗ್ಸ್ ಆರಂಭಿಸಲು ಕಳಿಸುವ ಸಾಧ್ಯತೆ ಹೆಚ್ಚಿದೆ. 15 ವರ್ಷದ ವೈಭವ್ ಅವರು ಐಪಿಎಲ್‌ನಲ್ಲಿ ಅಮೋಘವಾಗಿ ಆಡಿದ್ದರು.

ಮಧ್ಯಮ ಕ್ರಮಾಂಕದಲ್ಲಿ ತಿಲಕ್ ವರ್ಮಾ ಕೂಡ ತಮ್ಮ ಲಯದಲ್ಲಿ ಅಸ್ಥಿರತೆಯನ್ನು ಅನುಭವಿಸುತ್ತಿದ್ದಾರೆ. ನಿಧಾನಗತಿಯಲ್ಲಿ ಬರುವ ಎಸೆತಗಳಿಂದ ರನ್ ಗಳಿಸುವಲ್ಲಿ ಅವರು ವಿಫಲರಾಗುತ್ತಿದ್ದಾರೆ. 2026ರಲ್ಲಿ ವರ್ಮಾ ಅವರು ಆಡಿರುವ 12 ಟಿ20 ಪಂದ್ಯಗಳಲ್ಲಿ ಕೇವಲ 12 ಸಿಕ್ಸರ್‌ಗಳನ್ನು ಮಾತ್ರ ಹೊಡೆದಿದ್ದಾರೆ. ಇಶಾನ್ ಕಿಶನ್ ಮತ್ತು ಶಿವಂ ದುಬೆ ತಂಡಕ್ಕೆ ಬಲ ತುಂಬುವ ಆಟಗಾರರು. ಬೌಲಿಂಗ್ ವಿಭಾಗದಲ್ಲಿ ಹೆಚ್ಚು ಬದಲಾವಣೆಗಳನ್ನ ಮಾಡುವ ಸಾಧ್ಯತೆಗಳು ಕಡಿಮೆ.

ಆತಿಥೇಯ ಇಂಗ್ಲೆಂಡ್ ತಂಡವು ಸಮತೋಲನವಾಗಿದೆ. ನಾಯಕ ಹ್ಯಾರಿ ಬ್ರೂಕ್, ಸ್ಫೋಟಕ ಶೈಲಿಯ ಫಿಲ್ ಸಾಲ್ಟ್ ಹಾಗೂ ಟಾಮ್ ಬೆಂಟನ್ ಅವರು ಉತ್ತಮ ಬ್ಯಾಟರ್‌ಗಳಾಗಿದ್ದಾರೆ. ಮೊದಲ ಪಂದ್ಯದಲ್ಲಿ ಮೂರು ವಿಕೆಟ್ ಗಳಿಸಿದ್ದ ಸಕೀಬ್ ಮೆಹಮೂದ್ ಅವರು ಉತ್ತಮವಾಗಿ ಬೌಲಿಂಗ್ ಮಾಡಿದ್ದರು. ಅವರಲ್ಲದೇ ಲೂಕ್ ವುಡ್, ಸ್ಪಿನ್ನರ್ ಆದಿಲ್ ರಶೀದ್, ವಿಲ್ ಜ್ಯಾಕ್ಸ್ ಮತ್ತು ಸ್ಯಾಮ್ ಕರನ್ ಅವರು ತಂಡದ ಬೌಲಿಂಗ್ ವಿಭಾಗದ ಶಕ್ತಿಯಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಸಾಯಿ ಶತಕ, ಪಡಿಕ್ಕಲ್ ಮಿಂಚು

ಗಾಲ್, ಶ್ರೀಲಂಕಾ (ಪಿಟಿಐ): ಸಾಯಿ ಸುದರ್ಶನ್ ಅಜೇಯ ಶತಕ ಮತ್ತು ದೇವದತ್ತ ಪಡಿಕ್ಕಲ್ ಅವರ ಅಮೋಘ ಬ್ಯಾಟಿಂಗ್ ಬಲದಿಂದ ಭಾರತ ಎ ತಂಡವು ಶ್ರೀಲಂಕಾ ಎ ವಿರುದ್ಧದ 'ಟೆಸ್ಟ್'ನಲ್ಲಿ ದಿಟ್ಟ ಮರುಹೋರಾಟ ಮಾಡುತ್ತಿದೆ.

ಪಂದ್ಯದ ಎರಡನೇ ದಿನದಾಟವಾದ ಶುಕ್ರವಾರ ಭಾರತ ಎ ತಂಡವು 63 ಓವರ್‌ಗಳಲ್ಲಿ 1 ವಿಕೆಟ್‌ಗೆ 247 ರನ್ ಗಳಿಸಿತು. ಗುರುವಾರ ದಿನದಾಟದಲ್ಲಿ ಶ್ರೀಲಂಕಾ ಎ ತಂಡ 366 ರನ್ ಗಳಿಸಿತ್ತು. ಈ ಲೆಕ್ಕ ಚುಕ್ತಾ ಮಾಡಲು ಭಾರತ ತಂಡವು ಇನ್ನೂ 119 ರನ್ ಹೊಡೆಯಬೇಕು. ಆರಂಭಿಕ ಬ್ಯಾಟರ್ ಸಾಯಿ (ಬ್ಯಾಟಿಂಗ್ 104; 184ಎ, 4X13) ಮತ್ತು ದೇವದತ್ತ (ಬ್ಯಾಟಿಂಗ್ 94; 151ಎ, 4X11) ಅವರು ಕ್ರೀಸ್‌ನಲ್ಲಿದ್ದಾರೆ. ಮುರಿಯದ ಎರಡನೇ ವಿಕೆಟ್‌ಗೆ 181 ರನ್ ಸೇರಿಸಿದ್ದಾರೆ.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ ಎ: 110 ಓವರ್‌ಗಳಲ್ಲಿ 366. ಭಾರತ ಎ: 63 ಓವರ್‌ಗಳಲ್ಲಿ 1 ವಿಕೆಟ್‌ಗೆ 247 (ಸಾಯಿ ಸುದರ್ಶನ್ ಬ್ಯಾಟಿಂಗ್ 104, ಅಮನ್ ಮೊಖಡೆ 38, ದೇವದತ್ತ ಪಡಿಕ್ಕಲ್ ಬ್ಯಾಟಿಂಗ್ 94, ಕೇಶರಾ ನುವಾಂತಾ 63ಕ್ಕೆ1)

ವಾರಿಯರ್ಸ್‌ಗೆ ಮಣಿದ ಗುಲ್ಬರ್ಗ

• ಸತೀಶ ಬಿ.

ಹುಬ್ಬಳ್ಳಿ: ರಿತೇಶ್ ಭಟ್ಕಳ (ಔಟಾಗದೇ 75 ರನ್, 42 ಎ) ಅವರ ಅರ್ಧಶತಕದ ಬಲದಿಂದ ಮೈಸೂರು ವಾರಿಯರ್ಸ್ ತಂಡವು ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ 3 ವಿಕೆಟ್‌ಗಳಿಂದ ಗುಲ್ಬರ್ಗ ಮಿಸ್ಟಿಕ್ಸ್ ವಿರುದ್ಧ ಜಯಸಾಧಿಸಿತು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಗುಲ್ಬರ್ಗ ನೀಡಿದ 197 ರನ್‌ಗಳ ಸ್ಪರ್ಧಾತ್ಮಕ ಗುರಿಯನ್ನು ಮೈಸೂರು 19.3 ಓವರ್‌ಗಳಲ್ಲಿ ಮುಟ್ಟಿ, ಗೆಲುವಿನ ಸವಿಯುಂಡಿತು.

ಪವರ್ ಪ್ಲೇ ಅವಧಿಯಲ್ಲಿ ಮೈಸೂರು ತಂಡದ ಪ್ರಮುಖ ಮೂರು ವಿಕೆಟ್‌ಗಳು ಉರುಳಿದವು. ಈ ಹಂತದಲ್ಲಿ ರಿತೇಶ್ ಅವರು ಲಂಕೇಶ್ ಕೆ.ಎಸ್ (29) ಅವರು ನಾಲ್ಕನೇ ವಿಕೆಟ್ ಜತೆಯಾಟದಲ್ಲಿ 68 ರನ್ (37 ಎ) ಕಲೆ ಹಾಕಿ ಗೆಲುವಿಗೆ ಕಾರಣವಾದರು. ರಿತೇಶ್ ಅವರ ಇನಿಂಗ್ಸ್‌ನಲ್ಲಿ 5 ಸಿಕ್ಸರ್, 4 ಬೌಂಡರಿ ಇದ್ದವು. ಮನೋಜ್ ಭಾಂಡಗೆ (24 ರನ್, 15ಎ) ಉಪಯುಕ್ತ ಕಾಣಿಕೆ ನೀಡಿದರು. ಗುಲ್ಬರ್ಗ ತಂಡದ ಫೀಲ್ಡರ್‌ಗಳು ಮಿಸ್ ಫೀಲ್ಡ್ ಮಾಡಿ ರನ್ ಬಿಟ್ಟುಕೊಟ್ಟು ಪರಿತಪಿಸಿದರು.

ಇದಕ್ಕೂ ಮುನ್ನ ಟಾಸ್ ಸೋತರೂ ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಗುಲ್ಬರ್ಗ ತಂಡವು ಧ್ರುವ್ ಪ್ರಭಾಕರ್ (51 ರನ್, 35ಎ), ತಿಪ್ಪಾರೆಡ್ಡಿ (51 ರನ್, 26 ಎ) ಅವರ ಅರ್ಧಶತಕದಿಂದಾಗಿ ಸ್ಪರ್ಧಾತ್ಮಕ ಮೊತ್ತ ಕಲೆ ಹಾಕಿತು. ಮನೀಷ್ ಪಾಂಡೆ (ಔಟಾಗದೇ 41 ರನ್, 19 ಎ) ಕೊನೆಯಲ್ಲಿ ಬಿರುಸಿನ ಆಟವಾಡಿದರು. ಗುಲ್ಬರ್ಗ ತಂಡಕ್ಕೆ ಇದು ಐದನೇ ಸೋಲು.

ಸಂಕ್ಷಿಪ್ತ ಸ್ಕೋರು: ಗುಲ್ಬರ್ಗ ಮಿಸ್ಟಿಕ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 196 (ಧ್ರುವ್ ಪ್ರಭಾಕರ್ 51, ತಿಪ್ಪಾರೆಡ್ಡಿ 51; ಅರವಿಂದ ಕುಮಾರ್ ರೈ 31ಕ್ಕೆ 3, ಲವೀಶ್ ಕೌಶಲ್ 25ಕ್ಕೆ 3). ಮೈಸೂರು ವಾರಿಯರ್ಸ್: 19.3 ಓವರ್‌ಗಳಲ್ಲಿ 7 ವಿಕೆಟ್‌ಗೆ 197 (ರಿತೇಶ್ ಭಟ್ಕಳ ಔಟಾಗದೇ 75, ಲಂಕೇಶ್ ಕೆ.ಎಸ್ 29; ನೇಥನ್ ಡಿಮೆಲ್ಲೊ 38ಕ್ಕೆ 3, ಪಾರಸ್ ಆರ್ಯ 24ಕ್ಕೆ 2).
ಪಂದ್ಯದ ಆಟಗಾರ: ರಿತೇಶ್ ಭಟ್ಕಳ

ರಿತೇಶ್ ಭಟ್ಕಳ ಬ್ಯಾಟಿಂಗ್ ಚಿತ್ರ: ಗೋವಿಂದರಾಜ ಜವಳಿ

ಬ್ಲಾಸ್ಟರ್ಸ್‌ಗೆ ರೋಚಕ ಜಯ

ಹುಬ್ಬಳ್ಳಿ: ಕೊನೆಯ ಎಸೆತದವರೆಗೂ ಕುತೂಹಲ ಮೂಡಿಸಿದ್ದ ಪಂದ್ಯದಲ್ಲಿ ಬೆಂಗಳೂರು ಬ್ಲಾಸ್ಟರ್ಸ್ ತಂಡವು 3 ವಿಕೆಟ್‌ಗಳಿಂದ ಹುಬ್ಬಳ್ಳಿ ಟೈಗರ್ಸ್ ಎದುರು ರೋಚಕ ಜಯ ಸಾಧಿಸಿತು. ಪ್ರವೀಣ್ ದುಬೆ (ಔಟಾಗದೇ 64 ರನ್, 32 ಎ) ಗೆಲುವಿನ ರೂವಾರಿಯಾದರು.

ಶುಕ್ರವಾರದ ಎರಡನೇ ಪಂದ್ಯದಲ್ಲಿ ಹುಬ್ಬಳ್ಳಿ ತಂಡವು 198 ರನ್‌ಗಳ ಗುರಿ ನೀಡಿತು. ಪ್ರವೀಣ್ ಅವರ ಆಟದ ಬಲದಿಂದ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗೆ ಕಳೆದುಕೊಂಡು 200 ರನ್ ಗಳಿಸಿ, ಸಂಭ್ರಮಿಸಿತು. ಬ್ಲಾಸ್ಟರ್ಸ್ ತಂಡವು 14 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿ ಮುಂದುವರಿದಿದೆ.

ರೊನಾಲ್ಡೊ, ರಾಮೋಸ್ ಕಾಲ್ಚಳಕ

16ರ ಘಟ್ಟಕ್ಕೆ ಪೋರ್ಚುಗಲ್ ಪ್ರವೇಶ • ಕ್ರೊವೇಷ್ಯಾ ತಂಡ ನಿರ್ಗಮನ

ಲಾಸ್ ಏಂಜಲೀಸ್, ಅಮೆರಿಕ (ಎಎಫ್‌ಪಿ): ಪೆನಾಲ್ಟಿಯಲ್ಲಿ ಗೋಲು ಹೊಡೆದ ಕ್ರಿಸ್ಟಿಯಾನೊ ರೊನಾಲ್ಡೊ ಮತ್ತು ಸ್ಟಾಪೇಜ್ ಅವಧಿಯಲ್ಲಿ ಗೋಂಝಾಲೊ ರಾಮೋಸ್ ಅವರು ಪೋರ್ಚುಗಲ್ ತಂಡದ 16 ಘಟ್ಟದ ಪ್ರವೇಶಕ್ಕೆ ಮುನ್ನುಡಿ ಬರೆದರು. ಅಂತಿಮ ಕ್ಷಣಗಳಲ್ಲಿ ವಿಡಿಯೋ ಸಹಾಯಕ ರೆಫರಿ (ವಿಎಆರ್) ತೀರ್ಪಿನ ನಾಟಕೀಯ ಸನ್ನಿವೇಶವೂ ಗಮನ ಸೆಳೆಯಿತು.

ಗುರುವಾರ ತಡರಾತ್ರಿ ನಡೆದ ನಾಕೌಟ್ ಪಂದ್ಯದಲ್ಲಿ ಪೋರ್ಚುಗಲ್ ತಂಡವು 2–1ರಿಂದ ಕ್ರೊವೇಷ್ಯಾ ವಿರುದ್ಧ ಜಯಭೇರಿ ಬಾರಿಸಿತು.

ಪೋರ್ಚುಗಲ್	ಕ್ರೊವೇಷ್ಯಾ
2	1

ಪಂದ್ಯದ ಆರಂಭದಿಂದಲೂ ಉಭಯ ತಂಡಗಳ ಆಟಗಾರರು ಗೋಲು ಗಳಿಸಲು ತೀವ್ರ ಪೈಪೋಟಿ ಮಾಡಿದರು. ಆದರೆ 53ನೇ ನಿಮಿಷದಲ್ಲಿ ಕ್ರೊವೇಷ್ಯಾದ ಇವಾನ್ ಪೆರಿಸಿಚ್ ಗೋಲು ಹೊಡೆದು ಮುನ್ನಡೆ ಒದಗಿಸಿದರು.

ಇದಾಗಿ ಹದಿನೈದು ನಿಮಿಷ ಕಳೆದಿತ್ತು. 41 ವರ್ಷದ 'ಸೂಪರ್‌ಸ್ಟಾರ್' ರೊನಾಲ್ಡೊ ಅವರು ಪೆನಾಲ್ಟಿ ಅವಕಾಶದಲ್ಲಿ ತಮ್ಮ 'ಮ್ಯಾಜಿಕ್' ತೋರಿಸಿದರು. ಗೋಲ್ ಕೀಪರ್ ಡೊಮಿನಿಕ್ ಲೀವಾಕೊವಿಚ್ ಅವರನ್ನು ವಂಚಿಸಿ ಚೆಂಡನ್ನು ಗೋಲು ಬಲೆಗೆ ಕಳಿಸುವಲ್ಲಿ ಯಶಸ್ವಿಯಾದರು. ಇದರಿಂದಾಗಿ 1–1ರ ಸಮಬಲವಾಯಿತು.

ತಮ್ಮ ವೃತ್ತಿಜೀವನದಲ್ಲಿ ಬಹುತೇಕ ಕೊನೆಯ ವಿಶ್ವಕಪ್ ಟೂರ್ನಿಯಲ್ಲಿ ಆಡುತ್ತಿರುವ ರೊನಾಲ್ಡೊ ಎಂದಿನ ಚುರುಕುತನ ಮತ್ತು ತಂತ್ರಗಾರಿಕೆಯಿಂದ ಎದುರಾಳಿಗಳನ್ನು ಚಕಿತಗೊಳಿಸಿದರು.

ನಿಗದಿಯ ಅವಧಿ ಮುಗಿಯುವವರೆಗೂ ಉಭಯ ತಂಡಗಳಿಗೆ ಮತ್ತೆ ಗೋಲು ದಾಖಲಿಸಲು ಸಾಧ್ಯವಾಗಲಿಲ್ಲ. ಎರಡೂ ಕಡೆಯ ರಕ್ಷಣಾ ಆಟಗಾರರು ತೀವ್ರ ಪೈಪೋಟಿ ನಡೆಸಿದರು.

ಇಂಜುರಿ ಅವಧಿಯಲ್ಲಿ ಪೋರ್ಚುಗಲ್ ತಂಡದ ರಾಮೋಸ್ ಹೆಡರ್ ಮೂಲಕ ಗೋಲು ಗಳಿಸಿದರು. ರೊನಾಲ್ಡೊ ಸೇರಿದಂತೆ ಪೋರ್ಚುಗಲ್ ತಂಡದ ಆಟಗಾರರೆಲ್ಲರೂ ಸಂಭ್ರಮಿಸಿದರು. ಆದರೆ ಕೆಲವೇ ನಿಮಿಷಗಳ ನಂತರ ಕ್ರೊವೇಷ್ಯಾದ ಜೊಸ್ಕೊ ಜಿವಾರ್ಡಿಯೊಲ್ ಗೋಲು ಗಳಿಸುವ ಮೂಲಕ ಪೋರ್ಚುಗಲ್ ಪಾಳೆಯದಲ್ಲಿ ಆತಂಕ ತಂದಿಟ್ಟರು.

ಆದರೆ ವಿಎಆರ್ ಮೂಲಕ (ಚೆಂಡಿನಲ್ಲಿ ಚಿಪ್ ಅಳವಡಿಸಲಾಗಿರುತ್ತದೆ) ಮರುಪರಿಶೀಲನೆ ಮಾಡಿದಾಗ ಚೆಂಡು ಕ್ರೊವೇಷ್ಯಾದ ಸ್ಟ್ರೈಕರ್ ಐಗೊರ್ ಮೆಟಾನೊವಿಚ್ ಅವರನ್ನು ಸವರಿ ಹೋಗಿತ್ತು. ಅಲ್ಲದೇ ಮಾರಿಯೊ ಪಸಾಲಿಚ್ ಅವರು ಆಫ್‌ಸೈಡ್‌ನಲ್ಲಿದ್ದರು. ಅದರಿಂದಾಗಿ ಪೋರ್ಚುಗಲ್ ಪರ ನಿರ್ಣಯ ಹೊರಬಿತ್ತು.


ಪೋರ್ಚುಗಲ್ ತಂಡದ ಗೋಂಝಾಲೊ ರಾಮೋಸ್ (9) ಅವರು ಗೋಲು ಗಳಿಸುವುದನ್ನು ತಡೆಯಲು ಕ್ರೊವೇಷ್ಯಾದ ಆಟಗಾರರು ಪ್ರಯತ್ನಿಸಿದರು ಎಪಿ/ಪಿಟಿಐ ಚಿತ್ರ

ಮೈಕೆಲ್ ಒಯರ್ಜಬಾಲ್ ಎರಡು ಗೋಲು • ಪ್ರಿಕ್ವಾರ್ಟರ್‌ಗೆ 'ರಾಡ್ರಿ' ಬಳಗ

ಸ್ಪೇನ್‌ಗೆ ಮಣಿದ ಆಸ್ಟ್ರಿಯಾ ಪಡೆ

ಲಾಸ್ ಏಂಜಲೀಸ್ (ಎಎಫ್‌ಪಿ): ಮೈಕೆಲ್ ಒಯರ್ಜಬಾಲ್ ಅವರ ಅವಳಿ ಗೋಲುಗಳ ನೆರವಿನಿಂದ ಯುರೋಪಿನ ಚಾಂಪಿಯನ್ ಸ್ಪೇನ್ ಗುರುವಾರ 3–0 ಗೋಲುಗಳಿಂದ ಆಸ್ಟ್ರಿಯಾ ತಂಡವನ್ನು ಸೋಲಿಸಿ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಪ್ರಿಕ್ವಾರ್ಟರ್ ಫೈನಲ್‌ಗೆ ಮುನ್ನುಗ್ಗಿತು.

ಸ್ಪೇನ್	ಆಸ್ಟ್ರಿಯಾ
3	0

ಪೆಡ್ರೊ ಪೊರೊ ಅವರು ಹೆಡ್ಡರ್ ಮೂಲಕ ಮತ್ತೊಂದು ಗೋಲನ್ನು ಗಳಿಸಿದರು. ಸ್ಪೇನ್ ತಂಡ ಇದೇ 7ರಂದು ಡಲ್ಲಾಸ್‌ನಲ್ಲಿ ನಡೆಯಲಿರುವ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಪೋರ್ಚುಗಲ್ ತಂಡವನ್ನು ಎದುರಿಸಲಿದೆ.

ಹಾಲಿವುಡ್ ತಾರೆಯರಾದ ಪೆನೆಲೋಪ್ ಕ್ರುಝ್, ಜೇವಿಯರ್ ಬರ್ಡೆಮ್, ಗಾಯಕಿ ರೊಸಾಲಿಯಾ ಮೊದಲಾದವರು ಹಾಜರಿದ್ದ ಸೋಫಿ ಕ್ರೀಡಾಂಗಣ ಸ್ಪೇನ್ ಅಭಿಮಾನಿಗಳಿಂದ ಕೆಂಪುಸಾಗರದಂತಿತ್ತು.

ಸ್ಪೇನ್ ಹೆಚ್ಚಿನ ಅವಧಿಯಲ್ಲಿ ಚೆಂಡಿನ ಮೇಲೆ ನಿಯಂತ್ರಣ ಸಾಧಿಸಿತು. ಆಸ್ಟ್ರಿಯಾದ ರಕ್ಷಣಾ ಪಡೆಗೆ ಪದೇ ಪದೇ ಸವಾಲೊಡ್ಡಿತು. ಹಾಗೆ ನೋಡಿದರೆ ಸ್ಪೇನ್ ಹೆಚ್ಚಿನ ಅಂತರದಿಂದ ಗೆಲ್ಲುವ ಅವಕಾಶ ಹೊಂದಿತ್ತು.

ಸ್ಪೇನ್ ಈ ವಿಶ್ವಕಪ್‌ನಲ್ಲಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡಗಳಲ್ಲಿ ಒಂದೆನಿಸಿದೆ.

ಮೊದಲಾರ್ಧದ ಪಾನೀಯ ವಿರಾಮದ (ಮೂರು ನಿಮಿಷ ಅವಧಿ) ನಂತರ ಸ್ಪೇನ್ ಹೆಚ್ಚು ಸಂಘಟಿತ ದಾಳಿಗಳನ್ನು ನಡೆಸಿತು. ಲಮಿನ್ ಯಮಾಲ್ ಪಾಸ್‌ನಲ್ಲಿ ಮಾರ್ಕ್ ಕುಕುರೆಲ್ಲಾ ಅವರ ಗೋಲನ್ನು ಅನರ್ಹಗೊಳಿಸಲಾಯಿತು. ಆಸ್ಟ್ರಿಯಾದ ಗೋಲ್‌ಕೀಪರ್ ಮೇಲೆ ಪಾವು ಕುಬರ್ಸಿ ಎರಗಿದ್ದು ಇದಕ್ಕೆ ಕಾರಣ. ನಂತರ ಒಯರ್ಜಬಾಲ್ ಅವರ ಕೆಳಮಟ್ಟದ ಯತ್ನವನ್ನು ಆಸ್ಟ್ರಿಯಾ ಗೋಲ್‌ಕೀಪರ್ ಅಲೆಕ್ಸಾಂಡರ್ ಶಲ್ಗರ್ ಅತ್ಯುತ್ತಮವಾಗಿ ತಡೆದರು.

36ನೇ ನಿಮಿಷ ಒಯರ್ಜಬಾಲ್ ಕೊನೆಗೂ ಸ್ಪೇನ್‌ಗೆ ಮುನ್ನಡೆ ಒದಗಿಸಿದರು. ಪೆದ್ರಿ ಅವರಿಂದ ಪಾಸ್ ಪಡೆದ ಕುಕುರೆಲ್ಲಾ ಕ್ರಾಸ್ ಮೂಲಕ ಒಯರ್ಜಬಾಲ್‌ಗೆ ಕಳುಹಿಸಿದ್ದರು. ಅವರು ಗಲಿಬಿಲಿಗೆ ಒಳಗಾಗದೇ ಗೋಲು ಗಳಿಸಿದರು. ಇದರಿಂದ ಸ್ಪೇನ್ ಮತ್ತಷ್ಟು ಉತ್ಸಾಹದಿಂದ ಆಡಿತು. ಅಲೆಕ್ಸ್ ಬಯೇನಾ ಅವರ ಗೋಲು ಯತ್ನ ಅಡ್ಡಪಟ್ಟಿಗೆ ಹೊಡೆಯಿತು. ಯಮಲ್ ಅವರು ಗೋಲಿನ ಸನಿಹದಿಂದ ನಡೆಸಿದ ಯತ್ನವನ್ನು ಅಲೆಕ್ಸಾಂಡರ್ ಚುರುಕಾಗಿ ತಡೆದರು.

ವಿರಾಮದ ನಂತರ ಕೆಲವು ಬದಲಾವಣೆಗಳೊಂದಿಗೆ ಆಡಲು ಇಳಿದ ಆಸ್ಟ್ರಿಯಾ ಗೋಲು ಯತ್ನಗಳನ್ನು ನಡೆಸಿದರೂ ಸಮ ಮಾಡಲಾಗಲಿಲ್ಲ. 66ನೇ ನಿಮಿಷ ಬಯೇನಾ ಕ್ರಾಸ್‌ನಲ್ಲಿ ಪೆಡ್ರೊ ಪೊರೊ ಚೆಂಡನ್ನು ಗೋಲಿನೊಳಗೆ ಹೆಡ್ ಮಾಡಿದರು. 89ನೇ ನಿಮಿಷ ಕುಕುರೆಲ್ಲಾ ಅವರ ಕರಾರುವಾಕ್ ಕ್ರಾಸ್‌ನಲ್ಲಿ ಒಯರ್ಜಬಾಲ್ ಪೆನಾಲ್ಟಿ ಏರಿಯಾದಿಂದ ಗೋಲು ಗಳಿಸಿ ಅಂತರವನ್ನು ಮತ್ತಷ್ಟು ಹಿಗ್ಗಿಸಿದರು.

ಅವಳಿ ಗೋಲು ಗಳಿಸಿದ ಸ್ಪೇನ್ ತಂಡದ ಮೈಕೆಲ್ ಒಯರ್ಜಬಾಲ್ ಅವರು ಚೆಂಡನ್ನು ಅಂಗಿಯ ಒಳಗಿಟ್ಟುಕೊಂಡು ಸಂಭ್ರಮಿಸಿದರು ಎಎಫ್‌ಪಿ ಚಿತ್ರ

ಸ್ಪೇನ್ ಗೋಲ್‌ಕೀಪರ್ ಸಿಮೋನ್ ವಿಶ್ವದಾಖಲೆ

ಲಾಸ್ ಏಂಜಲೀಸ್ (ಎಪಿ): ಸ್ಪೇನ್ ಗೋಲ್‌ಕೀಪರ್ ಉನೈ ಸಿಮೋನ್ ಅವರು ಈ ಟೂರ್ನಿಯಲ್ಲಿ ಸತತ 519 ನಿಮಿಷ ಎದುರಾಳಿ ತಂಡಗಳಿಗೆ ಗೋಲು ಬಿಟ್ಟುಕೊಡದೇ ವಿಶ್ವದಾಖಲೆ ಸ್ಥಾಪಿಸಿದರು. ಆ ಮೂಲಕ 36 ವರ್ಷ ಹಳೆಯ ದಾಖಲೆ ಮುರಿದರು. ಆಸ್ಟ್ರಿಯಾ ವಿರುದ್ಧ 3–0 ಗೆಲುವಿನ ಪಂದ್ಯವೂ ಇದರಲ್ಲಿ ಸೇರಿದೆ.

29 ವರ್ಷ ವಯಸ್ಸಿನ ಸಿಮೋನ್ ಸತತ ನಾಲ್ಕನೇ ಪಂದ್ಯದಲ್ಲೂ ಎದುರಾಳಿಗಳಿಗೆ ಗೋಲು ಬಿಟ್ಟುಕೊಡಲಿಲ್ಲ. ಅವರು 1990ರಲ್ಲಿ ಇಟಲಿಯ ಗೋಲ್‌ಕೀಪರ್ ವಾಲ್ಟರ್ ಝೆಂಗಾ ಅವರು ಸ್ಥಾಪಿಸಿದ್ದ ದಾಖಲೆ (517 ನಿಮಿಷ) ಮುರಿದರು. ಸ್ವದೇಶದಲ್ಲಿ ನಡೆದ ಆ ವಿಶ್ವಕಪ್‌ನಲ್ಲಿ ಝೆಂಗಾ ಸತತ ಐದು ಪಂದ್ಯಗಳಲ್ಲಿ ಗೋಲು ಬಿಟ್ಟುಕೊಟ್ಟರಲಿಲ್ಲ.

'ಅವರ (ಸಿಮೋನ್) ಬಗ್ಗೆ ಹೆಮ್ಮೆ ಎನಿಸುತ್ತದೆ. ನನಗೆ ಅವರು ಕುಟುಂಬ ಸದಸ್ಯನಂತೆ' ಎಂದು ಸ್ಪೇನ್‌ನ ಕೋಚ್ ಲೂಯಿಸ್ ಡಿ ಲಾ ಫುಂಟೆ ಶ್ಲಾಘಿಸಿದರು.

ಪ್ರಿಕ್ವಾರ್ಟರ್‌ಗೆ ಸಿನ್ನರ್, ಜೊಕೊವಿಚ್

ವಿಂಬಲ್ಡನ್: ಸಬಲೆಂಕಾ, ಒಸಾಕಾ, ಪೆಗುಲಾ ಮುನ್ನಡೆ • ಮೆಡ್ವೆಡೇವ್ ನಿರ್ಗಮನ

ಲಂಡನ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರು ನೇರ ಸೆಟ್‌ಗಳ ಗೆಲುವಿನೊಂದಿಗೆ ವಿಂಬಲ್ಡನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಶುಕ್ರವಾರ ಪ್ರಿಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅಗ್ರ ಶ್ರೇಯಾಂಕದ ಆಟಗಾರ್ತಿ ಅರಿನಾ ಸಬಲೆಂಕಾ ಹಾಗೂ ಸರ್ಬಿಯಾದ ದಿಗ್ಗಜ ಆಟಗಾರ ನೊವಾಕ್ ಜೊಕೊವಿಚ್ ಅವರೂ 16ರ ಘಟ್ಟಕ್ಕೆ ಮುನ್ನಡೆದರು.

ಅಗ್ರಶ್ರೇಯಾಂಕ ಪಡೆದಿರುವ ಸಿನ್ನರ್ ಅವರು ಆಲ್ ಇಂಗ್ಲೆಂಡ್ ಕ್ಲಬ್‌ನ ಒಂದನೇ ಕೋರ್ಟ್‌ನಲ್ಲಿ ನಡೆದ ಮೂರನೇ ಸುತ್ತಿನ ಹಣಾಹಣಿಯಲ್ಲಿ 6–4, 6–3, 6–4ರಿಂದ ಅಮೆರಿಕದ ಜೆನ್ಸನ್ ಬ್ರೂಕ್ಸ್‌ಬಿ ಅವರನ್ನು ನಿರಾಯಾಸವಾಗಿ ಸೋಲಿಸಿದರು. ಸಬಲೆಂಕಾ 6–4, 6–4ರಲ್ಲಿ ಲಾಟ್ವಿಯಾದ ಯೆಲೆನಾ ಒಸ್ತಪೆಂಕೊ ಅವರನ್ನು ನಿರಾಯಾಸವಾಗಿ ಮಣಿಸಿದರು.

ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಗೆಲ್ಲುವ ಪ್ರಯತ್ನದಲ್ಲಿರುವ ಜೊಕೊವಿಚ್ ಅವರು 7–5, 6–4, 1–6, 7–6 (7–4)ರಿಂದ ಫ್ರಾನ್ಸ್‌ನ ಅರ್ಥರ್ ರಿಂಡೆಕ್‌ನೆಶ್ ಅವರನ್ನು ಹಿಮ್ಮೆಟ್ಟಿಸುವ ಮೊದಲು ಪ್ರತಿರೋಧವನ್ನೂ ಎದುರಿಸಬೇಕಾಯಿತು. 39 ವರ್ಷ ವಯಸ್ಸಿನ 'ಜೊಕೊ' ಇಲ್ಲಿ ಏಳು ಬಾರಿ ಚಾಂಪಿಯನ್ ಆಗಿದ್ದಾರೆ.

ನಾಲ್ಕನೇ ಶ್ರೇಯಾಂಕದ ಜೆಸಿಕಾ ಪೆಗುಲಾ (ಅಮೆರಿಕ) ಸಹ ಗೆಲುವಿನ ಓಟ ಮುಂದುವರಿಸಿದರು. 6–1, 6–3ರಿಂದ ನೇರ ಸೆಟ್‌ಗಳಲ್ಲಿ ಸ್ಪೇನ್‌ನ ಜೆಸಿಕಾ ಬೌಝಸ್ ಮನೈರೊ ವಿರುದ್ಧ ಗೆದ್ದು ಪ್ರಿಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು. ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆಲ್ಲುವ ಪ್ರಯತ್ನದಲ್ಲಿರುವ 32 ವರ್ಷ ವಯಸ್ಸಿನ ಆಟಗಾರ್ತಿ 16ರ ಘಟ್ಟದಲ್ಲಿ 16ನೇ ಶ್ರೇಯಾಂಕದ ಇವಾ ಜೋವಿಕ್ (ಅಮೆರಿಕ) ಅವರನ್ನು ಎದುರಿಸಲಿದ್ದಾರೆ.

ವಿಭಿನ್ನ ಧಿರಿಸುಗಳೊಂದಿಗೆ ಅಂಕಣಕ್ಕಿಳಿದು ಗಮನ ಸೆಳೆಯುವ ಜಪಾನ್‌ನ ನವೊಮಿ ಒಸಾಕಾ ಅವರೂ 16ರ ಘಟ್ಟ ಪ್ರವೇಶಿಸಿದರು. ನಾಲ್ಕು ಗ್ರ್ಯಾನ್‌ಸ್ಲಾಮ್ ಕಿರೀಟ ಜಯಿಸಿರುವ ಅವರು 6–1, 6–3ರಿಂದ ಆಸ್ಟ್ರೇಲಿಯಾದ ಡರಿಯಾ ಕಸಟ್ಕಿನಾ ವಿರುದ್ಧ ನಿರಾಯಾಸವಾಗಿ ಗೆದ್ದರು. 28 ವರ್ಷ ವಯಸ್ಸಿನ ಒಸಾಕಾ ಇಲ್ಲಿ ಮೊದಲ ಬಾರಿಗೆ ಮೂರನೇ ಸುತ್ತು ದಾಟಿದ್ದಾರೆ.

ಕಳೆದ ಬಾರಿ ಸೆಮಿಫೈನಲ್ ತಲುಪಿದ್ದ ಸ್ವಿಟ್ಜರ್ಲೆಂಡ್‌ನ ಅನುಭವಿ ಆಟಗಾರ್ತಿ ಬೆಲಿಂಡಾ ಬೆನ್ಸಿಕ್ ಅವರು 6–4, 4–6, 7–6 (10–6)ರಿಂದ ರಷ್ಯಾದ ಆ್ಯನ್ನಾ ಕಲಿನ್‌ಸ್ಕಾಯಾ ಎದುರು ಪ್ರಯಾಸದ ಜಯ ಸಾಧಿಸಿದರು. ಜೆಕ್ ಗಣರಾಜ್ಯದ ಕರೋಲಿನಾ ಮುಖೋವಾ 6–2, 7–6 (7–1)ರಿಂದ ಥಾಯ್ಲೆಂಡ್‌ನ ಮನಂಚಾಯಾ ಸವಂಗ್‌ಕಾವ್ ಅವರನ್ನು ಸೋಲಿಸಿದರು.

ಮೆಡ್ವೆಡೇವ್, ಜೊವೊಗೆ ಆಘಾತ: ಎಂಟನೇ ಶ್ರೇಯಾಂಕದ ಆಟಗಾರ ಡೇನಿಯಲ್ ಮೆಡ್ವೆಡೇವ್ ಹಾಗೂ 'ಫ್ರೆಂಚ್ ಓಪನ್'ನಲ್ಲಿ ಜೊಕೊವಿಚ್ ಅವರಿಗೆ ಆಘಾತ ನೀಡಿ ಗಮನ ಸೆಳೆದಿದ್ದ ಬ್ರೆಜಿಲ್‌ನ ಯುವ ಆಟಗಾರ ಜೊವೊ ಫೋನ್ಸೆಕಾ ಅವರ ಹೋರಾಟ ಮೂರನೇ ಸುತ್ತಿನಲ್ಲಿಯೇ ಅಂತ್ಯಗೊಂಡಿತು.

ಜರ್ಮನಿಯ ಅನುಭವಿ ಆಟಗಾರ ಯಾನ್ ಲೆನಾರ್ಡ್ ಸ್ಟ್ರೂಫ್ ಅವರು ರೋಚಕ ಹಣಾಹಣಿಯಲ್ಲಿ 7–6 (7–4), 7–6 (7–5), 7–5ರಿಂದ ಮೆಡ್ವೆಡೇವ್‌ಗೆ ಆಘಾತ ನೀಡಿದರು. ಜೊವೊ 3–6, 3–6, 3–6ರಿಂದ ರಷ್ಯಾದ ಶ್ರೇಯಾಂಕ ರಹಿತ ಆಟಗಾರ ರೋಮನ್ ಸಫುಲಿನ್ ಎದುರು ಪರಾಭವಗೊಂಡರು.

ಮೂರನೇ ಸುತ್ತಿಗೆ ರಿಬಾಕಿನಾ: ಎರಡನೇ ಶ್ರೇಯಾಂಕದ ಆಟಗಾರ್ತಿ, ಕಜಾಕಸ್ತಾನದ ಎಲಿನಾ ರಿಬಾಕಿನಾ ಅವರು ನೇರ ಸೆಟ್‌ಗಳ ಗೆಲುವಿನೊಂದಿಗೆ ಮೂರನೇ ಸುತ್ತಿಗೇರಿದರು. 2022ರ ಚಾಂಪಿಯನ್ 6–1, 6–2ರಿಂದ ಅಮೆರಿಕದ ಕ್ಯಾಟಿ ಮೆಕ್‌ನಾಲಿ ಅವರನ್ನು ಹಿಮ್ಮೆಟ್ಟಿಸಿದರು. ಅಮೆರಿಕದ ಆಟಗಾರ್ತಿಯರಾದ ಅಮಾಂಡ ಅನಿಸಿಮೋವಾ ಹಾಗೂ ಮ್ಯಾಡಿಸನ್ ಕೀಸ್ ಅವರೂ 32ರ ಘಟ್ಟ ಪ್ರವೇಶಿಸಿದರು.

ವಿಭಿನ್ನ ಧಿರಿಸು ಧರಿಸಿ ಅಂಕಣಕ್ಕೆ ಬಂದ ಜಪಾನ್‌ನ ನವೊಮಿ ಒಸಾಕಾ ಎಎಫ್‌ಪಿ ಚಿತ್ರ

ಬ್ರೀಲ್ ಎಂಬೊಲೊ, ಡಾನ್ ಎನ್‌ಡೊಯೆ ಗೋಲು

16ರ ಘಟ್ಟಕ್ಕೆ ಸ್ವಿಟ್ಜರ್ಲೆಂಡ್ ಲಗ್ಗೆ

ವ್ಯಾಂಕೂವರ್ (ಎಎಫ್‌ಪಿ): ಅಲ್ಜೀರಿಯಾ ತಂಡವನ್ನು ಗುರುವಾರ 2–0 ಗೋಲುಗಳಿಂದ ಸೋಲಿಸಿದ ಸ್ವಿಟ್ಜರ್ಲೆಂಡ್ ತಂಡ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಅಂತಿಮ 16ರಲ್ಲಿ ಸ್ಥಾನ ಕಾಯ್ದಿರಿಸಿಕೊಂಡಿತು.

ಸ್ವಿಟ್ಜರ್ಲೆಂಡ್ ಪಡೆ, ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಕೊಲಂಬಿಯಾ– ಘಾನಾ ಪಂದ್ಯದ ವಿಜೇತರನ್ನು ಎದುರಿಸಲಿದೆ.

ಪಂದ್ಯದ 10ನೇ ನಿಮಿಷ ಜೊಹಾನ್ ಮಂಝೂಂಬಿ ಅವರು ಎಡಗಡೆಯಿಂದ ಕಳುಹಿಸಿದ ಕ್ರಾಸ್‌ನಲ್ಲಿ ಬ್ರೀಲ್ ಎಂಬೊಲೊ ಚೆಂಡನ್ನು ಗೋಲಿಗೆ ನಿರ್ದೇಶಿಸಿದರು. 20 ವರ್ಷ ವಯಸ್ಸಿನ ಮಂಝೂಬಿ ಈ ಸಲದ ಟೂರ್ನಿಯಲ್ಲಿ ಸ್ವಿಸ್ ತಂಡದ ತಾರೆಯಾಗಿದ್ದಾರೆ. ಎರಡು ಗೋಲುಗಳನ್ನು ಹೊಡೆದಿರುವ ಅವರು ಎರಡು ಗೋಲುಗಳಿಗೆ ಅಸಿಸ್ಟ್ ಮಾಡಿದ್ದಾರೆ.

ಡಾನ್ ಎನ್‌ಡೊಯೆ ಅವರು ಉತ್ತರಾರ್ಧದ ಆರಂಭದಲ್ಲೇ ಸ್ವಿಟ್ಜರ್ಲೆಂಡ್ ಮುನ್ನಡೆಯನ್ನು ಹೆಚ್ಚಿಸಿದರು. ಅಲ್ಜೀರಿಯಾದ ರಕ್ಷಣೆ ಆಟಗಾರ ರಫಿಕ್ ಬೆಲ್ಘಲಿ ಅವರು ದುರ್ಬಲವಾಗಿ ತಡೆದ ಚೆಂಡನ್ನು ಎನ್‌ಡೊಯೆ ಅವರು ನಿಯಂತ್ರಿಸಿ, ಆಟಗಾರರ ಗುಂಪಿನ ಮಧ್ಯದಿಂದಲೇ ಚೆಂಡನ್ನು ಗೋಲಿನೊಳಕ್ಕೆ ಒದ್ದರು.

ಸ್ವಿಟ್ಜರ್ಲೆಂಡ್	ಅಲ್ಜೀರಿಯಾ
2	0

ಅಲ್ಜೀರಿಯಾದ ಕೀಪರ್ ಲುಕಾ ಝಿಡಾನ್ ಅವರಿಗೆ ತಡೆಯಲು ಸಾಧ್ಯವಾಗಲಿಲ್ಲ. ಉತ್ತರ ಆಫ್ರಿಕಾದ ತಂಡ ನಿರಾಸೆ ಅನುಭವಿಸಿತು.

ಸವಾಲು ಉಳಿಸಿದ ಮೊರಾಕ್ಕೊ: ಆಫ್ರಿಕಾ ಖಂಡದಿಂದ ಹೊರಬಿದ್ದ ರಾಷ್ಟ್ರಗಳ ಸಾಲಿಗೆ ಅಲ್ಜೀರಿಯಾ ಸೇರಿತು. ಐವರಿ ಕೋಸ್ಟ್, ಡಿ.ಆರ್.ಕಾಂಗೊ, ಸೆನೆಗಲ್, ದಕ್ಷಿಣ ಆಫ್ರಿಕಾ ತಂಡಗಳು 32ರ ಸುತ್ತಿನಲ್ಲಿ ಹೊರಬಿದ್ದ ಇತರ ತಂಡಗಳು. ಉತ್ತರ ಆಫ್ರಿಕಾದಲ್ಲಿರುವ ಮೊರಾಕ್ಕೊ ಮಾತ್ರ ಕಣದಲ್ಲಿ ಉಳಿದಿದೆ. ಈ ತಂಡ ಕತಾರ್‌ನಲ್ಲಿ ನಡೆದ 2022ರ ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿ ಗಮನ ಸೆಳೆದಿತ್ತು.

ಗೋಲು ಗಳಿಸಿದ ಸ್ವಿಟ್ಜರ್ಲೆಂಡ್ ತಂಡದ ಬ್ರೀಲ್ ಎಂಬೊಲೊ (ಎಡ) ಹಾಗೂ ಡಾನ್ ಎನ್‌ಡೊಯೆ ಸಂಭ್ರಮ ಎಎಫ್‌ಪಿ ಚಿತ್ರ

ಪಂದ್ಯಗಳು

ಕೊಲಂಬಿಯಾ	V/s	ಘಾನಾ
ಶನಿವಾರ ಬೆಳಿಗ್ಗೆ 7		
ಕೆನಡಾ	V/s	ಮೊರಾಕ್ಕೊ
ಶನಿವಾರ ರಾತ್ರಿ 10.30		
ಪರಗ್ವೆ	V/s	ಫ್ರಾನ್ಸ್
ಭಾನುವಾರ ಬೆಳಗಿನ ಜಾವ 2.30		

ಲೈವ್: ಯುನೈಟೆಡ್ 8 ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ನಿಧನ ವಾರ್ತೆ

ವೇಣುಗೋಪಾಲ್

ಬೆಂಗಳೂರು: ಭಾರತ ಕ್ರೀಡಾ ಪ್ರಾಧಿಕಾರದ (ಎಸ್‌ಎಐ) ಮಾಜಿ ಫುಟ್‌ಬಾಲ್ ಕೋಚ್ ಜಿ.ವಿ. ವೇಣುಗೋಪಾಲ್ (68) ಹೃದಯಾಘಾತದಿಂದ ನಿಧನರಾದರು.

ಮೂಲತಃ ಗುಂಡ್ಲುಪೇಟೆಯವರಾದ ಅವರು ಲಕ್ಷದ್ವೀಪದ ಎಸ್‌ಎಐ ಮತ್ತು 2018ರಲ್ಲಿ ನಿವೃತ್ತರಾಗುವ ಮುನ್ನ ರಾಷ್ಟ್ರೀಯ ಕ್ರೀಡಾ ಸಂಸ್ಥೆ (ಎನ್‌ಐಎಸ್) ಯಲ್ಲಿ ಕಾರ್ಯನಿರ್ವಹಿಸಿದ್ದರು. ಅವರು ಮೈಸೂರಿನ ಜಾವಾ ಫ್ಯಾಕ್ಟರಿ ಫುಟ್‌ಬಾಲ್ ಕ್ಲಬ್ ಗೋಲ್ ಕೀಪರ್ ಆಗಿದ್ದರು ಎಂದು ರಾಜ್ಯ ಫುಟ್‌ಬಾಲ್ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ. ಅಂತ್ಯಕ್ರಿಯೆ ಶುಕ್ರವಾರ ನೆರವೇರಿತು.

ಟಿ.ಟಿ: ಗೌರವ್, ಐರಿನ್‌ಗೆ ಪ್ರಶಸ್ತಿ

ಮಂಗಳೂರು: ಆರಂಭಿಕ ಆಘಾತದಿಂದ ಚೇತರಿಸಿಕೊಂಡು ಅಮೋಘ ಆಟದ ಮೂಲಕ ತಿರುಗೇಟು ನೀಡಿದ ಬೆಂಗಳೂರಿನ ಐರಿನ್ ಅನಾ ಸುಭಾಷ್ ಇಲ್ಲಿನ ಕೊಟ್ಟಾರ ಪುದುಕೋಡಿಯ ಮಂಗಳೂರು ಟೇಬಲ್ ಟೆನಿಸ್ ಅಕಾಡೆಮಿಯಲ್ಲಿ ನಡೆಯುತ್ತಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 15 ವರ್ಷದೊಳಗಿನ ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು. 17 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಬೆಂಗಳೂರಿನ ಗೌರವ್ ಗೌಡ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಈಜು: ನೈರಾ, ಅವನಿ, ಕೃಷ್ ಮಿಂಚು

ಪ್ರಜಾವಾಣಿ ವಾರ್ತೆ

ಮಂಗಳೂರು: ಸ್ವಿಮ್ ಲೈಫ್ ಈಜು ಅಕಾಡೆಮಿಯ ನೈರಾ ಬೋಪಣ್ಣ, ಜೀ ಈಜು ಅಕಾಡೆಮಿಯ ಇಡಿಕಾ ಭಟ್, ನೆಟ್ಟಕಲ್ಲಪ್ಪ ಈಜು ಕೇಂದ್ರದ ಅವನಿ ಡಿ. ನಲ್ಲೋಡೆ ಮತ್ತು ಬಸವನಗುಡಿ ಈಜು ಕೇಂದ್ರದ ಕೃಷ್ ನಗರದಲ್ಲಿ ಶುಕ್ರವಾರ ಆರಂಭಗೊಂಡ ಎನ್‌ಆರ್‌ಜೆ ರಾಜ್ಯ ಸಬ್ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಮಿಂಚಿದರು.

ಚೇತನ್ ನಾಗರಾಜ ಗಣಪ

ಕರ್ನಾಟಕ ರಾಜ್ಯ ಈಜು ಸಂಸ್ಥೆಯ ಸಹಯೋಗದಲ್ಲಿ ನಗರದ ವಿ-ವನ್ ಈಜುಕೇಂದ್ರ, ಎಮ್ಮೆಕೆರೆ ಈಜುಕೊಳದಲ್ಲಿ ಆಯೋಜಿಸಿರುವ ಚಾಂಪಿಯನ್‌ಷಿಪ್‌ನಲ್ಲಿ ನಯಾರ 3, ಕೃಷ್, ಇಡಿಕಾ ಭಟ್ ಮತ್ತು ಅವನಿ ತಲಾ ಎರಡು ಚಿನ್ನ ಗೆದ್ದುಕೊಂಡರು.

ಮೊದಲ ದಿನದ ಫಲಿತಾಂಶಗಳು (ಚಿನ್ನ ಮಾತ್ರ): ಬಾಲಕರು: 400 ಮೀಟರ್ಸ್ ಫ್ರೀಸ್ಟೈಲ್: ಸಿ–1: ಶ್ರೇಯಸ್ ಸುನಿಲ್ (ಸ್ವಿಮ್ ಲೈಫ್) ಕಾಲ: 4:19.78; ಸಿ–2: ಪವನ್ ಕೃಷ್ಣನ್ (ಬಿಎಸಿ) ಕಾಲ: 4:26.10; ಡಿ–1: ಅವೀಕ್ ನಮಿತ್ ಗೌಡ (ಮತ್ಸ್ಯ). ಕಾಲ: 4:49.11; ಡಿ–2: ಇಶಾನ್ ಪಾಲ್ (ನಿಶಾ ಮಿಲೆಟ್ಸ್ ಅಕಾಡೆಮಿ) ಕಾಲ: 5:06.53; 100 ಮೀ ಬ್ರೆಸ್ಟ್‌ಸ್ಟ್ರೋಕ್: ಸಿ–1: ಚೇತನ್ ನಾಗರಾಜ ಗಣಪ (ನೆಟ್ಟಕಲ್ಲಪ್ಪ) ಕಾಲ: 1:10.26; ಸಿ–2: ತನುಷ್ ತೇಜಸ್ವಿ ಮೂರ್ತಿ (ಬಿಎಸಿ) ಕಾಲ: 1:17.35; ಡಿ–1: ಡ್ಯಾನಿಯಲ್: ಸಲ್ಡಾನ: (ಬಿಎಸಿ) ಕಾಲ: 1:18.86; ಡಿ–2: ಲೋಚನ್ ವೇದಾಂತ್ (ಗ್ಲೋಬಲ್) ಕಾಲ: 1:31.50; 200 ಮೀ ಬ್ಯಾಕ್ ಸ್ಟ್ರೋಕ್: ಸಿ–1: ಶ್ಲೋಕ್ ಜಾಧವ್ (ಸ್ವಿಮ್ಮರ್ಸ್ ಕ್ಲಬ್ ಬೆಳಗಾವಿ) ಕಾಲ: 2:25.34; ಸಿ–2: ಲೋಹಿತಾಶ್ವ ನಾಗೇಶ್ (ಲಕ್ಷ್ಯನ್) ಕಾಲ: 2:27.48; 50 ಮೀ ಬಟರ್ ಫ್ಲೈ: ಸಿ–1: ಕೃಷ್ (ಬಿಎಸಿ) ಕಾಲ: 27:31; ಸಿ–2: ಸಿದ್ಧಾಂತ್ ಹೊನ್ನಪ್ಪ (ಬಿಎಸಿ) ಕಾಲ: 30:34; 100 ಮೀ ಫ್ರೀಸ್ಟೈಲ್: ಸಿ–1: ಕೃಷ್ (ಬಿಎಸಿ) ಕಾಲ: 55.72; ಸಿ–2: ಅಮಿತ್ ಪವನ್ (ಜೆಬಿಆರ್‌ಎಸ್) ಕಾಲ: 57:06; ಡಿ–1: ವಿಹಾನ್ ಕೃಷ್ಣ (ರೇ ಈಜು ಕೇಂದ್ರ) ಕಾಲ: 1:01.96; ಡಿ–2: ಈಶಾನ್ ಪಾಲ್: (ನಿಶಾ ಮಿಲೆಟ್ಸ್ ಅಕಾಡೆಮಿ) ಕಾಲ: 1:07.41.

ಬಾಲಕಿಯರು: 400 ಮೀಟರ್ಸ್ ಫ್ರೀಸ್ಟೈಲ್: ಸಿ–1: ಇಡಿಕಾ ಭಟ್ (ಜೀ ಸ್ವಿಮ್ ಅಕಾಡೆಮಿ): ಕಾಲ: 4:45.97; ಸಿ–2: ನೈರಾ ಬೋಪಣ್ಣ (ಸ್ವಿಮ್ ಲೈಫ್) ಕಾಲ: 4:47.41; ಡಿ–2: ಜಾರ್ನ ಸಿಸೋಡಿಯ (ಏಕಲವ್ಯ ಅಕಾಡೆಮಿ) ಕಾಲ: 5:02.02; ಡಿ–2: ಅವನಿ ನಲ್ಲೋಡೆ (ನೆಟ್ಟಕಲ್ಲಪ್ಪ ಈಜು ಕೇಂದ್ರ) ಕಾಲ: 5:09.73; 100 ಮೀ ಬ್ರೆಸ್ಟ್ ಸ್ಟ್ರೋಕ್: ಸಿ–1: ಇಂಚರಾ (ಲಕ್ಷ್ಯನ್) ಕಾಲ: 1:19.35; ಸಿ–2 ಧೃತಿ ಅಭಿಲಾಷ್ (ಬಿಎಸಿ) ಕಾಲ: 1:25.68; ಡಿ–1: ರೀತನ್ಯ (ಬಿಎಸಿ) ಕಾಲ: 1:23.55; ಡಿ–2: ಸಾರಾ ಅಶೋಕ್ ಕುಮಾರ್ (ನೆಟ್ಟಕಲ್ಲಪ್ಪ) ಕಾಲ: 1:27.12; 200 ಮೀ ಬ್ಯಾಕ್ ಸ್ಟ್ರೋಕ್: ಸಿ–1: ಸುಮೇಧಾ ವಿ (ಡಾಲ್ಫಿನ್) ಕಾಲ: 2:35.50; ಸಿ–2: ನೈರಾ ಬೋಪಣ್ಣ (ಸ್ವಿಮ್ ಲೈಫ್) ಕಾಲ: 2:34.34; 50 ಮೀ ಬಟರ್ ಫ್ಲೈ: ಸಿ–1: ಮನ್ಯಾ ವಾಧ್ವಾ (ಡಾಲ್ಫಿನ್) ಕಾಲ: 30:28; ಸಿ–2: ಸ್ವೀಟಿ ದಿವಾಕರ ಸುವರ್ಣ (ಬಿಎಸಿ) ಕಾಲ: 30:83; 100 ಮೀ ಫ್ರೀಸ್ಟೈಲ್: ಸಿ–1: ಇಡಿಕಾ ಭಟ್ (ಜೀ ಸ್ವಿಮ್ ಅಕಾಡೆಮಿ) ಕಾಲ: 1:02.36; ಸಿ–2: ನೈರಾ ಬೋಪಣ್ಣ (ಸ್ವಿಮ್ ಲೈಫ್) ಕಾಲ: 1:03.63; ಡಿ–1: ಗಾಯತ್ರಿ ಸೋಮಯಾಜಿ: (ಸ್ವಿಮ್ ಲೈಫ್) ಕಾಲ: 1:05.90; ಡಿ–2: ಅವನಿ ನಲ್ಲೋಡೆ (ನೆಟ್ಟಕಲ್ಲಪ್ಪ) ಕಾಲ: 1:09.28.

ಪ್ರಜಾವಾಣಿ ಶನಿವಾರ • ಜುಲೈ 4, 2026

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Jigani

KHB Sites
Near India 2nd International Cricket Stadium
Jigani, Electronic city, Bommasandra, Ready for Registration, SBI Bank loan avbl, Land owner Sites Call: 70260 13388

Anjanapura

SITE FOR SALE Anjanapura 5th Block, 80 feet parallel, South-East Corner, 3700 Sqft (Owner meeting) Contact: 9008844447

ANJANAPURA BDA site for sale 40×55 No786 8th block 12000/- per sqft. Contact : 8095504466

Banashankari

"BUYING AND Selling of Residency/ Commercial/ Industrial Properties in Bangalore only genuine Buyers/ Sellers Call: 9845286505"

BANASHANKARI 6TH Stage 4th H Block Site No.1234 30x40 S/F Rate 8500 Negotiable Near Kanakapura Road: 9880812364

BANASHANKARI 6TH stage. 50x80. Commercial 100 Feet Road. And 40x60. Corners Sites For Sale. -9916817739

Basaweshwaranagar

BUYING/ SELLING Commercial/ Residential Basveshwarnagar 40×60 South, Rajajinagar 50×80 East, Vijayanagar 40×60 60×90 Call 8660075308

Kempegowda Layout

PLATINUM PROPERTIES Nadaprabhu Kempegowda Layout BDA SITE'S AVAILABLE/ WANTED 20x30, 30x40, 40x60, 50x80 Contact: 8884709409/ 7899570235

Nagarabhavi

SITE SALE 40x60 Nagarbhavi 50x80 8th Block Residential. 50x80 Commercial 100 Feet Road Visvesvarayya Layout. 9008418631.

Nelamangala

BYRASHETTYHALLI VILLAGE. Aiswarya County. BMRDA. 40X60. East facing site for sale. loan available. Owner. 9620117773

VCNR VISTA NEAR NELAMANGALA & HESARGHATTA 30X40 & 30X50 BOOK A SITE VISIT CONTACT:9986896859

Vishweshwariah Layout

FOR SALE
Visveshwaraiah Layout BSK 6th Stg, Kempegowda Lyt, Nagarabhavi, ITI Lyt, Vidhanasouda Layout. Immediate Registration
CALL: 97403 82488

Sanjaynagar

SANJAYANAGAR, Ashwath Nagar 40X40 East Facing A-Katha, Rs. 20,500/- Nego Prime Location Call: 9945389817 9986356467

Magadi Road

30X40 SITE West Face, Hoshalli Gollarapalya, Gollarahatti, Near NICE Road, E Katha 7500/- Prsq: 9740073482

House

Jayanagar

JAYANAGARA 4TH 'T' Block 30x40,Old House Near SSMRV College Price 4.60CR Contact; 9845704509

Vijayanagar

RPC Layout House for Sale
Posh House in Good Location, 2 floors, in **1st floor** - 8 Bedrooms, Modern Kitchen, Dinning Hall, Pooja Room, Fully furnished House, and in **Ground floor** - 2 Bedroom, Kitchen Dinning Hall Fully furnished House with 2 car parking & Lift. built in 60x90 (5400 Sft) site with clear title for immediate sale. Genuine parties only Contact Directly
99019 85699
No Brokers

BDA 20X25 House EF, RPC Layout, Near Post Office, By2 Coffee Hotel, Vijayanagar 1.25Cr 9739957911

Flat

Banashankari

KATHRIGUPPE EAST, GH RESIDENCY, 3BHK FLATS For Sale, Ready to Move. 9000/ SFT.94482-58218 / 80507-27159

J P Nagar

3BHK FURNISHED ready to move ultra modern GF flat 1,969sft on Sarakki Main Road, 3.20Cr with 2 carpark (negotiable). Owner 9845397832. Brokers Excuse.

1650SFT,SPACIOUS 3BHK Marvellous Semi-furnd Flat 7500/-2BHK 1200SFT,72L/ 20X30,3BHK Tplx1.60cr,1km From Y"Halli Metro Station: 9964652358,

Nagarabhavi

FLATS FOR-SALE @ Nagarabhavi/ Chandra Layout 2 & 3 BHK Ready to Move In Good Location Call:9538472420 9845066608

Whitefield

3 BHK FLAT SALE With Interiors Ready to Occupy at WHITEFIELD Prime Location. 90L. Call: 9902001259.

Commercial Building

Kanakapura Road

"COMMERCIAL BUILDING For Sale Kanakapura Road near Konanakunta Metro Station ₹3.35 Crore. "Sri.Ganesh Estate" 9845286505"

Commercial Land

K R Puram

FOR SALE 37000 sft Plot BBMP Khata with clear title at KR PURAM Junction. Next to Market, Clear Documents. Immediate Possession. Rs.12000/- per sft. Task Reality 9845005855

Commerical

Mysore Road

COMMERCIAL CONVERTED
Muncipal A Katha
with 200HP Power, Rent Income 4-5Lakhs PM, Sale Price 12Cr.
Brokers Excuse
Call: 9845021497

Industrial & Factory

Kanakapura Road

FOR SALE 1,05,000 Sft Industrial Converted Land KIADB Phase 2 HAROHALLI INDUSTRIAL AREA Rs.3000/- Per Sft. TASK REALITY: 9845005855

Villas/Bunglows

Sarjapur Road

4 BEDROOM boutique villa with attached bathrooms + staff room with toilet on an East facing 3000 Sq.Ft site off Sarjapur Road, Bangalore. Contact 9740037445, 9845538518.

REAL ESTATE BUYING

Joint Development

South

WANTED PROPERTIES For JV 2400sqft and Above, Outrate Purchase 5 Acers & Above Suitable: For Apartment, Layout Farmland Devlopment: 9886412229

PROPERTY CORNER

COMMERCIAL SPACE FOR RENT
- Ideal for Offices, Clinics, Showroom, Full or partial building rent out.
- Building area G+5 floors 900 sqft per Floor
- Elevetor Facility is Available.
- Toilet On Each Floor.
- 6000 Litres Water sump, BWSSB facility

Address: 10/2, 5th Main, 8th Cross, Chamrajpete, Bangalore-560018
Contact +91 79759 94583 +91 88674 00643

Sites

Anjanapura

WANTED BDA SITES & BBMP SITES. COMMERCIAL & RESIDENTIAL, ANJANAPURA, BANASHANKARI 6TH STAGE, NPKL, JP NAGAR 8TH/ 9TH PHASE, BCC, BCMC LAYOUT, NARAYAN NAGAR. ANY MEASUREMENT. CONTACT: 9880300791

Vishweshwariah Layout

BUYING/ SELLING 20x30,30x40,40x60 50x80 BDA sites VISHVESHWARAIAH LAYOUT,BSK 6th-stage KEMPEGOWDA-LAYOUT,Contact: 9844533371/ 9341733480

Banashankari

WANTED BANASHANKARI 6th STAGE, ANY BLOCK, 30x40 ANY FACE, DIRECT REGISTRATION, CALL: MANOJ - 9731410616

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

1 ACRE COMMERCIAL PROPERTY for RENT
ON JIGANI Link Main Road Next to Gail Gas Station, Suitable for Showroom, Ware House.
Call : 9845582152

TO-LET OFFICE Space 2000Sft Built up Area Available for Rent in Madhavanagar, Adj:Race Course, Bengaluru Contact No-8296346977

House

FOR RENT 2BHK 1st Floor Portion in 6th Block Koramangla. Contact 9845073898.

TO-LET 2 BHK Available at HAL 3rd Stage, Indiranagar, Contact: 78291 22658/ 99456 23424

JOB OPPORTUNITIES

Drivers

WANTED DRIVERS providing Driver Service/ Drivers with own vehicles. Contact: 8123878250/ 9945588841.

REQUIRED COMMERCIAL Driver (4 Wheeler) for Swastik Air Conditioners. Age limit Below 45 Years. Jayanagar Bangalore Contact: 6364940675/ 9739094009

PERSONAL

Change of Name

CHANGE OF NAME
I, **Venugopal T R,** R/at # 205, 9th B Main Road, 1st Block, HRBR Layout, Banaswadi, Kalyan Nagar post, Bengaluru - 560043, have changed my minor son's name from **TARUN T V** to **TARUN RAMACHANDRAN T V** vide affidavit dated 03.07.2026 before notary Y.R. Chandrasekar, Bengaluru. Henceforth he shall be called as **TARUN RAMACHANDRAN T V** only

I, VENKATESAIAH PULLAIAH CHETTY SANNUTHI, residing at Bengaluru-20 have changed my name as VENKATESHAIAH PULLAIAH CHETTY SANNUTHI, vide affidavit dated 03/07/2026 before Notary K.S. Bammappanavar, Bengaluru

I, NAGARJUN K, residing at Bengaluru-64, have changed my name as NAGARJUNA KRISHNAPPA, vide affidavit dated 03/07/2026 before Notary K.S. Bammappanavar, Bengaluru

I, SRI. GIRI MALLANGOUDA PATIL, S/o Mallangouda Patil, aged about 51 years, permanently r/at #314, Purva Paradise, A302, 3rd Main, 7th Cross, Near Canara Bank, Domlur, Bangalore North, Bangalore- 560071, have changed my minor daughter's name from VRUNDA to VRUNDA PATIL, vide affidavit dated 3/7/2026 before Arun R Naik Advocate and Notary Bangalore

I. SRI. GIRI MALLANGOUDA PATIL, S/o Mallangouda Patil, aged about 51 years, permanently r/at #314, Purva Paradise, A302, 3rd Main, 7th Cross, Near Canara Bank, Domlur, Bangalore North, Bangalore- 560071, have changed my minor son's name from GOPAL to GOPAL PATIL, vide affidavit dated 3/7/2026 before Arun R Naik Advocate and Notary Bangalore

I, RAHATH Unnisa W/o Mohammed Shafi aged about 64 Years Resident of #842, Pakirwada Kolar City. Have changed my name to Rahat Unnisa vide affidavit dated 03.07.2026 before notary M. Ramalinge Gowda Kolar. Henceforth I shall be called as Rahat Unnisa only.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

STRR ನೆರಳಲ್ಲಿ ಗರಿಗೆದರಿದ ರಿಯಲ್‌ಎಸ್ಟೇಟ್!

ಬೆಂಗಳೂರು ಸುತ್ತಲಿನ ತಾಲ್ಲೂಕುಗಳಲ್ಲಿ ಹೆಚ್ಚಿದ ಭೂ ಖರೀದಿ ಭರಾಟೆ, ಸ್ಯಾಟಲೈಟ್ ಟೌನ್ ರಿಂಗ್ ರೋಡ್(ಎಸ್‌ಟಿಆರ್‌ಆರ್) ಅಭಿವೃದ್ಧಿ ನಂತರ ಹೆಚ್ಚಿದ ಬೇಡಿಕೆ

ಬೆಂಗಳೂರು: ರಾಜ್ಯ ರಾಜಧಾನಿ ಬೆಂಗಳೂರು ಮಹಾನಗರದ ಭೌಗೋಳಿಕ ಮತ್ತು ಆರ್ಥಿಕ ಚಿತ್ರಣವನ್ನು ಸ್ಯಾಟಲೈಟ್ ಸಿಟಿ ರಿಂಗ್ ರೋಡ್ ಯೋಜನೆ ಸಂಪೂರ್ಣ ಬದಲಾಯಿಸುತ್ತಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಈ ಯೋಜನೆ ಸುಮಾರು 280 ಕಿಲೋಮೀಟರ್ ಉದ್ದದ, 4ರಿಂದ 6 ಪಥಗಳನ್ನು ಒಳಗೊಂಡಿದೆ. ಈ ಹೆದ್ದಾರಿ ಕೇವಲ ಸಂಚಾರ ದಟ್ಟಣೆ ನಿವಾರಣೆಯ ಮಾರ್ಗವಾಗಿ ಉಳಿದಿಲ್ಲ. ಬದಲಿಗೆ, ರಾಜ್ಯದ ಇತಿಹಾಸದಲ್ಲೇ ರಿಯಲ್ ಎಸ್ಟೇಟ್‌ಗೆ ಅತ್ಯಂತ ದೊಡ್ಡ ಮಟ್ಟದ ಕೊಡುಗೆ ನೀಡುತ್ತಾ, ಹೂಡಿಕೆಗೆ ಹೊಸ ಕೇರ್‌ಆಫ್ ಅಡ್ರೆಸ್ ಆಗುವ ನಿಟ್ಟಿನಲ್ಲಿ ಹೊರಹೊಮ್ಮುತ್ತಿದೆ.

ಬೆಂಗಳೂರಿನ ಹೃದಯಭಾಗ ಹಾಗೂ ಹೊರವರ್ತುಲ ರಸ್ತೆಗಳು (ಔಟರ್‌ರಿಂಗ್ ರಸ್ತೆ) ಈಗಾಗಲೇ ಜನದಟ್ಟಣೆಯ ಹಂತ ತಲುಪಿದ್ದು, ಜನ ಬೆಂಗಳೂರು ಹೊರವಲಯದ ಕಡೆ ಗಮನ ಹರಿಸುತ್ತಿದ್ದಾರೆ. 2024ರ ಆರಂಭದಲ್ಲಿ ಉದ್ಘಾಟನೆಗೊಂಡ ದಾಬಸ್‌ಪೇಟೆ-ದೊಡ್ಡಬಳ್ಳಾಪುರ ಮತ್ತು ದೊಡ್ಡಬಳ್ಳಾಪುರ-ಹೊಸಕೋಟೆ ಒಳಗೊಂಡ ಸುಮಾರು 80ಕಿಮೀ ಉದ್ದದ ಮೊದಲ ಹಂತದ ಯಶಸ್ಸಿನ ನಂತರ, 2025 ಮತ್ತು 2026ರಲ್ಲಿ ಈ ಕಾರಿಡಾರ್‌ನಲ್ಲಿ ಜಮೀನು ಹಾಗೂ ವಸತಿ ಸಂಕೀರ್ಣಗಳ ಬೇಡಿಕೆ ಮತ್ತು ಬೆಲೆಗಳು ಹಿಂದೆಂದೂ ಕಾಣದ ವೇಗದಲ್ಲಿ ಏರಿಕೆ ಕಂಡಿವೆ.

STRR ಹೂಡಿಕೆಯ ಹಾಟ್ ಸ್ಪಾಟ್‌ಗಳು: ಎಸ್‌ಟಿಆರ್‌ಆರ್ ಯೋಜನೆಯು ಬೆಂಗಳೂರಿನ ಸುತ್ತಲಿರುವ 12 ಪ್ರಮುಖ ಪಟ್ಟಣಗಳನ್ನು (ದಾಬಸ್‌ಪೇಟೆ, ದೊಡ್ಡಬಳ್ಳಾಪುರ, ದೇವನಹಳ್ಳಿ, ಸೂಲಿಬೆಲೆ, ಹೊಸಕೋಟೆ, ಸರ್ಜಾಪುರ, ಅತ್ತಿಬೆಲೆ, ಆನೇಕಲ್, ತಟ್ಟೇಕೆರೆ, ಕನಕಪುರ, ರಾಮನಗರ ಮತ್ತು ಮಾಗಡಿ) ಒಟ್ಟುಗೂಡಿಸುತ್ತದೆ. ಪ್ರಸ್ತುತ ಈ ಪ್ರದೇಶಗಳಲ್ಲಿ ಹೂಡಿಕೆಗಳು ಅತ್ಯಂತ ಲಾಭ ತಂದುಕೊಡಲಿದ್ದು, ರಿಯಲ್ ಎಸ್ಟೇಟ್ ಕ್ಷೇತ್ರ ಪ್ರಗತಿಯತ್ತ ದಾಪುಗಾಲಿಡುತ್ತಿದೆ. ಪ್ರಮುಖವಾಗಿ ಬೆಂಗಳೂರು ಎಲ್ಲಾ ದಿಕ್ಕುಗಳಿಗೆ ಹರಡಿಕೊಂಡಿರುವ ಎಸ್‌ಟಿಆರ್‌ಆರ್ ತನ್ನ ಸುತ್ತಲಿನ ಪ್ರದೇಶಕ್ಕೆ ನಿರೀಕ್ಷೆ ಮೀರಿದ ಬೆಲೆ ತಂದುಕೊಂಡಿದೆ.

ಮೊದಲಿಗೆ ಉತ್ತರ ಮತ್ತು ಪೂರ್ವ ವಲಯಗಳಲ್ಲಿನ ದೇವನಹಳ್ಳಿ, ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ಭಾಗದಲ್ಲಿ ಹೂಡಿಕೆಗೆ ಪೂರಕ ವಾತಾವರಣವಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನೇರ ಮತ್ತು ಸಿಗ್ನಲ್ ಮುಕ್ತ ಸಂಪರ್ಕ ಕಲ್ಪಿಸುವ ಹೊಸಕೋಟೆ-ದೇವನಹಳ್ಳಿ ಪಥವು ಸದ್ಯ ರಿಯಲ್ ಎಸ್ಟೇಟ್‌ನ ಚಿನ್ನದ ಗಣಿಯಾಗಿದೆ. 2025ರಲ್ಲಿ ಆರಂಭವಾದ ಫಾಕ್ಸ್‌ಕಾನ್ ಇಂಡಸ್ಟ್ರಿಯಲ್ ಎಸ್ಟೇಟ್, ಏರೋಸ್ಪೇಸ್ ಸೆಜ್ (ಎಸ್‌ಎಝಡ್) ಗಳ ವಿಸ್ತರಣೆ ಮತ್ತು ಹೊಸಕೋಟೆಯ ತಾವರೆಕೆರೆ ಡೇಟಾ ಸೆಂಟರ್ ಪಾರ್ಕ್‌ನಂತಹ ಬೃಹತ್ ಯೋಜನೆಗಳು ಇಲ್ಲಿನ ಭೂಮಿಯ ಮೌಲ್ಯವನ್ನು ಹೆಚ್ಚಿಸಿವೆ. ಹೊಸಕೋಟೆಯನ್ನು ಇಂದು 'ನಿಯೋ-ವೈಟ್‌ಫೀಲ್ಡ್' ಎಂದು ಕರೆಯಲಾಗುತ್ತಿದ್ದು, ಕಳೆದ ಎರಡು ವರ್ಷಗಳಲ್ಲಿ ಇಲ್ಲಿನ ಜಮೀನುಗಳ ಬೆಲೆ ಶೇ.35 ರಿಂದ 40ರಷ್ಟು ವೃದ್ಧಿಯಾಗಿದೆ. ಇದರೊಂದಿಗೆ, ದಕ್ಷಿಣ ಮತ್ತು ಆಗ್ನೇಯ ವಲಯಗಳಾಗಿ ಗುರುತಿಸಿಕೊಂಡಿರುವ ಸರ್ಜಾಪುರ-ಅತ್ತಿಬೆಲೆ-ಆನೇಕಲ್ ಪ್ರದೇಶಕ್ಕೆ ಕೈಗಾರಿಕಾ ಪ್ರದೇಶವೇ ದೊಡ್ಡ ವರದಾನವಾಗಿದೆ. ಐಟಿ ಕಾರಿಡಾರ್‌ಗಳಿಗೆ ಹತ್ತಿರವಿರುವ ಸರ್ಜಾಪುರ ಮತ್ತು ಅತ್ತಿಬೆಲೆ ಭಾಗಗಳು ಎಸ್‌ಟಿಆರ್‌ಆರ್ ದಕ್ಷಿಣ ಭಾಗದ ಕನೆಕ್ಟಿವಿಟಿಯಿಂದಾಗಿ ಭಾರೀ ಲಾಭ ಪಡೆದಿವೆ. ಎಲೆಕ್ಟ್ರಾನಿಕ್ ಸಿಟಿ ಮತ್ತು ವೈಟ್‌ಫೀಲ್ಡ್‌ನ ಐಟಿ ಉದ್ಯೋಗಿಗಳಿಗೆ ಇದು ಕೈಗೆಟುಕುವ ದರದಲ್ಲಿ ವಿಶಾಲವಾದ ಪ್ರೀಮಿಯಂ ವಿಲ್ಲಾಗಳು ಮತ್ತು ಗೇಟೆಡ್ ಕಮ್ಯುನಿಟಿ ಪ್ಲಾಟ್‌ಗಳನ್ನು ನೀಡುತ್ತಿದೆ. 2026ರ ಹೊತ್ತಿಗೆ ಇಲ್ಲಿ ಬಾಡಿಗೆಯ ಬೇಡಿಕೆಯೂ ಗಣನೀಯವಾಗಿ ಹೆಚ್ಚಾಗಿದೆ. ಪಶ್ಚಿಮ ಕೈಗಾರಿಕಾ ವಲಯ ಪ್ರದೇಶವಾಗಿ ಗುರುತಿಸಿಕೊಂಡಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ರಾಜ್ಯದ ಹೆಬ್ಬಾಗಿಲೆಂದೇ ಕರೆಸಿಕೊಳ್ಳುತ್ತಿದೆ. ದಾಬಸ್‌ಪೇಟೆಯ ಮಲ್ಟಿ-ಮೋಡಲ್ ಲಾಜಿಸ್ಟಿಕ್ಸ್ ಪಾರ್ಕ್ ಮತ್ತು ಮಾಗಡಿ ರಸ್ತೆಯ ಕೈಗಾರಿಕಾ ಕಾರಿಡಾರ್‌ಗಳು ವಾಣಿಜ್ಯ ಮತ್ತು ಲಾಜಿಸ್ಟಿಕ್ಸ್ ಹೂಡಿಕೆಗೆ ಪ್ರಶಸ್ತ ಸ್ಥಳಗಳಾಗಿವೆ. ದೊಡ್ಡ ಇ-ಕಾಮರ್ಸ್ ಸಂಸ್ಥೆಗಳಾದ ಅಮೆಜಾನ್ ಮತ್ತು ಫ್ಲಿಪ್ ಕಾರ್ಟ್‌ಗಳು ತಮ್ಮ ಬೃಹತ್ ಉಗ್ರಾಣಗಳನ್ನು ಇಲ್ಲಿ ಸ್ಥಾಪಿಸಿರುವುದರಿಂದ ವಾಣಿಜ್ಯ ಭೂಮಿಯ ಬೆಲೆ ದುಪ್ಪಟ್ಟಾಗಿದೆ.

ಹೂಡಿಕೆಗೆ ಪ್ರಶಸ್ತ ಸ್ಥಳಗಳು: 2025 ಮತ್ತು 2026ರ ಅವಧಿಯಲ್ಲಿ ಹೂಡಿಕೆದಾರರು ಎಸ್‌ಟಿಆರ್‌ಆರ್ ಸುತ್ತಮುತ್ತಲಿನ ರಿಯಲ್ ಎಸ್ಟೇಟ್ ಕಡೆಗೆ ಆಕರ್ಷಿತರಾಗಲು ಅನೇಕ ಕಾರಣಗಳಿವೆ. ಇದರಲ್ಲಿ ಪ್ರಮುಖವಾಗಿ ಸಾರಿಗೆ ಸಮಯದ ಉಳಿತಾಯ ಎಲ್ಲರ ಗಮನ ಸೆಳೆಯುತ್ತಿದೆ. ಹೊಸಕೋಟೆಯಿಂದ ವಿಮಾನ ನಿಲ್ದಾಣಕ್ಕೆ ಹೋಗಲು ಹಿಂದೆ ನಗರದ ಟ್ರಾಫಿಕ್ ಸಿಲುಕಿ 1.5 ರಿಂದ 2ಗಂಟೆ ಬೇಕಾಗುತ್ತಿತ್ತು. ಆದರೆ ಈಗ ಎಸ್‌ಟಿಆರ್‌ಆರ್ ಮೂಲಕ ಕೇವಲ 40 ನಿಮಿಷಗಳಲ್ಲಿ ತಲುಪಬಹುದು. ಈ ಸಿಗ್ನಲ್-ಮುಕ್ತ ಪ್ರಯಾಣದ ಸೌಕರ್ಯವೇ ರಿಯಲ್ ಎಸ್ಟೇಟ್ ಬೆಲೆಯನ್ನು ನಿರ್ಧರಿಸುತ್ತಿದೆ. ಜತೆಗೆ, ಬೆಂಗಳೂರಿನ ಕೇಂದ್ರ ಭಾಗಗಳಲ್ಲಿ ಪ್ರತಿ ಚದರ ಅಡಿಗೆ ₹15,000 ದಾಟಿದ್ದರೆ, ಎಸ್‌ಟಿಆರ್‌ಆರ್ ಕಾರಿಡಾರ್‌ನ ಉದಯೋನ್ಮುಖ ಪ್ರದೇಶಗಳಲ್ಲಿ ಇಂದಿಗೂ ₹4,500 ರಿಂದ ₹6,500 ದರದಲ್ಲಿ ಪ್ಲಾಟ್‌ಗಳು ಮತ್ತು ಅಪಾರ್ಟ್‌ಮೆಂಟ್‌ಗಳು ಲಭ್ಯವಿವೆ. ಪ್ರಸ್ತುತ ಹೂಡಿಕೆ ಮಾಡುವವರಿಗೆ ಮುಂದಿನ 3 ರಿಂದ 5 ವರ್ಷಗಳಲ್ಲಿ ಅತ್ಯುತ್ತಮ ಲಾಭ ಸಿಗುವ ಭರವಸೆ ಇದೆ. ಜತೆಗೆ, ಅಪಾರ್ಟ್‌ಮೆಂಟ್‌ಗಳಿಗಿಂತ ಹೆಚ್ಚಾಗಿ ಜನರು ಸ್ವಂತ ಜಮೀನು ಮತ್ತು ಗೇಟೆಡ್ ಕಮ್ಯುನಿಟಿ ವಿಲ್ಲಾಗಳನ್ನು ಖರೀದಿಸಲು ಒಲವು ತೋರುತ್ತಿದ್ದಾರೆ. ಪ್ರಮುಖ ಬಿಲ್ಡರ್‌ಗಳಾದ ಗೋದ್ರೇಜ್, ಲೋಧಾ ಮತ್ತು ಸ್ಥಳೀಯ ಪ್ರತಿಷ್ಠಿತ ಡೆವಲಪರ್‌ಗಳು ಈ ಭಾಗದಲ್ಲಿ ಪರಿಸರಸ್ನೇಹಿ ಮತ್ತು ಅತ್ಯಾಧುನಿಕ ಸೌಲಭ್ಯಗಳುಳ್ಳ ವಿಲ್ಲಾ ಯೋಜನೆಗಳನ್ನು ಆರಂಭಿಸಿದ್ದಾರೆ.

ಪ್ರಮುಖ ಹೆದ್ದಾರಿಗಳೊಂದಿಗಿನ ಕನೆಕ್ಟಿವಿಟಿ: ಎಸ್‌ಟಿಆರ್‌ಆರ್ ಕೇವಲ ಬೆಂಗಳೂರಿನ ಒಳಗಿನ ರಸ್ತೆಯಲ್ಲ. ಇದು 6 ರಾಷ್ಟ್ರೀಯ ಹೆದ್ದಾರಿಗಳು ಮತ್ತು 8 ರಾಜ್ಯ ಹೆದ್ದಾರಿಗಳನ್ನು ಜೋಡಿಸುವ ಒಂದು ಆರ್ಥಿಕ ಬೆನ್ನೆಲುಬಾಗಿದೆ. ರಾಷ್ಟ್ರೀಯ ಹೆದ್ದಾರಿ 44 ಹೈದರಾಬಾದ್ ಹೆದ್ದಾರಿಗೆ ನೇರ ಸಂಪರ್ಕ ಹೊಂದಿರುವ ಎಸ್‌ಟಿಆರ್‌ಆರ್ ದೇವನಹಳ್ಳಿ, ಹೊಸಕೋಟೆ ದೊಡ್ಡಬಳ್ಳಾಪುರಕ್ಕೆ ವರದಾನವಾಗಿದೆ. ಇದೇ ಹೆದ್ದಾರಿ ಏರೋಸ್ಪೇಸ್, ಐಟಿ ಪಾರ್ಕ್‌ಗಳು, ಕ್ವೀನ್ ಸಿಟಿಗೂ ಕನೆಕ್ಟಿವಿಟಿ ನೀಡಲಿದೆ. ಜತೆಗೆ, ರಾಷ್ಟ್ರೀಯ ಹೆದ್ದಾರಿ48 (ಮುಂಬೈ ಹೆದ್ದಾರಿ) ದಾಬಸ್‌ಪೇಟೆ, ನೆಲಮಂಗಲದ ಉತ್ಪಾದನಾ ಕೈಗಾರಿಕೆಗಳು, ಮಲ್ಟಿ-ಮೋಡಲ್ ಲಾಜಿಸ್ಟಿಕ್ಸ್ ಕಂಪನಿಗಳಿಗೆ ಸಂಪರ್ಕ ಕೊಂಡಿಗಳಾಗಿವೆ. ಅತಿಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿ75 ಚೆನ್ನೈ ಎಕ್ಸ್‌ಪ್ರೆಸ್ ವೇ ಹೊಸಕೋಟೆ ಬಳಿ ಎಸ್‌ಟಿಆರ್‌ಆರ್‌ಗೆ ಕನೆಕ್ಟಿವಿಟಿ ನೀಡಲಿದ್ದು, ರಾಷ್ಟ್ರೀಯ ಮಟ್ಟದಲ್ಲಿ ಸಂಪರ್ಕ ಸೇತುವಾಗಿದೆ.

DH DECCAN HERALD
Classifieds
More value, more impact
ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
+91 9731810277 | +91 9886213331
+91 9845114560 | +91 9900428036
080- 45557163/164
*Conditions apply

DH DECCAN HERALD
Classifieds
More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-*
FOR 15 WORDS

www.dhclassifieds.com
BOOK NOW
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164
*Conditions apply

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331